ಸಂಶೋಧನಾ ಮಾಲಿಕೆ

ಮೆಡೋಸ ಟೇಲರನು ಚಿತ್ರಿಸಿದ ಭಾರತ



ಡಾ. ಆರ್. ಎಸ್. ಚುಳಕಿ

ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು-೧೮.

ಸಂಶೋಧನಾ ಮಾಲಿಕೆ

ಮೆಡೋಸ ಟೇಲರನು ಚಿತ್ರಿಸಿದ ಭಾರತ

(ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಡಾ. ಆರ್.ಎಸ್. ಚುಳಕಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

MEADOWS TAYLORANU CHITRISIDA BHARATHA
A Thesis by : **Dr. R. S. Chulaki**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi + 162 Price : Rs. **100=00** : **2008**

ಪ್ರಥಮ ಮುದ್ರಣ : ೨೦೦೮
ಪ್ರತಿಗಳು : ೫೦೦
ಬೆಲೆ : ಒಂದು ನೂರು ರೂಪಾಯಿಗಳು

ಮುಖಪುಟ ವಿನ್ಯಾಸ : ಕಮಲಂ ಅರಸು

ಮುದ್ರಣ : ಮೆ|| ಸತ್ಯಶ್ರೀ ಪ್ರಿಂಟರ್ಸ್
ನಂ.೧೬/೧, ೩ನೇ ಕ್ರಾಸ್, ೨ನೇ ಮುಖ್ಯರಸ್ತೆ
ಕಸ್ತೂರಬಾ ನಗರ, ಬೆಂಗಳೂರು - ೫೬೦೦೨೬

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೂರು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ-ಅಕ್ಷರ-ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ. ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ನಮ್ಮ ಅಧಿಕಾರಾವಧಿಯಲ್ಲಿ ಕೈಕೊಳ್ಳಲಾದ ಒಂದು ವಿಶೇಷ ಯೋಜನೆ: ಸಂಶೋಧನಾ ಗ್ರಂಥಮಾಲಿಕೆ. ವಿವಿಧ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು-ನುಡಿ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಪಿಎಚ್.ಡಿ. ಮಹಾಪ್ರಬಂಧಗಳ ಅಧಿಕೃತ ಮಾಹಿತಿ ಪಡೆದುಕೊಂಡು ನಮ್ಮ 'ಪ್ರಕಟನಾ ಸಮಿತಿ'ಯು ಆಯ್ಕೆ ಮಾಡಿ, ಈ ಥೀಸಿಸ್‌ಗಳನ್ನು ಗರಿಷ್ಠ ೨೫೦ ಪುಟಗಳಿಗೆ ಇಳಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಲು ತೀರ್ಮಾನಿಸಿತು. ಡಾಕ್ಟರೇಟ್ ಪಡೆದ ತಜ್ಞರು ನಮ್ಮೊಂದಿಗೆ ಸಂಪೂರ್ಣ ಸಹಕರಿಸಿ ನಮ್ಮ ಯೋಜನೆಯ ಅನುಷ್ಠಾನದಲ್ಲಿ ಕೈಗೂಡಿಸಿದ್ದಾರೆ. ಜ್ಞಾನವೆಂಬುದು ಕೇವಲ ಯೂನಿವರ್ಸಿಟಿಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದು ಒಂದು ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು. ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು. ಏಪ್ರಿಲ್ ೨೦೦೮ರ ಅಂತ್ಯದ ವೇಳೆಗೆ ಈ ಪುಸ್ತಕಗಳು ಓದುಗರ ಕೈಸೇರುವ ನಿರೀಕ್ಷೆ ಇದೆ.

ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯದವರಿಗೂ, ಮುಖಪುಟ ವಿನ್ಯಾಸದ ಕಲಾವಿದರಿಗೂ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ಇಂಗ್ಲೆಂಡ್‌ನಿಂದ ನಮ್ಮ ನಾಡಿಗೆ ಸಾವಿರಾರು ಜನರು ವ್ಯಾಪಾರಕ್ಕಾಗಿ ಉದ್ಯೋಗಕ್ಕಾಗಿ, ಆಡಳಿತ ಮಾಡುವುದಕ್ಕಾಗಿ ಬಂದು ಹೋಗಿದ್ದಾರೆ. ಆದರೆ ಅವರ್‍ಯಾರೂ ನಿಜವಾದ ಭಾರತವನ್ನು ಅರಿತುಕೊಳ್ಳಲಿಲ್ಲ, ಪ್ರೀತಿಸಲಿಲ್ಲ. ಆದರೆ ಕ್ರಿ.ಶ. ೧೮೨೪ರಲ್ಲಿ ತರುಣನಾಗಿದ್ದಾಗಲೇ ಭಾರತಕ್ಕೆ ಬಂದ ಟೇಲರನು ಮೂವತ್ತೈದು ವರ್ಷಕ್ಕಿಂತಲೂ ಅಧಿಕ ಅವಧಿಯವರೆಗೆ ಇಲ್ಲಿ ಇದ್ದು, ಪೊಲಿಟಿಕಲ್ ಎಜೆಂಟನಾಗಿ ಸುರಪುರ ಸಂಸ್ಥಾನಕ್ಕೆ ಅಮೋಘ ಸೇವೆ ಸಲ್ಲಿಸಿ, ಆಡಳಿತದಲ್ಲಿ ಸುಧಾರಣೆ ಮಾಡಿ. ಭಾರತಿಯರೊಡನೆ ಬೆರೆತು ಬಾಳಿ, ಮರಳಿ ಇಂಗ್ಲೆಂಡಗೆ ಹೋಗಿ, ಅಲ್ಲಿ ಭಾರತದ ಅನಧಿಕೃತ ರಾಯಭಾರಿಯಂತೆ ಕಾರ್ಯ ಮಾಡಿದನು. ಭಾರತವನ್ನು ಅನಾಗರೀಕ ದೇಶವೆಂದು ಬಗೆದಿದ್ದ ಅವರಿಗೆ ಭಾರತದ ಹಿರಿಮೆ-ಗರಿಮೆಗಳನ್ನು ಧರ್ಮ, ಸಂಸ್ಕೃತಿ, ನಾಗರೀಕತೆ, ಇತಿಹಾಸ, ಕಲೆಗಳನ್ನು ತಿಳಿಸಿಕೊಡಲು ಸುಂದರವಾದ ಐತಿಹಾಸಿಕ ಕಾದಂಬರಿಗಳನ್ನು ಬರೆದನು. ಆತನು ಬರೆದ ಟೀಪೂಸುಲ್ತಾನ, ತಾರಾ, ಚಾಂದಬೀಬಿ ಎಂಬ ಬೃಹತ್ ಕಾದಂಬರಿಗಳಲ್ಲಿ ಸಮಗ್ರ ಕರ್ನಾಟಕದ ಜೀವನವನ್ನು ಚಿತ್ರಿಸಿದ್ದಾನೆ. ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳ ಅಸಿಸ್ಟೆಂಟ್ ಕಮಿಷನರ್ ಆಗಿ ಮಾಡಿದ ಕಾರ್ಯವನ್ನೆಲ್ಲ ತನ್ನ ಆತ್ಮ ಚರಿತ್ರೆಯಲ್ಲಿ ವಿವರಿಸಿ ಹೇಳಿದ್ದಾನೆ. ಹಾಗೂ ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದ ಸುರಪುರ ಸಂಸ್ಥಾನದ ಆಗುಹೋಗುಗಳನ್ನೂ ವಿಸ್ತಾರವಾಗಿ ಬಣ್ಣಿಸಿ ಹೇಳಿದ್ದಾನೆ. ಅವನ ಮಹಾನ್ ಸೇವೆಯನ್ನು ಮನ್ನಿಸಿ, ಸಾಹಿತ್ಯಸೇವೆಯನ್ನು ಪರಿಗಣಿಸಿ ಇಂಗ್ಲೆಂಡನ ರಾಣಿ ವಿಕ್ಟೋರಿಯಾಳು ಅವನಿಗೆ `Star of India' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದಳು. ಅಂಥ ವ್ಯಕ್ತಿಯ ಸಮಗ್ರ ಕೃತಿಗಳ ಅಧ್ಯಯನ ಮಾಡಿ `The Image of India in the works of Philip Meadows Taylor' ಎಂದು ಇಂಗ್ಲಿಷಿನಲ್ಲಿ ನಾನೇ ಬರೆದ ಮಹಾಪ್ರಬಂಧವನ್ನು ಕನ್ನಡಕ್ಕೆ ಭಾಷಾಂತರಿಸಿದೆ. ಅದನ್ನು ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಕಟಿಸಲು ಮುಂದಾದುದು ನನಗೆ ಸಂತಸವನ್ನುಂಟು ಮಾಡಿದೆ.

ಜನಪ್ರಿಯ ಆಡಳಿತಗಾರ, ಶ್ರೇಷ್ಠಸಾಹಿತಿ, ಪ್ರಾಮಾಣಿಕ ಇತಿಹಾಸಕಾರನಾದ ಟೇಲರನ ವ್ಯಕ್ತಿತ್ವವನ್ನು ಈ ಪುಸ್ತಕದಲ್ಲಿ ಕಾಣಬಹುದಾಗಿದೆ. ಆತ ಏಕಮೇವಾದ್ವಿತೀಯನಾಗಿದ್ದಾನೆ.

ಈ ಪುಸ್ತಕವನ್ನು ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿನವರಿಗೆ ನಾನು ಋಣಿಯಾಗಿರುವೆ.

ಆರ್. ಎಸ್. ಚುಳುಕಿ

ಪರಿವಿಡಿ

ಅಧ್ಯಾಯ ೧.

ಯುಗ ಯುಗಗಳಲ್ಲಿಯ ಭಾರತ

ಮೆಸೋಸ ಟೇಲರನು ಭಾರತದಲ್ಲಿ ಬಹುಕಾಲ ಬಾಳಿದ ಸುಪ್ರಸಿದ್ಧ ಆಂಗ್ಲೋ ಇಂಡಿಯನ್ ಸಾಹಿತಿಯಾಗಿದ್ದು ಭಾರತದ ಬಗ್ಗೆ ಅನೇಕ ಐತಿಹಾಸಿಕ ಕಾದಂಬರಿಗಳನ್ನು, ಭಾರತದ ಇತಿಹಾಸದ ಪುಸ್ತಕವನ್ನು ಬರೆದಂಥ ವ್ಯಕ್ತಿಯಾಗಿದ್ದಾನೆ. ಅವನು ಭಾರತದ ಇತಿಹಾಸದ ವಿವಿಧ ಘಟ್ಟಗಳ ಬಗ್ಗೆ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದು ಅವನ ಸಾಹಿತ್ಯ ಕೃತಿಗಳಲ್ಲಿಯ ಸೌಂದರ್ಯ ಹಾಗೂ ಕಲಾತ್ಮಕತೆಗಳನ್ನು ಬಹಳಷ್ಟು ಜನರು ಗುರುತಿಸಲಿಲ್ಲ. ಆದುದರಿಂದ ಅವನನ್ನು ಒಬ್ಬ ಶ್ರೇಷ್ಠ ಸಾಹಿತಿ ಎಂದು ಪರಿಗಣಿಸಿ, ಅವನ ಸೃಜನಶೀಲ ಕೃತಿಗಳ ಆಳವಾದ ಅಧ್ಯಯನ ಮಾಡಿ, ಅವನ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತವಾದ ಭಾರತದ ನೈಜ ಚಿತ್ರಣವನ್ನು ತೋರಿಸಿಕೊಡುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಟೇಲರನು ಭಾರತದ ನೈಜ ಹಾಗೂ ವಾಸ್ತವಿಕ ಚಿತ್ರಣವನ್ನು ತನ್ನ ಕೃತಿಗಳ ಮುಖಾಂತರ ನೀಡುವ ಮುನ್ನ ಭಾರತದ ವಿವಿಧ ಚಿತ್ರಣಗಳನ್ನು ಬೇರೆ ಬೇರೆ ಲೇಖಕರು, ಪ್ರವಾಸಿಗರು ಹಾಗೂ ಇತಿಹಾಸಕಾರರು ತಮ್ಮ ತಮ್ಮ ಲೇಖನಗಳ ಮುಖಾಂತರ ಪ್ರಕಟಿಸಿದ್ದರು. ಅವರಿಂದ ಭಾರತದ ಬಗ್ಗೆ, ಭಾರತೀಯರ ಧರ್ಮ ಹಾಗೂ ಜೀವನದ ಬಗ್ಗೆ, ಪುರಾತನವಾದ ಸಂಸ್ಕೃತಿ ಹಾಗೂ ನಾಗರಿಕತೆಯ ಬಗ್ಗೆ ಅನೇಕ ತಪ್ಪು ಕಲ್ಪನೆಗಳು ಉಂಟಾಗಿದ್ದವು. ತಮ್ಮ ದೇಶದ ಜನರಲ್ಲಿ ಉಂಟಾಗಿದ್ದ ಎಲ್ಲ ತಪ್ಪು ಗ್ರಹಿಕೆಗಳನ್ನು ತೆಗೆದು ಹಾಕಿ ಭಾರತದ ಬಗ್ಗೆ ತ್ರಿವಿಧವಾದ ಔಚಿತ್ಯಪೂರ್ಣವಾದ ಚಿತ್ರಣವನ್ನು – ಅನಾಗರಿಕ, ಅರೆನಾಗರಿಕ ಹಾಗೂ ಸುಸಂಸ್ಕೃತ ದೇಶವೆಂದು – ತೋರಿಸಿಕೊಟ್ಟನು. ಯಾವ ಬ್ರಿಟಿಷರು ಭಾರತವನ್ನು ಕೇವಲ 'ಸಾಧುಗಳ, ಹಾವುಗಳ, ಸತಿ–ಸಹಗಮನಗಳ ನಾಡೆಂದು ಬಗೆದಿದ್ದರೋ ಅವರೆಲ್ಲ ಟೇಲರನ ಸಾಹಿತ್ಯವನ್ನು ಓದಿದ ಬಳಿಕ ಭಾರತವು ಮಾನವನ ಇತಿಹಾಸ ಕಾಲದಿಂದ ನಾಗರಿಕತೆಯ, ಸಾಂಸ್ಕೃತಿಕ

ಸಿರಿತನ ಹೊಂದಿದ ದೇಶವೆಂದು ಭಾವಿಸತೊಡಗಿದರು. ಸತ್ಯದ ಅರಿವು ಅವರಲ್ಲಿ ಮೂಡಿ ಬಂದಿತು.

ಪುರಾತನ ಕಾಲದಿಂದಲೂ ಭಾರತವು ಭಿನ್ನ ಭಿನ್ನ ಚಿತ್ರಣಗಳನ್ನು ಹೊಂದುತ್ತ ಬಂದಿದ್ದು ಅವುಗಳನ್ನು ಸ್ಥೂಲವಾಗಿ ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ೧) ವೇದ ಕಾಲಕ್ಕಿಂತ ಪೂರ್ವದ ಭಾರತ ೨) ವೇದ ಕಾಲದ ಭಾರತ ೩) ವೇದ ಕಾಲದ ನಂತರದ ಭಾರತ ೪) ಆಧುನಿಕ ಭಾರತ.

೧) ವೇದಕಾಲಕ್ಕಿಂತ ಪೂರ್ವದ ಭಾರತ :

ಈ ಕಾಲದ ಭಾರತದ ಚಿತ್ರಣವನ್ನು ಕೊಡುವ ಯಾವ ದಾಖಲೆಗಳೂ ಲಭ್ಯವಾಗಿರುವುದಿಲ್ಲ. ಇತಿಹಾಸಕಾರರೂ ಇದರ ಬಗ್ಗೆ ಮೌನ ತಾಳಿದ್ದಾರೆ. ಹೀಗಾಗಿ ಆ ಕಾಲದ ಬಗ್ಗೆ ನಿಶ್ಚಿತವಾಗಿ ಹೇಳಲು ಸಾಧ್ಯವಾಗದಂತಾಗಿದೆ. ಆ ಕಾಲದ ಜನರಿಗೆ ಒಳ್ಳೆಯ ಜೀವನವೆಂಬುದೇ ಗೊತ್ತಿರಲಿಲ್ಲ. ಕ್ರೂರ ಹಾಗೂ ಹಿಂಸೆ ಸ್ವಭಾವದ ಅವರು ಬೇಟೆಯಾಡಿ . ಗಡ್ಡೆಗೆಣಸು ತಿಂದು ಬಾಳುತ್ತಿದ್ದರು. ಕುಳ್ಳರೂ, ಕಪ್ಪು ವರ್ಣದವರೂ, ಸಣ್ಣ ಕಣ್ಣು ಗಳುಳ್ಳವರೂ ಆದ ಅವರಿಗೆ ಮಾತನಾಡಲು ಬರುತ್ತಿರಲಿಲ್ಲ. ಯಾವುದೇ ಬಗೆಯ ಬೌದ್ಧಿಕ ನೈತಿಕ ಬೆಳವಣಿಗೆ ಇರಲಿಲ್ಲ. ಆ ಬಳಿಕ ಅವರು ತಮ್ಮ ತಮ್ಮೊಳಗೆ ಗುಂಪುಗಳನ್ನು , ನಂತರ ಜನಾಂಗಗಳನ್ನು ಮಾಡಿಕೊಂಡು ಇರಹತ್ತಿದರು. ನಾಗರಿಕರಾದ ಆರ್ಯರು ಭಾರತದಲ್ಲಿ ಪ್ರವೇಶಿಸುವವರೆಗೆ ಅವರು ಅರಣ್ಯವಾಸಿಗಳಾಗಿ ಬಾಳುತ್ತಿದ್ದರು.

೨) ವೇದ ಕಾಲದ ಭಾರತದ ಚಿತ್ರಣ :

ಆರ್ಯರು ಭಾರತಕ್ಕೆ ಬಂದು ಸಿಂಧೂ ನದಿಯ ತೀರದಲ್ಲಿ ವಾಸಮಾಡತೊಡಗಿದರು. ಅವರು ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿಕೊಂಡದಕ್ಕೆ 'ಆರ್ಯಾವರ್ತ' ಎಂಬ ಹೆಸರು ಬಂತು. ಸಿಂಧು ಶಬ್ದದಿಂದ ಹಿಂದು ಶಬ್ದ ಉಂಟಾಗಿ ಪುರಾತನ ಭಾರತವು ಹಿಂದುಸ್ಥಾನವಾಯಿತು. ಅವರ ಧರ್ಮ, ಸಂಸ್ಕೃತಿ, ನಾಗರಿಕತೆಗಳೇ ಭಾರತದ ಪ್ರಾಚೀನ ನಾಗರಿಕತೆಯಾದವು.

ಆರ್ಯರು ನೋಡಲು ಸುಂದರವಾಗಿದ್ದರಲ್ಲದೆ, ದೈಹಿಕವಾಗಿ ಬಲಶಾಲಿಗಳೂ, ಬುದ್ಧಿವಂತರೂ ಆಗಿದ್ದರು. ಅವರಲ್ಲಿ ಅನೇಕರು ಗ್ರಂಥ ರಚನಾಕಾರರೂ, ವಿಚಾರವಾದಿಗಳೂ, ತತ್ವವೇತ್ತರೂ, ಕಾವ್ಯ ಕಲಾ ಬಲ್ಲವರೂ, ಭಕ್ತಿಗೀತೆ ಹಾಡಿ ದೇವರ ಆರಾಧನೆ ಮಾಡುವವರೂ ಆಗಿದ್ದರು. ಕ್ರಿ.ಶ. ಪೂರ್ವ ೧೫೦೦ರಷ್ಟೊತ್ತಿಗೆ ತಮ್ಮ ಸಂಸ್ಕೃತ ಭಾಷೆಯಲ್ಲಿ ವೇದಗಳನ್ನು ಬರೆದಿಟ್ಟರು. ಅವುಗಳೇ ಪುರಾತನ ಬಾರತದ, ಹಿಂದೂ ಧರ್ಮದ ಮೂಲ ಗ್ರಂಥಗಳಾದವು. ಅವುಗಳಲ್ಲಿ ಅವರು ತಮ್ಮ ಜೀವನದ ಬಗ್ಗೆ, ಗೊತ್ತು ಗುರಿಗಳ ಬಗ್ಗೆ, ಸ್ವಭಾವ - ಲಕ್ಷಣಗಳ ಬಗ್ಗೆ ಮೇರು ತಂತ್ರವೆಂಬ ಪುಸ್ತಕದಲ್ಲಿ ತಿಳಿಸಿಕೊಟ್ಟಿರುತ್ತಾರೆ.

೧. ಹಿಂದುಗಳು ದುಷ್ಕೃತ್ಯಗಳನ್ನು, ಅಯೋಗ್ಯ ವಿಷಯಗಳನ್ನು ದೂಷಿಸುವವರಾಗಿರುತ್ತಾರೆ.

೨. ಪ್ರತಿಯೊಬ್ಬ ಹಿಂದುವು ತನ್ನ ಅಧಿದೇವತೆಯಾದ ನಾರಾಯಣನನ್ನು ಹಾಗೂ ಇತರ ದೇವತೆಗಳನ್ನು ಆರಾಧಿಸುತ್ತಾನೆ.

೩. ಯಾವುದೇ ಹಿಂದುವು ದುಷ್ಟನಾಗಿ, ನೀಚನಾಗಿ ಬಾಳಲು ಬಯಸುವುದಿಲ್ಲ.

೪. ಯಾವನು ಹಿಂಸಾಚಾರ, ಹೀನ ವೃತ್ತಿಗಳಿಂದ ಬಹಳಷ್ಟು ದೂರ ಇರುತ್ತಾನೋ ಅವನೇ ನಿಜವಾದ ಹಿಂದು.

೫. ಹಿಂದುಗಳೆಲ್ಲರೂ ದೇವತೆಗಳನ್ನು, ಆಕಳನ್ನು , ದೇವರ ಮೂರ್ತಿಗಳನ್ನು, ದೇವರ ಅವತಾರಗಳನ್ನು ಪೂಜಿಸುತ್ತಾರೆ, ಆರಾಧಿಸುತ್ತಾರೆ.

೬. ಹಿಂದುಗಳು ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂರು ದೇವರುಗಳ ಪೂಜೆ ಮಾಡುತ್ತಾರೆ. ಹಾಗೂ ಆ ದೇವರ ಅವತಾರಗಳ ಬಗ್ಗೆ ಗುಡಿ- ಗೋಪುರ ಕಟ್ಟುತ್ತಾರೆ. ದೇವತೆಗಳ ಬಗ್ಗೆ ಧಾರ್ಮಿಕ ಕಾರ್ಯಕ್ರಮ, ಉತ್ಸವಗಳನ್ನು ಆಚರಿಸುತ್ತಾರೆ. ದೇವತೆಗಳ ಪ್ರೀತ್ಯರ್ಥ ಬಲಿಕೊಡುತ್ತಾರೆ.

ಕಾಲಕ್ರಮದಲ್ಲಿ ಮೇಲೆ ಹೇಳಿದ ವಿಷಯಗಳೆಲ್ಲ ಅವರ ಜೀವನ ಪದ್ಧತಿಯಾಗಿ ಬೆಳೆದು ಬಂದವು. ಧರ್ಮದ. ಸಂಸ್ಕೃತಿಯ ಸ್ವರೂಪವನ್ನು ಪಡೆದುಕೊಂಡವು. ಅದುವೇ ಸನಾತನ ಧರ್ಮವಾಯಿತು.

ಆ ಕಾಲದ ಹಿಂದು ಜನಾಂಗದ ಸಮಾಜ ರಚನೆಯು ಚಾತುರ್ವರ್ಣಗಳಲ್ಲಿ ವಿಂಗಡಣೆಗೊಂಡಿತ್ತು. ೧) ಬ್ರಾಹ್ಮಣರು - ಇವರು ಅರ್ಚಕರಾಗಿ, ಪಂಡಿತರಾಗಿ, ಶಿಕ್ಷಕರಾಗಿ, ಆರಾಧಕರಾಗಿ, ಸಮಾಜಕ್ಕೆ ಮಾರ್ಗದರ್ಶನ, ಧರ್ಮಬೋಧೆ, ನೀತಿ ಬೋಧೆ ಮಾಡುವವರಾದರು. ೨) ಕ್ಷತ್ರಿಯರು –ಇವರು ರಾಜರಾಗಿ, ಯೋಧರಾಗಿ ದೇಶ ರಕ್ಷಣೆಯ ಭಾರ ಹೊತ್ತುಕೊಂಡರು. ೩) ವೈಶ್ಯರು - ಇವರು ಕೃಷಿ, ವ್ಯಾಪಾರ, ಉದ್ಯೋಗ ಮಾಡುವಂಥವರಾದರು. ೪) ಶೂದ್ರರು - ಇವರು ಸಣ್ಣ ಪುಟ್ಟ ಶಾರೀರಿಕ ಕೆಲಸ ಮಾಡಿ ಉಳಿದವರಿಗೆ ಸೇವೆ, ಸಹಾಯ ಮಾಡುವಂಥವರಾದರು. ಈ ನಾಲ್ಕೂ ವರ್ಣದವರಿಗೆ ನಿಗದಿ ಪಡಿಸಿದ ಕಾರ್ಯಗಳನ್ನೇ ಮಾಡಬೇಕಾಗುತ್ತಿತ್ತು. ಪ್ರತಿಯೊಬ್ಬರಿಗೂ ತಮ್ಮದೇ ಆದ ಜೀವನ ಪದ್ಧತಿ, ಪುರಾತನ ಗ್ರಂಥಗಳಲ್ಲಿ ಹೇಳಿದಂತೆ ಇರುತ್ತಿತ್ತು.

ಇವರು ದೇವರ ಅಸ್ತಿತ್ವದಲ್ಲಿ, ದೈವದ ಆಟದಲ್ಲಿ, ಗ್ರಹ-ನಕ್ಷತ್ರಗಳ ಪ್ರಭಾವದಲ್ಲಿ, ಕರ್ಮ ಸಿದ್ಧಾಂತದಲ್ಲಿ, ಪುನರ್ಜನ್ಮದಲ್ಲಿ, ಸ್ವರ್ಗ ನರಕಗಳಲ್ಲಿ ಅಪಾರವಾದ ನಂಬುಗೆ ಉಳ್ಳವರಾಗಿದ್ದರು. ಜೀವನದ ಬಗ್ಗೆ ಆಧ್ಯಾತ್ಮಿಕ ದೃಷ್ಟಿಕೋನ ಹೊಂದಿರುವದು ಅವರ ಮುಖ್ಯಲಕ್ಷಣವಾಗಿತ್ತು. ಆತ್ಮಜ್ಞಾನಾನ್ವೇಷಣೆ, ಭಗವಂತನ ಸಾಕ್ಷಾತ್ಕಾರಗಳು ಅವರ ಜೀವನದ ಪ್ರಮುಖ ಕರ್ತವ್ಯಗಳಾದವು.

ಕಾಲಕ್ರಮದಲ್ಲಿ ಭೌಗೋಳಿಕವಾಗಿ ಜನರು ಭಿನ್ನ ಭಿನ್ನ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದುದರಿಂದ ಅವರ ಜೀವನ ಪದ್ಧತಿ ಆಚಾರ-ವಿಚಾರಗಳಲ್ಲಿ ಬದಲಾವಣೆ ಆದವಲ್ಲದೆ ಉಪಜಾತಿಗಳು ಹುಟ್ಟಿಕೊಂಡವು. ಪ್ರತಿಯೊಬ್ಬನಿಗೆ ಅವನು ಹುಟ್ಟಿದ ಜಾತಿ, ಕೈಗೊಂಡ ವೃತ್ತಿ, ಮಹತ್ವದ್ದಾಗಿದ್ದರೂ ಸಾಮಾಜಿಕ ಏಕತೆಗೆ ಧಕ್ಕೆ ಬಂದಿರಲಿಲ್ಲ. ಸಾಮರಸ್ಯದಿಂದಲೇ ಬಾಳುತ್ತಿದ್ದರು. ಭಿನ್ನತೆಯ ಮಧ್ಯದಲ್ಲಿಯೂ ಏಕತೆ ಇತ್ತು. ಇಂಥ ಹಿಂದು ಸಮಾಜವು ಕಾಲಕ್ರಮದಲ್ಲಿ ಅಫಘಾನರ, ಮೊಗಲರ ದಾಳಿಗೆ ತುತ್ತಾಯಿತು. ಬಹಳಷ್ಟು ರೀತಿಯಲ್ಲಿ ಬದಲಾಗತೊಡಗಿತು. ಹೊಂದಾಣಿಕೆ, ಪರಧರ್ಮ ಸಹಿಷ್ಣುತೆ, ಭಿನ್ನ ವಿಚಾರ ಸ್ವೀಕಾರ ಮಾಡುತ್ತ, ಒಳ್ಳೆಯದೆಲ್ಲವನ್ನು ಸ್ವಾಗತಿಸಹತ್ತಿತು. ಹಿಂದು ಸಮಾಜಕ್ಕೆ ತಟಸ್ಥವಾಗಿ ಏಕರೂಪವಾಗಿ ಉಳಿಯಲು ಸಾಧ್ಯವಾಗಲಿಲ್ಲ.

೩) ವೇದಕಾಲದ ನಂತರದ ಭಾರತ

ಇದು ವೇದಕಾಲದ ನಂತರ ಆರಂಭವಾಗಿ ಕ್ರಿಸ್ತಶಕ ಪೂರ್ವದ ಅವಧಿಯ ವರೆಗೆ ಹಬ್ಬಿರುತ್ತದೆ. ಇದರಲ್ಲಿ ಮೊಟ್ಟಮೊದಲು ಗೋಚರವಾಗುವುದು ಗ್ರೀಕರ ವಿಚಾರಧಾರೆ.

ಭಾರತದ ಬಗ್ಗೆ ಗ್ರೀಕರ ಪರಿಕಲ್ಪನೆಗಳು : ಭಾರತವು ನಾಗರಿಕತೆಯಿಂದಲೂ, ಸಾಂಸ್ಕೃತಿಕವಾಗಿಯೂ, ಉನ್ನತವಾಗಿದ್ದಾಗ ಇದೊಂದು ವಿಚಿತ್ರವಾದ ಅದ್ಭುತ, ರಹಸ್ಯಗಳ ನಾಡೆಂದು ಗ್ರೀಕರು ಪರಿಗಣಿಸಿದರು. ಈಬಗೆಯ ವೈಚಿತ್ರ್ಯಮಯ ಸಂಪ್ರದಾಯವು ಕ್ರಿಸ್ತಶಕ ಪೂರ್ವ ೬ನೇ ಶತಮಾನದಲ್ಲಿ ಬೆಳೆದು ಬಿಟ್ಟಿತು. ಭಾರತದಲ್ಲಿ ಸ್ಕಾಯಾಪೋಡ್ಸಗಳೆಂಬ ಪ್ರಾಣಿಗಳಿದ್ದು ಅವು ತಮ್ಮ ವಿಸ್ತಾರವಾದ ಪಾದಗಳನ್ನು ಮೇಲಕ್ಕೆ ಎತ್ತಿಕೊಂಡು ಬಿಸಿಲಿನಿಂದ ರಕ್ಷಿಸಿಕೊಳ್ಳುತ್ತವೆ. ಅದರಂತೆ ಇನ್ನೂ ಕೆಲವು ಪ್ರಾಣಿಗಳಿದ್ದು ತಮ್ಮ ಪಾದಗಳಿಂದ ಮೈಯನ್ನು ಮುಚ್ಚಿಕೊಂಡು ಚಳಿಯಿಂದ ರಕ್ಷಿಸಿಕೊಳ್ಳುತ್ತವೆ ಎಂದೆನ್ನುತ್ತಿದ್ದರು. ಹಿರೋಡೋಟಸ್‌ನಂಥ ಇತಿಹಾಸಕಾರನೂ ಸಹ ಇಂಥ ವಿಚಾರಗಳನ್ನು ಹೊಂದಿದವನಾಗಿದ್ದ. ಅವನು ಭಾರತದಲ್ಲಿ 'ನರಿಗಿಂತ ದೊಡ್ಡದಾದ, ನಾಯಿಗಳಿಗಿಂತ ಚಿಕ್ಕದಾದ ಗಾತ್ರದ ಇರುವೆಗಳಿದ್ದು ಅವು ನೆಲದೊಳಗಿಂದ ಬಂಗಾರದ ಕಣಗಳನ್ನು ಹೊರತೆಗೆಯುತ್ತವೆ' ಎಂದು ಬರೆದನು. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಓಟಿಸಿಯಸ್ ಎಂಬುವವನು 'ಭಾರತದಲ್ಲಿ ಮನುಷ್ಯರ ಮುಖವುಳ್ಳ ಸಿಂಹಗಳಿವೆ, ಅವು ತಮ್ಮ ಬಾಲದಿಂದ ಬಾಣದಂತೆ ಮುಳ್ಳುಗಳನ್ನು ಹಾರಿಸುತ್ತವೆ ' ಎಂದು ಬರೆದನು. ಇಂಥ ನಂಬಲಾಗದಂಥ ಕಟ್ಟು ಕಥೆಗಳು ಅಲ್ಲಿ ಜನಜನಿತವಾಗಿದ್ದವು. ಸ್ಟ್ರೇಬೋ ಮೊದಲಾದ ಅಲ್ಲಿಯ ಸಾಹಿತಿಗಳೂ ಕತೆಗಳಲ್ಲಿ ಹೀಗೆಲ್ಲ ಬರೆದು ಪ್ರಚಾರ ಮಾಡಿದರು. ಇಂಥ ಚಿತ್ರ ವಿಚಿತ್ರ ಕಥೆಗಳು ಕಾಲಕ್ರಮದಲ್ಲಿ ಯುರೋಪಿನಲ್ಲಿಯೂ ಪ್ರಸಿದ್ಧವಾದವು. ಮೋಜಿಗಾಗಿ,

ಮನರಂಜನೆಗಾಗಿ ಹೇಳಿರಬಹುದಾದ ಅವೆಲ್ಲ ಸತ್ಯ ಸಂಗತಿಗಳು ಎಂದು ಭಾವಿಸುವಂತಾಯಿತು. ಯಾವಾಗ ಭಾರತದೊಡನೆ ಅವರ ನೇರ ಸಂಪರ್ಕ ಉಂಟಾಯಿತೋ ಆಗ ಈ ಬಗೆಯ ಎಲ್ಲ ಮಿಥ್ಯಾಕಥೆಗಳು ನಿಧಾನವಾಗಿ ಮರೆಯಾಗ ತೊಡಗಿದವು. ಈಸ್ಕಿಲಸ್‌ನು ಪ್ರಪ್ರಥಮ ಬಾರಿಗೆ ಭಾರತದ ಬಗ್ಗೆ ತನ್ನ 'ಸಪ್ಲಾಯಂಟ ವೂಮೆನ್' ಎಂಬ ನಾಟಕದಲ್ಲಿ ಹೇಳಿಕೆ ನೀಡಿದ್ದಾನೆ.

"And tales I know, how Indian women roam
By Camels drawn, each in the tented home."

ಅಲೆಕ್ಸಾಂಡರನ ರಾಯಭಾರಿಯಾಗಿದ್ದ ಮೆಗಸ್ಥನೀಸನು ಭಾರತದ ಬಗ್ಗೆ ಸವಿಸ್ತಾರವಾದ ವರ್ಣನೆಯನ್ನು ಮಾಡಿದವರಲ್ಲಿ ಮೊದಲಿಗನಾಗಿದ್ದಾನೆ. ಅವನು ಕ್ರಿ.ಶ. ಪೂರ್ವ ೩೦೦ರಲ್ಲಿ ಪಾಟಲಿಪುತ್ರದಲ್ಲಿದ್ದುಕೊಂಡು ಭಾರತದ ರಾಜರ ಬಗ್ಗೆ ಜನರ ಬಗ್ಗೆ ಬರೆದು ತಮ್ಮ ದೇಶದ ಜನರಿಗೆ ತಿಳಿಸಿಕೊಟ್ಟನು. ಅದುವೆ 'ಇಂಡಿಕಾ' ಎಂಬ ಗ್ರಂಥವಾಯಿತು. ಅದರಲ್ಲಿ ಅವನು ಬರೆದುದು ಇಂತಿದೆ –

''ಭಾರತೀಯರು ಸಾಮಾನ್ಯ ರೀತಿಯಲ್ಲಿ, ಹಣ ವೆಚ್ಚ ಮಾಡದೆ ಸುಖವಾಗಿ ಬಾಳುತ್ತಾರೆ.... ಅವರು ದೇವತೆಗಳಿಗೆ ಪಶು ಬಲಿ ಕೊಟ್ಟಾಗ ಮಾತ್ರ ಮದ್ಯಪಾನ ಮಾಡುತ್ತಾರೆ. ಉಳಿದ ವೇಳೆಯಲ್ಲಿ ಸುರಾಪಾನ ಮಾಡುವುದಿಲ್ಲ... ಅವರು ಸಾದಾ ಕಾಯಿದೆ ಕಾನುನೂಗಳನ್ನು ಹೊಂದಿದ್ದು ಹೆಚ್ಚಾಗಿ ಅವರು ತಮ್ಮ ತಕರಾರುಗಳನ್ನು ನ್ಯಾಯಾಲಯಕ್ಕೆ ಒಯ್ಯುವುದಿಲ್ಲ.... ಸತ್ಯ ಹಾಗೂ ಸದ್ಗುಣಗಳಿಗೆ ಬಹಳಷ್ಟು ಮನ್ನಣೆ ಕೊಡುತ್ತಾರೆ.... ಬೆಳ್ಳಿ ಬಂಗಾರದ ಆಭರಣ, ಕುಸುರಿನ ಕೆಲಸ ಅವರಿಗೆ ಬಹಳ ಪ್ರಿಯವಾಗಿರುತ್ತದೆ. .... ಬಟ್ಟೆಗಳಲ್ಲಿ ಬಂಗಾರದ ಎಳೆಗಳನ್ನು ಹಾಕಿ ನೇಯ್ದಿರುತ್ತಾರೆ. ... ಜನರು ತಮ್ಮ ಮನೆಗಳಿಗೆ ಕೀಲಿ ಹಾಕುವುದಿಲ್ಲ. ಏಕೆಂದರೆ ಅವರಲ್ಲಿ ಕದಿಯುವ ಪ್ರವೃತ್ತಿ ಇಲ್ಲ. .... ಇವೆಲ್ಲ ಅವರು ಎಷ್ಟೊಂದು ಸದ್ಗುಣ ಹಾಗೂ ಸುಬುದ್ಧಿಯನ್ನು ಹೊಂದಿದ್ದಾರೆಂಬುದನ್ನು ತೋರಿಸಿಕೊಡುತ್ತವೆ''

ಇದಲ್ಲದೆ ಆತನು ಹಿಂದು ಸಮಾಜವು ಏಳು ವರ್ಗಗಳಲ್ಲಿ ವಿಭಜನೆ ಗೊಂಡಿದ್ದನ್ನು ವರ್ಣಿಸಿದ್ದಾನೆ. – ''ಯಾರೂ ಮತ್ತೊಬ್ಬರ ಜಾತಿಯ ಕನ್ಯೆಯರನ್ನು ಮದುವೆ ಆಗುವುದಿಲ್ಲ ಮತ್ತು ತನ್ನ ವಂಶ ಪರಂಪರಾಗತ ಬಂದ ಉದ್ಯೋಗ, ವ್ಯವಸಾಯ ಬಿಡುವುದಿಲ್ಲ.''

೨) ಅಫಘಾನರ ಪರಿಕಲ್ಪನೆ : ಭಾರತದ ಬಗ್ಗೆ ಬರೆದ ಎರಡನೇ ದೊಡ್ಡ ಇತಿಹಾಸಕಾರನೆಂದರೆ ಅಲ್ಬರೂನಿ ಎಂಬುವವನು. ಅವನು ಕ್ರಿ.ಶ. ೧೦೦೦ ದಿಂದ ೧೦೩೦ರವರೆಗೆ ಭಾರತದಲ್ಲಿದ್ದನು. ಉತ್ತರ ಭಾರತದ ಪಶ್ಚಿಮ ಭಾಗದಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷ ಇದ್ದನು. ಆತ ಬರೆದ ಪುಸ್ತಕವು 'ತಹಕೀಕ–ಎ–ಹಿಂದ' ಎಂಬುದಾಗಿದೆ. ಅದರಲ್ಲಿ ಆತ ವಿವರಿಸಿದ್ದಾನೆ.

''ಎಲ್ಲ ಹಿಂದುಗಳು ಸ್ವಧರ್ಮಪ್ರಿಯರಾಗಿದ್ದು ಪರಧರ್ಮವನ್ನು ದ್ವೇಷಿಸುತ್ತಾರೆ. ಅವರನ್ನು ಮ್ಲೇಂಛರೆಂದು ಬಗೆಯುತ್ತಾರೆ. ಅವರೆಲ್ಲ ಅಪರಿಶುದ್ಧರೆಂದು ಭಾವಿಸಿ ಅವರನ್ನು ಮುಟ್ಟುವುದಿಲ್ಲ, ಅವರೊಡನೆ ಬೆರೆತು ಆಹಾರ - ವಿಹಾರ ಮಾಡುವುದಿಲ್ಲ. ಅವರೊಡನೆ ಮಾತನಾಡಿದರೆ, ವಿವಾಹವಾದರೆ ಧರ್ಮಬಾಹಿರ ರಾಗುತ್ತಾರೆ. ... ಹಿಂದುಗಳೆಲ್ಲರೂ ತಮ್ಮಂಥ ದೇಶ ಬೇರೊಂದಿಲ್ಲ, ತಮ್ಮ ರಾಜರಂಥ ರಾಜರು ಬೇರೆಲ್ಲೂ ಇಲ್ಲ, ತಮ್ಮ ಧರ್ಮದಂತಹ ಧರ್ಮ ಬೇರೊಂದಿಲ್ಲ, ತಮ್ಮ ವಿಜ್ಞಾನದಂತೆ ಬೇರೆಲ್ಲೂ ವಿಜ್ಞಾನವಿಲ್ಲ ಎಂದು ಬಗೆದಿರುತ್ತಾರೆ.''

೩) ಇಟಾಲಿಯನ್ನರ ಪರಿಕಲ್ಪನೆ : ಮೆಗಸ್ಥನೀಸ ಹಾಗೂ ಅಲ್ಬರೂನಿ ಉತ್ತರ ಹಿಂದುಸ್ಥಾನವನ್ನು ವರ್ಣಿಸಿದರೆ ಶ್ರೇಷ್ಠ ಪ್ರವಾಸಿಗನಾದ ಇಟಲಿಯ ಮಾರ್ಕೋಪೋಲೋ ಎಂಬುವವನು ದಕ್ಷಿಣ ಹಿಂದುಸ್ಥಾನವನ್ನು ವರ್ಣಿಸಿದನು. ಅವನು ಬರೆದುದೆಲ್ಲವೂ ಮೆಗಸ್ಥನೀಸ ಹಾಗೂ ಅಲ್ಬರೂನಿಯವರ ಹೇಳಿಕೆಗೆ ಪೂರಕವಾಗಿದೆ.

''ಮೂರ್ತಿ ಪೂಜಕರಾದ ಈ ರಾಜ್ಯದ ಜನರು 'ನಂದಿ'ಗೆ ವಿಶೇಷ ಪೂಜೆ ಮಾಡುತ್ತಾರೆ. ಗೌರವ ಕೊಡುತ್ತಾರೆ. ಹೆಂಗಸರು, ಗಂಡಸರು ದಿನಾಲು ಎರಡು ಸಲ ಸ್ನಾನ ಮಾಡುತ್ತಾರೆ. ಪೂಜಾ ವಿಧಿ -ವಿಧಾನಗಳು ಮುಗಿಯುವವರೆಗೆ ಏನನ್ನೂ ತಿನ್ನುವುದಿಲ್ಲ, ನೀರನ್ನೂ ಕುಡಿಯುವುದಿಲ್ಲ. .... ಅಪರಾಧಿಗಳಿಗೆ ತಕ್ಕ ಶಿಕ್ಷೆ ವಿಧಿಸುತ್ತಾರೆ. ... ಗೋವಳಕೊಂಡಲ್ಲಿ ವಜ್ರಗಳು ದೊರೆಯುತ್ತವೆ..... ಮಲಬಾರ ಪ್ರದೇಶದಲ್ಲಿ ಯಾಲಕ್ಕಿ, ಲಾವಂಗು, ಮೆಣಸು ಮುಂತಾದ ಮಸಾಲೆ ಸಾಮಾನುಗಳು ಹೇರಳವಾಗಿ ದೊರೆಯುತ್ತವೆ. .... ಜನರು ಸತ್ಯವಂತರಾಗಿದ್ದಾರೆ.... ದೇವಾಲಯಗಲ್ಲಿ ದೇವರ ಮೂರ್ತಿಗಳಿದ್ದು ಅವುಗಳಿಗೆ ಅನೇಕ ತಂದೆ -ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ದಾಸಿಯರನ್ನಾಗಿ ಬಿಟಟ್ಟಿರುತ್ತಾರೆ.''

ಈ ಮೂವರು ಸಾಮಾನ್ಯವಾಗಿ ಮೇಲ್ನೋಟಕ್ಕೆ ಕಾಣಬರುವ, ವಾಸ್ತವದ ಭಾರತದ ಬಗ್ಗೆ ಬರೆದಿದ್ದಾರೆ. ಆದರೆ ಆಂತರಿಕ ಭಾರತವು ಆಳವಾಗಿ ಧಾರ್ಮಿಕ ಹಾಗೂ ಆಧ್ಯಾತ್ಮಿಕವಾದ ನಾಡೆಂದೂ ಉನ್ನತ ಮಟ್ಟದ ಸಂಸ್ಕೃತಿಯುಳ್ಳದ್ದೆಂದು ತಿಳಿಸುವಲ್ಲಿ ವಿಫಲರಾಗಿದ್ದರು. ಅವೆಲ್ಲವು ಪಾಶ್ಚಾತ್ಯರಿಗೆ ತಿಳಿದು ಬಂದುದು ಸಮುದ್ರಯಾನ ಆರಂಭವಾದ ಬಳಿಕವೆ. ಅಲ್ಲಿಯವರೆಗೆ ಭಾರತ ಅಪರಿಚಿತವಾಗಿತ್ತು.

೪) ಭಾರತ - ಇಸ್ಲಾಂ ಚಿತ್ರಣ : ಮುಸ್ಲಿಮರು ಹಾಗೂ ಮೊಗಲರು ಭಾರತದ ಮೇಲೆ ದಾಳಿ ಮಾಡಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡರು. ಆ ಬಳಿಕ ಪುರಾತನ ಭಾರತದ ಸ್ವರೂಪವು ಛಿನ್ನ ವಿಚ್ಛಿನ್ನವಾಗತೊಡಗಿತು. ಮುಸಲ್ಮಾನರ ದಬ್ಬಾಳಿಕೆಯಲ್ಲಿ ಹಿಂದುಗಳು ಹತ್ತಿಕ್ಕಲ್ಪಟ್ಟರು. ಜನ ಜೀವನದಲ್ಲಿ ಏರು-ಪೇರುಗಳಾದವು.

ಮುಸ್ಲಿಂ ಸಂಸ್ಕೃತಿ ಹಾಗೂ ನಾಗರಿಕತೆಗಳು ಅನೇಕ ರೀತಿಯಲ್ಲಿ ಹಿಂದು ಸಂಸ್ಕೃತಿ, ನಾಗರಿಕತೆಗೆ ವಿರುದ್ಧವಾಗಿದೆ. ಇಸ್ಲಾಂ ಧರ್ಮದಲ್ಲಿ ಒಬ್ಬನೇ ದೇವರು ಮೂರ್ತಿ ಪೂಜೆ, ಇಲ್ಲ. ಹಿಂದೂ ಧರ್ಮದಲ್ಲಿ ಅನೇಕ ದೇವರು, ಮೂರ್ತಿ ಪೂಜೆ ಇದೆ. ಇಸ್ಲಾಂ ಧರ್ಮದಲ್ಲಿ ಬಹುಪತ್ನಿತ್ವ ಇದ್ದರೆ ಹಿಂದುಗಳಲ್ಲಿ ಏಕ ಪತ್ನಿತ್ವ ಇದೆ. ಇಸ್ಲಾಂ ಧರ್ಮದಲ್ಲಿ ಮಹಮ್ಮದ್ ಪೈಗಂಬರರನ್ನು ಬಿಟ್ಟರೆ ಬೇರೆ ಪ್ರವಾದಿ ಇಲ್ಲ, ಕುರಾನವೇ ಪರಮಗ್ರಂಥ. ಹಿಂದುಗಳಲ್ಲಿ ಅನೇಕ ಜನ ಮಹರ್ಷಿಗಳು, ಅನೇಕ ಪವಿತ್ರ ಗ್ರಂಥಗಳು. ಮುಸ್ಲಿಮರು ಮಾಂಸ ಭಕ್ಷಕರಾಗಿ ಆಕಳನ್ನು ಕೊಂದು ತಿನ್ನುವವರಾದರೆ, ಹಿಂದುಗಳು ಶಾಕಾಹಾರಿಗಳಾಗಿದ್ದು ಆಕಳನ್ನು ಪೂಜಿಸುವಂಥವರು. ಹೀಗೆ ಪರಸ್ಪರ ವಿರೋಧಗಳಿದ್ದಾಗ ಮುಸ್ಲಿಂ ರಾಜರು ದಬ್ಬಾಳಿಕೆ ಮಾಡಿ, ಮತಾಂತರವನ್ನು ಮಾಡಿದರು. ಇಂಥ ಸನ್ನಿವೇಶದಲ್ಲಿ ಭಾರತವು ತನ್ನ ಮೂಲಸ್ವರೂಪವನ್ನು ಕಳೆದುಕೊಳ್ಳಹತ್ತಿತು. ವೈದಿಕ ಧರ್ಮ, ಸಂಸ್ಕೃತಿ, ನಾಗರಿಕತೆಗಳೆಲ್ಲ ಬದಲಾವಣೆಗೆ ಒಳಗಾದವು. ಅದನ್ನು ಕಾಪಾಡುವದೂ ಕಠಿಣವಾಯಿತು.

ಈ ರೀತಿ ಭಾರತವು ಕೇವಲ ಹಿಂದುಗಳ ದೇಶವಾಗಿ ಉಳಿಯದೆ ಹಿಂದು - ಮುಸ್ಲಿಂ ದೇಶವಾಗಿ ಸಾಗತೊಡಗಿತು. ಕಾಲಕ್ರಮದಲ್ಲಿ ಪರಸ್ಪರರ ವೈರತ್ವ ಕಡಿಮೆ ಆಗಿ, ತಿಳುವಳಿಕೆ - ಹೊಂದಾಣಿಕೆ ಉಂಟಾಗಿ ಬಾಳುವುದು ಅನಿವಾರ್ಯವಾಯಿತು. ಸಾಮರಸ್ಯದ ಜೊತೆಗೆ ಜೀವನದ ನಾನಾ ರಂಗಗಳಲ್ಲಿಯು ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಕಲಬೆರಕೆಯಾಗಿ ಹೊಸ ವಿಧಾನಗಳು ಉಂಟಾದವು. ಈ ರೀತಿಯ ದ್ವಿಮುಖ ಬೆಳವಣಿಗೆ ಹೊಂದುವಾಗಲೂ ಹಿಂದೂ ಧರ್ಮ ಏಕತೆಯನ್ನು ಸಾಧಿಸಿತು.

೩) ಆಧುನಿಕ ಭಾರತದ ಚಿತ್ರಣ

ಇದು ಮಧ್ಯಯುಗದಿಂದ ಆರಂಭವಾಯಿತು. ಯುರೋಪಿನ ಪ್ರವಾಸಿಗರು, ವ್ಯಾಪಾರಸ್ಥರು, ಆಡಳಿತಗಾರರು ಭಾರತವನ್ನು ಸಂದರ್ಶಿಸಿ ನಾಲ್ಕು ವಿಭಿನ್ನ ರೀತಿಯಲ್ಲಿ ಬಣ್ಣಿಸಿದರು.

೧. ಮೊದಲನೇ ಪ್ರಕಾರದ ಜನರು ಭಾರತವನ್ನು ಬಿಸಿಲು ಹಾಗೂ ಧೂಳಿನ ದೇಶವೆಂದು ಬಣ್ಣಿಸಿದರು.

೨. ಎರಡನೇ ಪ್ರಕಾರದ ಜನರು ಭಾರತವನ್ನು ಮಸಾಲೆ ಸಾಮಾನು, ಸಂಗಮವರಿ ಕಲ್ಲು, ಅರಮನೆ, ರಾಜ, ಮಹಾರಾಜರ, ಸಂಪದ್ಭರಿತ ದೇಶವೆಂದು ವರ್ಣಿಸಿದರು

೩. ಮೂರನೆ ಸಂಪ್ರದಾಯದವರು ಭಾರತವನ್ನು ಅನಾಗರಿಕ ದೇಶ ಂದು ಹೀಗಳೆದು, ವಿಚಿತ್ರಮಯ, ರಹಸ್ಯಮಯ ದೇಶ ಎಂದು ಕರೆದರು

೪. ನಾಲ್ಕನೆಯವರು ಇದನ್ನು ಉನ್ನತ ಧರ್ಮ, ಸಂಸ್ಕೃತಿ, ನಾಗರೀಕತೆ, ಸಾಹಿತ್ಯ ಹಾಗೂ ಕಲೆಗಳ ಬೀಡು ಎಂದು ಬಣ್ಣಿಸಿದರು.

ಇವುಗಳನ್ನು ಒಂದೊಂದಾಗಿ ಸವಿಸ್ತಾರವಾಗಿ ಅಧ್ಯಯನ ಮಾಡಬೇಕು.

೧. ಇಂಗ್ಲೆಂಡಿನ ಕವಿಗಳಾದ ಸ್ಪೆನ್ಸರ , ಮಿಲ್ಟನ್‌ಗೆ. ಥಾಮಸ್ ಹುಡ್ ಮೊದಲಾದವರು. ಇಲ್ಲಿಯ ಬಿಸಿಲಿನ, ಧೂಳಿನ ವರ್ಣನೆಯನ್ನು ತಮ್ಮ ಕವನಗಳಲ್ಲಿ ಮಾಡಿದ್ದಾರೆ.

ಕವಿಗಳ ಕವಿ ಎಂದೇ ಪ್ರಖ್ಯಾತನಾಗಿದ್ದ ಎಡ್ಮಂಡ ಸ್ಪೆನ್ಸರನು ತನ್ನ 'ಫೇರಿಕ್ವೀನ' ಎಂಬ ಕಾವ್ಯದಲ್ಲಿ ಭಾರತವನ್ನು, ಋಷಿ ಮುನಿಗಳನ್ನು ಬಣ್ಣಿಸಿದ್ದು ಹೀಗೆ.

'travelling through the boiling sands of Ynde'

ಮಹಾಕವಿ ಮಿಲ್ಟನ್ನನು ಆಲದ ಗಿಡ ಹಾಗೂ ಅದರ ನೆರಳನ್ನು ವರ್ಣಿಸಿದ್ದು ಇಂತಿದೆ

".... there soon they chase
The Fig tree, not that kind of fruit renowned
But such as to this day, to Indians known"

ಭಾರತದ ಬಿಸಿಲಿನ ಬಗ್ಗೆ ಮಿಲ್ಟನ್ ಬರೆದಿದ್ದಾನೆ –

"The blended things take root and daughters grow
About the mother tree, a pillard shade,
High over-arched and echoing walks between
There oft the Indian Herdsman shunning heat
Shelters in cool....."

ಗೇ ಎನ್ನುವ ಕವಿಯು ತನ್ನ 'ಬೆಗರ್ಸ ಓಪೇರಾ' ಎಂಬ ಕವನದಲ್ಲಿ

"Were I sold on Indian soil
Soon as the burning day was closed
I would make the sultry soil
When on my charmer's breast resposed"

ಥಾಮಸ್ ಹುಡ್ ಎನ್ನುವ ಕವಿಯೂ ವಿನೋದ ಮಾಡುತ್ತಾ

"By Pa and Ma I am daily told
To marry now is the time
Far though I am very far from old

I'm rather in my prime
They say while we have any sun
We ought to make our hay
And India has so hot a one
I'm going to Bombay."

ಜಹಾಂಗಿರನ ಆಸ್ಥಾನದಲ್ಲಿದ್ದ ಬ್ರಿಟಿಷರಾಯಭಾರಿಯಾದ ಸರ್ ಥಾಮಸ್ ರೊ ಭಾರತೀಯ ಹವಾಮಾನದ ಬಗ್ಗೆ ಹೇಳುತ್ತಾನೆ –

fires, smokes, floods, storms
heat, dust, flies etc"

ಭಾರತವನ್ನು ಸುವರ್ಣಭಾರತವೆಂದು ಬಣ್ಣಿಸಿದವರೂ ಬಹಳಷ್ಟು ಜನರಿದ್ದಾರೆ. ವಿಜಯ ನಗರದ ರಾಜ್ಯವನ್ನು ಸಂದರ್ಶಿಸಿದ ಪೋರ್ತುಗೀಜ ಪ್ರವಾಸಿಗರು ಬಂಗಾರಮಯ ಭಾರತವೆಂಬ ಸಂಪ್ರದಾಯ ಬೆಳೆಸಿದರು. ಸಾಹಿತಿಗಳಾದ ಚಾಸರ, ಮಾರ್ಲೊ, ಶೇಕ್ಸ್ಪೀಯರ್ , ಮಿಲ್ಟನ್, ಪೋಪ, ಥಾಮಸ್‌ರೋ, ವಾರ್ಥೆಮ್, ವಾಲ್ಟರಸ್ಕಾಟ – ಇವರೆಲ್ಲ ಈ ಸಂಪ್ರದಾಯಕ್ಕೆ ಸೇರಿದವರಾಗಿದ್ದಾರೆ.

ಚಾಸರ ಕವಿಯು ತನ್ನ ' Knight's Tale' ದಲ್ಲಿ

"Emetrius, King of Inde, who was covered in cloth of gold, whose sadel was brend gold, had a mantlet hanging down his shoulders which was breteful of rubies red" ಎಂದಿದ್ದಾನೆ.

ಮಾರ್ಲೋನಿಗೆ ಭಾರತದ ಬಗ್ಗೆ ಬಹಳ ಗೊತ್ತಿತ್ತು. ಅವನು ತನ್ನ 'ಟ್ಯಾಂಬರ್ಲೇನ್' ಹಾಗೂ 'ಡಾಕ್ಟರ ಫಾಸ್ಟಸ್' ಎಂಬ ನಾಟಕಗಳಲ್ಲಿ ಉಲ್ಲೇಖ ಮಾಡಿದ್ದಾನೆ.

ಟ್ಯಾಂಬರ್ಲೇನ "What, thinkest Thou Tamburlaine esteems thy gold ?

I will make the kings of India, ere I die
Offer their mines, to sue for peace to me"

'ಡಾಕ್ಟರ ಫಾಸ್ಟಸ್'ದಲ್ಲಿ ಫಾಸ್ಟಸ್ ಎನ್ನುತ್ತಾನೆ –

"I will have them fly to India for gold
Ransack the ocean for orient pearl"

ಶೇಕ್ಸ್‌ಪಿಯರನೂ ಭಾರತದ ಬಗ್ಗೆ ಬಹಳಷ್ಟು ಬಲ್ಲವನಾಗಿದ್ದನು. ಅವನು ತನ್ನ 'As you like it' ನಾಟಕದಲ್ಲಿ ಅಂದಿದ್ದಾನೆ.

"From East to the Western Ind
No jewel is like Rosalind"

ಅದರಂತೆ Henry IV ನಾಟಕದಲ್ಲಿ

"Wondrous affable and as bountiful
As mines of India" ಎಂದಿದ್ದಾನೆ.

'ಟ್ರಾಯಲಸ್ ಆ್ಯಂಡ್ ಕ್ರೆಸಿಡಾ' ಎಂಬ ನಾಟಕದಲ್ಲಿ

'Her bed is India ; there she lies a pearl' ಎಂತಲೂ,

'How now, my metal of India' ಎಂತಲೂ 'Twefth Night' ನಾಟಕದಲ್ಲಿ ಅಂದಿದ್ದಾನೆ. ಇದೆಲ್ಲ ಶೇಕ್ಸ್‌ಪಿಯರನು 'ಗೋಲ್ಡನ್ ಇಂಡ್' ಸಂಪ್ರದಾಯಕ್ಕೆ ಸೇರಿದವ ಎಂದು ತೋರಿಸಿ ಕೊಡುತ್ತದೆ.

ಮಿಲ್ಟನ್ನನಿಗೆ ಇವೆಲ್ಲರಿಗಿಂತ ಹೆಚ್ಚು ಭಾರತದ ಬಗ್ಗೆ ಗೊತ್ತಿತ್ತು. ಮೊಗಲ ರಾಜ್ಯವನ್ನು ಅವರ ಸಂಪತ್ತನ್ನೂ ಆತ ವರ್ಣಿಸಿದ್ದಾನೆ –

"Hihg on a throne of Royal State, which far
Outshines the wealth of Ormus and of Ind,
Showers on her kings Barbaric pearl and gold"

ಅಲೆಕ್ಝಾಂಡರ ಪೋಪನೂ ಬಣ್ಣಿಸಿದ್ದಾನೆ –

"Like Eastern Kings, a lazy state they keep
And closed, confined, to their own palace confined"

ಮೇಲ್ಕಾಣಿಸಿದ ಕವಿಗಳು ಎಲ್ಲರೂ ಭಾರತಕ್ಕೆ ಬರದೇ ನೋಡದೆ, ಕೇಳಿ ತಿಳಿದುಕೊಂಡು ಬಣ್ಣಿಸಿದರೆ, ಜಹಾಂಗಿರನ ಆಸ್ಥಾನದಲ್ಲಿದ್ದ ಬ್ರಿಟಿಷ್ ರಾಯಭಾರಿ ಯಾಗಿದ್ದ ಸರ್ ಥಾಮಸ್ ರೋ ರಾಜನ ಸಂಪತ್ತನ್ನು ಕಣ್ಣಾರೆ ಕಂಡು ದಂಗು ಬಡಿದು ವರ್ಣಿಸಿದ್ದಾನೆ.

ಜಹಾಂಗೀರನು ಮೈಮೇಲೆ ಬಂಗಾರದ ಎಳೆಗಳುಳ್ಳ, ಹುಲ್ಲಿನಂತೆ ದಪ್ಪವಾದ ಅಂಗಿಯನ್ನು ತೊಟ್ಟಿದ್ದನು..... ಅವನ ಕೊರಳಲ್ಲಿ ಮೂರು ಮುತ್ತಿನ ಸರಗಳ ಮಾಲೆ ಕಂಗೊಳಿಸುತ್ತಿತ್ತು... .. ಮಣಿಕಟ್ಟು ಹಾಗೂ ತೋಳ ಬಂದಿಗಳಲ್ಲಿ ವಜ್ರದ ಸಾಲುಗಳು ಮಿನುಗುತ್ತಿದ್ದವು. ... ಪ್ರತಿಯೊಂದು ಬಟ್ಟಿನಲ್ಲಿ ಹೊಳೆವ ಉಂಗುರಗಳಿದ್ದವು. ತಲೆಗೆ ಸುತ್ತಿದ ರುಮಾಲಿನಲ್ಲಿ ದೊಡ್ಡದಾದ ಕೆಂಪು ರತ್ನ ಆಕರ್ಷಿಸುತ್ತಿತ್ತು. ರತ್ನ ಖಚಿತ ಖಡ್ಗ ಹಾಗೂ ರಾಜ ದಂಡಗಳು ಹೊಳೆಯುತ್ತಿದ್ದವು''

ಹೀಗೆ ಜಹಾಂಗೀರನು ಮುತ್ತು - ರತ್ನ -ವಜ್ರ -ವೈಡೂರ್ಯಗಳಲ್ಲಿ ಮುಳುಗಿದ್ದನು. ಅವನನ್ನು ತಕ್ಕಡಿಯಲ್ಲಿ ಕೂಡ್ರಿಸಿ ಬೆಳ್ಳಿ ಬಂಗಾದರದಿಂದ ತೂಗಿದ್ದನ್ನು ನೋಡಿ ರೋ ವಿಸ್ಮಿತನಾದನು. ಈ ರೀತಿ ಒಂದೇ ಸ್ಥಳದಲ್ಲಿ ಕೂಡಿಸಿಟ್ಟ ಸಂಪತ್ತನ್ನು ನೋಡಿದ ಅವನ ಕಣ್ಣುಗಳು ಕುಕ್ಕಿ ಹೋದವು.

ಇದೇ ರೀತಿ ಸಂಪತ್ತಿನ ವರ್ಣನೆಯನ್ನು ವಾರ್ಥೆಮ್ ಎಂಬುವವನು ದಕ್ಷಿಣ ಭಾರತದ ರಾಜರನ್ನು ಕಂಡಾಗ ಮಾಡಿದ್ದಾನೆ. ಕಾಲಿಕತ್ತದ ರಾಜನು ಎಲ್ಲ ಬಗೆಯ ವಜ್ರ - ವೈಡೂರ್ಯಗಳಲ್ಲಿ ಅಲಂಕೃತನಾಗಿದ್ದನಲ್ಲದೆ ಎರಡು ಕೋಣೆ ತುಂಬ ಮುತ್ತು ರತ್ನಗಳು ತುಂಬಿದ್ದವು ಎಂದು ವರ್ಣಿಸಿದ್ದಾನೆ.

ವಾಲ್ಟರ ಸ್ಕಾಟ್‌ನಂತೂ ಭಾರತವನ್ನು 'El ! Dorado' ಬಂಗಾರದ ದೇಶವೆಂದು ಬರೆದನು.

ಇನ್ನು ಮೂರನೆಯ ಸಂಪ್ರದಾಯದವರಾದ ವಿಲ್ಬರಫೋರ್ಸ ಹಾಗೂ ವಿಲಿಯಂ ಅರ್ಚರ ಅಂಥವರು ಭಾರತವನ್ನು ಅನಾಗರಿಕ ದೇಶವೆಂದು ಪ್ರತಿಬಿಂಬಿಸ ತೊಡಗಿದರು.

ಜೂನ್ ೨೨, ೧೮೧೩ರಂದು ಬ್ರಿಟಿಷ್‌ಪಾರ್ಲಿಮೆಂಟಿನಲ್ಲಿ ವಿಲ್ಬರಫೋರ್ಸ್‌ನು ಭಾಷಣ ಮಾಡಿ 'ಹಿಂದೂ ದೇವತೆಗಳೆಲ್ಲ ಕಾಮದ, ಕ್ರೋಧದ, ಅನ್ಯಾಯದ, ದೌರ್ಜನ್ಯದ, ರಾಕ್ಷಸರಾಗಿದ್ದಾರೆ' ಎಂದು ಸಾರಿದನು. ಅದರಂತೆ ವಿಲಿಯಂ ಆರ್ಚರ ಎಂಬುವವನು 'ಭಾರತ ಹಾಗೂ ಭವಿಷ್ಯತ್ತು' ಎಂಬ ತನ್ನ ಪುಸ್ತಕದಲ್ಲಿ ಭಾರತವನ್ನು "Barbarous, barbarous, barbarous - I am sorry to harp so much on these words " ಎಂದಿದ್ದಾನೆ.

ಮೇಲಿನ ಮೂರು ಸಂಪ್ರದಾಯಗಳಿಗೆ ವಿರುದ್ಧವಾಗಿ ನಾಲ್ಕನೆಯ ಸಂಪ್ರದಾಯದವರು ಭಾರತವು ಸುಸಂಸ್ಕೃತ ನಾಗರಿಕ ದೇಶವೆಂದು ಬಣ್ಣಿಸಿದರು. ಇದರ ಪರಿಣಾಮವಾಗಿ ತಪ್ಪು ಗ್ರಹಿಕೆಗಳೆಲ್ಲ ಹೋಗಿ ಭಾರತವು ಪ್ರಾಚೀನ ಕಾಲದಿಂದಲೂ, ಒಳ್ಳೆಯ ನಾಗರಿಕತೆ ಹೊಂದಿತ್ತೆಂಬುದು ಅವರಿಗೆ ಸ್ಪಷ್ಟವಾಯಿತು.

ಈ ಸಂಪ್ರದಾಯ ಬೆಳೆದು ಬರಲು 'ಇಂಡೊಲಾಜಿ' ಎಂಬ ಅಧ್ಯಯನ ಸಂಸ್ಥೆ ಹುಟ್ಟಿಕೊಂಡಿತು. ಅದಕ್ಕೆ ಸರ್. ವಿಲಿಯಂ ಜೋನ್ಸ ಹಾಗೂ ಚಾರ್ಲ್ಸ್ ವಿಲ್ಕಿನ್ಸ ರಂಥವರು ಕಾರಣೀಭೂತರಾದರು. ಸಂಸ್ಕೃತ ಸಾಹಿತ್ಯದಲ್ಲಿನ ಅಮೂಲ್ಯ ಕೃತಿಗಳನ್ನು ಇಂಗ್ಲಿಷಿಗೆ ಭಾಷಾಂತರಿಸುವ ಮುಖಾಂತರ ಸಾಹಿತ್ಯ ಕ್ರಾಂತಿಯನ್ನುಂಟು ಮಾಡಿದರು. ೧೭೮೪ರಲ್ಲಿ 'ಭಗವದ್ಗೀತೆ'ಯನ್ನು ೧೭೮೭ರಲ್ಲಿ ಹಿತೋಪದೇಶವನ್ನು, ೧೭೯೩ರಲ್ಲಿ 'ಗೀತಗೋವಿಂದ'ವನ್ನು ಭಾಷಾಂತರಿಸಿ ಪ್ರಕಟಿಸಿದರು. ಇದರಿಂದ ಹೆನ್ರಿ ಕೋಲಬ್ರೂಕ (೧೭೬೫-೧೮೩೭) ಮತ್ತು ಎಚ್.ಎಚ್. ವಿಲ್ಸನ್ (೧೭೮೯-೧೮೬೦)

ಮೊದಲಾದವರು ಸಂಸ್ಕೃತ ಸಾಹಿತ್ಯ ಸಂಪದವನ್ನು ಭಾಷಾಂತರಿಸಿ ಹಿಂದೂ ಧರ್ಮ ಹಾಗೂ ಸಂಸ್ಕೃತಿಯ ಪ್ರಚಾರ ಮಾಡಿದರು. ಫ್ರಾನ್ಸ್, ಜರ್ಮನಿ ಹಾಗೂ ಇಂಗ್ಲೆಂಡ್‌ಗಳಲ್ಲಿ ಸಂಸ್ಕೃತದ ಬಗ್ಗೆ ವಿಶೇಷ ಪ್ರೀತಿ, ಅಧ್ಯಯನ ಮಾಡುವ ಹಂಬಲ ಉಂಟಾದವು. ಇಂಗ್ಲೆಂಡ್‌ದಲ್ಲಿ ೧೮೦೫ರಲ್ಲಿ ಸಂಸ್ಕೃತವನ್ನು ಕಲಿಸಲೂ ಆರಂಭಿಸಿದರು. ಹಾಗೂ ಋಗ್ವೇದದ, ಸೆಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್ ಇವುಗಳ ಪ್ರಥಮ ಆವೃತ್ತಿಗಳು ಹೊರಬಂದವು. ಸಂಸ್ಕೃತದ ಶ್ರೇಷ್ಠ ಪಂಡಿತನಾದ ಜರ್ಮನಿಯ ಮ್ಯಾಕ್ಸ ಮುಲ್ಲರನು ಕೇಂಬ್ರಿಜ ವಿಶ್ವವಿದ್ಯಾಲಯದಲ್ಲಿಯ ತನ್ನ ಭಾಷಣಗಳಲ್ಲಿ ಹೇಳಿದ್ದನು.

"....... and in the study of history of the human mind, in the study of ourselves, of our true selves, India occupies a place second to no other county..." ಇದು ಇಷ್ಟೇ ಅಲ್ಲದೆ "..... some of the most valuable and most instructive materials in the history of man are treasured up in India, and in India only" ಎಂದು ಘಂಟಾಘೋಷವಾಗಿ ಸಾರಿದನು.

ಮಾಕ್ಸ ಮುಲ್ಲರರ ಅಭಿಪ್ರಾಯವನ್ನು ಅನುಮೋದಿಸುತ್ತ ಸರ್ ಜಾನ್. ವುಡ್ರೋಫ ಎಂಬುವವರು

"Among the present cultures , India at least occupies a place in the first rank" ಎಂದು ನಿರ್ಣಾಯಕವಾಗಿ ಸಾರಿದರು.

ಇಂಡಾಲಾಜಿಸ್ಟರು ಎಶಿಯಾಟಿಕ್ ಸೊಸೈಟಿಯನ್ನು ಆರಂಭಿಸಿ ತನ್ಮೂಲಕ ಭಾರತದ ಪುರಾತನ ಕಾಲದಿಂದ ಬಂದ ವೈಭವವನ್ನೆಲ್ಲ ತಮ್ಮ ಗ್ರಂಥ ಹಾಗೂ ಲೇಖನಗಳ ಮುಖಾಂತರ ತೋರಿಸಿಕೊಟ್ಟರು. ಭಾರತವನ್ನು ಮೆಚ್ಚಿಕೊಂಡು ಪ್ರೀತಿಸಿದ ಇಂಥ ಮಹನೀಯರಿಂದ, ಅವರ ಪುಸ್ತಕಗಳಿಂದ ಭಾರತದ ಸರಿಯಾದ ಚಿತ್ರಣವು ಹೊರ ಹೊಮ್ಮಿತು ಹಾಗೂ ಪಾಶ್ಚಾತ್ಯರಲ್ಲಿದ್ದ ಎಲ್ಲಾ ಹಳೆಯ ಗ್ರಹಿಕೆಗಳನ್ನು ಯಶಸ್ವಿಯಾಗಿ ದೂರ ಸರಿಸಿದವು.

ಭಾರತದಲ್ಲಿ ಬ್ರಿಟಿಷ ಆಡಳಿತಾಧಿಕಾರಿಯಾಗಿ ಕಾರ್ಯ ಮಾಡಿದ ಅನೇಕ ಮಹನೀಯರು ಭಾರತದ ಹೊಸ ಇತಿಹಾಸ ಬರೆಯುವಲ್ಲಿ ಹೊಸ ವಿಷಯವನ್ನು ಒದಗಿಸಿಕೊಟ್ಟರು.

೧೮೧೦ರಲ್ಲಿ ಕರ್ನಲ್ ಮಿಲ್ಕ್ಸ ಎಂಬವನು Historical sketches of the South India ಎಂಬ ಪುಸ್ತಕವನ್ನು, ೧೮೨೬ರಲ್ಲಿ ಗ್ರಾಂಟ ಡಫ್ ಎನ್ನುವವನು History of the Marathas ಎಂಬ ಪುಸ್ತಕವನ್ನು ೧೮೨೯ರಲ್ಲಿ ಜೇಮ್ಸ ಟಾಡ ಎಂಬುವವನು 'Annals and Antiquities of Rajasthan' ಎಂಬ

ಪುಸ್ತಕವನ್ನು ಪ್ರಕಟಿಸಿದರು. ಲಾರ್ಡ ಎಲ್ಫಿನ್‌ಸ್ಟನ್ನನು ೧೮೪೧ರಲ್ಲಿ 'History of India' ಎಂಬ ಪುಸ್ತಕವನ್ನು ಪ್ರಕಟಿಸಿದನು. ಮೇಜರ ಜನರಲ್ ಬ್ರಿಗ್ಸ್ ಎಂಬುವವನು ಸ್ಕಾಟ್ ಎಂಬುವನ ಜೊತೆಗೂಡಿ ಮಹಮ್ಮದ ಕಾಸಿಮ ಫೆರಿಷ್ತಾನು ಬರೆದ ಇತಿಹಾಸವನ್ನು 'History of the Deccan Kingdoms' ಎಂದು ಭಾಷಾಂತರಿಸಿ ಪ್ರಕಟಿಸಿದನು. ಹೀಗೆ ಅನೇಕ ಬ್ರಿಟಿಷ್ ಅಧಿಕಾರಿಗಳು ಭಾರತದ ಸರಿಯಾದ ಚಿತ್ರಣವನ್ನು ನೀಡುವಲ್ಲಿ ತಮ್ಮ ಅಪಾರ ಕೊಡುಗೆ ಕೊಟ್ಟರು. ಅವರಂತೆಯೇ ಭಾರತವನ್ನು ಬಹಳಷ್ಟು ಪ್ರೀತಿಸಿ ಪುಸ್ತಗಳನ್ನು ಬರೆದ ಮೆಡೋಸ ಟೇಲರನು ತನ್ನ ಇತಿಹಾಸ ಪುಸ್ತ್ತದಲ್ಲಿ (೧೮೭೦) ಕೆಳಗಿನಂತೆ ಬರೆದಿದ್ದಾನೆ.

"When Europe was.... wrapt in the darkest gloom of barbarism and ignorance..... India was the seat of the highest intellectual Sciences" ಇಷ್ಟೇ ಅಲ್ಲದೆ,

" I wish it to be understood that the people of India are not, as many have thoght, rude or uncivilized" ಎಂತಲೂ ಸ್ಪಷ್ಟವಾಗಿ ಸಾರಿದನು.

ಈ ರೀತಿಯ ಅವರ ಎಲ್ಲ ಪ್ರಯತ್ನಗಳು ನಡೆದಾಗ ಸಹ ಬ್ರಿಟಿಷರಿಗೆ ನಿಜವಾದ ಭಾರತದ ಗೋಚರವಾಗಲಿಲ್ಲ, ಅದನ್ನು ಲಾರ್ಡ ಬೆಂಟಿಂಕನು ಸಮರ್ಪಕ ಶಬ್ದಗಳಲ್ಲಿ ಹೇಳಿದನು –

"The result of my own observation, during my residence in India, is that the Europeans generally know nothing or little of the customs and manners of the Hindus...We are, in fact, strangers in the land."

ಆಂಗ್ಲೋ ಇಂಡಿಯನ್ ಸಾಹಿತ್ಯದಲ್ಲಿ ಮೂಡಿಬಂದ ಭಾರತದ ಚಿತ್ರಣವನ್ನೂ ನಾವು ಅವಲೋಕಿಸಬೇಕು. ಭಾರತದ ಬಗ್ಗೆ ಸಾಕಷ್ಟು ಬರೆದ ಆ ಸಾಹಿತಿಗಳು ಭಾರತವನ್ನು ಅನಾಗರಿಕ, ಅರೆನಾಗರಿಕ, ಹಾಗೂ ನಾಗರಿಕ ದೇಶವೆಂದು ಬಣ್ಣಿಸಿದರು. ಭಾರತವನ್ನು ದ್ವೇಷಿಸುವ ಅನೇಕರು ಭಾರತದಲ್ಲಿಯ ಲೋಪ-ದೋಷಗಳನ್ನೇ ಒತ್ತಿ ಹೇಳಿದರೆ, ಭಾರತವನ್ನು ಮೆಚ್ಚಿಕೊಂಡವರೆಲ್ಲರೂ ನೈಜ ಭಾರತದ ಚಿತ್ರಣವನ್ನು ಸಮಗ್ರವಾಗಿ ಕೊಡಲು ಯತ್ನಿಸಿದರು. ಆಂಗ್ಲೋ ಇಂಡಿಯನ್ ಸಾಹಿತ್ಯವೆಂಬುದು ವಿಲಿಯಂ ಬ್ರೌನ್ ಹಾಕಲೆ ಎಂಬುವವನಿಂದ ಆರಂಭವಾಯಿತು. ಅವನು ತನ್ನ ಅನುಭವ, ವಿಚಾರಗಳನ್ನು ಮೂರು ಸಾಹಿತ್ಯ ಪುಸ್ತಕಗಳಲ್ಲಿ ವಿವರಿಸಿದನು. ಅವು ಯಾವವು ಎಂದರೆ Pandurang Hari ; The Memoirs of a Hindu

(1826) Tales of Zenana (1827) The Memoirs of a Brahmin or Fatal Jewels ಎಂಬವುಗಳಾಗಿವೆ. ಸರ್ ವಾಲ್ಟರ ಸ್ಕಾಟನು ೧೮೨೭ರಲ್ಲಿ ಭಾರತಕ್ಕೆ ಬರದೆ ಇದ್ದರೂ The surgean's Daughter ಎಂಬ ಕಾದಂಬರಿ ಬರೆದು ಅದರಲ್ಲಿ ವಿಶೇಷವಾಗಿ ಹೈದರ ಅಲಿ ಹಾಗೂ ಟಿಪ್ಪೂ ಸುಲ್ತಾನರ ಮುಖಾಂತರ ಮೈಸೂರಿನ ಚಿತ್ರಣ ಕೊಟ್ಟಿದ್ದಾನೆ. W.M. ಥ್ಯಾಕರೆ ಎಂಬುವವನು ಭಾರತದಲ್ಲಿ ಹುಟ್ಟಿದವನಾಗಿದ್ದು ಇಂಗ್ಲೆಂಡಲ್ಲಿ ಬೆಳೆದು ಭಾರತದ ಬಗ್ಗೆ ವ್ಯಂಗ್ಯ ವಿಡಂಬನಾತ್ಮಕವಾದ ಪಾತ್ರ ಸೃಷ್ಟಿಸಿ ಬರೆದನು.

ಮೆಡೋಸ ಟೋಲರನು ಅನೇಕ ವಿಧದಲ್ಲಿ ಸರ್ ವಾಲ್ಟರ ಸ್ಕಾಟನನ್ನು ಅನುಸರಿಸಿದ್ದಾನೆ. ಮತ್ತು ಸತ್ಯ ಚಿತ್ರಣವನ್ನಿತ್ತಿದ್ದಾನೆ. 'ಕನ್ಫೆಶನ್ಸ ಆಫ್ ಎ ಥಗ್' (೧೮೩೯) ಟಿಪೂ ಸುಲ್ತಾನ, ಎ ಟೇಲ ಆಫ್ ಮೈಸೂರ ವಾರ (೧೮೪೦) ತಾರಾ (೧೮೬೩) , ರಾಲ್ಫ ಡಾರ್ನೆಲ್ (೧೮೬೫), ಸೀತಾ (೧೮೭೨) ಮತ್ತು ಎ ನೋಬೆಲ್ ಕ್ವೀನ (೧೮೭೬) – ಇವು ಅವನ ಕಾದಂಬರಿಗಳಾಗಿವೆ. ಈ ಎಲ್ಲ ಸಾಹಿತ್ಯ ಕೃತಿಗಳ ಮುಖಾಂತರ ಅವನು ಭಾರತದ ಐತಿಸಾಹಿಕ, ಸಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಜೀವನದ ಪರಿಪೂರ್ಣ ದರ್ಶನವಾಗುವಂತೆ ಚಿತ್ರಿಸಿ ರುಡಯಾರ್ಡ ಕಿಪ್ಲಿಂಗನಕಿಂತ ಮೊದಲಿನ ಶ್ರೇಷ್ಠ ಸಾಹಿತಿ ಎಂದು ಎನಿಸಿಕೊಂಡಿದ್ದಾನೆ.

ಫ್ಲೋರಾ ಆ್ಯನಿ ಸ್ಟೀಲ ಎಂಬುವವಳು ಭಾರದಲ್ಲಿದ್ದ ಬ್ರಿಟಿಷರ ಬಗೆಗೆ ಅನೇಕ ಕಥೆಳನ್ನು ಬರೆದು ಮೊಗಲರ ಇತಿಹಾಸವುಳ್ಳ ನಾಲ್ಕು ಕಾದಂಬರಿಗಳನ್ನು ಬರೆದಳು. ಅವು 'ಎ ಪ್ರಿನ್ಸ ಆಫ್ ಡ್ರೀಮರ್ಸ' (೧೯೦೮) ಕಿಂಗ ಎರಾಂಟ (೧೯೧೨), ಮಿಸ್ಟ್ರಸ್ ಆಫ್ ಮೆನ್' (೧೯೧೭) ಮತ್ತು 'ದ ಬಿಲ್ಡರ' (೧೯೨೮) ಆಗಿವೆ. ತನ್ನ ಉತ್ಕೃಷ್ಟವಾದ ಸಾಹಿತ್ಯ ರಚನೆಯಿಂದ ಅವಳು ಸ್ತ್ರೀರೂಪಿ ರುಡ್ಯಾರ್ಡಕಿಪ್ಲಿಂಗ ಎಂದೇ ಪ್ರಸಿದ್ಧಳಾದಳು. ಆದರೆ ಅವಳು ಹೆಚ್ಚಾಗಿ ಬರೆದುದು ಭಾರತದಲ್ಲಿಯ ಹಳ್ಳಿಗಳಲ್ಲಿಯ ಸಾಮಾಜಿಕ ಜೀವನದ ಬಗ್ಗೆ ಮಾತ್ರ.

ಸಾಹಿತ್ಯ ಕೃತಿಗಳಲ್ಲಿ ಭಾರತದ ಬಗ್ಗೆ ಹೆಚ್ಚಾಗಿ ಬರೆದವನೆಂದರೆ ರುಡ್ಯಾರ್ಡ ಕಿಪ್ಲಿಂಗ. ಅವನು ಬರೆದ ಜಂಗಲ್‌ಬುಕ್ಸ ಹಾಗೂ ಕಿಮ್ (೧೯೦೧) ಹಾಗೂ ಕೆಲವು ಕವನಗಳು ಭಾರತದ ನೈಜ ಚಿತ್ರಣವನ್ನು ತೋರಿಸುತ್ತವೆ. ಆದರೂ ಆತನಿಗೆ ಅಂತರಂಗದ ಜೀವನದ ಬಗ್ಗೆ ಬರೆಯಲಿಕ್ಕಾಗಲಿಲ್ಲ.

ಎಫ್ ಡಬ್ಲ್ಯು ಬೇನ ಎಂಬುವವನು ಆಂಗ್ಲೋ – ಇಂಡಿಯನ್ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದವನಾಗಿದ್ದಾನೆ. ಪುರಾತನ ಭಾರತದ ಬಗ್ಗೆ ಆತ ಹೊಂದಿದ ಆಸಕ್ತಿ ಅಪರಿಮಿತವಾಗಿತ್ತು. ಹಿಂದೂ ಧರ್ಮದ ಪ್ರತಿಪಾದನೆಯಲ್ಲಿ ಅವನನ್ನು ಸರಿಗಟ್ಟುವವರೇ ಇಲ್ಲ ಎಂದು ಹೇಳಬಹುದಾಗಿದೆ. ಅವರು ಬರೆದ 'A digit of

the Moon' (1898) ದಲ್ಲಿ ಅವರು ಹಿಂದು ಧರ್ಮದ ಹಾಗೂಸಂಸ್ಕೃತಿಯ ಬಗ್ಗೆ, ಅದರಂತೆ ಭಾರತಿಯರ ಪುರಾಣಕಥೆಯ ಬಗ್ಗೆ, ಯೋಗಶಾಸ್ತ್ರಗಳ ಬಗ್ಗೆ ತಮಗಿರುವ ಎಲ್ಲ ಜ್ಞಾನವನ್ನು ತೋರಿಸಿಕೊಟ್ಟಿದ್ದಾರೆ.

ಭಾರತದ ಬಗ್ಗೆ ಬಹಳಷ್ಟು ಸುಂದರವಾಗಿ ಬರೆದ ಲೇಖಕರಲ್ಲಿ ಇ.ಎಂ. ಫೋಸ್ಟರರು ಒಬ್ಬರಾಗಿದ್ದಾರೆ. ಅವರು 'A Passage to India ' (1924) ಮತ್ತು 'The Hill of Devi' ಎಂಬ ಎರಡು ಪುಸ್ತಕಗಳಲ್ಲಿ ಅವರು ತಮ್ಮ ತಂದೆ ತಾಯಿಗಳಿಗೆ , ಬಂಧುಗಳಿಗೆ ಪತ್ರ ಮುಖೇನ ಭಾರತದ ಚಿತ್ರಣ ಕೊಟ್ಟಿದ್ದನ್ನು ವಿಶೇಷವಾಗಿ ಭಾರತೀಯರ ಹಬ್ಬ-ಹರಿದಿನಗಳ ಬಗ್ಗೆ ಬರೆದುದನ್ನು ನೋಡಬಹುದು.

ಎಲ್.ಎಚ್. ಮಾಯರ್ಸ್ ಅನ್ನುವ ಮತ್ತೊಬ್ಬ ಮಹತ್ವದ ಲೇಖಕರು ಅಕ್ಬರನ ಬಗ್ಗೆ, ಅವನ ಕಾಲದ ಬಗ್ಗೆ ನಾಲ್ಕು ಕಾದಂಬರಿಗಳ ಗುಂಪನ್ನು ರಚಿಸಿದ್ದಾರೆ. Near and the Far (1929), Prince Jali (1931), the Root and the Flower (1935) & The Pool of Vishnu (1940) ಇವು ಅವರು ಬರೆದ ಮಹತ್ವದ ಕಾದಂಬರಿಗಳಾಗಿದ್ದು ಅವುಗಳಲ್ಲಿ ಭಾರತದ ಇತಿಹಾಸದ ಚಿತ್ರಣವಿದೆ.

ಅದರಂತೆ ಭಾರತದ ಅತಿ ಮಹತ್ವದ ಐತಿಹಾಸಿಕ ಘಟನೆಗಳ ಬಗ್ಗೆ ಜಿ.ಎ. ಹೆಂಟಿ ಅನ್ನುವವರು ಬರೆದಿದ್ದಾರೆ. ಅವುಗಳಲ್ಲಿ At the point of Bayonet ; A tale of the Maratha war (1902) Through the Sikh war, a tale of the conquest of the Punjab (1894), With Clive in India or the Beginnings of an Empire (1884), In Times of Peril (1899) ಮತ್ತು The Tiger of Mysore (1896) ಇವು ಪ್ರಸಿದ್ಧ ಕಾದಂಬರಿಗಳಾಗಿವೆ.

ಜಾನ್ ಮಾಸ್ಟರ್ಸ ಎಂಬುವ ಮತ್ತೊಬ್ಬ ಕಾದಂಬರಿಕಾರನು ಮೂರು ಮುಖ್ಯ ಕಾದಂಬರಿಗಳನ್ನು ಬರೆದನು. ಅವರ 'Bhawanee Junction ' (1954) Coromandel (1955),'The Nightrunners of Bengal' ಮಹತ್ವದ್ದಾಗಿವೆ.

ಜಿಮ್ ಕಾರ್ಬೆಟ್ ಎನ್ನುವ ಸಾಹಿತಿಯು 'My India' ಎಂಬ ಪುಸ್ತಕವನ್ನು ಬರೆದಿದ್ದು ಅದರಲ್ಲಿ ಅವರು ತಾವು ಆಡಿದ ಬೇಟೆಯ ಬಗ್ಗೆ ಕೊಂದ ಹುಲಿಯ ಬಗ್ಗೆ ಸುಂದರವಾಗಿ ವರ್ಣಿಸಿದ್ದಾರೆ.

ಪಾಲಸ್ಕಾಟ್ ಎಂಬುವವನು ಆಂಗ್ಲೋ ಇಂಡಿಯನ್ ಕಾದಂಬರಿಕಾರರಲ್ಲಿ ಕೊನೆಯವನು. ಅವನು ಬರೆದ 'The Raj Quartet' (1966-75) ದಲ್ಲಿ ಬ್ರಿಟಿಷ ರಾಜ್ಯದ ಮುಕ್ತಾಯದ ಕಾಲದ ಬಗ್ಗೆ ವಿವರಿಸಲಾಗಿದೆ.

ಅದರಂತೆ ಅನೇಕ ಜನ ಮಹಿಳಾ ಕಾದಂಬರಿಕಾರರಾಗಿದ್ದು ಅವರಲ್ಲಿ ಮಾಡ್ ಡೈವ್ಹರ, ರುಮೆರ್ ಗೊಡ್ಡೆನ್, ಹಿಲ್ಡಾ ಕ್ಯಾರೊಲಿನ ಕ್ರೆಗ್ಗ, ಮಿಸೆಸ್ ಪೆನ್ನಿ, ಮಿಸೆಸ್ G.H. ಬೆಲ್, ಮಿಸೆಸ್ ಎಲ್.ಎ. ಬೆಕ್ಕ ಮತ್ತು ಎಥಿಲ್ ಸಾವಿ ಎನ್ನುವವರು ಹೆಸರುವಾಸಿಯಾಗಿದ್ದಾರೆ. ಈ ಎಲ್ಲ ಮಹಿಳೆಯರು ಭಾರತದಲ್ಲಿಯ ತಮ್ಮ ಜೀವನ ಹಾಗೂ ಅನುಭವ ಕುರಿತು ಬರೆದಿದ್ದಾರೆ.

ಭಾರತವು ವಿಶಾಲವಾದ ರಾಷ್ಟ್ರವಾಗಿದ್ದು ಯಾರು ಎಷ್ಟೇ ಬರದೆರೂ, ಏನೇ ಬರೆದರೂ ಅದು ಅಪೂರ್ಣವೆಂದೇ ಎನಿಸುವುದು. ಮೇಲ್ನೋಟವೊಂದರಿಂದಲೇ ನಿಜವಾದ ಭಾರತದ ಅಂತರಂಗದ ಅರಿವು ಆಗದು. ಭಾರತವನ್ನು 'Jewelled Mystery' ಎಂದು ಕರೆದುದು ಔಚಿತ್ಯಪೂರ್ಣವಾಗಿದೆ. ಸಮಗ್ರ ಭಾರತವನ್ನು ಸತ್ಯಯುತವಾಗಿ ಚಿತ್ರಿಸಿ ಸಫಲರಾದವರು ಬಹಳ ವಿರಳ ಎಂದೇ ಹೇಳಬೇಕಾಗು ವದು. ಕೇವಲ ಟೇಲರನಂಥವರು ಮಾತ್ರ ಭಾರತದಲ್ಲಿ ಬಹುಕಾಲ ಬಾಳಿ, ಜನ ಸಾಮಾನ್ಯರಲ್ಲಿ ಬೆರೆತು, ಅನುಭವಿಸಿ, ಅಧ್ಯಯನ ಮಾಡಿ, ಬರೆದಿದ್ದಾರೆ. ಟೇಲರನು ಮಾತ್ರ ಭಾರತವನ್ನು ನಿಧಾನವಾಗಿ ಅವಲೋಕಿಸಿ, ಸಂಪೂರ್ಣವಾಗಿ ಚಿತ್ರಿಸಲು ಯತ್ನಿಸಿ ಸಫಲನಾಗಿದ್ದಾನೆ.

*****

ಭಾರತದಲ್ಲಿದ್ದು ಸಿರಿವಂತನಾಗಿ ತನ್ನ ದೇಶಕ್ಕೆ ಮರಳುವ ಕನಸು ಕಾಣುತ್ತ ಹಡಗನ್ನು ಏರಿದ ಆ ಹುಡುಗ. ಆ ಕಾಲದಲ್ಲಿ ಹಡಗಿನ ಮುಖಾಂತರ ಭಾರತವನ್ನು ತಲುಪಲು ನಾಲ್ಕು ತಿಂಗಳುಗಳಿಗಿಂತ ಹೆಚ್ಚು ಅವಧಿ ಬೇಕಾಗುತ್ತಿತ್ತು. ಆತ ತನ್ನ ಪ್ರವಾಸಕಾಲದಲ್ಲಿ ಭಾರತಿಯ ಭಾಷೆಗಳಾದ ಹಿಂದುಸ್ತಾನಿ ಹಾಗೂ ಮರಾಠಿ ಭಾಷೆಗಳ ಅಭ್ಯಾಸ ಮಾಡಿದ. ಹೀಗೆ, ೧೮೨೪ನೇ ಇಸ್ವಿಯ ಸೆಪ್ಟೆಂಬರ್ ತಿಂಗಳ ಒಂದನೆಯ ತಾರೀಖಿನಂದು ಮಂಬೈ ಬಂದರಕ್ಕೆ ಆತ ಬಂದಿಳಿದಾಗ ಅವನಿಗೆ ಕೇವಲ ಹದಿನಾರು ವರ್ಷಗಳಾಗಿದ್ದವು.

ಮುಂಬೈಗೆ ಬಂದು ಬ್ಯಾಕ್ಸ್ಟರ ಕಂಪನಿಯ ವಿಳಾಸವಿದ್ದಲ್ಲಿ ಆತ ಹೋಗಿ ನೋಡಿದಾಗ ಅದೊಂದು ದೊಡ್ಡ ಕಂಪನಿಯಾಗಿರದೆ ಚಿಕ್ಕ ಅಂಗಡಿ ಆಗಿತ್ತು. ಬಹಳಷ್ಟು ಭ್ರಮನಿರಸನವಾಯಿತು ಅವನಿಗೆ. ಆದರೂ ಧೈರ್ಯ ಗುಂದದೆ ಅನ್ನ, ಬಟ್ಟೆ ವಸತಿಯ ಸಮಸ್ಯೆ ಎದುರಿಸುತ್ತ ತನ್ನ ದೂರದ ಸಂಬಂಧಿಕನಾದ ಮಿ. ನ್ಯೂನಹ್ಯಾಮ ಎಂಬವರನ್ನು ಭೇಟಿ ಆದ. ನ್ಯೂನಹ್ಯಾಮನು ಮುಂಬೈ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯ ಮಾಡುತ್ತಿದ್ದುದರಿಂದ ಆತ ಟೇಲರನಿಗೆ ನಿಝಾಮ ಸರಕಾರದಲ್ಲಿ ಜಮಾ-ಖರ್ಚು ಬರೆಯುವ ಕಾರಕೂನಿಕೆಯನ್ನು ಕೊಡಿಸಿದ. ಅದುವೆ ತನ್ನ ಭಾಗ್ಯದ ಬಾಗಿಲು ಎಂದು ಬಗೆದು ಔರಂಗಾಬಾದದಲ್ಲಿಯ ತನ್ನ ಆಫೀಸಿಗೆ ಬಂದು ಕೆಲಸಕ್ಕೆ ಹಾಜರಾದ. ಮುಂದೆ ಕ್ಯಾಪ್ಟನ್ ಆ್ಯಡಜಟಂಟ, ಕರ್ನಲ್ ಹುದ್ದೆಗೇರಿದ.

ಟೇಲರನು ಬಹಳಷ್ಟು ಪರಿಶ್ರಮ ಪಟ್ಟು ಮನಃಪೂರ್ವಕವಾಗಿ ಕಾರ್ಯ ಮಾಡುವುದನ್ನು ಕಂಡು ಅವನಿಗೆ ಬಡತಿ ಕೊಟ್ಟು 'ಸೂಪರಿಂಟೆಂಡ ಆಫ್ ಬಝಾರ' ಎಂದು ನೇಮಕಾತಿ ಮಾಡಿದರು. ಈ ಹುದ್ದೆಯಲ್ಲಿದ್ದು ಕಾರ್ಯ ಮಾಡುವಾಗ ಆತನಿಗೆ ಹಿಂದುಗಳ, ಮುಸಲ್ಮಾನರ ಸಂಪರ್ಕ ಬಂದು ಅವರ ಧರ್ಮ- ಸಂಸ್ಕೃತಿ, ಆಚಾರ-ವಿಚಾರ ಮೊದಲಾದವುಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಅನುಕೂಲವಾಯಿತು. ಕಾಲಕ್ರಮದಲ್ಲಿ ನಾಲ್ಕು ಭಾಷೆಗಳನ್ನು ಉರ್ದು , ಪರ್ಶಿಯನ್, ಮರಾಠಿ ಹಾಗೂ ತೆಲಗು - ಚೆನ್ನಾಗಿ ಕಲಿತುಕೊಂಡನು. ಆಯಾ ಭಾಷಿಕರ ಜೊತೆಗೆ ಅವರವರ ಭಾಷೆಯಲ್ಲಿ ಮಾತನಾಡಿ 'ನಿಕಟ ಸಂಪರ್ಕ ಹೊಂದಿದನಲ್ಲದೆ ಎಲ್ಲ ಬಗೆಯ ಜನರ ಪ್ರೀತಿ , ವಿಶ್ವಾಸಕ್ಕೆ ಪಾತ್ರನಾದನು.

ಪುರಾತನ ಭಾರತದ ಶ್ರೇಷ್ಠ ಆದರ್ಶಗಳನ್ನು ಕಳೆದುಕೊಂಡು ಬಾಳುತ್ತಿದ್ದ ಭಾರತೀಯರನ್ನು ಕಂಡು ಮರುಕಪಟ್ಟನು. ಬಝಾರದ ಇನ್ಸ್‌ಪೆಕ್ಟರನಾಗಿ ಕಾರ್ಯ ಮಾಡುತ್ತಿದ್ದಾಗ ಅನೇಕ ಜನ ವ್ಯಾಪಾರಸ್ಥರು ಹಣ ಗಳಿಸುವುದಕ್ಕೋಸ್ಕರ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಮಾಡಿ ಮಾರುವದನ್ನು ನೋಡಿದನು. ಆತ ತುಳಜಾ ಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ನಡೆದ ಘಟನೆ ಹೀಗಿದೆ.

ತುಳಜಾಪುರದ ತುಳಜಾ ಭವಾನಿಗೆ ಅನೇಕ ಜನರು ಯಾತ್ರೆಗೆಂದು ಹೋಗುತ್ತಿದ್ದರು. ದಾರಿಯಲ್ಲಿ ಅವರು ತಂಗಿದ್ದಾಗ ಅಡಿಗೆ ಮಾಡಿಕೊಂಡು ಉಣ್ಣಲು ಅಕ್ಕಿ ಹಿಟ್ಟನ್ನು ಕೊಂಡು ಕೊಂಡರೆ ಅದರಲ್ಲಿ ಉಸುಕು, ಹಳ್ಳ ಇರುತ್ತಿತ್ತು. ಅನೇಕ ಜನ ಭಕ್ತರು ಇಂಥದರ ಆಹಾರವುಂಡು ಸಾಕು ಸಾಕಾಗಿ ಇನ್ಸಪೆಕ್ಟರನಾದ ಟೇಲರನಿಗೆ ತಮ್ಮ ತಕರಾರನ್ನು ತೋಡಿಕೊಂಡರು. ಅದನ್ನು ಕೇಳಿದ ಆತನು ಅವರು ಯಾವ ಯಾವ ಅಂಗಡಿಗಳಲ್ಲಿ ಹಿಟ್ಟು ಕೊಂಡಿದ್ದರೋ ಆ ಎಲ್ಲ ಅಂಗಡಿಗಳ ಮಾಲೀಕರನ್ನು ಕರೆಸಿ, ಅವರು ಬರುವಾಗ ಅವರಿಂದಲೇ ತಮ್ಮ ಅಂಗಡಿಯಲ್ಲಿಯ ಹಿಟ್ಟನ್ನು ತರಿಸಿದನು. ಆಮೇಲೆ ಅವರೆಲ್ಲರಿಗೂ ತಮ್ಮ ಹಿಟ್ಟಿನಿಂದ ಅಡಿಗೆ ಮಾಡಿ ಉಣ್ಣಲು ಹೇಳಿದಾಗ ನಿರಾಕರಿಸಿದರು. ಆಗವನು 'ಯಾವ ಹಿಟ್ಟಿನ ಆಹಾರವನ್ನು ನೀವು ತಿನ್ನುವುದಿಲ್ಲವೋ ಅದನ್ನು ಉಳಿದವರು ಹೇಗೆ ತಿನ್ನುವರು ? ' ಎಂದು ಗದರಿಸಿದಾಗ ವರ್ತಕರೆಲ್ಲರೂ ಅವನ ಕ್ಷಮೆ ಯಾಚಿಸಿದರಲ್ಲದೆ ಇನ್ನು ಮುಂದೆ ಇಂಥ ಹಿಟ್ಟನ್ನು ಮಾರುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಅಂದಿನಿಂದ ಟೇಲರನು ನ್ಯಾಯ ನಿಷ್ಠುರಿಯಾಗಿ ಬಾಳಿ ಭಾರತೀಯರ ಜನ ಜೀವನವನ್ನು ಸುಧಾರಿಸುವ ಪಣ ತೊಟ್ಟನು.

ನಂತರ ದಕ್ಷನಾದ, ಪ್ರಾಮಾಣಿಕನಾದ ಅವನಿಗೆ ಮತ್ತೊಂದು ಬಡತಿ ಸಿಕ್ಕಿತು. ಅವನಿಗೆ ಅಸಿಸ್ಟೆಂಟ ಸೂಪರಿಂಟೆಂಡೆಂಟ ಆಫ್ ಪೊಲೀಸ ಎಂಬ ಹುದ್ದೆ ದೊರಕಿತು. ಆ ಕಾಲದಲ್ಲಿ ಭಾರತದ ಕೆಲವು ಕಡೆಗಳಲ್ಲಿ ಥಗ್ಗರು ವಾಸಿಸುತ್ತಿದ್ದು ಅವರು ವ್ಯಾಪಾರಕ್ಕಾಗಿ ಹೋಗುತ್ತಿದ್ದ ಸಿರವಂತರನ್ನು ಮರಮಾತಿಗೆ ಬೀಳಿಸಿ ಕೇವಲ ತಮ್ಮ ಕರವಸ್ತ್ರದಿಂದ ಕುತ್ತಿಗೆಗೆ ಬಿಗಿದು, ಕೊಂದು ಹಣ ದೋಚಿಕೊಂಡು ಪರಾರಿ ಆಗುತ್ತಿದ್ದರು. ತನ್ನ ಆಡಳಿತದ ಪ್ರದೇಶದಲ್ಲಿಶಾಂತಿ, ಕಾನೂನು, ಕಾಯಿದೆ ಪಾಲನೆಗಾಗಿ, ಗುಪ್ತ ರೀತಿಯಲ್ಲಿ ಕೊಲೆ ಮಾಡುತ್ತಿದ್ದ ಅಂಥ ಥಗ್ಗರನ್ನು ಹಿಡಿಯಲೇ ಬೇಕಾಯಿತು. ಒಮ್ಮೆ ಅಮೀರ ಅಲಿ ಎಂಬ ಥಗ್ಗನನ್ನು ಹಿಡಿದು ಅವನ ಬಾಯಿಯಿಂದಲೇ ಎಲ್ಲ ವಿಷಯಗಳನ್ನು ತಿಳಿದುಕೊಂಡು, ಆತ ಹೇಳಿದಂತೆಯೇ ಬರೆದುಕೊಂಡು ಒಂದು ಪುಸ್ತಕರೂಪದಲ್ಲಿ ಅದನ್ನು ಪ್ರಕಟಿಸಿದನು. ಅದುವೆ 'ಕನ್ಫೆಶನ್ಸ ಆಫ್ ಎ ಥಗ್' ಎಂಬ ಭೀಕರ, ಭಯಾನಕ ಕೊಲೆಗಡುಕರ ಪುಸ್ತಕವಾಗಿ ಹೊರಬಂತು.

ಇದೇ ವೇಳೆಗೆ ಸುರಪುರದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿತ್ತು. ಸುರಪುರದ ದೊರೆ ಮೃತನಾದ ಬಳಿಕ ಅವನ ಹೆಂಡತಿ ರಾಣಿಯಾಗಿ ರಾಜ್ಯಭಾರ ಮಾಡ ಹತ್ತಿದಳು. ಅವಳಿಗೆ ವೆಂಕಟಪ್ಪ ನಾಯಕನೆಂಬ ಮಗನಿದ್ದ. ವಯಸ್ಸಿನಿಂದ ಚಿಕ್ಕವನಾಗಿದ್ದ. ಬ್ರಿಟಿಷರು ಸುರಪುರವನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಸಾಕಷ್ಟು ಪ್ರಯತ್ನಿಸಿ ವಿಫಲರಾಗಿದ್ದರು. ಆ ಕಾರ್ಯವನ್ನು ನಿಪುಣತೆಯಿಂದ, ಜಾಣತನದಿಂದ ಸೈನಿಕ ಬಲವನ್ನು ಉಪಯೋಗಿಸದೆ ಮಾಡಬೇಕೆಂದು ಹೇಳಿ ಟೇಲರನನ್ನು ಸುರಪುರಕ್ಕೆ

ಪೊಲಿಟಿಕಲ್ ಏಜೆಂಟನನ್ನಾಗಿ ಕಳುಹಿಸಿದರು. ಆತ ಸುರಪುರಕ್ಕೆ ಬಂದು ಸಂಧಾನ ಮಾರ್ಗ ಹಿಡಿದು, ಕಾರ್ಯ ಮಾಡಿ, ಪ್ರಬಲರಾದ ಬೇಡರ ಮನಸ್ಸನ್ನು ಗೆದ್ದುಕೊಂಡ. ಸೌಜನ್ಯತೆಯ ವರ್ತನೆಯಿಂದ, ಸೌವ್ಯ ಮಾತುಗಳಿಂದ ಜನರ, ರಾಣಿಯ ಮನಸೂರೆಗೊಂಡನು. ಸಮಸ್ಯೆಯನ್ನು ಬಗೆಹರಿಸಿದನು. ಇವನ ಕುಶಾಗ್ರ ಬುದ್ಧಿಯನ್ನು ಮೆಚ್ಚಿಕೊಂಡು ರೆಸಿಡೆಂಟ ಫ್ರೇಸರ ಹಾಗೂ ಕ್ಯಾಪ್ಟನ್ ಗ್ರೀಸ್ಲೆ ಅವರು ಮನಸಾ ಮೆಚ್ಚಿಕೊಳ್ಳುವದಲ್ಲದೆ ಹೊಳಿಗದರು. - ಆ ದಾಖಲಾತಿ ಪತ್ರದಲ್ಲಿ 'ಸುರಪುರದ ರಾಜಕುಮಾರನ ಸಂಪತ್ತನ್ನು ಹೆಚ್ಚಿಸುವಲ್ಲಿ, ಜನರ ಜೀವನದಲ್ಲಿ ಶಾಂತಿ, ಸಮಾಧಾನ ಉಂಟುಮಾಡುವಲ್ಲಿ, ಮೆಡೋಸ ಟೇಲರನು ಮಾಡಿದ ಗುರುತರ ಕಾರ್ಯವು ಪ್ರಶಂಸಿಸಲ್ಪಟ್ಟಿದೆ. ೧೫ ಜನವರಿ ೧೮೫೨.''

ಟೇಲರನು ಯುವರಾಜನಾದ ವೆಂಕಟಪ್ಪ ನಾಯಕನನ್ನು ಸಿಂಹಾಸನದ ಮೇಲೆ ಕೂಡ್ರಿಸಿದನು. ಯುವರಾಜನು ಟೇಲರನನ್ನು 'ಅಪ್ಪಾ' ಎಂದೇ ಕರೆಯುತ್ತಿದ್ದನು. ವೆಂಕಟಪ್ಪ ನಾಯಕನು ವಯಸ್ಕನಾಗುವವರೆಗೆ ಅವನ ಪಾಲಕನಾಗಿ ತಾನು ಆಡಳಿತ ನಿರ್ವಹಿಸುವದಾಗಿ ಹೇಳಿದನು. ಅಲ್ಲದೆ ರಾಜ್ಯದಲ್ಲಿ ಹಲವಾರು ಸಾಮಾಜಿಕ, ಆರ್ಥಿಕ ಸುಧಾರಣೆಗಳನ್ನು ತಂದನು. ನಾನಾ ಬಗೆಯ ಸುಧಾರಣೆಗಳಲ್ಲಿ ಆಡಳಿತ ಸುಧಾರಣೆ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗಳು ಒಳಗೊಂಡಿದ್ದವು. ತನ್ನ ಆಧೀನದಲ್ಲಿದ್ದ ಜಮೀನನ್ನು ಮೋಜಣಿ ಮಾಡಿ, ಜನರಿಗೆ ಹಂಚಿಕೊಟ್ಟು ಒಕ್ಕಲುತನ ಮಾಡಿ ಬಾಳಲು ಪ್ರೇರೇಪಿಸಿದನು. ದನಕರುಗಳನ್ನು ಓಡಿಸಿಕೊಂಡು ಹೋಗುವದು, ಬೇಟೆಯಾಡುವದು ಬಿಟ್ಟು ಅವರೆಲ್ಲ ರೈತರಾದರು. ತಮಗೆ ದೊರೆತ ಜಮೀನಿಗೆ ತಾವೇ ಮಾಲೀಕರೆಂದು ತಿಳಿದ ಬಳಿಕ ಒಕ್ಕಲುತನ ಮಾಡಿ ಸಿರಿವಂತರಾದರು. ಈ ರೀತಿಯಾಗಿ ಟೇಲರನು ಅವರಿಗೆ ಗೌರವಾನ್ವಿತವಾಗಿ ಬಾಳುವುದನ್ನು ತಿಳಿಸಿಕೊಟ್ಟನಲ್ಲದೆ ಪರಿಶ್ರಮಪಟ್ಟು ದುಡಿದು ಸಿರಿವಂತರಾಗಿ, ನಾಗರಿಕರಾಗಿ ಬಾಳಲು ಪ್ರೇರೇಪಿಸಿದನು.

ಅವನು ತನ್ನ ಆತ್ಮ ಚರಿತ್ರೆಯಲ್ಲಿ ಒಂದು ಉದಾಹಣೆಯನ್ನು ಕೊಟ್ಟಿದ್ದಾನೆ.

''ಹಳ್ಳಿಯ ಪಟೇಲ ಅಥವಾ ಮುಖ್ಯಸ್ಥನೊಬ್ಬ ಕಂಗಾಲಾಗಿದ್ದನು. ಅವನ ಸದ್ಗುಣ ಹೆಂಡತಿ, ಅವನನ್ನು ಸುಧಾರಿಸಲು ಯತ್ನಿಸಿ ವಿಫಲಳಾಗಿದ್ದಳು. ''ನಾನು ಮನ್ನಲ್ಲಿರುವ ಎಲ್ಲ ಆಭರಣಗಳನ್ನು ಒತ್ತೆ ಇಟ್ಟು ಅವನಿಗೆ ಸಹಾಯ ಮಾಡಬಲ್ಲೆ'' ಎಂದಳು.ನಾನು ಅವನಿಗೆ ಖಜಾನೆಯಿಂದ ಸಹಾಯ ನೀಡಿದೆ. ಆ ವರುಷ ಅವರಿಬ್ಬರೂ ಒಳ್ಳೆ ಒಕ್ಕಲುತನ ಮಾಡಿ, ಸಿರಿವಂತರಾಗಿ ನನ್ನ ಬಳಿಗೆ ಬಂದು ''ದೇವರು ನಮಗೆ ಈಗ ಸಾಕಷ್ಟು ಸಿರಿವಂತಿಕೆ ಕೊಟ್ಟಿದ್ದಾನೆ. ಈಗ ನಮ್ಮ ಬಳಿ ೩೨ ಆಕಳು ಎಮ್ಮೆಗಳಿವೆ. ನಾವುಪ್ರತಿ ವರ್ಷ ೩೨ ರೂಪಾಯಿ ಭೂಕಂದಾಯ ಕೊಡುತ್ತಿದ್ದರೆ ಇನ್ನು ಮುಂದೆ ೩೩೨ ರೂಪಾಯಿ ಕೊಡುತ್ತೇವೆ'' ಎಂದು ಅಂದಳು. ಈ ರೀತಿಯಾಗಿ ನೂರಾರು ಜನರು ಸಿರಿವಂತರಾಗಿ, ಸಮೃದ್ಧಿ ಹೊಂದಿ ಟೇಲರನಿಗೆ ಕೃತಜ್ಞತೆ ಸಲ್ಲಿಸಿದರು.

ಹಣದ ಅಧಿಕಾರಿಯಾಗಿ ಟೇಲನರು ಬೊಕ್ಕಸದ ಆಯವ್ಯಯವನ್ನು ಸರಿಯಾಗಿ ಇಟ್ಟನು. ವರ್ಷದ ಕೊನೆಗೆ ನಿಝಾಮನಿಗೆ ಒಪ್ಪಿಸಬೇಕಾದ ಕಪ್ಪುಕಾಣಿಕೆ ಸಲ್ಲಿಸಿ ೭೦,೦೦೦/- ರೂ.ಗಳನ್ನು ಉಳಿಸಿದನು. ಅವನ ಈ ಕಾರ್ಯವನ್ನು ನೋಡಿ ಹೈದ್ರಾಬಾದದ ರೆಸಿಟೆಂಡರು ಹೀಗೆ ಬರೆದರು.

''ಲೆಕ್ಕ ಪತ್ರವಿಡುವಲ್ಲಿ ನೀವು ಆಯ್ದುಕೊಂಡ ವಿಧಾನವು ಸರಿ ಇದೆ. ಸುರಪುರದ ರಾಜ್ಯಭಾರವನ್ನು ಚೆನ್ನಾಗಿ ನಿರ್ವಹಿಸಿದ್ದೀರಿ. .... ಯಾವ ಪ್ರದೇಶದಲ್ಲಿ ಆಡಳಿತ ಎಂಬುದೇ ಇರಲಿಲ್ಲವೋ ಅಲ್ಲಿ ನೀವು ಎಲ್ಲ ಬಗೆಯ ಶಾಂತಿ, ಸುವ್ಯವಸ್ಥೆಯನ್ನು ತಂದಿರುವಿರಿ'' ಈ ಸಾಧನೆಯು ಸಾಮಾನ್ಯವಾದುದಲ್ಲ.

ಈ ಅವಧಿಯಲ್ಲಿ ಆತ ಮಿಸ್ ಪಾಮರ ಎಂಬವಳನ್ನು ಮದುವೆಯಾಗಿದ್ದ. ಮಕ್ಕಳೂ ಆದವು. ಆದರೆ ಮೊದಲಿನ ಇಬ್ಬರು ಮಕ್ಕಳು ತೀರಿಕೊಂಡಾಗ ಮನೆಯಲ್ಲಿ ದುಃಖವು ಆವರಿಸಿತು. ತನ್ನದೇ ಆದ ವಿನ್ಯಾಸದಲ್ಲಿ ಒಂದು ಬಂಗಲೆಯನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಿಸಿಕೊಂಡ. ದುರ್ದೈವವೆಂದರೆ ಯಾವಾಗ ಆ ಭವ್ಯ ಬಂಗಲೆಯಲ್ಲಿ ಬಂದು ಇರಬೇಕೆಂದಿದ್ದನೋ ಆಗ ಅವನ ಹೆಂಡತಿ ಮಡಿದಳು. ಈ ರೀತಿ ತನ್ನ ವೈಯಕ್ತಿಕ ಜೀವನದಲ್ಲಿ ದುಃಖವನ್ನು ಅನುಭವಿಸಿದ. ಇಂಥ ದುಃಖದಲ್ಲಿಯೂ ಕೂಡ ಭಾರತಿಯ ಜನರ ಜೀವನ ಮಟ್ಟವನ್ನು ಉನ್ನತ ಹಾಗೂ ಉದಾತ್ತಗೊಳಿಸುವ ಕಾರ್ಯವನ್ನು ಬಿಡಲ್ಲಿ. ಯಾಕೆಂದರೆ ಆತ ಭಾರತಿಯರನ್ನು ಅಷ್ಟೊಂದು ಗಾಢವಾಗಿ ಪ್ರೀತಿಸಹತ್ತಿದ್ದ.

ಹತ್ತುವರ್ಷಗಳಿಗಿಂತಲೂಅಧಿಕ ಸಮಯದವರೆಗೆ ಟೈಮ್ಸ ಪತ್ರಿಕೆಗೆ ವರದಿ ಗಾರನಾಗಿ ಕಾರ್ಯ ಮಾಡುತ್ತ ಬಂದಿದ್ದ ಭಾರತೀಯರ ಜೀವನ, ಅವರ ಸಮಸ್ಯೆಯನ್ನು ವಿಶ್ಲೇಷಿಸುತ್ತ ಅನೇಕ ಪತ್ರಗಳನ್ನು, ಲೇಖನಗಳನ್ನು ಬರೆದು ಕಳಿಸಿದ. ಭಾರತದ ಸರ್ವವಿಧದ ಸುಧಾರಣೆಯ ಬಗ್ಗೆ ಯಾವ ವಿದೇಶಿಯನೂ ಟೇಲರನಷ್ಟು ಆಸಕ್ತಿ ಹೊಂದಿರಲಿಲ್ಲ.

ಆತನು ಕರ್ನಾಟಕದಲ್ಲಿ ಮೂವತ್ತೈದು ವರ್ಷಗಳಿಗಿಂತ ಅಧಿಕ ಕಾಲ ಕಾರ್ಯ ಮಾಡಿದ. ನಳದುರ್ಗದ ಹಾಗೂ ಸುರಪುರದ ಜನರು ಅವನಿಗೆ ಮಾನಪತ್ರ ಕೊಟ್ಟು ಗೌರವಿಸಿ ಅವನ ಅಮೂಲ್ಯ ಸೇವೆಯ ಗುಣಗಾನ ಮಾಡಿದರು.

''ನೀವು ಇಲ್ಲಿಗೆ ಬಂದಾಗಿನಿಂದ ನಾವೆಲ್ಲರೂ ಸಿರಿವಂತರೂ, ಸುಖಿಗಳೂ ಆಗಿದ್ದೇವೆ. ..... ದೇವರಿಗೆ ನಾವು ನಿಮ್ಮಂಥ ದಯಾಳು ಅಧಿಕಾರಿಗಳನ್ನು ರಕ್ಷಿಸಲಿ ಎಂದು ಪ್ರಾರ್ಥಿಸುತ್ತೇವೆ. .... ಜೀವ ರಕ್ಷಣೆ, ಆಸ್ತಿ - ಪಾಸ್ತಿಯ ರಕ್ಷಣೆ ಇವು ಬ್ರಿಟಿಷ ಆಡಳಿತದಿಂದ ನಮಗೆ ದೊರೆತ ಸೌಲಭ್ಯಗಳಾಗಿವೆ. ಅವು ನಮಗೆ ದೊರಕುವಂತೆ ನೀವೂ ಪ್ರಯತ್ನಿಸಿರುವಿರಿ. ಬರಗಾಲ ಬಿದ್ದಾಗ ನೀವು ನಿಮ್ಮ ವೈಯಕ್ತಿಕ ಹಣದಿಂದ

ಸಾವಿರಾರು ಜನರನ್ನು ರಕ್ಷಿಸಿರುವಿರಿ.... ನಿಮ್ಮಂಥ ಮಹಾನ್ ವ್ಯಕ್ತಿಯನ್ನು ನಾವು ಎಷ್ಟು ಹುಡುಕಿದರೂ ಸಿಗುವುದಿಲ್ಲ..... ನೀವು ನಮ್ಮ ಕಾಳಜಿಯನ್ನು ಮಕ್ಕಳ ಕಾಳಜಿಯನ್ನು ತಂದೆ ತೆಗೆದುಕೊಳ್ಳುವಂತೆ ತೆಗೆದುಕೊಂಡಿರುವಿರಿ....."

ಸಹಿ

ಜೀವನಜಿ ರುಸ್ತೋನುಜಿ

ಶಂಕರರಾವ ಕೇಷುನಾಥ

ಎಕ್ಸಟ್ರಾ ಅಸಿಸ್ಟೆಂಟ ಕಮಿಶ್ನರ, ಹಾಗೂ ೧೨೩ ಪಟೇಲರ, ಗೌರವಾನ್ವಿತ ಪ್ರತಿಷ್ಠಿತರ ಸಹಿಗಳಿವೆ.

(ನಳದುರ್ಗ,ದಿ. ೨೭ ಆಗಸ್ಟ ೧೮೫೭)

ಇದೇ ರೀತಿ ಸುರಪುರದ ಜನರೂ ಮಾನಪತ್ರವನ್ನು ಅರ್ಪಿಸಿದರು. ಸುರಪುರದಲ್ಲಿ ಸೇವೆ ಸಲ್ಲಿಸಿ ಅಲ್ಲಿಂದ ಹೋಗುವಾಗ ಕೊಟ್ಟ ಮಾನಪತ್ರದ ವಿಷಯ ಹೀಗಿದೆ.

...... ನೀವು ಈ ಪ್ರದೇಶಕ್ಕೆ ಬಂದಾಗಿನಿಂದ ಜನತೆಯ ಸುಖ ಹಾಗ ಕಲ್ಯಾಣಕ್ಕಾಗಿ ಮಹಾನ್ ಕಾರ್ಯಗಳನ್ನು ಮಾಡಿದ್ದೀರಿ. ..... ೧೮೪೨ರ ಪೂರ್ವದಲ್ಲಿ ಯಾವ ದುರಾಡಳಿತ ಇಲ್ಲಿತ್ತೋ ಅದೆಲ್ಲವೂ ನಿಮ್ಮ ತತ್ಕ್ಷಣದ ಹಾಗೂ ನ್ಯಾಯ ಸಮ್ಮತವಾದ ಆಡಳಿತದಿಂದ ಬಹುಬೇಗ ದೂರವಾಯಿತು, ಸೂರ್ಯನು ಉದಯಿಸಲು ಕತ್ತಲು ಸರಿದು ಹೋಗುವಂತೆ..... ನಮ್ಮ ಅನುಭವದ ಮೇಲಿಂದ ಹೇಳುವದಾದರೆ ನಾವು ನಿಮ್ಮಂಥ ದಯಾಳುವಾದ, ಪರಿಶ್ರಮಪಡುವ ಚತುರ ಹಾಗೂ ಪರೋಪಕಾರಿ ಅಧಿಕಾರಿಯನ್ನು ಕಂಡಿರಲೇ ಇಲ್ಲ

ದೇವರು ನಿಮಗೆ ಅನುಗ್ರಹಿಸಲಿ.

ತಮ್ಮವರೇ ಆದ

ರಾಜಾ ವೆಂಕಟಪ್ಪ ನಾಯಕ (ಸೀನಿಯರ)

ರಾಜಾ ವೆಂಕಟಪಪ ನಾಯಕ ಜೆಲ್ಲಿಪಲ್ಲಿ

ರಾಜಾ ಕೃಷ್ಣಪ್ಪ ನಾಯಕ

ಅಲ್ಲದೆ ೯೮೬ ಜನ ರಾಜ ಪರಿವಾರದವರು, ಪಂಡಿತರು, ಜಹಗಿರದಾರರು, ಪ್ರಮುಖ ನಾಗರಿಕರು ಸಹಿ ಹಾಕಿದ್ದಾರೆ.

ಇಲ್ಲಿ ಸೇವಾವಧಿ ಮುಗಿದ ನಂತರ ಟೇಲರನು ಸ್ವದೇಶಕ್ಕೆ ಮರಳಿದ. ನಿವೃತ್ತಿಯ ನಂತರ ಇಂಗ್ಲೆಂಡಿನಲ್ಲಿ ತನ್ನ ಎಲ್ಲ ಮಹತ್ವದ ಸಾಹಿತ್ಯ ಕೃತಿಗಳನ್ನು ರಚಿಸಿದ. ಏನೆಲ್ಲವನ್ನು ಆತ ಬರೆದಿದ್ದಾನೆಯೋ ಅದರಲ್ಲಿ ಸಂಪೂರ್ಣ ಸತ್ಯಾಂಶವಿದೆ. ಪ್ರಾಮಾಣಿಕತೆ ಇದೆ. ಭಾರತ ಹಾಗೂ ಭಾರತದ ಇತಿಹಾಸವನ್ನು ತನ್ನ ಕಾದಂಬರಿಗಳಿಗೆ ವಿಷಯವನ್ನಾಗಿ

ಮಾಡಿಕೊಂಡು ಭಾರತದ ಸಂಸ್ಕೃತಿ ಹಾಗೂ ನಾಗರಿಕತೆಯನ್ನು ತನ್ನ ದೇಶ ಬಾಂಧವರಿಗೆ ತಿಳಿಯಪಡಿಸಲು ಪ್ರಯತ್ನಿಸಿದ. ತನ್ನ ಕಕ್ಕನ ಮಗನಾದ 'ಹೆನ್ರಿ ರೀವ್ನನಿಗೆ ಆತ ಬರೆದ – ''ಪ್ರಕಟವಾಗಲಿ, ಬಿಡಲಿ ......ನಾನು ಬರೆದರೆ ಪ್ರಾಮಾಣಿಕವಾಗಿ ಬರೆಯುವೆ. ಇಲ್ಲವಾದರೆ ಬರೆಯುವುದೇ ಇಲ್ಲ'' ಈ ಗುರಿ ಇಟ್ಟುಕೊಂಡು ಆತ ಭಾರತದ ಅನಾಗರಿಕ, ಅರೆ ನಾಗರಿಕ ಹಾಗೂ ನಾಗರಿಕ ಜೀವನವನ್ನು ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತ ಗೊಳಿಸಿದ. ಅವುಗಳಲ್ಲಿ ನಾವು ಅವನ ಪ್ರಾಮಾಣಿಕತೆ, ಜ್ಞಾನ ಹಾಗೂ ಪರಿಪಕ್ವತೆಯನ್ನು ಕಾಣುತ್ತೇವೆ.

ಅವನ ಸಾಹಿತ್ಯ ಕೃತಿಗಳು ಈ ಕೆಳಗಿನಂತೆ ಪ್ರಕಟವಾದವು

೧.	ಕನ್ಫೆಶನ್ಸ್ ಆಫ್ ಎ ಥಗ್	೧೮೩೯
೨.	ಟಿಪ್ಪೂ ಸುಲ್ತಾನ	೧೮೪೦
೩.	ತಾರಾ	೧೮೬೩
೪.	ರಾಲ್ಫ ಡಾರ್ನೆಲ್	೧೮೬೩
೫.	ದಿ ಸ್ಟುಡಂಟ್ಸ ಮ್ಯಾನ್ಯುವಲ್ ಆಫ್ ಇಂಡಿಯನ್ ಹಿಸ್ಟರಿ	೧೮೭೦
೬.	ಸೀತಾ	೧೮೭೨
೭.	ದ ಸ್ಟೋರಿ ಆಫ್ ಮೈ ಲೈಫ್	೧೮೭೪
೮.	ಎ ನೋಬೆಲ್ ಕ್ವೀನ್	೧೮೭೬

ಆತ ಪದೇ ಪದೇ ಭಾರತದ ಬಗ್ಗೆ ಬರೆಯುವುದರಲ್ಲಿ ಸಂತೋಷ ಹಾಗೂ ಅಭಿಮಾನ ಪಡುವದಾಗಿ ಹೇಳುತ್ತಿದ್ದ.

''ನನ್ನ ಸಾಹಿತ್ಯ ಕಾರ್ಯ ನನಗೆ ಬಹಳಷ್ಟು ಆನಂದವನ್ನು ಕೊಡುತ್ತಿದೆ. ಯಾರ ಮಧ್ಯದಲ್ಲಿ ನಾನು ಬಾಳಿದೆನೋ, ಯಾರನ್ನು ನಾನು ಪ್ರೀತಿಸಿದೆನೊ, ಮತ್ತು ಯಾರನ್ನು ಜೀವನದ ಕೊನೆಯವರೆಗೆ ಪ್ರೀತಿಸುತ್ತೇನೆಯೋ ಅಂಥವರ ಬಗ್ಗೆ ನಾನು ಬರೆಯಲು ಸಮರ್ಥನಾಗಿದ್ದೇನೆ. ''

ಭಾರತವನ್ನು ಇಂಗ್ಲೆಂಡದ ಸಮೀಪಕ್ಕೆ ತರುವದೇ, ಭಾರತೀಯರನ್ನು ತನ್ನ ದೇಶ ಬಾಂಧವರ ಹತ್ತಿರ ಒಯ್ಯುವದೇ, ಅದರ ಮುಕಾಂತರ ನಿಜವಾದ ಭಾರತವನ್ನು ತೋರಿಸಿಕೊಡುವುದೇ ಅವನ ಆಳವಾದ ಇಚ್ಛೆಯಾಗಿತ್ತು.

ತನ್ನ ಮನಃಪೂರ್ವಕ ಹಾಗೂ ಸಮರ್ಪಣ ಭಾವದಿಂದ ಬರೆದ, ಅಂತರಂಗದ ಆಳದಿಂದ ಬರೆದ ಕೃತಿಗಳಿಂದ ಇಂಗ್ಲಂಡದ ಓದುಗರ ಹೃದಯವನ್ನು ಗೆದ್ದುಕೊಂಡನು. ಅವನ ಸೃಜನಶೀಲ ಸಾಹಿತ್ಯವನ್ನು ಅನೇಕರು ಕೊಂಡಾಡಿದರು. ಇಂಗ್ಲೆಂಡದ ರಾಣಿ

ವ್ಹಿಕ್ಟೋರಿಯಾ ಸಹ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದಳು. 'A Companion of the Most Exalted Order of the Star of India' ಎಂಬ ಅಭಿದಾನವನ್ನಿತ್ತು ಸನ್ಮಾನಿಸಿದಳು. ನಿಜವಾಗಿಯೂ ಅದೊಂದು ಅಪೂರ್ವವಾದ ಗೌರವ. ನಂತರ ಅವನನ್ನು ರಾಯಲ್ ಅಯರಿಷ ಅಕ್ಯಾಡಮಿಯ (M.R.I.A) ಸದಸ್ಯನನ್ನಾಗಿ ಹಾಗೂ ರಾಯಲ್ ಎಸಿಯಾಟಿಕ ಸೊಸೈಟಿಯ (M.R.A.S) ಸದಸ್ಯನನ್ನಾಗಿಯೂ ಮಾಡಿದರು. ಶ್ರೇಷ್ಠ ಇತಿಹಾಸಕಾರರು , ಲೇಖಕರು, ಭಾರತದ ಬಗ್ಗೆ ತಮಗೆ ತಿಳಿದುಕೊಳ್ಳಬೇಕಾದಾಗ ಇವನನ್ನೇ ಕೇಳುತ್ತಿದ್ದರು. ತನ್ನ ದೇಶದಲ್ಲಿಆತ ಭಾರರತದ ಅನಧಿಕೃತ ರಾಜ ಪ್ರತಿನಿಧಿಯಾಗಿ ಕಾರ್ಯ ಮಾಡುತ್ತ ಭಾರತದ ಇತಿಹಾಸ, ಕಲೆ, ಶಿಲ್ಪಕಲೆ, ಸಂಸ್ಕೃತಿ ಮತ್ತು ಧರ್ಮಗಳ ಮೇಲೆ ಭಾಷಣಗಳನ್ನೂ ಮಾಡಿದನು. ಲೇಖಕನಾಗಿ ಅವನನ್ನು ಬ್ರಿಟಿಷರು ಹಾಗೂ ಪತ್ರಿಕೆಯವರು ಬಹಳಷ್ಟು ಹೊಗಳಿದರು.

ಶ್ರೇಷ್ಠ ಇತಿಹಾಸಕಾರನೂ, ಇಂಪೀರಿಯಲ್ ಗೆಜೆಟಿಯರ ಆಫ್ ಇಂಡಿಯಾದ ಲೇಖಕನೂ ಆದ ಸರ್. ಡಬ್ಲ್ಯು ಡಬ್ಲ್ಯು ಹಂಟರನು ಟೇಲರನಿಗೆ ಭವ್ಯವಾದ ಗೌರವಾರ್ಪಣೆ ಮಾಡಿದ್ದಾನೆ. –

''ನಾನು ಮತ್ತಾರಿಂದಲೂ ಪಡೆಯದ ಭಾರತದ ಜನರ ಸ್ವಭಾವದ ಜ್ಞಾನವನ್ನು ಆಂಗ್ಲೋ ಇಂಡಿಯನ್ ಸಾಹಿತಿಯಾದ ಟೇಲರನಿಂದ ಪಡೆದಿದ್ದೇನೆ. .... ಅವನೊಬ್ಬ ಉತ್ಕೃಷ್ಟ ಗುಣಗಳುಳ್ಳ, ದುರ್ಮಿಳನಾದ ಸಾಹಿತಿ ಆಗಿದ್ದಾನೆ. ಆತ ತನ್ನ ಇಡೀ ಜೀವನವನ್ನು ಭಾರತೀಯ ವಿಷಯಗಳ ಅಧ್ಯಯನಕ್ಕೆ ಮುಡುಪಾಗಿಟ್ಟಿದ್ದನು. ಅವನ ಒಳ್ಳೆಯ ಪ್ರಭಾವವು ಭಾರತದಲ್ಲಿ ಅಧಿಕಾರಿಯಾಗಿದ್ದ ಎರಡು ಪೀಳಿಗೆಗಳ ಮೇಲೆ ಆಗಿತ್ತು. ''

ಅದರಂತೆ ಎಡಿನ್‌ಬರ್ಗ ರಿವ್ಯೂ ಪತ್ರಿಕೆಯಲ್ಲಿ ಹೆನ್ರಿ ಅನ್ನುವವನು ಬರೆದದ್ದು ಹೀಗಿದೆ.

''....... ಜನತೆಯ ಪ್ರೀತಿಯ ವ್ಯಕ್ತಿಯಾಗಿ, ಭಾರತದ ಜನಜೀವನದ ನಾನಾ ರಂಗಗಳಲ್ಲಿ ಒಳಹೊಕ್ಕು ನೋಡಿ, ದಕ್ಷಿಣ ಭಾರತದ ಭಿನ್ನ ವಿಭಿನ್ನ ಜನರ ಮಧ್ಯದಲ್ಲಿ ಜೀವಿಸುವ ಸೌಭಾಗ್ಯ ಟೇಲರನಿಗೆ ಒದಗಿದ್ದು ಸುದೈವದ ಮಾತಾಗಿದೆ...... ಈ ಕಾರಣದಿಂದಲೇ ಆತನಿಗೆ ಬಹುಶಃ ಭಾರತದ ಬಗ್ಗೆ, ಭಾರತೀಯರ ಬಗ್ಗೆ, ಸತ್ವಯುತವಾಗಿ, ಸತ್ಯಯುತವಾಗಿ, ತಾದಾತ್ಮ್ಯದಿಂದ ಬರೆಯಲು ಸಾಧ್ಯವಾಗಿದೆ. ಈ ಗುಣಗಳು ಉಳಿದ ಯಾವುದೇ ಆಂಗ್ಲ ಲೇಖಕರಲ್ಲಿ ಕಾಣಸಿಗುವುದಿಲ್ಲ'' ಆತ ಮುಂದುವರೆದು,

''ಭಾರತವನ್ನು ಆಳಿದರೂ ಸಹ ಇಂಗ್ಲೆಂಡಿನ ಜನರಿಗೆ ಭಾರತದ ಬಗ್ಗೆ ಅಪೂರ್ಣ ಜ್ಞಾನವಿದೆ. ಪುರಾತನ ಭಾರತದ ಬಗ್ಗೆ ಆಂಗ್ಲರಲ್ಲಿ ಅತೀವ ಆಸಕ್ತಿಯನ್ನುಂಟು

ಮಾಡುವುದು ,ಆತನು ನಮಗೆ ತಿಳಿಸಿದಂತೆ, ಅವನ ಪರಮ ಗುರಿಯಾಗಿತ್ತು. ಆ ಕಾರ್ಯದಲ್ಲಿ ಆತ ಬಹಳಷ್ಟು ಮಟ್ಟಿಗೆ ಯಶಸ್ಸು ಹೊಂದಿದ್ದಾನೆ. "

ತನ್ನ ಮನೆಗೆ ಮರಳಿ ಬಂದಮೇಲೆ, ಮುಪ್ಪಿನಲ್ಲೂ ಆತ ಮತ್ತೊಮ್ಮೆ ಭಾರತಕ್ಕೆ ಹೋಗಿ ಬರುವ ಹಂಬಲ ಹೊಂದಿದ್ದ. ಅದರಂತೆ ಭಾರತಕ್ಕೆ ಬಂದು ಹೈದ್ರಾಬಾದಿನಲ್ಲಿ ತನ್ನ ಹಳೆಯ ಮಿತ್ರರ ಭೆಟ್ಟಿಯಾದ. ಅವರೆಲ್ಲರೂ ಅವನನ್ನು ಅತೀವ ಆತ್ಮೀಯತೆ ಹಾಗೂ ಗೌರವದಿಂದ, ಪ್ರೀತಿಯಿಂದ ಸಂದರ್ಶಿಸಿದರು. ಅವನು ಸರ್ವ ಜನರ ಮಿತ್ರನಾಗಿ ಕಾಣಿಸಿಕೊಂಡನು.

ಭಾರತದಿಂದ ಮರಳಿ ತನ್ನ ತಾಯ್ನಾಡಿಗೆ ಹೋಗುವಾಗ ಯಾವುದೇ ವೇದನೆ ಇಲ್ಲದೆ ಶಾಂತ ಮನಸ್ಕನಾಗಿ, ಮೇ ೧೩, ೧೮೭೬ರಂದು ಜಿನೇವಾದ ಸಮೀಪದ ಮೆನ್‌ಟೋನದಲ್ಲಿ ವಿಧಿವಶನಾದನು. ಆತ ಈ ಭೂತಲದ ಮೇಲಿದ್ದಾಗ ಆಡಿದ ಕೊನೆಯ ಮಾತುಗಳನ್ನು ಅವನ ಸಮಾಧಿಯ ಕಲ್ಲಿನ ಮೇಲೆ ಕೆತ್ತಿದ್ದಾರೆ...

"The Eternal God is thy Refuge and underneath are the everlasting arms"

ಈ ರೀತಿಯಾಗಿ ಬಹುದೊಡ್ಡ ಆಡಳಿತಗಾರನಾದ, ಇತಿಹಾಸಕಾರನಾದ, ಸಮಾಜ ಸುಧಾರಕನಾದ, ಎಲ್ಲಕ್ಕಿಂತ ಮಿಗಿಲಾಗಿ, ಶ್ರೇಷ್ಠ ಸಾಹಿತಿಯಾದ ಟೇಲರನು ಮಡಿದನು.

ಟೇಲರನ ವ್ಯಕ್ತಿತ್ವ

ಟೇಲರನು ಪ್ರಾಮುಖ್ಯವಾಗಿ ಆ ಕಾಲದ ಪ್ರತಿನಿಧಿಯಾಗಿದ್ದನು. ಆದ್ದರಿಂದ ಆತ ಎಲ್ಲ ಬಗೆಯ ಸುಧಾರಣೆಗಳನ್ನು ಮಾಡುವಲ್ಲಿ ಅತೀವ ಆಸಕ್ತಿ ಹೊಂದಿದ್ದವನಾಗಿದ್ದನು ಮತ್ತು ಭಾರತವನ್ನು ಆಧುನಿಕತೆಗೆ ತರುವ ಹಂಬಲ ಹೊಂದಿದ್ದನು. ಅವನ ಲೋಲಕದ ವ್ಯಕ್ತಿತ್ವವನ್ನು ಅರಿತುಕೊಳ್ಳಲವು ನಾವು ಮೊಟ್ಟ ಮೊದಲು ಆ ಕಾಲದ ಯುಗಧರ್ಮವನ್ನು ತಿಳಿದುಕೊಳ್ಳಬೇಕಾಗುವದು. ಈಸ್ಟ ಇಂಡಿಯಾ ಕಂಪನಿ ಅವನ ವ್ಯಕ್ತಿತ್ವ ರೂಪಿಸುವಲ್ಲಿ ವಹಿಸಿದ ಪಾತ್ರದ ಪಕ್ಷಿನೋಟವು ಅವಶ್ಯವಾಗಿದೆ. ವಾರನ್ ಹೇಸ್ಟಿಂಗ್ಸ, ವಿಲಿಯಂ ಬೆಂಟಿಂಕ, ಡಾಲಹೌಸಿ ಹಾಗೂ ಇನ್ನಿತರ ಗವ್ಹರ್ನರ ಜನರಲ್ಲರು, ಆಡಳಿತಗಾರರು, ಸುಧಾರಕರು, ಥಗ್ಗರನ್ನು , ಪಿಂಢಾರಿಗಳನ್ನು ನಾಶಮಾಡುವಲ್ಲಿ, ಸತಿ ಪದ್ಧತಿಯನ್ನು ತಡೆಯುವಲ್ಲಿ, ಚಿಕ್ಕ ಮಕ್ಕಳ ಮದುವೆ ನಿಲ್ಲಿಸುವಲ್ಲಿ ಹರಸಾಹಸ ಮಾಡಿದರು. ಇಂಗ್ಲೀಷ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದ ಮೆಕಾಲೆ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ಜಾರಿಯಲ್ಲಿ ತಂದನು. ಡಾಲಹೌಸಿಯು ರೇಲ್ವೆ ಮಾರ್ಗರಚಿಸಿ ಮೂರು ಪ್ರೆಸಿಡೆನ್ಸಿಗಳನ್ನು ಜೋಡಿಸಿದನು. ಅಲ್ಲದೆ ರೇಲ್ವೆ ಹಾಗೂ ಪೋಸ್ಟ ಇಲಾಖೆ, ಟೆಲಿಗ್ರಾಫಗಳನ್ನು

ಆರಂಭಿಸಿದನು. ಭಾರತದಲ್ಲಿ ಎಂಜಿನೀಯರಿಂಗ ಕಾಲೇಜನ್ನು ಆರಂಭಿಸಿದನು. ಈ ರೀತಿ ಪಾಶ್ಚಾತ್ಯ ವಿಜ್ಞಾನದ ಫಲಗಳನ್ನು ಭಾರತಕ್ಕೆ ಒದಗಿಸಿ ಸುಧಾರಣೆಗಳನ್ನು ಮಾಡಿದರು. ಭಾರತಿಯರಿಗೆ ಶಿಕ್ಷಣ ನೀಡುವ ಸಲುವಾಗಿ ಶಾಲೆ-ಕಾಲೇಜುಗಳನ್ನು ತೆರೆದರು. ಅದರಂತೆ ಕಾಲರಾ, ಪ್ಲೇಗಿನಂಥ ಭಯಾನಕ ರೋಗ ರುಜಿನಿಗಳನ್ನು ನಿಯಂತ್ರಿಸಲು, ಔಷಧೋಪಚಾರ ಒದಗಿಸಲು ಆಸ್ಪತ್ರೆಗಳನ್ನು ತೆಗೆದರು. ಮಾನವೀಯ ದೃಷ್ಟಿಯನ್ನಿಟ್ಟುಕೊಂಡು ವಿಧವಾ ಪುನರ್ವಿವಾಹ ಜಾರಿಗೊಳಿಸಿದರು. ದೇಶದಲ್ಲಿ ಶಾಂತಿ, ನ್ಯಾಯ ಉಂಟಾಗಲು ಕ್ರಿಮಿನಲ್ ಕಾಯಿದೆ ರೂಪಿಸಿ ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಯಲಗಳನ್ನು ಸ್ಥಾಪಿಸಿದರು. ಈ ರೀತಿ ಸರ್ವತೋಮುಖ ಸುಧಾರಣೆಗಳ ಒಂದು ಹೊಸ ಅಧ್ಯಾಯವೇ ಭಾರತದಲ್ಲಿ ಆರಂಭವಾಯಿತು. ಅಲ್ಲದೆ ಭಾರತದ ಇತಿಹಾಸವೂ ಬದಲಾಯಿತು. ಇಂಥ ಯುಗದ ವ್ಯಕ್ತಿಯಾಗಿದ್ದ ಟೇಲರನಲ್ಲೂ ಸುಧಾರಣೆ ಮಾಡುವ ಮಹತ್ವಾಕಾಂಕ್ಷೆ ಉಂಟಾಯಿತು. ಪರೋಪಕಾರಿ ಆಡಳಿತಗಾರನಾಗಿ, ಸಮಾಜ ಸುಧಾರಕನಾಗಿ ಬರಗಾಲ ಬಿದ್ದಾಗ ರೋಗ ಪ್ರಸಾರಾದಾಗ ಅನೇಕ ಪರಿಹಾರೋಪಾಯಗಳನ್ನು ಜಾರಿಗೊಳಿಸಿದನು.

ಸುಪ್ರಸಿದ್ಧ ಆಡಳಿತಗಾರರು, ಅಧಿಕಾರಿಗಳು ಎಂದೆನಿಸಿಕೊಂಡಿದ್ದ ವಿದ್ವಾಂಸರೆಂದೆನಿಸಿಕೊಂಡಿದ್ದ ಸರ್ ಥಾಮಸ್ ಮನ್ರೋ, ಲಾರ್ಡ್ ಎಲ್ಫಿನ್‌ಸ್ಟನ್, ಕರ್ನಲ್ ಟಾಡ, ಕರ್ನಲ್ ಸ್ಲೀಮನ್, ಕರ್ನಲ್ ವಿಲ್ಕ್ಸ್, ಗ್ಯಾಂಟಡಫ, ಲಾರ್ಡ್ ಮೆಕಾಲೆ, ವಿಲಿಯಂ ಬೆಂಟಿಂಕ, ಡಾಲಹೌಸಿ, ಪ್ರೊಫೆಸರ್ ವಿಲ್ಸನ್, ಮೊದಲಾದವರ ಪ್ರಭಾವಕ್ಕೆ ಒಳಗಾಗಿದ್ದ ಟೇಲರನು ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಅವರ ವಿಚಾರಧಾರೆಯಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡನು. ಮದ್ರಾಸದ ಗವ್ಹರ್ನರ ಆಗಿದ್ದ ಸರ್ ಥಾಮಸ್ ಮನ್ರೋ ಮಾಂಡವ ಋಷಿ ಎಂದೇ ಖ್ಯಾತನಾಗಿದ್ದನು. ಏಕೆಂದರೆ ಅವನು ಧಾರ್ಮಿಕ ಸಂಸ್ಥೆಗಳಿಗೆ, ಗುಡಿ-ಗುಂಡಾರಗಳಿಗೆ ದತ್ತಿ ಹಾಕಿ ಕೊಟ್ಟು ಸೇವೆ ಸಲ್ಲಿಸಿದ್ದನು. ಆತನು ಭಾರತವನ್ನು ಮೆಚ್ಚಿಕೊಂಡ ಮಹಾನುಭಾವರಲ್ಲಿ ಒಬ್ಬನಾಗಿದ್ದನು. ಆತ ಹೇಳಿದ್ದೇನೆಂದರೆ –

''ನಾನು ನನ್ನ ದೇಶದ ಹವಾಮಾನಕ್ಕಿಂತ ಭಾರತದ ಹವಾಮಾನ ವನ್ನು ಇಷ್ಟಪಡುವೆ. .... ಇದು ನನ್ನ ದೇಶದಲ್ಲಿ ಇಲ್ಲವಲ್ಲ ಎಂದು ದುಃಖಿಸುವೆ.''

ಮುಂಬೈಯ ಗವ್ಹರ್ನರ ಆಗಿದ್ದ ಲಾರ್ಡ ಎಲ್ಫಿನ್ಸನ್ನನು ಶ್ರೇಷ್ಠ ಇತಿಹಾಸಕಾರನೂ, ಶಿಕ್ಷಣ ತಜ್ಞನೂ ಆಗಿದ್ದನು. ಕರ್ನಲ್ ಟೋಡನು ಪಶ್ಚಿಮದ ರಜಪೂತರ ನಾಡಿಗೆ ರಾಜಕೀಯ ಪ್ರತಿಧಿಯಾಗಿ ಕಾರ್ಯ ಮಾಡಿದನು. ಮತ್ತು ರಜಪೂತ ಅರಸರ ಇತಿಹಾಸದ ಬಗ್ಗೆ ಲಭ್ಯವಿದ್ದ ಎಲ್ಲ ವಿಷಯಗಳನ್ನು ಸಂಗ್ರಹಿಸಿದನು. ಲಾರ್ಡ ವಿಲಿಯಂ ಬೆಂಟಿಕನು ಅಧಿಕಾರಿಯಾಗಿ ಮಾಡಿದ ಮಹಾನ್ ಕಾರ್ಯವನ್ನು ಕಲ್ಕತ್ತಾದಲ್ಲಿಯ ಅವನ ಪ್ರತಿಮೆಯ ಕೆಳಗೆ ಕೊರೆಯಲಾಗಿದೆ.....

''ತನ್ನ ಅಧೀನದ ಸರಕಾರದ ನೈತಿಕ ಹಾಗೂ ಬೌದ್ಧಿಕ ಮಟ್ಟವನ್ನು ಉನ್ನತ ಗೊಳಿಸುವದಕ್ಕಾಗಿ ಸತತ ಪರಿಶ್ರಮಿಸಿದ ವ್ಯಕ್ತಿ ಈತ''.

ಟೇಲರನು ಮೆಕಾಲೆಯ ಸಂಭಾಷಣಾ ಚಾತುರ್ಯಕ್ಕೆ ಆರುಹೋಗಿದ್ದನು. ಅವನಲ್ಲಿದ್ದ ಅಪರಿಮಿತವಾದ ಜ್ಞಾನ, ಅವನಿಗೆ ಗೊತ್ತಿದ್ದ ಇತಿಹಾಸ, ತತ್ವಜ್ಞಾನ, ಪ್ರಭಾವಿ ವ್ಯಕ್ತಿತ್ವ, ಭಾಷಣಕಲೆ – ಇವೆಲ್ಲವುಗಳು ಟೇಲರನನ್ನು ಮರಳುಗೊಳಿಸಿದ್ದವು. ಟೇಲರನು ಆಗಾಗ್ಗೆ ''ಅಯ್ಯೊ, ನಾನು ಇಂಥ ಮಹನೀಯರ ಮಧ್ಯದಲ್ಲಿದ್ದರೆ, ನನ್ನ ಜೀವನ ಬೇರೆ ತರಹದ್ದೆ ಆಗಿ ಬಿಡುತ್ತಿತ್ತು''ಎಂದು ಉದ್ಗರಿಸಿದನು. ಥಗ್ಗರನ್ನು ಪತ್ತೆ ಹಚ್ಚಿ ಅವರನ್ನು ನಿಗ್ರಹಿಸಲು ಬ್ರಿಟಿಷ ಸರಕಾರವು ಕರ್ನಲ್ ಸ್ಲೀಮನ್ ಎಂಬುವವರನ್ನು ನೇಮಿಸಿತು. ಆತ ಆ ಕಾರ್ಯ ಮಾಡಿ ಥಗ್ಗರು ಎಲ್ಲೆಲ್ಲಿದ್ದು ಹೇಗೆ, ಏನು ಮಾಡುವರು ಎಂಬುದರ ಬಗ್ಗೆ ಅವರ ವಾಸ್ತವ್ಯದ ಪ್ರದೇಶದ ನಕಾಶೆ ಸಹಿತ ವರದಿ ತಯಾರಿಸಿ ಸರಕಾರಕ್ಕೆ ಒಪ್ಪಿಸಿದನು. ಲಾರ್ಡ ಹಾರ್ಡಿಂಜನು ಗವ್ಹರ್ನರ್ ಜನರಲ್ ಆಗಿದ್ದಾಗ ಎಲ್ಲ ಬಗೆಯ ಶಾಂತಿಯುತ ಕಾರ್ಯಗಳಲ್ಲಿ ಅಭಿವೃದ್ಧಿ ಬೆಳವಣಿಗೆ ಆಯಿತು. ಆತ ಹೋರಾಟವನ್ನೆಲ್ಲ ನಿಲ್ಲಿಸಿ ಕೇವಲ ರಸ್ತೆ, ಸೇತುವೆ, ವ್ಯಾಪಾರ, ಶಿಕ್ಷಣ ಇತ್ಯಾದಿ ಗಳಲ್ಲಿಯೇ ಕಾರ್ಯ ಪ್ರವೃತ್ತನಾಗಿರುತ್ತಿದ್ದನು. ಇವರ ಸಾಲಿನಲ್ಲಿದ್ದುಕೊಂಡು ಟೇಲರನೂ ಸಹ ಮಹೋಪಕಾರಿ ಆಡಳಿತಗಾರನಾಗಿ, ಸಮರ್ಪಣಭಾವದ ಸುಧಾರಕನಾಗಿ, ಸೃಜನಶೀಲ ಸಾಹಿತಿಯಾಗಿ ಬೆಳೆಯುವ ಇಚ್ಛೆ ಹೊಂದಿದನು.

ಆತ ಶೇಕ್ಸಪೀಯರ ಹಾಗೂ ಸರ್ ವಾಲ್ಟರ ಸ್ಕಾಟರಂಥ ಸಾಹಿತಿಗಳಿಗೂ ಋಣಿಯಾಗಿದ್ದಾನೆ. ತನ್ನ ಪ್ರಥಮ ಕೃತಿಯಾದ 'ಎ ಕನ್ಫೆಶನ್ಸ ಆಫ್ ಎ ಥಗ್'ದಲ್ಲಿ ಬಳಸಿದ ಅನೇಕ ಸಾಲುಗಳು ಶೇಕ್ಸಪೀಯರರನಿಂದ ಪಡೆದುಕೊಂಡಂಥವಾಗಿದ್ದು ಅವು ಶೇಕ್ಸಪೀಯರನ ನಾಟಕಗಳ, ಕಾವ್ಯದ ಪ್ರಭಾವಕ್ಕೆ ಒಳಗಾಗಿದ್ದನೆಂಬುದನ್ನು ದೃಢೀಕರಿಸುತ್ತವೆ. ಷೇಕ್ಸಪೀಯರನ ಭಾಷಾ ಸೌಂದರ್ಯವನ್ನು ಇವನಲ್ಲಿಯೂ ಕಾಣಬಹುದಾಗಿದೆ. ಆತ ಸ್ಕಾಟನ ಸಂಪ್ರದಾಯಕ್ಕೂ ಸೇರಿದವನಾಗಿದ್ದಾನೆ. ಅವನನ್ನು ಆಂಗ್ಲೋ ಇಂಡಿಯನ್ ಸಾಹಿತ್ಯದ ವಾಲ್ಟರ ಸ್ಕಾಟ್ ಎಂದೂ ಕರೆಯಿದ್ದಾರೆ. ಗತ, ವೃತ ಕಾಲವನ್ನು ಪುನಃ ಸೃಜಿಸುವಾಗ ಸ್ಕಾಟನು ಸತ್ಯಸಂಗಿತಯ ಜೊತೆಗೆ ಕಲ್ಪನಾ ವಿಲಾಸವನ್ನೂ ಸಮ್ಮಿಳಿಸಿದ್ದಾನೆ. ಟೇಲರನೂ ಅದನ್ನೇ ಮಾಡಿ ಸ್ಕಾಟನಿಗಿಂತ ಹೆಚ್ಚಿನ ಯಶಸ್ಸು ಪಡೆದಿದ್ದಾನೆ. ಆದರೂ ತನ್ನಲ್ಲಿ ಟ್ರೊಲೋಪ್ ಹಾಗೂ ಥ್ಯಾಕರೆಯಲ್ಲಿದ್ದ ಸಾಹಿತ್ಯ ಶಕ್ತಿ ಇಲ್ಲವೆಂದು ಹೇಳಿಕೊಂಡಿದ್ದಾನೆ. ಅವರ ಸಾಹಿತ್ಯವನ್ನು ಆತ ಓದಿದ್ದ ಬಹಳಷ್ಟು ಮೆಚ್ಚಿಕೊಂಡಿದ್ದ. ತನ್ನ ಕಾದಂಬರಿಗಳಾದ ರಾಲ್ಫ ಡಾರ್ನೆಲ್ ಹಾಗೂ ಸೀತಾಗಳಲ್ಲಿ ಹೇಳಿದ್ದು ಹೀಗಿವೆ –

''ಮಿ. ಟ್ರೊಲೋಪರಲ್ಲಿದ್ದ ಸಂಭಾಷಣಾ ಚಾತುರ್ಯ ನನ್ನಲ್ಲಿ ದ್ದರೆ ನನ್ನ ಪಾತ್ರಗಳ ಸಂಭಾಷಣೆಗಳು ಆಕರ್ಷಕವಾಗುತ್ತಿದ್ದವು. ದಿವಂಗತ ಥ್ಯಾಕರೆಯವರಲ್ಲಿದ್ದ

ಪ್ರತಿಭೆ ನನ್ನಲ್ಲಿದ್ದರೆ ನಾನು ಹದಿನೆಂಟನೆಯ ಶತಮಾನದ ಮಧ್ಯಭಾಗದ ಚಿತ್ರಣವನ್ನು ಮನವರಿಕೆಯಾಗುವಂತೆ ಮಾಡುತ್ತಿದ್ದೆ.''

ಟೇಲರನು ಬೈಬಲ್‌ನ ಭಾಷೆಯಿಂದ ಇತರ ಧಾರ್ಮಿಕ ಪುಸ್ತಕಗಳಿಂದ ಬಹಳಷ್ಟು ಪ್ರಭಾವಿತನಾಗಿದ್ದನು.

ಟೇಲರನ ವ್ಯಕ್ತಿತ್ವದ ಮೇಲೆ ಭಾರತ ಪ್ರಭಾವ

ನಿಜಾಗಿಯೂ ಟೇಲರನ ವ್ಯಕ್ತಿತ್ವವನ್ನು ರೂಪಿಸಿದ್ದು, ದೃಷ್ಟಿಯನ್ನು ವಿಶಾಲಗೊಳಿಸಿದ್ದು ಭಾರತವಾಗಿದೆ. ಭಾರತೀಯ ಧರ್ಮ,ಸಂಸ್ಕೃತಿ, ಕಲೆ, ಶಿಲ್ಪಕಲೆ, ಮತ್ತು ನಾಗರಿಕತೆಗಳೆಲ್ಲ ಅವನ ಮೇಲೆ ಬಹಳಷ್ಟು ಪರಿಣಾಮ ಮಾಡಿದವು. ಸಂಪೂರ್ಣ ತಿಳುವಳಿಕೆಯಿಂದಲೇ ಆತ ಹಿಂದುಗಳನ್ನು , ಮುಸಲ್ಮಾನರನ್ನು ಹೊಗಳಿದ ಮತ್ತು ಅದನ್ನು ತನ್ನ ದೇಶಬಾಂಧವರಿಗೆ ತಿಳಿಸಿದ. ಅವನ ಮೇಲೆ ಭಾರತದ ಪ್ರಭಾವ ಎಷ್ಟಾಗಿತ್ತೆಂದರೆ ಆತ ಮಾನಸಿಕವಾಗಿ ಭಾರತೀಯನೇ ಆಗಿಬಿಟ್ಟಿದ್ದ. ನೋಡಲು ಮಾತ್ರ ಬ್ರಿಟಿಷನಾಗಿ ಕಾಣುತ್ತಿದ್ದ. ಆತ ಭಾರತದ ಭಾಷೆಗಳಾದ ಸಂಸ್ಕೃತ, ತೆಲಗು, ಮರಾಠಿ ಹಾಗೂ ಹಿಂದೂಸ್ತಾನಿಗಳಲ್ಲಿ ಪರಿಣತನಾಗಿದ್ದ. ಭಾರತದ ಮಹಾಕಾವ್ಯಗಳಾದ ರಾಮಾಯಣ ಹಾಗು ಮಹಾಭಾರತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ. ಕಾಳಿದಾಸ, ಭವಭೂತಿ ಮೊದಲಾದ ಸಂಸ್ಕೃತ ಕವಿಗಳ ಕಾವ್ಯಗಳ ಭಾಷಾಂತರವನ್ನು ಓದಿ ತಿಳಿದುಕೊಂಡಿದ್ದ. ಶ್ರೀಕೃಷ್ಣನ ಬಗ್ಗೆ ಪಾರಿಜಾತದಂಥ ಬಯಲಾಟಗಳನ್ನು ನೋಡಿಯೂ ಅರಿತುಕೊಂಡಿದ್ದ. ಅದರ ಮುಖಾಂತರ ಭಾಗವತವನ್ನೂ ಬಲ್ಲವನಾಗಿದ್ದ.

ಭಾರತವು ಅವನಿಗೆ ಸೃಜನಶೀಲ ಸಾಹಿತಿಯಾಗಲು ಬೇಕಾಗುವ ಎಲ್ಲ ಸಾಮುಗ್ರಿಗಳನ್ನು ಅಂದರೆ ಕಥೆ, ಪಾತ್ರ, ಘಟನೆ ಮೊದಲಾದವುಗಳನ್ನು ಒದಗಿಸಿಕೊಟ್ಟಿತು. ಒಂದು ವೇಳೆ ಆತ ಭಾರತಿಯರೊಡನೆ ನಿಕಟ ಸಂಪರ್ಕ ಹೊಂದಿ ಬಾಳಿರದದ್ದರೆ ಐತಿಹಾಸಿಕ ಸುಂದರ ಕಾದಂಬರಿಗನ್ನು ಬರೆಯುವ ಸಾಹಸವನ್ನು ಮಾಡುತ್ತಿರಲಿಲ್ಲ. ಆತ ತನ್ನ ನಿಜ ಜೀವನದಲ್ಲಿ ಅಮೀರ ಅಲಿಯಂಥವರನ್ನು, ಚೀತೂ ಮತ್ತು ಗಫರಖಾನರಂಥ ದುರುಳರನ್ನೂ, ಕಾಸಿಂ ಅಲಿ ಪಟೇಲರಂಥ ಪರಾಕ್ರಮಿಗಳನ್ನು ಸದ್ಗುಣ ಸಂಪನ್ನರಾದ ಅಮೀನಾ, ಝೋರಾ, ತಾರಾ, ಸೀತಾರಂಥ ಮಹಿಳೆಯರನ್ನು ನೋಡಿರಲೇ ಬೇಕು. ಆತ ತನ್ನನ್ನು ಭಾರತೀಯನೆಂದೇ ಗುರುತಿಸಿಕೊಂಡಿರಬೇಕು. ಆದುದರಿಂದಲೇ ಆತ ಭಾರತದಲ್ಲಿಯೆ ಸಾಯುವ ಇಚ್ಛೆನ್ನು ಹೊಂದಿದವನಾಗಿದ್ದನು.

ಪುರಾತನ ವೈಭವಯುತ ಭಾರತದ ನಿಜವಾದ ಪ್ರೇಮಿ ಹಾಗೂ ಹೊಗಳುವವನಾತನಾಗಿದ್ದರಿಂದ ಭಾರತವು ಕಲೆ ಹಾಗೂ ವಿಜ್ಞಾನದಲ್ಲಿ ಮಾಡಿದ ಸಾಧನೆಯನ್ನು ಮೆಚ್ಚಿಕೊಂಡು ಹೀಗೆ ಬರೆದಿದ್ದಾನೆ.

''ಭಾರತವು ಪಾಶ್ಚಿಮಾತ್ಯ ದೇಶಗಳಲ್ಲಿ ಹುಟ್ಟದಂಥ ಶ್ರೇಷ್ಠ ಮತು ಸ್ಮರಣೀಯ ವ್ಯಕ್ತಿಗ್ಗಳಂತಹ ಜನರಿಗೆ ಜನ್ಮ ಕೊಟ್ಟಿದೆ.'' ಇಲ್ಲಿಯ ತತ್ವಜ್ಞಾನಿಗಳು ಗ್ರೀಕ ತತ್ವಜ್ಞಾನಿಗಳ ಸಾಲಿಗೆ ಸೇರುತ್ತಾರೆ. .... ಇಲ್ಲಿಯ ಜನರು ಕರಕುಶಲದಲ್ಲಿ ಸುಂದರ ವಸ್ತುಗ್ಗಳನ್ನು ತಯಾರಿಸುತ್ತಾರೆ... ಸಾಮಾಜಿಕ ರಚನೆಯು ಅನೇಕ ಕಾಯಿದೆ, ವಿಧಿ ವಿಧಾನಗಳಿಂದ ಕೂಡಿದ್ದು ಗೋಚರವಾಗುತ್ತದೆ. ಇಲ್ಲಿ ಪರಸ್ಪರರಲ್ಲಿ ಸುರಕ್ಷಿತತೆ ಇದ್ದು ಆಸ್ತಿ, ಪಾಸ್ತಿಗಳ ರಕ್ಷಣೆಯೂ ಚೆನ್ನಾಗಿದೆ. ಇದು ಪಾಶ್ಚಾತ್ಯ ದೇಶದ ಜನರಿಗೆ ಬಹುಕಾಲದವೆರೆಗೆ ಗೊತ್ತಿರಲಿಲ್ಲ.''

ಆತ ಭಾರತದ ಕೇವಲ ಕಲೆ ಹಾಗೂ ವಿಜ್ಞಾನಕ್ಕೆ ಮನಸೋತುಹೋಗದೆ ಇಲ್ಲಿಯ ಧರ್ಮ ಹಾಗೂ ಆಧ್ಯಾತ್ಮಿಕತೆಗೂ ಮಾರು ಹೋಗಿದ್ದಾನೆ. ವಿಜಯನಗರದ ವಿನಾಶವಾದ ಶಿಲ್ಪಕಲಾಕೃತಿಗಳನ್ನು ವೀಕ್ಷಿಸಿ ಆಶ್ಚರ್ಯ ಚಕಿತನಾಗಿ, ಪುಳಕಿತನಾಗಿದ್ದಾನೆ. ಕನಕಗಿರಿಯಲ್ಲಿಯ ಹಿಂದೂ ದೇವಾಲಯವನ್ನು ನೋಡಿ ಹರ್ಷಗೊಂಡು – '' ನಾನು ಇಲ್ಲಿರುವಂಥ ಹಿಂದೂ ದೇವಾಲಯವನ್ನು ಈ ಮೊದಲು ಕಂಡಿರಲೇ ಇಲ್ಲ'' ಎಂದು ಉದ್ಗಾರ ತೆಗೆದಿದ್ದಾನೆ. ಅದರಂತೆ ಭಾರತೀಯ ಸಂಗೀತವನ್ನು, ಜಾನಪದ ನಾಟಕವನ್ನು ಮೆಚ್ಚಿಕೊಂಡಿದ್ದನು. ಅದನ್ನು ತನ್ನದೇ ಆದ ಶಬ್ದಗಳಲ್ಲಿ ಬಣ್ಣಿಸಿದ್ದಾನೆ.

''ಶ್ರೀ ಮದ್ಭಾಗವತ ಗ್ರಂಥದಲ್ಲಿಯ ಕೃಷ್ಣನ ಕಥೆಯ ಮೇಲೆ ಆಧರಿಸಿದ ನಾಟಕದಂಥ ನಾಟಕವನ್ನು ನಾನು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ. ಪ್ರಮುಖ ಪಾತ್ರಧಾರಿಯು ಒಬ್ಬ ತರುಣಿಯಾಗಿದ್ದು ಸುಂದರ ಪೋಷಾಕಿನಲ್ಲಿ ಹಾಡಿದಳು. ಆಗಾಗ್ಗೆ ಸಮೂಹಗಾನವೂ ಇರುತ್ತಿತ್ತು. ಕೃಷ್ಣನಿಂದ ಅಗಲಿದ ಅವಳು ವಿಹರವೇದನೆ ವ್ಯಕ್ತ ಪಡಿಸಿ, ಅಭಿನಯಿಸಿದಳು. ಅದರಂತೆ ಇನ್ನಿತರ ಭಾವನೆಗಳನ್ನೂ ತೋರಿಸಿ ಮನಸೂರೆ ಗೊಂಡಳು. ಇವೆಲ್ಲ ನಾಟಕ ಮಾಡಿದ ಜನರು ಅಶಿಕ್ಷಿತ ವಡ್ಡರಾಗಿದ್ದರು. ಅವರಿಗೆ ಓದು ಬರಹವೇ ಬರುತ್ತಿರಲಿಲ್ಲ. ಆ ನಾಟಕ – ಗಾಯನ ಕಲೆಯನ್ನು ಅವರು ಕಂಠಪಾಠ ಮಾಡಿದ್ದು ಆನುವಂಶಿಕವಾಗಿ ಕಲಾರಾಧನೆ ಆಡುತ್ತ ಬಂದವರಾಗಿದ್ದರು. ನಾನು ನೋಡಿದ ಈ ನಾಟಕವು ಪವಿತ್ರ ಗ್ರಂಥವೊಂದರಿಂದ ಆಯ್ದುಕೊಂಡ ಭಾಗವಾಗಿತ್ತು. ನಾಟಕದಲ್ಲಿ ಆಗಾಗ್ಗೆ ಹಾಸ್ಯದ ಬುಗ್ಗೆಗಳು ಏಳುತ್ತಿದ್ದವು. ಸ್ತ್ರೀ ಪಾತ್ರಧಾರಿಗಳಿಗೆ ಸ್ವಲ್ಪ ವಿಶ್ರಾಂತಿ ಕೊಡುವದಕ್ಕಾಗಿ ವಿನೋದದ ಮಾತಿನ ಮೋಜು ಇರುತ್ತಿತ್ತು. ಇದನ್ನೆಲ್ಲ ನೋಡಿ ಚಿಕ್ಕ ಮಕ್ಕಳಿಗೆ ಹಾಗೂ ನನಗೆ ಬಹಳಷ್ಟು ಮನರಂಜನೆ ಆಯಿತು.... ಈ ರೀತಿಯ ಬಯಲಾಟಗಳು ಹಿಂದೂ ಧರ್ಮ ತೋರಿಸುತ್ತ ಸುಂದರ ಕಲೆ ಹೊಂದಿದ್ದವು.''

ಅದರಂತೆ ಜ್ಯೋತಿಷ್ಯ ಶಾಸ್ತ್ರ ಹಾಗೂ ಖಗೋಲ ಶಾಸ್ತ್ರಗಳಲ್ಲಿ ಭಾರತೀಯರು ನಿಖರವಾದುದನ್ನು ತಿಳಿಸಿಕೊಡುವದನ್ನು ನೋಡಿ ಆತ ಚಕಿತನಾಗಿದ್ದನು. ಸುರಪುರದ ರಾಜಾ ವೆಂಕಟಪ್ಪ ನಾಯಕನು ತನ್ನ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ಸಾಯುವನು ಎಂದು

ಮೊದಲೇ ಹೇಳಿದ್ದನ್ನು ತಿಳಿದು ವಿಸ್ಮಿತನಾಗಿ ಹೋಗಿದ್ದನು. ಸ್ವತಃ ತನ್ನ ಬಗ್ಗೆಯೇ ಜ್ಯೋತಿಷಿಯೊಬ್ಬ ಹೇಳಿದಂತೆಯೇ ನಿಜವಾಗಿ ಆದುದ್ದನ್ನು ತಿಳಿದುಕೊಂಡು ಅಚ್ಚರಿಗೊಂಡನು. ಜ್ಯೋತಿಷಿಯೊಬ್ಬ ಆತನಿಗೆ – ''ನೀವು ಇಲ್ಲಿ ಬಹು ವಿಸ್ತಾರವಾದ ಭೂ ಭಾಗದಲ್ಲಿ ರಾಜನಂತೆ ಆಡಳಿತ ನಡೆಸುವಿರಿ'' ಎಂದು ಮೊದಲೇ ಹೇಳಿದ್ದನು.

ಈ ರೀತಿ ಭಾರತದ ಇತಿಹಾಸ ಹಾಗೂ ಪುರಾಣಗಳಲ್ಲಿರುವ ಪ್ರೀತಿ, ಧರ್ಮ, ಸಂಸ್ಕೃತಿ, ನಾಗರಿಕತೆ, ಕಲೆ, ವಿಜ್ಞಾನ, ತತ್ವಜ್ಞಾನ ಮೊದಲಾದವುಗಳ ಅಧ್ಯಯನ ಇವೆರಡೂ ಸೇರಿಕೊಂಡು ಅವನ ಬಹುಮುಖ್ಯ ವ್ಯಕ್ತಿತ್ವವನ್ನು ರೂಪಿಸಿದವು.

ತತ್ಪರಿಣಾಮವಾಗಿ ಆತ ಭಾರತದ ಪ್ರೇಮಿ ಹಾಗೂ ಮನಸಾರೆ ಹೊಗಳುವಂಥವನಾದ. ಭಾರತದ ಬಗ್ಗೆ ತನ್ನ ಜ್ಞಾನವನ್ನಷ್ಟೇ ಅಲ್ಲ, ತನ್ನ ಆತ್ಮವನ್ನೇ ಸಮರ್ಪಿಸಿಬಿಟ್ಟಿದ್ದ. ಭಾರತಿಯರ ಬಗ್ಗೆ ಅಪರಿಮಿತವಾದ ಪ್ರೀತಿ, ಒಲವುಗಳು ಅವನಲ್ಲಿ ಉಂಟಾಗಿದ್ದವು.

ಆತನ ಜಾಗತಿಕ ದೃಷ್ಟಿಕೋನ

ಭಾರತವು ಅವನ ಹೃದಯವನ್ನು, ಬುದ್ದಿಯನ್ನು ಬಹಳಷ್ಟು ಬದಲಾಯಿಸಿ ಬಿಟ್ಟಿತು. ಜಗತ್ತಿನ ಎಲ್ಲ ಧರ್ಮಗಳು ಜನರಿಗೆ ಶಾಂತಿಯಿಂದ ಒಂದಾಗಿ ಬಾಳಲು ಪ್ರೇರೇಪಿಸುತ್ತವೆ ಎಂಬುದನ್ನು ಚೆನ್ನಾಗಿ ಅರಿತವನಾಗಿದ್ದನು. ಆದುದರಿಂದಲೇ ಆತ ಇಸ್ಲಾಂ ಧರ್ಮದ ಶ್ರೇಷ್ಠತೆಯನ್ನು ತನ್ನ ಜನರಿಗೆ ತಿಳಿಸಿಕೊಟ್ಟನು.

''ಕ್ರಿಶ್ಚಿಯನ್ ಓದುಗರೆ, ನಾನು ಇಲ್ಲಿ ಬರೆದುದನ್ನುಓದಿ ಸಿಡಿದೇಳಬೇಡಿ. ನೀವು ದ್ವೇಷಿಸುವ ಧರ್ಮಗ್ರಂಥವೂ (ಕುರಾನ್) ಅನೇಕ ಒಳ್ಳೆಯ ಬೋಧನೆಯನ್ನು ಮಾಡುತ್ತದೆ'' ಅದರಂತೆಯೇ ಹಿಂದೂ ಧರ್ಮದ ಘನತೆಯನ್ನು ಅದರ ಪ್ರತಿಪಾದಕ, ಪ್ರಾತಿನಿಧಿಕ ವ್ಯಕ್ತಿಯಾದ ವ್ಯಾಸಶಾಸ್ತ್ರಿ ಎಂಬ ಪಾತ್ರದ ಮುಖಾಂತರ ತಿಳಿಸುತ್ತಾನೆ. ''ಓ ಕ್ರಿಶ್ಚಿಯನ್ ಓದುಗನೇ, ಅವನ ಭಾವನೆಗಳನ್ನು ನಿನ್ನ ಭಾವನೆಗಳ ಆಧಾರದ ಮೇಲೆ ನೋಡಬೇಡ. ನೀನು ಮಾತ್ರ ಪವಿತ್ರವಾದ, ಸುಲಭವಾದ ಧರ್ಮ ಹೊಂದಿರುವಿ..... ನಿನ್ನಲ್ಲಿ ಶಾಂತವಾದ, ಪ್ರೇಮದ ಸತ್ಯಯುತವಾದ,ಸಹಜವಾದ ಜೀವನದ ಗುರಿ ಇದೆ. ಆದರೆ ಅವನೂ ಬಹಳಷ್ಟು ಸುಶಿಕ್ಷಿತರಾದ ಹಿಂದುಗಳಲ್ಲಿಇರುವಂಥ ಅದೇ ದೇವರಲ್ಲಿ ವಿಶ್ವಾಸ ಇರಿಸಿದ್ದಾನೆ. ಆದರೆ ಆ ದೇವರು ಭವ್ಯವಾದ, ಸುಂದರವಾದ ಪುರಾಣವುಳ್ಳವ 'ನಾಗಿದ್ದಾನೆ.''

ಇದೆಲ್ಲವೂ ಟೇಲರನು ಎಲ್ಲ ಧರ್ಮಗಳಲ್ಲಿ ಹೊಂದಿದ ಪ್ರೀತಿಯ, ಗೌರವದ ದ್ಯೋತಕಗಳಾಗಿವೆ. ಆತ ನಿಜವಾದ ಕ್ರಿಶ್ಚಿಯನ್ ಆಗಿದ್ದುಕೊಂಡು ತಾನಿದ್ದಲ್ಲೆಲ್ಲ ದೇವರ ಸಾಮ್ರಾಜ್ಯ ಸ್ಥಾಪಿಸಬಯಸುವ ಆಸೆ ಹೊಂದಿದ್ದವನಾಗಿದ್ದ, ಭಾರತದೊಳಗಿನ ಎಲ್ಲ ಜನರ ಬಗ್ಗೆ ಅಪಾರ ಪ್ರೀತಿ, ಕಳಕಳಿ, ದಯೆ, ಸಹಾನುಭೂತಿ ಹೊಂದಿದವನಾಗಿದ್ದ

ಆತ. ಅವನು ನಿಜವಾಗಿಯೂ ಜನತಾ ಮತ್ರ ಎಂಬ ಭಾವನೆ ತಾಳಿದ್ದ. ಅಲ್ಲದೆ ಜನರ, ಮಾನವತಯೆ ಸೇವಕನೆಂದೂ ಬಗೆದಿದ್ದ. ಜನರು ಆತನಿಗೆ 'ನೀನು ಇಷಅಟೇಕೆ ಭಾರತವನ್ನು - ಭಾರತೀಯರನ್ನು ಪ್ರೀತಿಸುತ್ತಿರುವಿ ? ' ಎಂದು ಕೇಳಿದಾಗ ಆತ ''ಅವರು ನನ್ನನ್ನು ಅಷ್ಟೊಂದು ಪ್ರೀತಿಸುವಾಗ ನಾನು ಅವರನ್ನು ಇಷ್ಟು ಪ್ರೀತಿಸ ಬೇಡವೇ ? ನಾನೇಕೆ ಅವರನ್ನು ಪ್ರೀತಿಸಬಾರದು ?'' ಎಂದೂ ಕೇಳುತ್ತಿದ್ದ.

ಬಹುಕಾಲ ಭಾರತದಲ್ಲಿ ಸಕ್ರಿಯವಾಗಿ ಬಾಳಿದ್ದರಿಂದ ತುಲನಾತ್ಮಕ ದೃಷ್ಟಿಕೋನವು ಬೆಳೆಯಿತು. ಅದನ್ನು ಅವನು ಆಗಾಗ್ಗೆ ತೋರಿಸಿಯೂ ಕೊಟ್ಟಿದ್ದಾನೆ. ತನ್ನ ದೇಶದ ಜನ ಜೀವನವನ್ನು ಭಾರತೀಯ ಜನ ಜೀವನದೊಂದಿಗೆ ಹೋಲಿಸಿ, ವ್ಯತ್ಯಾಸ ಮಾಡಿ ನೋಡಿ, ವಿಚಾರಿಸಿ ತನ್ನ ಅಭಿಪ್ರಾಯವನ್ನು ಬಣ್ಣಿಸುವಾಗ - ''ನಮ್ಮ ಮನೆಗಳಲ್ಲಿ ಇರುವಂಥ ಕಪಾಟು, ಖುರ್ಚಿ, ಮೇಜುಗಳು ಆ ಮನೆಯಲ್ಲಿರಲಿಲ್ಲ'' ಎಂದೆನ್ನುತ್ತಾನೆ. ಭಾರತಿಯರು ಲಗ್ನದ ಸಮಯದಲ್ಲಿ ತೊಟ್ಟುಕೊಳ್ಳುವ ಬಟ್ಟೆ ಬರೆಗಳನ್ನು ಕ್ರಿಶ್ಚಿಯನ್ನರು ಲಗ್ನದ ಸಮಯದಲ್ಲಿ ತೊಡುವ ಬಟ್ಟೆ ಬರೆಗಳ ಜೊತೆಗೆ ಹೋಲಿಸುತ್ತ - ''ಇಂಗ್ಲಿಷ್ ತಾಯಂದಿರೆ, ಭಗಿನಿಯರೆ, ವಿವಾಹದ ಸಮಯದಲ್ಲಿ ಸುಂದರ ಬಟ್ಟೆ ತೊಡುವದು ಕೇವಲ ನಮ್ಮ ದೇಶದಲ್ಲಿ, ನಮ್ಮ ಸಮಾಜದಲ್ಲಷ್ಟೇ ಇದೆ ಎಂದು ಬಗೆಯದಿರಿ'' ಎಂದೆನ್ನುತ್ತಾನೆ. ಭಾರತದ ನಾಟಕವನ್ನು ಇಂಗ್ಲಿಷ್ ನಾಟಕದೊಡನೆ ಹೋಲಿಸಿ ಹೇಳಿದ್ದಾನೆ. ಭಾರತೀಯರು ಪ್ರೇಮಿಸುವ ವಿಧಾನವನ್ನೂ ಇಂಗ್ಲಿಷಿನವರು ಪ್ರೇಮಿಸುವ ಪದ್ಧತಿಯೊಡನೆ ಹೋಲಿಸಿದ್ದಾನೆ. ಈ ತುಲನಾತ್ಮಕತೆಯ ಒಂದು ಕುತೂಹಲಕಾರಿ ಸನ್ನಿವೇಶವು ಚಾಂದಬೀಬಿಯನ್ನು ತನ್ನ ದೇಶದ ರಾಣಿಯಾದ ಮೊದಲನೆ ಎಲಿಜಬೆಥಳ ಜೊತೆಗೆ ಹೋಲಿಸಿ ಸಾಮ್ಯ ವೈಷಮ್ಯ ತಿಳಿಸಿದ್ದಾನೆ.

ಯಾವಾಗ ಬ್ರಿಟಿಷರು ತಮ್ಮ ಅಹಂಕಾರ, ದುರಭಿಮಾನಗಳಲ್ಲಿ ಭಾರತೀಯರನ್ನು ದ್ವೇಷಿಸುತ್ತಿದ್ದರೋ ಮತ್ತೂ ಅವರನ್ನು ಅಯೋಗ್ಯ ಗುಲಾಮರೆಂದು ಬಗೆಯುತ್ತಿದ್ದರೋ, ಅನಾಗರಿಕ ಪಶುಗಳೆಂದು ಹೀಗಳೆಯುತ್ತಿದರೋ, ಹೊಲಸು ಕರಿಯರೆಂದು ಕರೆಯುತ್ತಿದ್ದರೋ, ಆಗ ಟೇಲರನು ಭಾರತೀಯರ ಬಗ್ಗೆ ತೋರಿದ ಪ್ರೀತಿ ಗೌರವಗಳು ಅವರಿಗೆ ಅಸಹಜವೆಂದೆನಿಸಿದವು. ಆತ ಭಾರತವನ್ನು ಕುರುಡನಾಗಿ ಪ್ರೀತಿಸಿರಲಿಲ್ಲ. ನಿಜವಾದ ಭಾರತದ ಭವ್ಯತೆ, ಘನತೆಯನ್ನು ತಿಳಿದೇ ಆತ ಹೊಗಳಿ ಹಾಡಿದ. ಹಾಗಿರದಿದ್ದರೆ ಆತ ಭಾರತದಲ್ಲಿಯೇ ಮಡಿಯಬೇಕೆಂಬ ತನ್ನ ಅಂತಿಮ ಇಚ್ಚೆ ಎಂಬುದಾಗಿ ಹೇಳುತ್ತಿರಲಿಲ್ಲ....

''ನನ್ನ ಆರೋಗ್ಯ ಚೆನ್ನಾಗಿಯೇ ಉಳಿದಿದ್ದರೆ, ಭಾರತವನ್ನು ಬಿಟ್ಟು ತಾಯ್ನಾಡಿಗೆ ಹೋಗುವ ವಿಚಾರವನ್ನು ನಾನು ಮಾಡುತ್ತಿರಲಿಲ್ಲ. ಯಾಕೆಂದರೆ ನಾನು ಭಾರತವನ್ನು ಭಾರತೀಯರನ್ನು ಅಷ್ಟೊಂದು ಪ್ರೀತಿಸಿದ್ದೇನೆ... ದೇವರು ಇಚ್ಚೈಸಿದರೆ ನಾನು ಭಾರತದಲ್ಲಿಯೇ ಬಾಳಿ, ಮಡಿಯಬಯಸುವೆ.''

ನಮ್ಮ ನಾಡಿನಲ್ಲಿದ್ದಾಗ ಆತ ಜನರ ಮಿತ್ರ, ಮಾರ್ಗದರ್ಶಕ ಹಾಗೂ ಬೋಧಕನಾಗಿ ಜೀವಿಸಿ ಜನರ ವಿತ್ತ - ಜೀವನವನ್ನು ಸಂರಕ್ಷಿಸಿದ. ಅವರನ್ನು ಅನಾಗರೀಕತೆಯಿಂದ ಆಧುನಿಕತೆಯ ಕಡೆಗೆ ನಡೆಸಿಕೊಂಡುಬಂದ. ಭಾರತಕ್ಕೆ ಆಡಳಿತಾಧಿಕಾರಿಯಾಗಿ ಬರುವ ತನ್ನ ದೇಶ ಬಾಂಧವರಿಗೆ ಉಪದೇಶಪರ ಮಾತನ್ನು ಕಿವಿಯಲ್ಲಿ ಹೇಳಿದ.

''ಭಾರತಕ್ಕೆ ಯಾರೇ, ಯಾವುದೇ ಕಾರ್ಯ ಕಾರಣಗಳಿಗೆ ಹೋಗಲಿ, ಅವರೆಲ್ಲರೂ ಭಾರತೀಯರೊಡನೆ ವಿನಯ ಹಾಗೂ ಸದ್ಭಾವನೆಯಿಂದ ವರ್ತಿಸ ಬೇಕೆಂದು ಉಪದೇಶಿಸುವೆ. ನನ್ನ ಅನುಭವದಿಂದ ನಾನು ಅರಿತುಕೊಂಡಿದ್ದೇನೆಂದರೆ ವಿನಯ, ಸಹಾನುಭೂತಿ ಹಾಗೂ ದೃಢ ನಿರ್ಧಾರ ಇದ್ದರೆ ಯಾವುದೇ ಅಧಿಕಾರಿಯು ಅಸಾಧ್ಯವಾದುದನ್ನು ಸಾಧಿಸಬಲ್ಲ'' ಎಂಬುದಾಗಿದೆ. ಮತ್ತೆ ಮುಂದುವರಿಸಿ ಹೇಳುತ್ತಾನೆ - 'ನಾನೆಂದಿಗೂ ಪ್ರಸಿದ್ಧಿಯ ಬೆನ್ನು ಹತ್ತಲಿಲ್ಲ. ನಾನು ಎಲ್ಲರಲ್ಲಿ ನ್ಯಾಯ ವಂತಿಕೆಯಿಂದ ನಡೆದುಕೊಳ್ಳಲು ಯತ್ನಿಸಿದೆ.'' ಇದೇ ಅವನ ಯಶಸ್ಸಿನ ಗುಟ್ಟಾಗಿದೆ.

ಜನರು ಅವನಿಗೆ ಎಷ್ಟೊಂದು ಋಣಿಯಾಗಿದ್ದರೆಂದರೆ ಅವರು ಅವನನ್ನು ಆರಾಧಿಸಿ, ದೀಪದ ಆರತಿ ಮಾಡುತ್ತಿದ್ದರು. ಮತ್ತು ಅವನ ಗುಣಗಾನವನ್ನು ಕವಿತೆಯಲ್ಲೂ ಮಾಡುತ್ತಿದ್ದರು. ಅತ್ಯಂತ ಪೂಜ್ಯ ಹಾಗೂ ಗೌರವ ಭಾವನೆಯಿಂದ ಅವನನ್ನು ಮಹದೇವ ಬಾಬಾ ಎಂದೂ ಕರೆಯುತ್ತಿದ್ದರು.

ಆ ಕಾಲದಲ್ಲಿ ಅನೇಕ ಜನ ಆಡಳಿತಗಾರರು, ವಿಚಾರಶೀಲರು, ಪಂಡಿತರು, ಸಮಾಜ ಸುಧಾರಕರು ಆಗಿ ಹೋದರು. ಆದರೆ ಯಾರೂ ಟೇಲರನಂತೆ ಇರಲಿಲ್ಲ. ಟೇಲರನಿಗೂ ಇತರರಿಗೂ ಮುಖ್ಯ ವ್ಯತ್ಯಾಸವೆಲ್ಲಿತ್ತೆಂದರೆ ಉಳಿದವರ್‍ಯಾರೂ ಭಾರತೀಯರೊಂದಿಗೆ ಬೆರೆತುಕೊಂಡು, ಆಳವಾಗಿ ಒಳಹೊಕ್ಕು ನೋಡಲಿಲ್ಲ. ತಿಳಿದುಕೊಳ್ಳಲಿಲ್ಲ. ತದಾತ್ಮ್ಯ ಭಾವನೆ ತಾಳಲಿಲ್ಲ. ಉಳಿದವರೆಲ್ಲರೂ ಕ್ಷಣಕಾಲ ಬಾಳಿ ಹಕ್ಕಿಯಂತೆ ಹಾರಿಹೋಗಿಬಿಟ್ಟರು. ಆದ್ದರಿಂದ ನಿಜವಾದ ಭಾರತದ ದರ್ಶನವೇ ಅವರಿಗಾಗಲಿಲ್ಲ. ಟೇಲರ ಮಾತ್ರ ಬೆರೆತು, ಬದುಕಿ, ನಿಜವಾದ ಭಾರತದ ನಾಡಿಯನ್ನು ಹಿಡಿದು ನೋಡಿದ. ತಾನು ತಿಳಿದುಕೊಂಡಿರುವಂಥ ಭಾರತದ ಬಗ್ಗೆ ತನ್ನದೇಶ ಬಾಂಧವರಿಗೆ ತಿಳಿಯಪಡಿಸಿದ. ಆತ ಭಾರತಕ್ಕೆ ಬಂದು ಸಿರಿವಂತನಾಗಿ, ಸಂಪತ್ತನ್ನು ಒಯ್ಯಬೇಕೆಂದು ಬಯಸಿದ್ದ. ಹಾಗೆ ಮಾಡಲು ಅವನಿಗೆ ಸಾಕಷ್ಟು ಅವಕಾಶವೂ ಸಿಕ್ಕಿತ್ತು. ಆದರೆ ಹಾಗೆ ಮಾಡಲಿಲ್ಲ. ಏಕೆಂದರೆ ಭಾರತವು ಅವನಿಗೆ ಆಧ್ಯಾತ್ಮಿಕ ಶಿಕ್ಷಣ, ತ್ಯಾಗದ ಮನೋಭಾವ ನೀಡಿತ್ತು. ಆತ ಸಿರಿವಂತನಾಗಿ ಮರಳಿ ಹೋದದ್ದು ನಿಜ. ಯಾವ ಅರ್ಥದಲ್ಲಿ ಎಂದರೆ ಐಹಿಕ ಸಂಪತ್ತಿನಿಂದಲ್ಲ, ಲಕ್ಷಾವಧಿ ಜನರ ಪ್ರೀತಿ, ವಿಶ್ವಾಸ, ಆದರ ಎಂಬ ಅಮೌಲ್ಯ ಸಂಪತ್ತಿನಿಂದ.

ಟೇಲರನ ದ್ವಿಮುಖ ವ್ಯಕ್ತಿತ್ವ

ಟೇಲರನಲ್ಲಿ ಶ್ರೇಷ್ಠ ಆಡಳಿತಗಾರ ಹಾಗೂ ಶ್ರೇಷ್ಠ ಲೇಖಕ ಎಂಬ ಎರಡು ಮುಖಗಳನ್ನು ಕಾಣುತ್ತೇವೆ.

ಮೊದಲನೆಯದಾಗಿ ಆಡಳಿತಾಗರನಾಗಿ ಅವನಲ್ಲಿ ಮೆಚ್ಚಿಕೊಳ್ಳುವಂಥ ಅನೇಕ ಸದ್ಗುಣಗಳನ್ನು ಕಾಣಬಲ್ಲೆವು. ಜನರು ಅವನನ್ನು ಆರಾಧಿಸಬೇಕಾದರೆ ಅವನಲ್ಲಿಯ ಮುಖ್ಯ ಗುಣವೆಂದರೆ ಪ್ರೇಮ ಪೂರ್ಣ ದಯಾಗುಣ. ಯಾವುದೇ ಧರ್ಮ, ಜಾತಿ, ಮತ, ಪಂಥವನ್ನು ಲೆಕ್ಕಿಸದೆ ಎಲ್ಲರನ್ನು ಪ್ರೀತಿಸಿದವನಾತ. ಇದರಿಂದಲೇ ಆತ ನಿಯಂತ್ರಿಸಲಸಾಧ್ಯವಾದ ಬೇಡರ ಮನಸ್ಸನ್ನು ಗೆದ್ದುಬಿಟ್ಟ, ಸುರಪುರಕ್ಕೆ ಮೊಟ್ಟ ಮೊದಲು ಆಗಮಿಸಿದಾಗ ರಾಜಕುಮಾರ ವೆಂಕಟಪ್ಪನಾಯಕ ಹಾಗೂ ಅವನ ತಾಯಿಯಾದ ರಾಣಿ ಇಬ್ಬರೂ ಅವನಿಗೆ ಸುಸ್ವಾಗತ ಕೋರಿದರು. ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಟೇಲರನು ಮಂಡಿಸಿದ ಎಲ್ಲ ಕರಾರುಗಳಿಗೆ ರಾಣಿಯು ಒಪ್ಪಿದಳು. ರಾಜಕೀಯ ಬಿಕ್ಕಟ್ಟನ್ನು ಅತ್ಯಂತ ಜಾಣಾಕ್ಷತನದಿಂದ, ಪ್ರಾಮಾಣಿಕತೆಯಿಂದ ಬಗೆಹರಿಸಿದ್ದನ್ನು ನೋಡಿ ರಾಣಿಯು "ನೋಡಿ, ನನ್ನ ಮಗನಂತೂ ನಿಮ್ಮ ಹತ್ತಿರ ಬಂದು ಕುಳಿತಿದ್ದಾನೆ. ...ಇನ್ನು ನೀವೇ ನಮಗೆಲ್ಲರಿಗೂ ತಂದೆಯಾಗಿರಬೇಕು" ಈ ರೀತಿ ಟೇಲರನು ಕೇವಲ ರಾಜನಿಗೆ 'ಅಪ್ಪ' ಆಗದೆ ಇಡೀ ಬೇಡರ ಜನಾಂಗಕ್ಕೆ ತಂದೆಯಂತಾದನು. ಅವರೆಲ್ಲರೂ....

"ಇನ್ನು ನೀವು ಹಸ್ತಗಳನ್ನು ನಮ್ಮ ತಲೆಯ ಮೇಲಿಡಿರಿ. ಇಂದಿನಿಂದ ನಾವು ನಿಮ್ಮ ವಿಧೇಯಕ ಮಕ್ಕಳಾಗಿದ್ದೇವೆ." ಎಂದು ಅಂದರು. ಈ ರೀತಿಯಾಗಿ ಟೇಲರನು ಅವರಿಗೆ ದೇವ ಕಳುಹಿಸಿದ ತಂದೆಯಂತಾದ ; ಪೋಷಕ, ಸಂರಕ್ಷಕನಾದ. ಎಲ್ಲರಿಗೂ ಪ್ರೀತಿಯ ವ್ಯಕ್ತಿಯಾಗಿ ಕೊನೆಯವರೆಗೂ ಅವರ ಹಿತೈಷಿಯಾಗಿ ಬಾಳಿದ. ಅದಕ್ಕಾಗಿ ಅವರೆಲ್ಲ ಅವನಿಗೆ ಚಿರಋಣಿಯಾದರು.

ಅವನಲ್ಲಿರುವ ಎರಡನೆ ಶ್ರೇಷ್ಠ ಗುಣವೆಂದರೆ ಪರೋಪಕಾರ ಬುದ್ಧಿ. ಆತ ನೂರಾರು ಜನರಿಗೆ ಬೇಸಾಯಕ್ಕೆ ಯೋಗ್ಯವಾದ ಜಮೀನನ್ನು ಹಂಚಿಕೊಟ್ಟು, ಒಕ್ಕಲುತನ ಮಾಡಿ ಬಾಳಲು ಪ್ರೇರೇಪಿಸಿದ. ಅಲ್ಲದೆ ರಾಜ್ಯದ ಬೊಕ್ಕಸದಿಂದ ಆರ್ಥಿಕ ನೆರವನ್ನು ನೀಡಿದ. ಇದರ ಪರಿಣಾಮವಾಗಿ ಯಾವ ಬೇಡರು ಕೊಲೆ, ಸುಲಿಗೆ, ಧಾನ್ಯ ಲೂಟಿ , ದನ-ಕರು ಓಡಿಸಿಕೊಂಡು ಹೋಗುವದನ್ನು ಮಾಡುತ್ತಿದ್ದರೋ ಅವರೆಲ್ಲ ತಮ್ಮ ದುಷ್ಟ ವೃತ್ತಿಗಳನ್ನು ಬಿಟ್ಟು ಒಕ್ಕಲುತನ ಮಾಡಿ ಬಾಳಲು ಮುಂದಾದರು. ಆತ ಅವರೆಲ್ಲರಿಗೂ ನಾಗರಿಕತೆಯ ಜೀವನವನ್ನು , ವರ್ತನೆಯನ್ನು ತಿಳಿಸಿಕೊಟ್ಟ.

ಮೂರನೆಯದಾಗಿ ಆತನಂಥ ಕೊಡುಗೈ ದೊರೆ ಯಾರೂ ಇರಲಿಲ್ಲ. ೧೮೫೩ರಲ್ಲಿ ಭೀಕರವಾದ ಬರಗಾಲ ಬಿದ್ದಾಗ ಸಿರಿವಂತರಿಗೂ ಬದುಕುವದು

ಅಸಾಧ್ಯವಾಗಿತ್ತು. ಆಹಾರವಿಲ್ಲದೆ ಬಡವರಂತೂ ಬೀದಿ ಹೆಣವಾಗುವಂತಿತ್ತು. ಅಂಥ ಘೋರ ಪರಿಸ್ಥಿತಿಯಲ್ಲಿ ಟೇಲರನು ಅನೇಕ ಪರಿಹಾರ ಯೋಜನೆಗಳನ್ನು ಕೈಗೆತ್ತಿಕೊಂಡು ಬಡವರಿಗೆ ಧನ-ಧಾನ್ಯ ನೀಡಿದ. ತನ್ನ ಕೈಯಿಂದ ಹಣ ಖರ್ಚು ಮಾಡಿ ನೂರಾರು ಜನರು ಬದುಕಿ ಉಳಿಯುವಂತೆ ಮಾಡಿದ. ಅಲ್ಲದೆ ನೂರಾರು ರೋಗ-ರುಜಿನ ಪೀಡಿತರಿಗೆ ಆಸ್ಪತ್ರೆಯನ್ನು ತೆರೆದು ಔಷಧ ಉಪಚಾರದ ವ್ಯವಸ್ಥೆಯನ್ನು ಮಾಡಿದ.

ಮ್ಯಾಜಿಸ್ಟ್ರೇಟನೆಂದು ಕೆಲಸ ಮಾಡುತ್ತಿದ್ದಾಗ ಅತ್ಯಂತ ನ್ಯಾಯವಂತಿಕೆಯನ್ನು ತೋರಿದ. ಅಪರಾಧಿಗಳಿಗೆ ಘೋರ ಶಿಕ್ಷೆ ವಿಧಿಸುತ್ತಿದ್ದ. ದುಷ್ಟರಿಗೆ ವಜ್ರದಂತೆ ಕಠೋರನಾಗಿಯೂ, ಬಡ ಹಾಗೂ ಮುಗ್ಧರಿಗೆ ವಿನೀತನಂತೆ ಇರುತ್ತಿದ್ದ.

ಯಾವುದೇ ವಿಷಯದಲ್ಲಿಯೂ ಪ್ರಾಮಾಣಿಕತೆಯನ್ನು ಎಂದಿಗೂ ಬಿಟ್ಟುಕೊಟ್ಟಿರಲಿಲ್ಲ. ಸುರಪುರದ ರಾಣಿಯು ಒಮ್ಮೆ ಅವನ ಹೆಂಡತಿಗೆ ಅಮೌಲ್ಯವಾದ ವಜ್ರದ ಸರವನ್ನೇ ಕೊಟ್ಟು ಸಂತುಷ್ಟ ಪಡಿಸಲು ಯತ್ನಿಸಿದಾಗ ಆತ ಅವಳಿಗೆ ಹೇಳಿದ. - '' ನಿಮಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ನೀವು ಈ ರೀತಿ ಕಾಣಿಕೆ ಕೊಟ್ಟು ಆಸೆ ಹೆಚ್ಚಬೇಡಿರಿ'' ಎಂದು. ಇಷ್ಟೊಂದು ಪ್ರಾಮಾಣಿಕತೆ ಅವನಲ್ಲಿತ್ತು. ನಿಃಸ್ಪೃಹತೆಯಿತ್ತು.

ಯಾವುದೇ ಬಗೆಯ ಸಾಮಾಜಿಕ ಸುಧಾರಣೆಯನ್ನು ಆತ ಕೈಗೊಂಡರೆ ಅದರ ಹಿಂದೆ ಮನಃಪೂರ್ವಕವಾಗಿ ಕಾರ್ಯಮಾಡುವ ಹಂಬಲ, ಜನ ಸೇವೆಯೇ ಜನಾರ್ದನ ಸೇವೆ ಎಂಬ ಭಾವನೆ ಅಡಕವಾಗಿರುತ್ತಿತ್ತು. ತಾನಿದ್ದ ಪ್ರದೇಶದಲ್ಲೆಲ್ಲ ಶಾಂತಿಯನ್ನು ಸ್ಥಾಪಿಸಿ ದೇವರ ಸಾಮ್ರಾಜ್ಯ ನಿರ್ಮಿಸಲು ಯತ್ನಿಸಿದ. ತನ್ನ ಸಕಲ ಸದ್ಗುಣ ಗಳಿಂದಲೇ ಪ್ರೀತಿ ಖ್ಯಾತಿಯನ್ನು ಸಂಪಾದಿಸಿದ.

ಎರಡನೆಯದಾಗಿ ತನ್ನ ಸುಂದರವಾದ ಐತಿಹಾಸಿಕ ಕಾದಂಬರಿಗಳಲ್ಲಿ ತಾರಾ, ಝೋರಾ, ಸೀತಾ, ಸೈಯ್ಯದ ಮೊದಲಾದ ಪಾತ್ರಗಳನ್ನು ಸೃಜಿಸುವ ಮೂಲಕ ಭಾರತದ ಬಗ್ಗೆ ತನ್ನಲ್ಲಿರುವ ಜ್ಞಾನ, ಅಭಿಮಾನಗಳನ್ನು ಅಭಿವ್ಯಕ್ತಗೊಳಿಸಿದ್ದಾನೆ. ಅಂತರ್ಧರ್ಮೀಯ ವಿವಾಹಗಳನ್ನು ಕಾದಂಬರಿಗಳಲ್ಲಿ ಮಾಡಿ ಅವು ಒಳ್ಳೆಯವು ಎಂಬ ವೈಯಕ್ತಿಕ ಮನವರಿಕೆಯನ್ನು ಪ್ರಕಟಗೊಳಿಸಿದ್ದಾನೆ. ನಾಡಿನ ಭೌಗೋಳಿಕ ಸುಂದರ ವರ್ಣನೆಗಳು - ನದಿ, ಮಸೀದಿ, ಮಂದಿರ, ಬೆಟ್ಟ - ಇವೆಲ್ಲ ಮನಸೂರೆ ಗೊಳ್ಳುತ್ತವೆ. ಹಿಂದೂ ಹಾಗು ಮುಸ್ಲಿಂ ರಲ್ಲಿಯ ಸಾಮ್ಯ ವೈಷಮ್ಯಗಳನ್ನು ಆತ ಬಹಳಷ್ಟು ಬಲ್ಲವನಾಗಿದ್ದ. ಆದುದರಿಂದಲೇ ಅವರ ಜೀವನವನ್ನು ಚಾಚೂತಪ್ಪದೆ ಚಿತ್ರಿಸಿದ್ದಾನೆ.

ಭಾರತದಲ್ಲಿಯ ಒಳಿತನ್ನಾಗಲಿ, ಕೆಟ್ಟದ್ದನ್ನಾಗಲಿ, ಹೇಳುವಾಗ ಆತನಿಗೆ ಭಿಡೆ ಭಾರ ಎಂಬುದೇ ಇಲ್ಲ, ಇದ್ದುದನ್ನು ಇದ್ದಂತೆ ಹೇಳುವದೇ ಆತನ ಗುರಿಯಾಗಿತ್ತು. ಅದನ್ನು ತೋರ್ಪಡಿಸುವಲ್ಲಿ ಆತ ನಿಸ್ಸೀಮನಾಗಿದ್ದ.

ರಿಚರ್ಡ್ ಗಾರೆಟ್ಟ ಎಂಬುವವರು ತನ್ನ 'ಡಿಕ್ಷನರಿ ಆಫ್ ನ್ಯಾಶನಲ್ ಬಿಬ್ಲಿಯೋಗ್ರಫಿ' ಎಂಬ ಪುಸ್ತಕದಲ್ಲಿ ಟೇಲರನ ಸಾಹಿತ್ಯ ಕೃತಿಗಳ ಬಗ್ಗೆ ಹೀಗೆ ಹೇಳಿದ್ದಾರೆ

''ಅವನ ಎಲ್ಲ ಪುಸ್ತಕಗಳೂ ಅದ್ಭುತವಾಗಿವೆ. ಅವುಗಳಲ್ಲಿ ಸುಂದರವಾದ ಪಾತ್ರ ಚಿತ್ರಣ, ಸುಂದರವಾದ ಘಟನೆಗಳು, ಭಾರತೀಯ ಜೀವನದ ಪದರು ಪದರುಗಳು, ಹವ್ಯಾಸಗಳು, ವಿಚಾರಗಳು ಮೂರ್ತರೂಪಗೊಂಡಿವೆ.'

ಆಡಳಿತಗಾರನಾಗಿ ಟೇಲರನಲ್ಲಿ ಎಷ್ಟೊಂದು ಮೆಚ್ಚತಕ್ಕ ಗುಣಗಳಿವೆಯೋ ಅವೆಲ್ಲವುಗಳನ್ನು ನಾವು ಅವನ ಸಾಹಿತ್ಯ ಕೃತಿಗಳಲ್ಲೂ ಕಾಣಬಲ್ಲೆವು. ಸಾಮಾಜಿಕ ಕೆಡಕುಗಳಾದ ಥಗ್ಗತನ, ಸತಿ-ಪದ್ಧತಿ, ಬಾಲ-ವಿವಾಹ, ಬಾಲ ವಿಧವಾ ಪದ್ಧತಿ ಮೊದಲಾದವುಗಳಲ್ಲಿರುವ ಕ್ರೌರ್ಯ, ಮೌಢ್ಯಗಳನ್ನು ತೆಗೆದು ಹಾಕಿ ಸಾಮಾಜಿಕ ಸುಧಾರಣೆ ಮಾಡುವ ಸ್ಪಷ್ಟ ಗುರಿ ಅವನಲ್ಲಿತ್ತು. ಧರ್ಮದ ಹೆಸರಿನಲ್ಲಿಯ ದೌರ್ಜನ್ಯ ಅಮಾನವೀಯತೆಯನ್ನು ಬಹಿರಂಗಪಡಿಸಿ, ಸುಧಾರಿಸುವ ಧ್ಯೇಯವನ್ನು ಎಂದಿಗೂ ಬಿಟ್ಟುಕೊಡಲಿಲ್ಲ. ಎರಡನೆಯದಾಗಿ ತಾನೊಬ್ಬ ಭಾರತೀಯನೆಂದೇ ಆತ ಪರಿಗಣಿಸಿದ್ದರಿಂದ ಎಲ್ಲದರಲ್ಲೂ ಸಹಾನುಭೂತಿಯನ್ನು ತೋರಿಸಿದ್ದಾನೆ. ಮೂರನೆಯದಾಗಿ ತನ್ನ ಕೃತಿಗಳ ಮುಖಾಂತರ ವಿಭಿನ್ನ ಧರ್ಮ, ಸಂಸ್ಕೃತಿ, ನಾಗರಿಕತೆಯಲ್ಲೂ ಶಾಂತಿ, ಸಾಮರಸ್ಯ, ಸಹಬಾಳ್ವೆ ತರಲು ಪ್ರಯತ್ನಿಸಿದ್ದಾನೆ. ಆತನಿಗೆ ಪೂರ್ವವು ಪಶ್ಚಿಮದಷ್ಟೇ ಪ್ರೀತಿಯದಾಗಿತ್ತು. ಆದ್ದರಿಂದ ಪೂರ್ವ-ಪಶ್ಚಿಮಗಳ ಸಂಗಮಕ್ಕಾಗಿ ಕಾರ್ಯ ಮಾಡಿದ. ಆದ್ದರಿಂದ ಪೂರ್ವ-ಪಶ್ಚಿಮಗಳ ವ್ಯಕ್ತಿಗಳ ವಿವಾಹವನ್ನೂ ಕಥೆಗಳಲ್ಲಿ ಹೆಣೆದ. ಇಂಥ ಜಾಗತಿಕ ಐಕ್ಯತೆಯ ನಂಬುಗೆ ಅವನದಾಗಿತ್ತು. ಆತನ ಆಸೆ ಆಕಾಂಕ್ಷೆ, ವಿಚಾರಗಳೆಲ್ಲ ಅವನ ಕೃತಿಗಳಲ್ಲಿ ಸುಂದರವಾಗಿ ಚಿತ್ರಣಗೊಂಡಿವೆ.

ಭಾರತವನ್ನಾಳಿದ ಜನಾಂಗದವನಾಗಿದ್ದರೂ ಆತನಲ್ಲಿ ಜನಾಂಗೀಯ ದ್ವೇಷವೆಂಬುದು ಇರಲಿಲ್ಲ. ಬ್ರಿಟಿಷರ ದರ್ಪ, ದೌರ್ಜನ್ಯ ಅವನಲ್ಲಿ ಎಳ್ಳಷ್ಟು ಕಾಣ ಸಿಗುವುದಿಲ್ಲ. ಆತ ಎಲ್ಲರನ್ನೂ ಸಮಾನ ದೃಷ್ಟಿಕೋನದಿಂದ ಕಂಡದ್ದೇ ಗೋಚರವಾಗು ವದು. ನಿಜವಾಗಿಯೂ ಆತ ಜಗದ ನಾಗರಿಕನಾಗಿದ್ದ. ಅವನಲ್ಲಿ ಪೂರ್ವ ಪಶ್ಚಿಮಗಳ ಅಪೂರ್ವ ಸಂಗಮವಾಗಿತ್ತು. ಆತ ಇಂಗ್ಲಿಷ್ ಹಾಗೂ ಭಾರತದ ಪರಂಪರೆಗೆ ಬದ್ಧನಾಗಿದ್ದ. ಸತ್ಯ ಸಂಧನಾಗಿದ್ದ. ಅವನ ವಿಶಾಲ ದೃಷ್ಟಿಕೋನ, ಸಹೃದಯತೆಗಳಿಗೆಲ್ಲ ಪ್ರೇಮ, ಮಾನವೀಯತೆಗಳೇ ಮೂಲ ಬೇರುಗಳಾಗಿದ್ದವು. ಸರಿಯಾದ ಜ್ಞಾನ ವಿದ್ದುದರಿಂದಲೇ ಅವನಲ್ಲಿ ದ್ವೇಷ, ಅಸೂಯೆ, ಮತ್ಸರಗಳು ಹರಿದು ಬಂದಿರಲಿಲ್ಲ. ಹೀಗಾಗಿ, ಭಾರತವನ್ನು ನಿಧಾನವಾಗಿ ಸಂಪೂರ್ಣ ನೋಡಿ ಕೃತಿ ರಚಿಸಿದ ಏಕಮೇವಾ ದ್ವಿತೀಯ ವ್ಯಕ್ತಿ ಆತನಾಗಿದ್ದಾನೆ.

ಇಸ್ಮಾಯಿಲ್ ಎಂಬ ಥಗ್ಗನು ಸಿರಿವಂತನೊಬ್ಬನನ್ನು ಕೊಂದು ಆ ಕುಟುಂಬದಲ್ಲಿಯ ಚಿಕ್ಕ ಹುಡುಗನನ್ನು ಅಪಹರಿಸಿಕೊಂಡು ಹೋಗಿ ಅವನನ್ನು ತನ್ನ ದತ್ತಕ ಮಗನನ್ನಾಗಿ ಬೆಳೆಸಿದನು. ಆ ಹುಡುಗನಿಗೆ ಅಮೀರ ಅಲಿ ಎಂದು ನಾಮಕರಣ ಮಾಡಿ ಅವನಿಗೆ ಥಗ್ಗನಾಗಲು ಬೇಕಾದ ಎಲ್ಲ ಬಗೆಯ ಶಿಕ್ಷಣ ಕೊಟ್ಟನು. ಶೀಘ್ರದಲ್ಲಿಯೇ ಅಮೀರ ಅಲಿಗೆ ಧಾರ್ಮಿಕ ವಿಧಿ-ವಿಧಾನಗಳನ್ನು ಮಾಡಲು ಹಚ್ಚಿ ಕರವಸ್ತ್ರದಿಂದ ಕುತ್ತಿಗೆಗೆ ಬಿಗಿದು ಕೊಲ್ಲುವ ಕಲೆಯನ್ನು ತಿಳಿಸಿಕೊಟ್ಟನು. ಅಮೀರ ಅಲಿ ನೋಡಲು ಸುಂದರನಾಗಿದ್ದು ತಾರುಣ್ಯದ ಶಕ್ತಿ, ಉತ್ಸಾಹ ಹೊಂದಿ ಕೊಲೆಗಡುಕ ವೃತ್ತಿಗೆ ಇಳಿದನು. ಅವನ ಒಂದೊಂದು ಕೊಲೆಯ ವರ್ಣನೆಯನ್ನು ಓದಿದವರಿಗೆ ಮೈಯಲ್ಲಿ ನಡುಕ ಹುಟ್ಟಿ ಬಿಡುವದು. ತಮ್ಮ ಆರಾಧ್ಯ ದೇವತೆಯಾದ ಕಾಳಿಯ ಮುಂದೆ ಪಣತೊಟ್ಟು ವೃತ್ತಿಯಂತೆ ಬಾಳಿ, ಏಳು ನೂರಕ್ಕೂ ಹೆಚ್ಚು ಜನರ ಕೊಲೆಗೈದು ಯಾರಿಗೂ ತಾನು ಕೊಲೆ ಪಾತಕಿ ಎಂದು ತೋರಿಸಿಕೊಡದೆ ಬಾಳುತ್ತಲಿದ್ದಾಗ ಪೋಲೀಸರ ಕೈಗೆ ಸಿಕ್ಕು ಬಿದ್ದ. ಪಿಂಢಾರಿಗಳ ಮುಖಂಡನಾದ ಚೀತೂನ ಜೊತೆ ಸೇರಿ ದರೋಡೆ, ಲೂಟಿ ಮೊದಲಾದ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿದ್ದ.

ಇಸ್ಮಾಯಿಲ್‌ನ ಹೆಂಡಿತಿಗಾಗಲೀ, ಸ್ವತಃ ಆತನ ಹೆಂಡತಿಗಾಗಲಿ ತನ್ನ ಗಂಡ ಕೊಲೆ ಪಾತಕಿ ಎಂಬುದೇ ಗೊತ್ತಾಗಿರಲಿಲ್ಲ. ಯಾವಾಗ ಇವರಿಬ್ಬರೂ ಥಗ್ಗರಾಗಿದ್ದು ನೂರಾರು ಕೊಲೆ, ಖೂನಿ ಮಾಡಿದ್ದಾರೆಂದು ತಿಳಿದು ಬಂತೋ ಆಗ ಅವರಿಬ್ಬರೂ ಆಘಾತಕ್ಕೊಳಗಾಗಿ ಪ್ರಾಣ ಬಿಟ್ಟರು. ಜಲೋನದ ರಾಜನು ತನ್ನ ಮಿತ್ರನನ್ನು ಇಸ್ಮಾಯಿಲ್‌ನೇ ಕೊಂದಿದ್ದಾನೆಂದು ತಿಳಿದು ಬರಲು ಅವನನ್ನು ಆನೆಯ ಕಾಲಿನಿಂದ ತುಳಿಸಿ ಕೊಲ್ಲಿಸಿದನು. ಅಲ್ಲದೆ ಅಮೀರ ಅಲಿಯನ್ನು ಘೋರ ಶಿಕ್ಷೆಗೆ ಗುರಿಪಡಿಸಿ ಸೆರೆಮನೆಯಲ್ಲಿಟ್ಟನು. ಸೆರೆಮನೆಯ ಶಿಕ್ಷೆಯನ್ನು ಅನುಭವಿಸಿ ಹೊರಬಂದವನೇ ಮತ್ತೆ ತನ್ನ ವೃತ್ತಿಯನ್ನು ಪುನರಾರಂಭಿಸಿ ಕೊನೆಗೊಮ್ಮೆ ಬ್ರಿಟಿಷ ಪೋಲೀಸರ ಕೈಗೆ ಸಿಕ್ಕುಬಿದ್ದ. ಜೀವದಾನ ಮಾಡುವದಾಗಿ ಆಶ್ವಾಸನೆ ಪಡೆದ ಬಳಿಕ ತಾನು ಎಷ್ಟೊಂದು ಜನರನ್ನು ಎಲ್ಲಿ ಹೇಗೆ ಕೊಂದು ಹಾಕಿದೆನೆಂಬುದನ್ನು ವಿವರಿಸಿ ಹೇಳಿದ. ಥಗ್ಗನಾಗಿ, ಪಿಂಢಾರಿಯಾಗಿ ಮಾಡಿದ ಹೀನಕೃತ್ಯಗಳನ್ನು ಸ್ಮರಿಸಿಕೊಂಡು ತನ್ನ ಕೊಲೆಗಡಕ ವೃತ್ತಿಯ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಪೋಲೀಸರ ಇಲಾಖೆಗೆ ಕೊಟ್ಟ. ಅದೆಲ್ಲದರ ನಿಜ ನಿವೇದನೆಯೇ ಘೋರ ಸ್ವರೂಪ ತಾಳಿ ರೋಮಾಂಚಕ, ಭಯಾನಕ ಕಾದಂಬರಿಯಾಗಿ ಮೂರ್ತಸ್ವರೂಪಗೊಂಡಿತು ಮತ್ತು ಅದುವೆ ಕಾದಂಬರಿಯಲ್ಲಿಯ ಐತಿಹಾಸಿಕ ಪಾತ್ರಗಳ ಮರುಸೃಷ್ಟಿ ಮಾಡಿತು. ಹೀಗಾಗಿ ಈ ಕೃತಿಗೆ ಐತಿಹಾಸಿಕ ವಸ್ತುವಿನ ಹಿನ್ನೆಲೆ, ಜೀವಾಳ ಬಂದಿದೆ. ಇಸ್ಮಾಯಿಲ್,ಅಮೀರ ಅಲಿ ಸರ್ಫರಾಜ ಖಾನ, ಪೀರ ಖಾನ, ಗಣೇಶ ಹಾಗೂ ಬದ್ರಿನಾಥರಂತಹ ವ್ಯಕ್ತಿಗಳು ದೇಶದ ನಾನಾ ಕಡೆಗಳಲ್ಲಿದ್ದು ಗುಪ್ತವಾಗಿ ಕಾರ್ಯ ಮಾಡುತ್ತಿದ್ದರು. ಚೀತೂ ಮತ್ತು ಗಫರಖಾನರಂಥ ಪಿಂಢಾರಿಗಳು

ಮರಾಠರ ರಾಜ್ಯದಲ್ಲಿ ಪಸರಿಸಿದ್ದರು. ಥಗ್ಗರೊಡನೆ ಹೋಲಿಸಿದಾಗ ಪಿಂಢಾರಿಗಳು ಹೆಚ್ಚು ನಿರ್ದಯರೂ, ಕ್ರೂರರೂ , ವಿಧ್ವಂಸಕರೂ ಆಗಿದ್ದರು. ಒಟ್ಟಾರೆ ಥಗ್ಗರು ಹಾಗೂ ಪಿಂಢಾರಿಗಳಿಬ್ಬರೂ ಸೇರಿಕೊಂಡು ಭಾರತವನ್ನು ಅತ್ಯಂತ ಅನಾಗರಿಕ ದೇಶವೆಂದು ತೋರಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದನ್ನು ಓದಿದ ನಾಗರಿಕರಾದ ಬ್ರಿಟಿಷರಲ್ಲಿ ಭಾರತದ ಬಗ್ಗೆ ಅಸಹ್ಯಭಾವನೆಗಳನ್ನು ಉಂಟು ಮಾಡಿತು.

ಥಗ್ ವೃತ್ತಿಯೇ ಕಾದಂಬರಿಯ ಜೀವಾಳವಾಗಿರುವದರಿಂದ ಭಾರತದಲ್ಲಿ ಅದರ ಹುಟ್ಟು ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳುವದು ಅವಶ್ಯಕವೆನಿಸುತ್ತದೆ.

ಥಗ್ಗ ವೃತ್ತಿ ಪ್ರವೃತ್ತಿಯ ಮೂಲದ ಬಗ್ಗೆ ಬಹಳಷ್ಟು ಗೊತ್ತಾಗುವುದಿಲ್ಲ. ಕೆಲವು ಸಂಶೋಧಕರ ಪ್ರಕಾರ ಇದು ಮಹಮ್ಮದೀಯ ಪ್ರದೇಶಗಳಿಂದ ಭಾರತಕ್ಕೆ ಬಂದುದಾಗಿರಬಹುದಾಗಿದೆ. ಆದರೆ ಹಿಂದುಗಳು ಇದಕ್ಕೊಂದು ದೈವೀ ಮೂಲವಿದೆಯೆಂದು ಹೇಳುತ್ತಾರೆ. ಥಗ್ಗರ ನಿರ್ನಾಮ ಮಾಡುವ ಕಾರ್ಯಕ್ಕಣಿಯಾದ ಕರ್ನಲ್ ಸ್ಲೀಮನ್‌ಎನ್ನುವವರ ಪ್ರಕಾರ ಮುಸಲ್ಮಾನ ಸಂತನೊಬ್ಬ ಇದರ ಜನಕ ಎಂಬದಾಗಿದೆ. ಐದು ಶತಮಾನಗಳವರೆಗೆ ಅಲ್ಲಲ್ಲಿ ಪಸರಿಸಿದ್ದ ಥಗ್ಗರನ್ನು ಅಕ್ಬರ ರಾಜನು ಹುಡುಕಿಸಿ ತೆಗೆದು ಅವರಿಗೆ ತಕ್ಕ ಶಿಕ್ಷೆಯನ್ನು ಕೊಟ್ಟಿದ್ದನು. ಇಸ್ಮಾಯಿಲ್‌ನ ಮುಖಾಂತರ ಥಗ್ಗರ ಮೂಲದ ಬಗ್ಗೆ ಗೊತ್ತಾಗುತ್ತದೆ.

''ಇದು ಎಷ್ಟೊಂದು ಪುರಾತನವಾದುದೆಂಬುದರ ಬಗ್ಗೆ, ದೇವತೆಯ ಆಜ್ಞಾನುಸಾರ ನಾವು ನಡೆದುಕೊಳ್ಳುತ್ತೇವೆಂಬುದರ ಬಗ್ಗೆ ನಿಮಗೆ ವಿವರಿಸಿ ಹೇಳುವೆ. ಸೃಷ್ಟಿಕರ್ತನಿಂದಲೇ ಅನಾದಿಕಾಲದ ಹಿಂದೆ ರಕ್ಷಕ ಕುಲದೇವತೆ ಹಾಗೂ ಸಂಹಾರ ಕುಲತೇವತೆಗಳ ಉತ್ಪತ್ತಿಯಾಯಿತು. ಹೀಗಾಗಿ ಅವರಿಬ್ಬರಲ್ಲಿ ಎಂದೋ ಹೋರಾಟ ಆರಂಭವಾಗಿ ಬಿಟ್ಟಿತು. ಸೃಜನಾತ್ಮಕ ರಕ್ಷಕ ದೇವತೆ ಎಷ್ಟೊಂದು ವೇಗದಿಂದ ತನ್ನ ಕಾರ್ಯ ಮಾಡುತ್ತಿತ್ತೊ ಅಷ್ಟು ವೇಗದಲ್ಲಿ ಸಂಹಾರಕ ದೇವತೆಗೆ ಕಾರ್ಯ ನಿರ್ವಹಿಸಲಾಗಲಿಲ್ಲ. ಆದರೆ ದುಷ್ಟ ಪ್ರವೃತ್ತಿಯ ಅನುಷ್ಠಾನ ಮಾತ್ರ ಕಡಿಮೆ ಆಗಲಿಲ್ಲ. ಆದರೆ ಕಾಳಿ ಅಥವಾ ಭವಾನಿ ರೂಪ ಹೊಂದಿದ ಮೂರ್ತಿ ನಿರ್ಮಿಸಿದಾಗ ಅವಳಿಗೆ ಅನೇಕರು ಭಕ್ತರಾದರು. ಅಂಥ ಭಕ್ತರಿಗೆ ದೇವಿಯೇ ಥಗ್ಗರೆಂದು ನಾಮಕರಣ ಮಾಡಿದಳು ; ಅವಳಿಂದಲೇ ನಮಗೆ ನಮ್ಮ ವಿದ್ಯೆ ದೊರೆಯಿತು. ಅವಳ ಆಜ್ಞಾನುಸಾರ ಬಾಳುವ ನಮಗೆ ಕೊಂದವರಿಂದ ಧನಕನಕಾದಿಗಳು ಸಿಗಹತ್ತಿದವು.

ಹಿಂದೂ ಪುರಾಣಗಳಲ್ಲಿ ಸೃಷ್ಟಿಕರ್ತನು ಕತ್ತಲೆ, ಬೆಳಕನ್ನು ನಿರ್ಮಿಸಿದಂತೆ ದುಷ್ಟರ, ಶಿಷ್ಟರ ನಿರ್ಮಾಣವನ್ನು ಮಾಡಿದನು. ದುಷ್ಟ ಜನರು ಮಹಾಕಾಳಿಯ ಭಕ್ತರಾಗಿ ಶಿಷ್ಟರೊಡನೆ ಹೊಡೆದಾಡಹತ್ತಿದರು. ಇಂಥ ಈ ಜನರೆಲ್ಲ ನಾನಾ ಬಗೆಯ ಮೂಡನಂಭಿಕೆಗಳನ್ನಿರಿಸಿಕೊಂಡಿದ್ದರು. ಹೀಗಾಗಿ ಮೂಢನಂಬಿಕೆಗಳಿಂದಲೇ ಥಗ್ ವೃತ್ತಿ ಹುಟ್ಟಿಕೊಂಡಿದೆ.

ನಿರ್ದಯತೆಯಿಂದ ಮಾನವರ ವಿರುದ್ಧ ಸಾಗುವ ಶಪಥ ಮಾಡಬೇಕಾಯಿತು. ಅದನ್ನು ಒಬ್ಬರು ಅಂದು ತೋರಿಸಿದಂತೆ ನಾನೂ ಉಚ್ಚರಿಸಿದೆ. ಆಗ ನನ್ನ ಎಡಕೈಯನ್ನು ಆಕಾಶದತ್ತ ಮೇಲೆತ್ತಿದೆ. ದೇವಿಯ ಸೇವೆಗೆ ನನ್ನನ್ನು ನಾನು ಸಮರ್ಪಿಸಿಕೊಂಡಿರುವದಾಗಿ ವಚನವಿತ್ತೆ. ಅದೇ ಪ್ರಮಾಣ ವಚನವನ್ನು ಪವಿತ್ರ ಕುರಾನದ ಮೇಲೆ ಕೈಯಿಟ್ಟು ಪುನರುಚ್ಚರಿಸಿದೆ. ಅದಾದ ಬಳಿಕ ನನಗೆ ಬೆಲ್ಲ ಅಥವಾ ಸಕ್ಕರೆಯ ಕರಣೆಯೊಂದನ್ನು ಕೊಟ್ಟು ತಿನ್ನಲು ಹೇಳಿದರು. ಹೀಗೆ ಧಾರ್ಮಿಕ ವಿಧಿ ವಿಧಾನಗಳು ಕೊನೆಗೊಂಡವು.''

ಇದಾದ ಬಳಿಕ ಇನ್ನಿತರ ಧಾರ್ಮಿಕ ಕೆಲಸಗಳು ಸಾಗಿದವು. ''ರೂಪಸಿಂಗ ಎನ್ನುವ ನನ್ನ ಗುರು ನನ್ನ ಹತ್ತಿರ ನಿಂತು ಕೆಲವು ಮಂತ್ರ ಪಠಣ ಮಾಡಿದ. ನಾಲ್ಕು ದಿನಗಳ ವರೆಗೆ ನಾನು ಮಾಂಸ ಭಕ್ಷಣ ಮಾಡದೆ ಹಾಲನ್ನು ಕುಡಿದುಕೊಂಡಿದ್ದೆ. ಗುದ್ದಲಿಗೆ ಅನೇಕ ಬಗೆಯ ಬಲಿ ಕೊಟ್ಟರು.ಎಲ್ಲಶಕುನಗಳನ್ನು ತಿಳಿದುಕೊಂಡರು. ... ಐದನೆಯ ದಿನ ಮುಂಜಾನೆ ನನ್ನ ಕೈಯಲ್ಲಿ ಕರವಸ್ತ್ರ ವಸ್ತ್ರವನ್ನಿಟ್ಟರು. ಸ್ನಾನ ಮಾಡಿದ ಬಳಿಕ ಸುವಾಸನೆಯ ಎಣ್ಣೆಯನ್ನು ಹಚ್ಚಿದರು. ಆ ಬಳಿಕ ಭವಾನಿಯ ಭಕ್ತನಾದುದರ ಸಂಕೇತವಾಗಿ ಹಣೆಗೆ ಕುಂಕುಮ, ತಿಲಕ ಹಚ್ಚಿದರು. ಆಗ ನಾನು 'ಭತೋಟ ' ಆದೆ ಎಂದು ಘೋಷಿಸಿದರು.''

ಇಷ್ಟಕ್ಕೆ ಧಾರ್ಮಿಕ ವಿಧಾನಗಳು ಮುಗಿಯಲಿಲ್ಲ. ಮೊಟ್ಟ ಮೊದಲನೆಯ ವ್ಯಕ್ತಿಯನ್ನು ಕೊಂದ ಬಳಿಕ (ಅದಕ್ಕೆ ಟುಪಾಸಿಎನ್ನುವರು) ಬೆಲ್ಲ ತಿನ್ನಿಸಿ ನಾನು ಆ ವೃತ್ತಿಗೆ ಹೊಸ ವ್ಯಕ್ತಿಯಾಗಿ ಸೇರಿಕೊಂಡು ಎಲ್ಲರಿಗೂ ಸರಿಸಮಾನನಾದೆ ಎಂದರು. ಅದರ ವರ್ಣನೆ ಹೀಗಿದೆ –

''ಇಸ್ಮಾಯಿಲನು ತನ್ನ ಕೈಯಲ್ಲಿ ನೀರು ಹಾಕಿಕೊಂಡು ಗುದ್ದಲಿಯ ಮೇಲೆ, ತೆಗ್ಗಿನ ಮೇಲೆ ಸಿಂಪಡಿಸಿದನು. ಆಮೇಲೆ ಸಕ್ಕರೆಯನ್ನು ಎಲ್ಲರಿಗೂ ಕೊಟ್ಟಾಗ ಎಲ್ಲರೂ ಮೌನವಾಗಿ ತಿಂದರು. ಆ ಬಳಿಕ ನೀರು ಕುಡಿದರು. ನಂತರ ಸಕ್ಕರೆಯನ್ನು ಉಳಿದ ವೃತ್ತಿ ಬಾಂಧವರಿಗೆ ಹಂಚಿದರು. ಅವರೂ ಸಹ ಮೌನವಾಗಿ ಗೌರವ ತೋರಿ ತಿಂದರು.''

ಹೆದ್ದಾರಿಗಳಲ್ಲಿ ಹೆಚ್ಚಾಗಿ ಇರುವ ಇವರೆಲ್ಲ ಪದ್ಧತಿಗನುಸಾರವಾಗಿ ಪ್ರತಿಯೊಬ್ಬರೂ ತಮ್ಮ ವಿಹಿತ ಕರ್ತವ ಮಾಡಬೇಕಾಗುತ್ತಿತ್ತು. ಅವರಲ್ಲಿ ಕೆಲವರಿಗೆ ಸೋಥಾಯಿ ಎಂತಲೂ, ಕೆಲವರಿಗೆ 'ಲಘುಈ ಎಂತಲೂ ಉಳಿದವರು 'ಭತೋಟ' ಎಂತಲೂ ಕಾರ್ಯ ಮಾಡಬೇಕಾಗುತ್ತಿತ್ತು. ಸೋಥಾಯಿಗಳ ಕೆಲಸವೇನೆಂದರೆ ಸಿರಿವಂತರಾದ ಸಂಚಾರಿ ಜನರನ್ನು ಮೋಹದಲ್ಲಿ ಕೆಡಹುವದು. ಅದಕ್ಕಾಗಿ ಅವರು ಮಿತ್ರರಂತೆ ವರ್ತಿಸಿ ಅವರನ್ನು ತಮ್ಮ ವಿಶ್ವಾಸದಲ್ಲಿ ತಂದುಕೊಳ್ಳಬೇಕು. ಅವರ ಬಗ್ಗೆ ಯಾರಿಗೂ ಎಂದಿಗೂ ಯಾವುದೇ ಬಗೆಯ ಸಂಶಯವೇ ಬರುತ್ತಿರಲಿಲ್ಲ. ಏಕೆಂದರೆ ಅವರು ಉತ್ತಮ ಬಟ್ಟೆ ಬರೆ ತೊಟ್ಟುಕೊಂಡು ಮಾತಿನಲ್ಲಿ ಕೃತಿಯಲ್ಲಿ, ವರ್ತನೆಯಲ್ಲಿ

ಅತ್ಯಂತ ಸಭ್ಯರಂತೆ ಇರುತ್ತಿದ್ದರು. ಇನ್ನು ಲಘುಈಗಳ ಕರ್ತವ್ಯ ವೆಂದರೆ ಕೊಂದವರನ್ನು ಹೂಳಿ ಮುಚ್ಚಿ ಬಿಡಲು ತಗ್ಗನ್ನು ತೋಡುವದು. ಕೊಂದವನನ್ನು ಕೂಡಲೇ ಕುಣಿಯಲ್ಲಿ ಹಾಕಿ ಸುತ್ತಲಿನ ಮಣ್ಣು ಹಾಕಿ ಅದನ್ನು ಮುಚ್ಚಿಬಿಡುವದು. ಹೀಗೆ ಮಾಡಿದಾಗ ಕೊಲೆ ಮಾಡಿದವರ ಬಗ್ಗೆ ಯಾರಿಗೂ ಸಂಶಯವೇ ಬರುತ್ತಿರಲಿಲ್ಲ. ಇನ್ನು ಭತೋಟೆಯ ಕೆಲಸ ವೆಂದರೆ ನಿರ್ದಯತೆಯಿಂದ ಕರವಸ್ತ್ರವನ್ನು ವ್ಯಕ್ತಿಯ ಕುತ್ತಿಗೆಗೆ ಹಾಕಿ ಉರಲು ಹಾಕಿ ಕೊಂದು ಬಿಡುವದು. ಆ ಬಳಿಕ ದೋಚಿದ ಸಂಪತ್ತನ್ನೆಲ್ಲ ಅವರವರ ಸ್ಥಾನ - ಮಾನಕ್ಕನುಗುಣವಾಗಿ ಹಂಚುತ್ತಿದ್ದರು. ಇದೆಲ್ಲವನ್ನು ಅತ್ಯಂತ ಗೌಪ್ಯವಾಗಿ ಮಾಡಬೇಕು. ಒಂದು ವೇಳೆ ಅವರು ತೊಟ್ಟ ಪಣ ಮುರಿದರೆ, ಕರ್ತವ್ಯ ಲೋಪವಾದರೆ, ಸರಿಯಾಗಿ ವರ್ತಿಸದಿದ್ದರೆ, ಘೋರ ಶಿಕ್ಷೆ ಅನುಭವಿಸಬೇಕಾಗುತ್ತಿತ್ತು.

ಜಗತ್ತಿನ ನಾನಾ ಕಡೆಗಳಲ್ಲಿ ಭಿನ್ನ ಭಿನ್ನ ಪ್ರಕಾರದ ಘೋರ ಅಪರಾಧಿಗಳು, ಕೊಲೆಗಡುಕರು ಇದ್ದಾರೆ. ಆದರೆ ಅವರು ಥಗ್ಗರಂತಲ್ಲ. ''ಈ ಲೋಕದಲ್ಲಿ ಎಲ್ಲ ದೇಶಗಳಲ್ಲೂ ಕೊಲೆ ಪಾತಕರಿದ್ದಾರೆ. ; ದ್ವೇಷ , ಆಸೆ, ಸೇಡು, ಮತ್ಸರ, ಕೋಪ, ಅಸೂಯೆ, ಭಯ, ಮೊದಲಾದ ಕಾರಣಗಳಿಂದ ಕೊಲೆ ಮಾಡುತ್ತಾರೆ. ಮತ್ತು ಕೊಲೆ ಪಾತಕಿಯ ಜೀವನ ದುಃಖಮಯವಿರುತ್ತದೆಂದೂ ಚಿತ್ರಿಸಿದ್ದಾರೆ....ಅಂಥ ಅನೇಕರ ಬಗ್ಗೆ ನಾವು ಓದಿದ್ದೇವೆ. ಆದರೆ ಈ ಥಗ್ಗರು ಅವರಂತಲ್ಲ. ಥಗ್ಗರ ಹೃದಯದಲ್ಲಿ ಪಶ್ಚಾತ್ತಾಪವಾಗಲಿ, ಮರುಕವಾಗಲಿ ಇರುವುದೇ ಇಲ್ಲ. ''ಏಳುನೂರಕ್ಕೂ ಹೆಚ್ಚು ಜನರನ್ನು ಕೊಂದ ಅಮೀರ ಅಲಿಯು ನನ್ನನ್ನು ಹನ್ನೆರಡು ವರ್ಷ ಜೈಲಿನಲ್ಲಿಡದಿದ್ದರೆ, ನಾನು ಕೊಂದಂಥವರ ಸಂಖ್ಯೆ ಸಾವಿರ ದಾಟುತ್ತಿತ್ತು ಎಂದು ಉತ್ಸಾಹ, ಉನ್ಮತ್ತತೆಯಿಂದ ಹೇಳಲು ಆರಂಭಿಸಿದ. ತನ್ನ ಮೊದಲಿನ ಕೊಲೆಯಿಂದ ಆರಂಭಿಸಿ ಯಾವುದನ್ನೂ ಅತಿ ರಂಜಕತೆ ಮಾಡದೆ ಒಂದೊಂದಾಗಿ ವಿವರಿಸಿದ. ಹಣ, ಆಭರಣಗಳನ್ನು ದೋಚುವ ಉದ್ದೇಶದಿಂದಲೇ ಆತ ಅಷ್ಟೊಂದು ಕೊಲೆ ಮಾಡಿದ್ದು.

ಮೊಟ್ಟ ಮೊದಲ ಕೊಲೆ ಮಾಡುವಾಗ ಆತ ಎಷ್ಟೊಂದು ತವಕದಲ್ಲಿದ್ದ ಎಂಬುದನ್ನು ವಿವರಿಸಿದ.

''ಕೊಲೆ ಮಾಡಲು ಸಂಕೇತ ಸಿಗುವ ದಾರಿ ಕಾಯುತ್ತಲಿದ್ದೆ. ನನ್ನ ಕೈಯಲ್ಲಿ ಕರವಸ್ತ್ರ ಹಿಡಿದುಕೊಂಡು ಕೊಲ್ಲಬೇಕಾದ ವ್ಯಕ್ತಿಯ ಸಮೀಪವೇ ಒಂದು ಫೂಟು ಅಂತರ ದಲ್ಲಿದ್ದೆ.... ಸಾಹುಕಾರನು ರಸ್ತೆಯ ಕಡೆಗೆ ಒಂದೆರಡು ಹೆಜ್ಜೆ ಇಡುತ್ತಲಿದ್ದ. ಸಹಜವಾಗಿಯೇ ನಾನು ಅವನನ್ನು ಹಿಂಬಾಲಿಸಿದೆ.... 'ಜೈ ಕಾಳಿ' ಎಂದು ನನ್ನ ತಂದೆ ಕೂಗಿದ ಅದುವೆ ನನಗೆ ದೊರೆತ ಸಂಕೇತವಾಗಿತ್ತು. ಅವನ ಆಜ್ಞೆ ಪಾಲಿಸಿಬಿಟ್ಟೆ.

ನಿಮಿಷಾರ್ಧದಲ್ಲಿ ನನ್ನ ಕರವಸ್ತ್ರ ಅವನ ಕುತ್ತಿಗೆಯನ್ನು ಬಿಗಿದು ಕೊಂದು ಬಿಟ್ಟಿತ್ತು..... ನನ್ನಲ್ಲಿ ಅತಿ ಮಾನುಷ ಶಕ್ತಿ ಬಂದಂತಾಯಿತು. ಆತ ಕುತ್ತಿಗೆಯ ಹತ್ತಿರ

ತನ್ನ ಬೆರಳು ತರುವದರಲ್ಲಿ ನೆಲಕ್ಕುರುಳಿದ. ಆ ಹೆಣದ ಜೊತೆ ನಾನು ಮೊಳಕಾಲೂರಿದೆ. ಬಿಗಿ ಹಿಡಿತದಿಂದ ಕೈ ನೋಯಿಸಿತು... ಆತ ಸತ್ತು ಬಿದ್ದಾಗ ನನಗೆ ಉದ್ವೇಗದ ಸಂಭ್ರಮವಾಗಿತ್ತು.''

ಈ ರೀತಿ ನಾನು ನೂರಾರು ಇನ್ನಿತರರನ್ನು ಸುಲಭವಾಗಿ ಕೊಲ್ಲಬಲ್ಲೆ, ಇದೆಷ್ಟು ಸರಳ ಕೆಲಸ! ಎಂದೆನಿಸಿತು.''

ಬರ್ಬರವಾದ ಈ ಕಾದಂಬರಿಯಲ್ಲಿ ಸಿರಿವಂತನಾದ ನವಾಬನ ವಿಧವೆಯಾದ ಶರಫನ್ ಎಂಬುವವಳು ಅಮೀರ ಅಲಿಯ ಅಂಗಸೌಷ್ಟವ, ಸೌಂದರ್ಯಕ್ಕೆ ಮಾರು ಹೋಗಿ ಅವನಿಗೆ ಪ್ರೀತಿಸಲು ಬೇಡಿಕೊಂಡಳು. ಅಷ್ಟೇ ಏಕೆ ಮದುವೆಯಾಗೆಂದು ದುಂಬಾಲು ಬಿದ್ದಳು. ಆತ ಠಗ್ಗನಿದ್ದಾನೆಂದು ಗೊತ್ತಾಗಿಯೂ ಹಾಗೆ ಮಾಡಿದಳು. ಅಂಥವಳ ಬಗ್ಗೆ ವಿವರಿಸಿದ್ದಾನೆ.

''ನಾವು ಯಾರೆಂದು ಗೊತ್ತಾಗ ಬಳಿಕ ಅವಳು ಅಂಜಿ ಓಡಿಹೋಗ ಬೇಕಾಗಿತ್ತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ನನ್ನಲ್ಲಿ ಅನುರಾಗ ಹೊಂದಿದಳು. ಅದು ಅವಳ ದುರ್ದೈವವೆಂದೇ ಹೇಳಬೇಕು. ನನ್ನೊಡನೆ ಪ್ರೇಮ, ಸಲ್ಲಾಪ ಸರಿಯಲ್ಲವೆಂಬುಂದು ಅವಳಿಗೆ ತಿಳಿಯಬೇಕಾಗಿತ್ತು.... ಆದರೆ... ಅವಳಲ್ಲಿದ್ದ ಪ್ರೇಮಾತುರತೆ, ನನ್ನ ಬಲೆಯಲ್ಲಿ ಬಿದ್ದು ಅವಳಿಗೆ ಸಾವನ್ನು ತಂದಿತು ...''

ಈ ರೀತಿ ಬರ್ಬರ ಹತ್ಯೆಗೈದ ಅಮೀರ ಅಲಿಯ ಹೃದಯ ಕಲ್ಲಿಗಿಂತಲೂ ಬಿರುಸಾಗಿತ್ತು. ಶರಫನ್ನಳ ಬಗ್ಗೆ ದಯೆ, ಕರುಣೆ ಎಂಬುದೆ ಇರಲಿಲ್ಲ. ಒಂದು ವೇಳೆ ಮದುವೆಯಾಗದಿದ್ದರೆ ನೀವು ಎಂಥ ಕೊಲೆಪಾತಕಿಗಳೆಂಬುದನ್ನು ಸಾರಿ ಹೇಳುವೆ ಎಂದು ಅವಳು ಅಂಜಿಕೆ ಹಾಕಿದ್ದಕ್ಕೆ ಸತ್ತು ಹೋಗಬೇಕಾಯಿತು . ಕೊಂದ ಬಳಿಕ ಅವಳ ಸುಂದರ ಮುಖವನ್ನು ನೋಡಲು ಬಯಸಲಿಲ್ಲ. ಏಕೆಂದರೆ ಅವಳ ಸೌಂದರ್ಯದ ಪ್ರಭಾವ ತನ್ನ ಮೇಲಾಗುವುದು ತನಗೆ ಬೇಕಾಗಿರಲಿಲ್ಲ. ಈ ರೀತಿ ಅಮೀರ ಅಲಿ ಹಾಗೂ ಅವನ ಸಂಗಡಿಗರು ಸ್ತ್ರೀಯ ಬರ್ಬರ ಹತ್ಯೆ ಮಾಡಿ ಮುಗಿಸಿದರು.

ಈ ಕಾದಂಬರಿಯಲ್ಲಿ ಸಬಜಿಖಾನ ಹಾಗೂ ಅವನ ಪ್ರೇಯಸಿಯಾಗಿದ್ದ ದಾಸಿಯ ಕಥೆಯೂ ಬರುತ್ತದೆ. ಸಬಜಿಖಾನನು ಒಂದು ಕಾಲದಲ್ಲಿ ಸುಪ್ರಸಿದ್ಧ ಯೋಧನಾಗಿದ್ದ. ಆದರೆ ಕಾಲಕ್ರಮದಲ್ಲಿ ಭಾಂಗ, ಅಫ್ಘಗಾಂಜಾ ಚಟ ಹೊಂದಿ ಆ ಹೆಸರನ್ನು ಪಡೆದುಕೊಂಡಿದ್ದ. ಆತನ ದಾಸಿ ತರುಣಿ ಪ್ರೇಯಸಿಯಾಗಿದ್ದು ದಿನಾಲು ಅವನಿಗೆ ಬೇಕಾದ ಅಮಲಿನ ಪೇಯ ತಯಾರಿಸಿ ಕೊಡುತ್ತಿದ್ದಳು.ಅದಕ್ಕಾಗಿಯೇ ಆತ ಅವಳನ್ನು ಮೆಚ್ಚಿ ಕೊಂಡಿದ್ದ.ಅವಳ ಹೆಸರು ಕರೀನಾ ಎಂಬುದಾಗಿತ್ತು. ಕರೀನಾಳಂತೆ ಮಾದಕ ಪೇಯ ತಯಾರಿಸುವವರು ಹಿಂದುಸ್ತಾನದ ಹತ್ತು ರಾಜ್ಯಗಳಲ್ಲಿ ಹುಡುಕಿದರೂ ಸಿಗುವುದಿಲ್ಲವೆಂದು ಅವಳ ಗುಣಗಾನ ಮಾಡುತ್ತಿದ್ದ. ಇಂಥ

ಸಬಜಿಖಾನನಿಗೆ ತಾನು ಅಮೀರ ಅಲಿಯ ಕೈಗೆ ಸಿಕ್ಕು ಸಾಯುವೆನೆಂಬುದು ತಿಳಿದಿರಲಿಲ್ಲ. ಯೋಧನಾಗಿ ವೀರತನದಿಂದ ಪರಾಕ್ರಮ ತೋರಿ ಯುದ್ಧ ಭೂಮಿಯಲ್ಲಿ ಮಡಿದಿದ್ದರೆ ಆತನ ಘನತೆ, ಗೌರವಗಳು ಹೆಚ್ಚಾಗುತ್ತಿದ್ದವು. ಆದರೆ ದೈವ ಹಾಗೆ ಬಗೆದಿರಲಿಲ್ಲ. ಥಗ್ಗರ ಜೊತೆಗೆ ತಾನು ಸಂಚರಿಸುತ್ತಿರುವ ಕಲ್ಪನೆಯೇ ಆತನಿಗೆ ಇರದಾಗ ಅಮೀರ ಅಲಿಯು 'ಫಜಿಲ್ ಖಾನ ಹುಕ್ಕಾ ತಾ ' ಎಂದು ಅಂದು ಸಂಕೇತ ನೀಡಿದ. ಅವರ ಭಾಷೆಯ ಅರ್ಥ ಸಬಲಖಾನಿಗೆ ಆಗಲೇ ಇಲ್ಲ. ಕಣ್ಣು ಮುಚ್ಚಿ ಕಣ್ಣು ತೆರೆಯುವದರೊಳಗೆ ಕರವಸ್ತ್ರವೊಂದು ಅವನ ಕುತ್ತಿಗೆಗೆ ಉರುಲು ಹಾಕಿತ್ತು. ಒಬ್ಬಾತ ಸಬಜಿಖಾನನ ಕೈಗಳನ್ನು ಗಟ್ಟಿಯಾಗಿ ಹಿಡಿದಿದ್ದ. ಇಸ್ಮಾಯಿಲ ತನ್ನ ಸಕಲ ಸಾಮರ್ಥ್ಯದಿಂದ ಅವನ ಕಾಲುಗಳನ್ನು ಎಳೆದ. ಕೇಳುವುದೇನು , ಸಬಜಿಖಾನನ ಹೆಣ ಉರುಳಿ ಬಿತ್ತು. ಗಾಢನಿದ್ರೆಯಲ್ಲಿ ಗೊರಕೆ – ಹೊಡೆಯುವಂತೆ ಗೊರಕೆ ಹೊಡೆಯಿತು. ಅಮೀರ ಅಲಿ ಅವನ ಕುತ್ತಿಗೆಯನ್ನು ಎಷ್ಟೊಂದು ಜೋರಾಗಿ ಬಿಗಿದಿದ್ದನೆಂದರೆ ಅಷ್ಟು ಜೋರಾಗಿ ಒಂದು ಕುದುರೆಯ ಕುತ್ತಿಗೆಯನ್ನು ಬಿಗಿದರೂ ಅದು ಸಾಯುತ್ತಿತ್ತು. ಅಷ್ಟು ಜೋರಾಗಿ ಬಿಗಿದಿದ್ದ. ನೂರಾರು ಯೋಧರನ್ನು ಕೊಂದಂಥವನು ಕ್ಷಣ ಮಾತ್ರದಲ್ಲಿ ನೆಲಕ್ಕೆ ಉರುಳಿದ್ದ. ತನ್ನ ಪ್ರಿಯಕರ ಸತ್ತು ನೆಲಕ್ಕುರುಳಿದ್ದನ್ನು ನೋಡಿದ ಅವನ ಪ್ರೇಯಸಿ ಕರೀನಾ ,ಚಿಟ್ಟನೇ ಚೀರಿದಳು. ಬಿಕ್ಕಿ ಬಿಕ್ಕಿ ಅಳತೊಡಗಿದಳು. ಚಲ್ಲಾಪಿಲ್ಲಿಯಾದ ತಲೆಗೂದಲಲ್ಲಿ ಕೈಯ್ಯಾಡಿಸಿದಳು. ತನ್ನ ಪ್ರಿಯಕರನ ಶವವನ್ನು ನೋಡುತ್ತ ಭಯಗ್ರಸ್ಥಳಾಗಿ ಕಣ್ಣೀರು ಹರಿಸಿದಳು. ನನಗೆ ಹೆಂಡಿತಿಯಿಲ್ಲ, ಮಕ್ಕಳಿಲ್ಲ, ನೀನೇ ನನಗೆ ಮಡದಿ, ಮಗಳು ಎಂದು ಹೇಳಿ ಅವಳನ್ನು ತನ್ನ ಜೊತೆಗಾರಳನ್ನಾಗಿರಿಸಿಕೊಂಡಿದ್ದ ಸಬಜಿಖಾನ. ಅವನ ಶವವನ್ನು ಮುಟ್ಟಿ – ತಟ್ಟಿ ಗೋಳಿಟ್ಟಳು.

ಥಗ್ಗನಾದ ಸರ್ಫರಾಜಖಾನನು ಅವಳನ್ನು ಎಳೆದುಕೊಂಡು ತಂದು ತನ್ನ ಕುದುರೆಯಮೇಲೆ ಕುಳ್ಳಿರಿಸಿದನು. ಆಗ ಅವಳು ಅವನನ್ನು ಇನ್ನುಳಿದವರನ್ನು ಕೊಲೆಗಡುಕರು ಎಂದು ಬೈದು, ಚೀರಾಡಿದಳು. ಅದನ್ನು ಸಹಿಸದ ಸರಫರಾಜಖಾನನು ಅವಳ ಮುಖಕ್ಕೊಂದು ಬಲವಾದ ಏಟನ್ನು ಕೊಟ್ಟನು. ಮುಖದಿಂದ ರಕ್ತ ಬರತೊಡಗಿತು. ಕಣ್ಣೀರು ಹರಿಸುತ್ತಲೇ ಅವಳು ರಕ್ತವನ್ನು ಒರೆಸಿಕೊಂಡಳು. ''ಕೊಲೆಗಡಕ, ಹೊಡಿಯುವೆಯಾ ? ಹೊಡಿ, ಕೊಲ್ಲು, ದುರುಳ ಕೊಲ್ಲು ಬಡ ಗುಲಾಮಳನ್ನು ಸಾಯಿಸಿಬಿಡು. ಈಗಾಗಲೇ ಗಾಯಗೊಳಿಸಿರುವೆ. ಮತ್ತೊಮ್ಮೆ ಹೊಡೆ, ಸತ್ತು ಹೋಗುವೆ. ಈ ದುಃಖದ ಜೀವನದಿಂದ ಮುಕ್ತಳಾಗುವೆ.... ಕೊಲ್ಲುವೆಯಲ್ಲವೆ?'' ಎಂದು ಅಂದು ಅವನ ಮುಖದ ಮೇಲೆ ಉಗುಳಿದಳು. ಕೊನೆಗೆ ಸರ್ಫರಾಜ ಖಾನನು ತನ್ನ ಕರವಸ್ತ್ರವನ್ನು ಅವಳ ಕೊರಳಿಗೆ ಹಾಕಿದಾಗ ವಿಲಿವಿಲಿ ಒದ್ದಾಡಿ ಪ್ರಾಣ ಬಿಟ್ಟಳು.

ಮತ್ತೊಂದು ಪ್ರಸಂಗ ಅಮೀರ ಅಲಿ ಹಾಗೂ ಅವನ ಸಂಗಡಿಗರು ..... ಸಂಪತ್ತನ್ನು – ಬೆಳ್ಳಿ ಬಂಗಾರ, ನಗ ನಾಣ್ಯಗಳನ್ನು ಸಂರಕ್ಷರ ರಕ್ಷಣೆಯಲ್ಲಿ ಸಾಗಿಸುತ್ತಿದ್ದಾಗ

ಕೊಂದದ್ದು ಆಗಿದೆ. ಅವರೊಡನೆಯೇ ಸಾಗಿದಾಗ ಅಮೀರ ಅಲಿಯು ತಾನು ಪೇಶ್ವೆ ಹಾಗೂ ಹೋಳ್ಕರ ರಾಜರ ಸೇವೆಯಲ್ಲಿರುವುದಾಗಿ ಸುಳ್ಳು ಹೇಳಿದಾಗ ಅವರು ಅವನನ್ನು ನಂಬಿದರು. ಗುಡ್ಡಗಾಡಿನಲ್ಲಿ ಸಂಪತ್ತಿನ ಸಾಗುವಿಕೆ ನಡೆದಾಗ ಅಮೀರ ಅಲಿಯು 'ವಿಳೇದ ಎಲೆ ತರ್ರಿ' ಎಂದು ತನ್ನ ಸಾಂಕೇತಿಕ ಭಾಷೆಯಲ್ಲಿ ನುಡಿದ. ರಾಮಸಿ ಭಾಷೆಯಲ್ಲಿ ಅದರರ್ಥ 'ಅವನನ್ನು ಕೊಲ್ಲಿರಿ' ಎಂದಾಗುತ್ತದೆ. ಕೇಳುವದೇನು ಅನೇಕ ಖಡ್ಗ, ಭರ್ಚಿಗಳು ಸಂಪತ್ತನ್ನು ಸಾಗಿಸುತ್ತಿದ್ದವರ ಶರೀರದಲ್ಲಿ ಸೇರಿಕೊಂಡವು. ಅಮೀರ ಅಲಿಯಂತೂ ತನ್ನ ಪಕ್ಕದಲ್ಲಿದ್ದವನ ತಲೆಯನ್ನು ಖಡ್ಗದಿಂದ ಸೀಳಿ, ಸಂಪತ್ತನ್ನು ಹೊತ್ತುಕೊಂಡ್ಡಿದ ಒಂಟೆಯ ಕಾಲಿಗೆ ಹೊಡದುಬಿಟ್ಟ. ಕೂಡಲೇ ಅದು ಕೆಳಗೆ ಬಿದ್ದು ಒದ್ದಾಡ ಹತ್ತಿತು. ಅಂದಾಜು ಅರವತ್ತು ಸಾವಿರ ರೂಪಾಯಿಗಳ ಧನ-ದೌಲತ್ತನ್ನು ಕೊಳ್ಳೆ ಹೊಡೆದರು. ಈ ರೀತಿಯಲ್ಲಿ ಸಂಪತ್ತು ಸುಲಭವಾಗಿ ಕೈವಶವಾದುದಕ್ಕೆ ಅವರೆಲ್ಲ ದೇವರಿಗೆ ನಮನ ಸಲ್ಲಿಸಿದರು. ಒಂದೇ ದಿನದ ಒಂದೇ ಕ್ಷಣದಲ್ಲಿ ಸಂಪತ್ತಿನ ರಾಶಿ ಸಿಕ್ಕು ಸಿರವಂತರಾದುದಕ್ಕೆ ದೇವರಿಗೆ ವಂದಿಸಿದರು.

ಇನ್ನೊಂದು ಘಟನೆ ಅದರಲ್ಲಿ ಶೇಖನೆಂಬ ಸಿರಿವಂತನೊಬ್ಬ ಆಹುತಿಯಾದುದನ್ನು ಅಮೀರ ಅಲಿ ವಿವರಿಸಿದನು. ಅಮೀರ ಅಲಿ ಒಮ್ಮೆ ಶೇಖನ ಮನೆಯಲ್ಲಿ ತಂಗಿದ್ದಾಗ ಮುಗ್ದ ಶೇಖ ದೊಡ್ಡ ಪ್ರಮಾಣದಲ್ಲಿ ಹಣ ಸಾಗಿಸುವದನ್ನು ಅರಿತುಕೊಂಡ. ತಾನು ಎಲ್ಲ ಬಗೆಯ ಸಹಾಯ, ರಕ್ಷಣೆ ಒದಗಿಸುವುದಾಗಿ ಹೇಳಿ ಶೇಖನಿಗೆ ಸಂಪತ್ತನ್ನು ವ್ಯಾಪಾರಕ್ಕಾಗಿ ಸಾಗಿಸಲು ಹೇಳಿದ. ''ನಿನ್ನೊಡನೆ ಒಂದಿಬ್ಬರು ಆಳುಗಳನ್ನು ಬಿಟ್ಟರೆ ಮಾತ್ಯಾರನ್ನೂ ಕರಕೊಳ್ಳಬೇಡ. ನಾನು ರಕ್ಷಣೆಗೆ ಇರುವಾಗ ಚಿಂತೆ ಏಕೆ ? ' ಎಂದು ಹೇಳಿ ಮರಳು ಮಾಡಿದ. ಪಾಪ, ಆತ 'ನೀನು ಹೇಳಿದಂತೆಯೇ ಮಾಡುವೆ. ಹೆಚ್ಚಿನ ಡಂಭಾಚಾರ ಮಾಡಿದರೆ ನಾನು ವ್ಯಾಪಾರಿಯಾಗಿದ್ದು ಹಣ ಸಾಗಿಸುತ್ತಿರುವುದು ಗೊತ್ತಾಗಬಹುದು' ಎಂದ.

ಕಪಟ, ಮೋಸಗಾರನಾದ ತನ್ನ ಗುಪ್ತ ಬಲೆಯನ್ನು ವಂಚಕ ನಾಗಿ ಅವನ ಮೇಲೆ ಬೀಸಿದ್ದು ಶೇಖನಿಗೆ ಗೊತ್ತಾಗಲೇ ಇಲ್ಲ. ದಾರಿಯಲ್ಲಿ ಕರವಸ್ತ್ರದ ಕೈಚಳಕ ತೋರಿಸಿದ. ಶೇಖ ಪ್ರಾಣ ಕಳೆದುಕೊಂಡು ಬಿದ್ದ. ಹುಲಿಯನ್ನು ಅದರ ಗವಿಯಲ್ಲಿ ಹೊಕ್ಕು ಕೊಂದಂತಾಯ್ತು ಈ ಘಟನೆ.

ಒಮ್ಮೆ ಅಮೀರ ಅಲಿ ಒಬ್ಬ ಹುಡಗನನ್ನು ಹಿಡತಂದು ತನ್ನ ದತ್ತಕ ಪುತ್ರನನ್ನಾಗಿ ಮಾಡಿಕೊಳ್ಳಬಯಸಿದ. ಅದಂತೂ ಭೀಭತ್ಸದ ಭೀಕರ ಘಟನೆಯಾಗಿತ್ತು.

''ಒಮ್ಮೆ ಹಂತಕರಾಗಿ ನಾವೆಲ್ಲ ಹೋದಾಗ ಒಬ್ಬ ಹಿಂದು ಹುಡುಗನನ್ನು ಮಾತ್ರ ಉಳಿಸಿದೆ.... ಅವನನ್ನು ನನ್ನ ಊರಿಗೆ ತಂದು ದತ್ತಕ ಮಗನನ್ನಾಗಿ ಮಾಡಿ ಕೊಂಡು ನಮ್ಮ ವೃತ್ತಿಗೆ ಸೇರಿಸಬೇಕೆಂದು ಬಯಸಿದೆ. ಅವನ ತಾಯಿಯ ಕುತ್ತಿಗೆಗೆ

ಉರಲು ಹಾಕಿದಾಗ ಆ ಅಳುವ ಹುಡುಗನನ್ನು ತಾಯಿಯ ಹೆಣದಿಂದ ಎಳೆದುಕೊಳ್ಳಲಾಗಲಿಲ್ಲ. ಹೆಣವನ್ನಪ್ಪಿಕೊಂಡು ಬಾಲಕ ಕಣ್ಣೀರು ಹರಿಸುತ್ತಿದ್ದ. ನಾನು ಅವನನ್ನು ಹಿಡಿಯ ಹೋದರೆ ನನಗೆ ಹೊಡೆದು ಓದಿಯಲು ಯತ್ನಿಸಿದ. ಆಗ ನನ್ನ ಕೋಪ ನೆತ್ತಿಗೇರಿತು. ಖಡ್ಗವನ್ನು ಹೊರತೆಗೆದು, ನಿನ್ನನ್ನುಕೊಂದು ಬಿಡುವೆ ಎಂದು ಗದರಿದೆ. ಆದರೂ ಆತ ಬೈಯುತ್ತ ನನ್ನೆಡೆಗೆ ಉಗುಳುತ್ತಲಿದ್ದ. ಅವನನನ್ನು ಅನಾಮತ್ತು ಎತ್ತಿ ಹಿಡಿದೆ. ಆದರೂ ಉಪಯೋಗವಾಗಲಿಲ್ಲ. ನನ್ನ ಕಿವಿಯನ್ನು ಬಾಯಲ್ಲಿ ಹಾಕಿಕೊಂಡು ಕಡಿಯತೊಡಗಿದ. ರಕ್ತ ಬಂತು. ಸಿಟ್ಟಿನ ಭರದಲ್ಲಿ ನೋವಿನಲ್ಲಿ ನಾನೇನು ಮಾಡಿದೊನೋ ನನಗೆ ಗೊತ್ತಾಗ್ತಲಿಲ್ಲ.... ಏನಾಯ್ತು ಎಂಬದನ್ನು ಹೇಗೆ ಹೇಳಲಿ ! ನನ್ನ ಜೀವನದಲ್ಲಿ ನಾನು ಮಾಡಿದ ಘೋರ ಸಂಹಾರ ಅದು. ... ನಾನು ಮಾಡಿದೆ ಎನ್ನುವುದಕ್ಕಿಂತ ನನ್ನಲ್ಲಿ ರಾಕ್ಷಸ ಪ್ರವೇಶಿಸಿ ಮಾಡಿದ ಎಂದರೂ ಸರಿ. ....ಪಾಪಿಯಾಗಿ ನಾನು ಆ ಕೃತ್ಯ ಮಾಡಿದೆ.... ನನ್ನ ಕುದುರೆಯನ್ನು ಹಿಡಿದುಕೊಂಡು ನಿಂತವನನ್ನು ಬಿಟ್ಟರೆ ಸಮೀಪದಲ್ಲಿ ಯಾರೂ ಇರಲಿಲ್ಲ. ಭಯ –ಭೀತಿಯಿಂದ ಚಿಟ್ಟನೆ ಚೀರಿದ್ದನ್ನು ಕೇಳಿ ಆತನೂ ಅಂಜಿದ. ನಾನು ಅವನನ್ನು ಶಾಂತಗೊಳಿಸಿದೆ. ಜರ್ಜರಿತವಾದ ಶವವನ್ನು ಅಲ್ಲಿಯೇ ಬೀಳಲು ಬಿಟ್ಟು ಕುದುರೆ ಹತ್ತಿ ನನ್ನ ಗುಂಪಿನೊಡನೆ ಹೊರಟೆ.''

ಕೊರಳಲ್ಲಿಯ ತಾಯತದ ಸಲುವಾಗಿ ನನ್ನ ತಂಗಿಯನ್ನೇ ಗೊತ್ತಾಗದೆ ಕೊಂದ ಘಟನೆಯಂತೂ ಹೃದಯವಿದ್ರಾವಕವಾಗಿದೆ. ತಾಯತದಲ್ಲಿ ವಿಚಿತ್ರ ಶಕ್ತಿ ಇರುತ್ತದೆ ಎಂದು ಕೇಳಿ ತಿಳಿದಿದ್ದೆ. ನನಗೆ ಅದನ್ನು ನೋಡಿದಾಗ ಪಡೆದುಕೊಳ್ಳಬೇಕೆನಿಸಿತು. ಅದು ಕೊರಳಲ್ಲಿ ಇದ್ದರೆ ಯಾವ ಕೇಡೂ ಉಂಟಾಗದು, ಯಾವ ರೋಗವೂ ಬರದು ಎಂಬದನ್ನು ತಿಳಿದು ಅಮೂಲ್ಯವಾದ ಆ ತಾಯತನ್ನು ತೆಗೆದುಕೊಳ್ಳ ಬಯಸಿದೆ. ಸುದೈವದ ಸಂಕೇತವಾದ ಅದನ್ನು ಪಡೆಯಲು ಅದನ್ನು ಕೊರಳಲ್ಲಿ ಹಾಕಿಕೊಂಡವಳ ಕೊರಳಿಗೆ ಕರವಸ್ತ್ರ ಬಿಗಿದೆ. ಆ ತಾಯತವನ್ನು ಕಿತ್ತುಕೊಂಡಾಗ 'ಇದರ ಪ್ರಭಾವ ವಿಚಿತ್ರವಾಗಿದೆಯಲ್ಲ, ಈ ತಾಯತವನ್ನು ನಾನು ಎಲ್ಲಿಯೋ ನೋಡಿದಂತಿದೆಯಲ್ಲ, ಎಲ್ಲಿ ನೋಡಿದ್ದೆನೋ ನೆನಪಾಗುತ್ತಿಲ್ಲವಲ್ಲ' ಎಂದು ಅಂದೆ. ಈಗ ತಾನು ಕೊಂದುದು ತನ್ನ ತಂಗಿಯನ್ನೇ ಎಂದ ತಿಳಿದು ಬಂದಾಗ ದುಃಖ ಉಕ್ಕೇರಿ ಬಂತು. ಒಂದು ತಾಯತದ ಆಸೆಗೆ ಬಿದ್ದು ತಂಗಿಯನ್ನು ಕೊಂದೆನಲ್ಲಾ ಎಂದು ಮರುಗಿದ. ದೈವ ದುರ್ವಿದಲಾಸ.

ಈ ರೀತಿ ಮುಗ್ಧ ಮಾನವರ, ಮಹಿಳೆಯರ ಬರ್ಬರ ಹತ್ಯೆ ಮಾಡಿದ್ದನ್ನು ಕಠೋರ ಹೃದಯದ ಥಗ್ಗರು ಮಾಡಿದ್ದನ್ನು ,ಅವರು ಸತತವಾಗಿ ಮಾನವೀಯತೆಯ ವಿರುದ್ಧವೇ ಸಮರ ಸಾರಿದಂತಿರುವುದನ್ನು ಓದುತ್ತೇವೆ. ಧರ್ಮದ ಹೆಸರಿನಲ್ಲಿ ಪವಿತ್ರ ವೃತ್ತಿಯೆಂದು ಬಗೆದು ಮಾಡಿದ ಕೊಲೆಗಳ ಸರಮಾಲೆಯೇ ಇಲ್ಲಿ ಇದೆ.

ಪಿಂಢಾರಿಗಳು

ಥಗ್ಗರಂತೆ ಪಿಂಢಾರಿಗಳೂ ಬರ್ಬರ, ವಿಧ್ವಂಸಕ ಕಾರ್ಯ ಮಾಡುವವರಾಗಿದ್ದಾರೆ. ಈ ಜನಾಂಗದ ಮೂಲವು ಔರಂಗಜೇಬ ಹಾಗೂ ಮರಾಠರ ಸಂಘರ್ಷ ಸಮಯದಲ್ಲಾಗಿದೆ. ಅವರೆಲ್ಲರೂ ದರೋಡೆ, ಲೂಟಿ ಮಾಡಿ ಕೊಳ್ಳೆ ಹೊಡೆಯುವವರಾಗಿದ್ದರು ಅವರಿಗೆ ವೇತನವೆಂಬುದು ಇರದೆ ಧ್ವಂಸ ಮಾಡಿ, ಸತ್ಯಾನಾಶ ಮಾಡಿ, ಹಾಳು ಮಾಡಿ ದೋಚಿಕೊಂಡದ್ದೆಲ್ಲ ಅವರ ಪಾಲಿಗೆ ಇರುತ್ತಿತ್ತು. ಇವರಿಗೆ ಯಾವುದೇ ಬಗೆಯ ಕಾಯಿದೆ ಕಾನೂನುಗಳ ಬಂಧನವೇ ಇರಲಿಲ್ಲ. ಎಲ್ಲ ಜಾತಿ- ಮತದವರು ಈ ಗುಂಪುಗಳಲ್ಲಿದ್ದು ಅವರನ್ನು ನಿಯಂತ್ರಿಸುವವರೇ ಇಲ್ಲದ್ದರಿಂದ ಅವರು ಮನಬಂದಂತೆ ಧ್ವಂಸ ಮಾಡುತ್ತಿದ್ದರು. ಕೊಲ್ಲು, ಸುಡು ಲೂಟಿ ಮಾಡು, ಹೋಗು ' ಎಂಬುದೇ ಅವರ ಮಂತ್ರವಾಕ್ಯವಾಗಿತ್ತು. ಇಂಥವರಿಂದ ಮರಾಠಾ ರಾಜರು ಲೂಟಿ ಮಾಡಿದ, ದೋಚಿದ ಸಂಪತ್ತಿದನಲ್ಲಿ ಕೆಲಭಾಗ ಪಡೆದುಕೊಳ್ಳುತ್ತಿದ್ದರು. ಇವರಿಗೆ ಧರ್ಮವೆಂಬುದಾಗಲಿ, ನೈತಿಕತೆ ಎಂಬುದಾಗಲಿ, ವರ್ತನೆ ಎಂಬುದಾಗಲಿ ಇರಲಿಲ್ಲ. ಕ್ರೂರ ಕೃತ್ಯಗಳು, ಕೊಲೆ ಸುಲಿಗೆಗಳು ಅವರ ಜೀವನಾಧಾರವಾಗಿದ್ದು ಅದರ ಕೈಯಲ್ಲಿ ಸಿಕ್ಕವರೆಲ್ಲ ಅವರ ಅಮಾನುಷ ಕೃತ್ಯಗಳಿಗೆ ಶರಣಾಗತರಾಗಬೇಕಾಗುತ್ತಿತ್ತು. ಅದು ಬೇಡವಾಗಿದ್ದರೆ ತಮಗೆ ತಾವು ಉರಿಹಚ್ಚಿಕೊಂಡಾಗಲೀ, ಬಾವಿಯಲ್ಲಿ ಜಿಗಿದಾಗಲೀ ಅವರ ಕೈಗಳಿಂದ ತಪ್ಪಿಸಿಕೊಳ್ಳಬೇಕಾಗುತ್ತಿತ್ತು.

ಥಗ್‌ನಾದ ಅಮೀರ ಅಲಿಯು ದುರುಳನಾದ ಚೀತೂ ಎಂಬ ಪಿಂಢಾರಿಯ ಮುಖಂಡನ ಕೈಕೆಳಗಿದ್ದು ಹಲವಾರು ವಿಧ್ವಂಸಕ ಲೂಟಿ, ದರೋಡೆಗಳಲ್ಲಿ ಪಾಲ್ಗೊಂಡನು. ಪಿಂಢಾರಿಗಳಂತೆ ಜೀವನ ಸಾಗಿಸಿದ ಅಮೀರ ಅಲಿ ಹಾಗೂ ಅವನ ಸಂಗಡಿಗರು ಸ್ವಲ್ಪ ಸಮಯದಲ್ಲಿ ಸಂಪತ್ತನ್ನು ಶೇಖರಿಸಿಕೊಂಡರು. ಆತನೇ ಹೇಳಿದ – ''ನಾನು ಒಂದೇ ರಾತ್ರಿಯಲ್ಲಿ ಹತ್ತು ಸಾವಿರ ರೂಪಾಯಿ ಪಡೆದುಕೊಂಡು ಸಿರಿವಂತನಾಗಿ ಬಿಟ್ಟೆ'' ಎಂದು. ಅವನು ಸಹಚರರನಾಗಿದ್ದ ಪೀರ ಖಾನ ಎಂಬುವವನು – ''ಈ ಕೆಲಸ ಭಾರಿ ಉತ್ತಮವಾಗಿದೆ. ಇಲ್ಲಿ ನಮಗೆ ಯಾವುದೇ ಕಷ್ಟವಿಲ್ಲ. ಈ ರೀತಿ ನಾವು ಜೀವಿಸುತ್ತ ಹೋದರೆ ನಮ್ಮೂರಿಗೆ ನಾವು ಅತಿ ಸಿರಿವಂತರಾಗಿ ಮರಳಿ ಹೋಗಬಲ್ಲೆವು. ನೂರಾರು ಥಗ್ ಕೃತ್ಯಗಳಿಗಿಂತ ಇದು ಹೆಚ್ಚು ಲಾಭದಾಯಕವಾಗಿದ್ದು ಅಪಾಯವೆಂಬುದೇ ಇಲ್ಲ'' ಎಂದು ದನಿಗೂಡಿಸಿದನು.

ಇಡೀ ಊರಿನ ವಿನಾಶ ತಪ್ಪಿಸಬೇಕಾದರೆ ನೀವೆಲ್ಲರೂ ಚೀತೂ ಬೇಡಿದ್ದನ್ನು, ಬಯಸಿದ್ದನ್ನು ಕೊಟ್ಟುಬಿಡಿರಿ ಎಂದು ಊರ ಸಾಹುಕಾರರಿಗೆ ಮೊದಲೇ ಹೇಳಿ ಬಿಡ ಹತ್ತಿದನು. ಇಲ್ಲವಾದರೆ ಕೊಲೆ, ಸುಲಿಗೆಗೆ ತುತ್ತಾಗುವಿರಿ ಎಂದೂ ಸೂಚನೆ ನೀಡಿದನು. ಘೋರ ಅನಾಹುತಗಳನ್ನು ತಪ್ಪಿಸಲು ಇದೊಂದೇ ಉಪಾಯವೆಂದು

ಬಗೆದ ಜನರು ಚೀತೂ ಬರುವುದಕ್ಕಿಂತ ಮೊದಲೇ ಬೆಳ್ಳಿ - ಬಂಗಾರ, ಆಭರಣ-ನಾಣ್ಯಗಳನ್ನು ತಂದು ಸುರುವ ಹತ್ತಿದರು. ಅಮೀರ ಅಲಿಯ ಮುನ್ಸೂಚನೆಯಿಂದ ಸಿರಿವಂತರು, ವ್ಯಾಪಾರಸ್ಥರು, ತಮ್ಮ ಹಾಗೂ ತಮ್ಮ ಹೆಣ್ಣು ಮಕ್ಕಳ ಜೀವ, ಮಾನ-ಮರ್ಯಾದೆ ಕಾಪಾಡಿಕೊಂಡರು. ಹೀಗೆ ಒಂದು ಊರಲ್ಲಿ ಚೀತೂನಿಗೆ ಎಲ್ಲವನ್ನೂ ಸಮರ್ಪಿಸಿಬಿಡಲು ಆತ ಸಂತಸಗೊಂಡು ''ನಮಗೆ ಬೇಕಾದದ್ದು ಹಣ. ನಾವು ಹಣವನ್ನು ಏನು ಮಾಡಿಯಾದರೂ ಕಸಿಯುವೆವು. ನನ್ನ ಹಾಗೂ ನನ್ನ ಜನರ ವಿಧ್ವಂಸಕ ಕೃತ್ಯಗಳಿಗೆ ಬಲಿಯಾಗಬಾರದೆಂದೆನಿಸಿದರೆ ನೀವೇ ಜಾಣ್ಮೆಯಿಂದ ನಮಗೆ ಬೇಕಾದುದನ್ನು ಕೊಟ್ಟು ಉಳಿದುಕೊಳ್ಳಿರಿ'' ಎಂದ. ಭಯಗ್ರಸ್ತ ಜನರೆಲ್ಲ ಸಂಪತ್ತನ್ನು ಅವನಿಗೆ ಅರ್ಪಿಸಿದಾಗ ಅದನ್ನು ಚೀತೂ ಒಂಟೆಗಳ ಮೇಲೆ ಹೇರಿಕೊಂಡು ಹೊರಟು ಹೋದನು.

ಜನರನ್ನು ದೈಹಿಕವಾಗಿ, ಅಮಾನುಷವಾಗಿ ಹಿಂಸಿಸುವುದು ಅಮೀರ ಅಲಿಗೆ ಸೇರಲಿಲ್ಲ. ಪಿಂಢಾರಿಗಳ ಕೈಗೆ ಸಿಕ್ಕವರು ಎಷ್ಟು ಗೋಳಾಡುತ್ತಾರೆ ಎಂಬುದನ್ನು ಅಮೀರ ಅಲಿ ಸಿರಿವಂತರಿಗೆ ಬಣ್ಣಿಸಿ ಹೇಳುತ್ತಿದ್ದ. ''.... ನೋಡಿ, ನೀವೆಲ್ಲರೂ ಮುಕ್ತ ಹಸ್ತದಿಂದ ಹಣವನ್ನು ಕೊಟ್ಟು ಬಿಡಿರಿ. ಇಲ್ಲದಿದ್ದರೆ ನಿಮ್ಮ ಊರಿಗೆ ಊರೇ ನಾಶವಾಗುತ್ತದೆಂಬುದನ್ನು ಮರೆಯಬೇಡಿರಿ. ಈ ಪಿಂಢಾರಿಗಳಿಗೆ ಒಳ್ಳೆಯ ಪ್ರಜ್ಞೆ ಎಂಬುದೇ ಇಲ್ಲ... ಅವರ ಕೈಯಲ್ಲಿ ಬಾರುಕೋಲು, ಚಾಬೂಕಗಳಿದ್ದು ಬೆನ್ನಿಗೆ ಹೊಡೆದು ಹೊಡೆದು ಚರ್ಮ ಸುಲಿಯುವರು. ...ಇದಕ್ಕೆ ತೃಪ್ತರಾಗದಿದ್ದರೆ ನಿಮಗೆ ಬೇರೆ ದೈಹಿಕ ಹಿಂಸೆ ನೀಡುವರು..'' ಮುಗ್ಧ ಜನರು ಪಿಂಢಾರಿಗಳ ಕೈಯಲ್ಲಿ ಸಿಕ್ಕು ಗೋಳಾಡುವದು ಮೀರ ಅಲಿಗೆ ಸರಿ ಎನಿಸುತ್ತಿರಲಿಲ್ಲ. ಪಿಂಢಾರಿಗಳೊಡನೆ ಹೋಲಿಸಿದಾಗ ಥಗ್ಗರು ಕನಿಕರವುಳ್ಳವರೆಂದೇ ಬಗೆಯುತ್ತಿದ್ದ. ಏಕೆಂದರೆ ಥಗ್ಗರು ಎಂದಿಗೂ ಶಾರೀರಿಕ ವೇದನೆಯಾಗುವಂತೆ ಹೊಡೆಯುವದನ್ನಾಗಲಿ, ಬಡಿಯುವದನ್ನಾಗಲಿ ಮಾಡುತ್ತಿರಲಿಲ್ಲ.

ಗಫೂರಖಾನನೆಂಬುವವನ ವಿಧ್ವಂಸಕತೆಗೆ, ದೌರ್ಜನ್ಯಕ್ಕೆ ಮಿತಿ ಎಂಬುದೇ ಇರಲಿಲ್ಲ. ಆತನಲ್ಲಿ ಮಾನವೀಯತೆ ಎಂಬುದು ಎಳ್ಳು ಕಾಳಿನಷ್ಟು ಇರಲಿಲ್ಲ. ರಾಕ್ಷಸನೇ ಆಗಿದ್ದ ಆತ . ಗಫೂರ ಖಾನನ ದೌರ್ಜನ್ಯವನ್ನು ಕಣ್ಣಾರೆ ನೋಡಿದ ಅಮೀರ ಅಲಿ ಎಂದ.

''....ದುರುಳನೊಬ್ಬ ಹೆಣ್ಣು ಮಗಳೊಬ್ಬಳನ್ನು ದರದರನೆ ಎಳೆಯುವದನ್ನು ನೋಡಿದ. ಅವಳು ಅವನ ಕೈಯೊಳಗಿಂದ ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದಳು. ಆದರೆ ಶಕ್ತಿ ಸಾಲದ್ದಕ್ಕೆ ನಿತ್ರಾಣಳಾದಳು. ನಾನುಅವಳ ಸಹಾಯಕ್ಕೆಂದು ಅವಳ ಕಡೆಗೆ ಧಾವಿಸಿದೆ. ಕಾಮುಕನಾದ ಗಫೂರಖಾನ ಅವಳಿಗೆ ಲೈಂಗಿಕವಾಗಿ ಪರಿತಪಿಸುವಂತೆ ಮಾಡುತ್ತಲಿದ್ದ.'' ಆಗ ಆತ ''ಮೀರ ಸಾಹೇಬ, ನೀನು ಇಲ್ಲಿಗೆ ಬಂದೆಯಾ ? ಇಲ್ಲಿ

ಈಗ ನಾನು ನಿಜವಾದ ಪಿಂಢಾರಿಯಾಗಿ ಕಾರ್ಯ ಮಾಡುತ್ತಿದ್ದೇನೆ. ಮತ್ತು ವಶಮಾಡಿಕೊಂಡು ತರಬೇಕಾದುದನ್ನು ತಂದಿದ್ದೇನೆ, ನೋಡು, ಅವಳನ್ನು, ಎಂಥ ಸುಂದರಿಯಾಗಿದ್ದಳಲ್ಲ! ಇವಳ ಮನೆಹೊಕ್ಕು ಎಳೆದಾಗ ಇವಳ ತಾಯಿ ತಡೆಯಲು ಮುಂದೆ ಬಂದಳು. ಆದರೆ ಅವಳಿಗೆ ಖಡ್ಗ ಚುಚ್ಚಿಕೊಂದು ಮಾತನಾಡದಂತೆ ಮಾಡಿಬಿಟ್ಟೆ. ಅವಳ ಸುಂದರ ಮಗಳೀಗೆ ನನ್ನ ಕೈಯಲ್ಲಿದ್ದಾಳೆ. ರಾಜಕುಮಾರನಿಗೆ ಯೋಗ್ಯಳಾದ ವಧುವಾಗಿದ್ದಾಳೆ. ಏ ಹೇಳೇ, ಗಫೂರಖಾನನೊಂದಿಗೆ ಅಪ್ಪಿಕೊಳ್ಳುವ ಭಾಗ್ಯ ಬಂದಿದೆಯೆಂದು ಸಂತಸ ಪಡುವದಿಲ್ಲವೇ?'' ಅವಳು ಅವನ ಕೈಯಿಂದ ತಪ್ಪಿಸಿಕೊಂಡು ಓಡಿಹೋಗಬಯಸಿದ್ದಳು. ಆದರೆ ಆತ ಅವಳ ಬೆನ್ನಟ್ಟಿ ಹಿಡಿದ. ಓಡಾಡಿದ್ದಕ್ಕಾಗಿ ಅವಳ ಕೋಮಲ ಅಂಗಾಂಗಗಳಿಂದ ರಕ್ತ ಬಂದಿತ್ತು.... ಮರುದಿನ ಗಫೂರಖಾನ ಮುಂಜಾನೆ ಸಮಯದಲ್ಲಿ ರಾಕ್ಷಸಿ ನಗೆ ನಗುತ್ತ ಅವಳ ಮೇಲೆ ಬಲಾತ್ಕಾರ ಮಾಡಿಕೊಂದು ಬಿಟ್ಟಿರುವುದಾಗಿ ಹೇಳಿದ.

ಆ ಅಸಾಹಯಕ, ದಯನೀಯ ಸ್ಥಿತಿಯಲ್ಲಿದ್ದ ತರುಣಿಯ ದೃಶ್ಯವು ಅಮೀರಅಲಿಯ ಮೇಲೆ ಪರಿಣಾಮ ಬೀರಿತ್ತು. ಅದಕ್ಕಾಗಿ ಅಮೀರ ಅಲಿ ಗಫೂರಖಾನನನ್ನು ಕೊಂದು ಬಿಡುವ ಯೋಚನೆ ಮಾಡಿದ.'

ಗಫೂರಖಾನನ ರಾಕ್ಷಸೀ ಪ್ರವತ್ತಿಯ ಮತ್ತೊಂದು ಉದಾಹರಣೆಯೂ ಬರ್ಬರತೆ, ವಿಧ್ವಂಸಕತೆಯಿಂದ ಕೂಡಿದೆ. ಒಮ್ಮೆ ಒಂದು ಮನೆಯಲ್ಲಿ ಲೂಟಿ ಮಾಡಿ ಏಳೆಂಟು ಜನರೊಂದಿಗೆ ಭಯಾನಕ ಕೃತ್ಯವೊಂದನ್ನು ಎಸಗಿದ.

''ರಕ್ತ - ಪ್ರಪಾತದಲ್ಲಿ ಮೂರು ಹೆಣಗಳು ಬಿದ್ದಿದ್ದವು. ಹೆಣಗಳಿಂದಲೂ ಹಕ್ತ ಹರಿಯುತ್ತಿತ್ತು. ಅದರಲ್ಲಿ ಇಬ್ಬರು ತರುಣರಾಗಿದ್ದರು. ಒಬ್ಬ ವಯಸ್ಸಾದ ಹೆಣ್ಣು ಮಗಳಿದ್ದಳು. ... ಗಫೂರ ಖಾನನ ಎದುರು ಒಬ್ಬ ಗೌರವಾನ್ವಿತ ವ್ಯಕ್ತಿ ನಿಂತಿದ್ದ. ಅವನ ಮುಖಕ್ಕೆ ಬಿಸಿ ಬೂದಿಯ ಚೀಲವನ್ನು ಕಟ್ಟಿ ಚಿತ್ರಹಿಂಸೆ ನೀಡುತ್ತಿದ್ದ. ಖಾನನ ಸಹಚರನೊಬ್ಬ ಆತನ ಬೆನ್ನಿಗೆ ಖಡ್ಗದ ಹಿಂಭಾಗದಿಂದ ಸತತ ಚುಚ್ಚುತ್ತಲಿದ್ದ. ಆ ಮನುಷ್ಯನಿಗೆ ಅರ್ಧ ಉಸಿರುಕಟ್ಟಿ ಹೋಗಿತ್ತು. ನಿನ್ನ ಸಂಪತ್ತನ್ನೆಲ್ಲ ಎಲ್ಲಿ ಬಚ್ಚಿಟ್ಟಿರುವೆ ? ಹೇಳು, ಹೇಳು' ಎಂದು ಗುಡುಗುತ್ತಲಿದ್ದ. ಮೂವರು ತರುಣಿಯರು ಗಫೂರಖಾನನ ಗುಂಪಿನವರ ಕೈಗೆಸಿಕ್ಕು ವ್ಯರ್ಥವಾಗಿ ಬಿಡಿಸಿಕೊಳ್ಳುವ ಯತ್ನ ಮಾಡುತ್ತಿದ್ದರು. ಅವರ ಚಲ್ಲಾಪಿಲ್ಲಿಯಾದ ಕೂದಲುಗಳು ಹೃದಯದ್ರಾವಕ ಕೂಗು ಅವರ ಧ್ವನಿಯಲ್ಲಿ ಏನಾಗಿತ್ತುಎಂಬುದನ್ನು ತೋರಿಸುತ್ತಿದ್ದವು....''

ಆಗ ಗಫೂರಖಾನನ ಲಕ್ಷವನ್ನು ಬೇರೆಕಡೆಗೆ ಸೆಳೆಯುವದಕ್ಕೆ ಅಮೀರ ಅಲಿಯು ಪ್ರಯತ್ನಿಸಿದಾಗ ಆತ ಅಮೀರ ಅಲಿಗೆ ಹೇಳಿದ - ''ನಿಲ್ಲು .ಈಗ ನಾನು ಒಂದು ಆಟದಲ್ಲಿ ಮಗ್ನನಾಗಿದ್ದೇನೆ. ಈ ಮೂರ್ಖರು ಖಡ್ಗ ಹಿಡಿದುಕೊಂಡು ನಮ್ಮನ್ನು ಒಳಗೆ

ಬರದಂತೆ ತಡೆಯಲೆತ್ನಿಸಿದರು. ಇವರಲ್ಲಿ ಯಾವನೋ ಒಬ್ಬ ನನ್ನ ಕೈಗೆ ತರೆಸಿದ, ಗಾಯ ಮಾಡಿದ. ಈ ಕಾಫಿರರು ಮತ್ತೇನು ಮಾಡಲು ಸಾಧ್ಯ ? ಅವರೇ ಈಗ ಇಲ್ಲಿ ಸತ್ತು ಬಿದಿದ್ದಾರೆ.; ಅವಳ ತಾಯಿಯೂ ಸತ್ತು ಹೋಗಿದ್ದಾಳೆ ; ನನ್ನ ಖಡ್ಗಕ್ಕೆ ಬಲಿಯಾಗಿದ್ದಾರೆ. ನನ್ನ ಜನ ಅವರ ಹೆಂಡಂದಿರೊಂದಿಗೆ ಮೋಜು ಮಾಡುತ್ತಲಿದ್ದಾರೆ. ಆದರೆ ನಾನು ಈ ದುಷ್ಟನಿಗೆ ಸಂಪತ್ತೆಲ್ಲಿದೆ ? ಎಂದು ಕೇಳಹತ್ತಿದ್ದೇನೆ.... '' ಎಂದಂದು. 'ಬಾಯಿಗೆ ಕಟ್ಟಿದ ಬೂದಿಯ ಚೀಲವನ್ನು ತೆಗೆಯಿರೋ ; ಆತ ಬಾಯಿಬಿಟ್ಟು ಸತ್ಯವನ್ನು ಹೇಳಲಿ. ಅವನ ಬಾಯಿಗೆ, ಗಂಟಲಿಗೆ ಬೂದಿ ಬಡಿದಿದೆ. ನೀರು ತಂದು ಕೊಡರಿ ಅವನಿಗೆ' ಎಂದ. ಅವನ ಆಜ್ಞೆಯಂತೆ ಬಾಯಿಗೆ ಕಟ್ಟಿದ ಚೀಲ ತೆಗೆದು ನೀರು ಕೊಟ್ಟರು. ಆದರೆ ಆತ ಆ ನೀರನ್ನು ಕುಡಿಯದೆ ತಿರಸ್ಕರಿಸಿದ. ಏಕೆಂದರೆ ಅವನೊಬ್ಬ ಹಿಂದೂ ಬ್ರಾಹ್ಮಣನಾಗಿದ್ದ. ಅದನ್ನು ನೋಡಿ –

ರೊಚ್ಚಿಗೆದ್ದ ಗಫೂರನು 'ಕುಡಿಯೋ' ಎಂದು ಅಬ್ಬರಿಸದ. 'ಕುಡಿಯೋ ಇಲ್ಲವಾದರೆ ನಿನ್ನ ಬಾಯಿ ಹಿರಿದು ಗಂಟಲಿಗೆ ಇಳಿಬಿಡುವೆ. ಕಾಫಿರ ಗೋಮೂತ್ರವನ್ನು ಪವಿತ್ರವೆಂದು ಕುಡಿಯುವ ನಿನಗೆ ಮುಸಲ್ಮಾನನೊಬ್ಬ ಕೊಟ್ಟ ನೀರು ಬೇಡವಾಗುತ್ತದೆಯೋ ? 'ಎಂದ. 'ರಕ್ತಪಿಪಾಸು ದೈತ್ಯನೇ, ನಿನ್ನ ಕೈಯಿಂದಾಗಲೀ, ನಿನ್ನ ಜನರ ಕೈಯಿಂದಾಗಲಿ ಕುಡಿದ ನೀರು ವಿಷಕ್ಕೆ ಸಮಾನವಾಗಿದೆ... ಅವಶ್ಯ ಬಿದ್ದರೆ ನನ್ನ ಮಗನ ರಕ್ತವನ್ನೇ ಕುಡಿಯುವೆ, ಆದರೆ ನಿನ್ನಂಥವನ ಕೈಯಿಂದ ನೀರು ಕುಡಿದು ಕಲುಷಿತನಾಗಲಾರೆ' ಎಂದು ಗೊಗ್ಗರು ಧನಿಯಲ್ಲಿ ಅಂದ. ಅದಕ್ಕೆ ಗಫೂರನು ಮತ್ತಷ್ಟು ರೊಚ್ಚಿಗೆದ್ದು 'ಹೀಗೋ..... ಪ್ರವಾದಿಯ ಹೆಸರಿನಲ್ಲಿ ನಿನಗೆ ಕುಡಿಸಿಯೇ ಬಿಡುವೆ... ಏ, ಸಮದಖಾನ, ಬಾ ಇಲ್ಲಿ, ನೆಲದ ಮಲೆ ಬಿದ್ದಿರುವ ಇವನ ಮಗನ ರಕ್ತವನ್ನು ಒಂದು ಕಪ್ಪಿನಲ್ಲಿ ಹಾಕಿ ತಾ.... ಅಲ್ಲೇ ಕಪ್ಪು ಇದೆ ನೋಡು. ಅದನ್ನು ರಕ್ತದಿಂದ ತುಂಬು. ಈ ಮುದುಕ ಅದನ್ನು ಕುಡೀತಾನಂತೆ, ಸೋಮರಸ ಕುಡಿದಂತೆ' ಎಂದು ಮೂದಲಿಸಿ ನುಡಿದ. ಅವನ ಆಜ್ಞೆಯಂತೆ ಸಮದಖಾನನು ಕಪ್ಪೊಂದನ್ನು ತಂದು ಅದರಲ್ಲಿ ರಕ್ತವನ್ನು ತುಂಬ ಹತ್ತಿದ. ಆ ಕಪ್ಪಿನಲ್ಲಿ ಅರ್ಧದಷ್ಟು ಹಾಕಿದಾಗಲೇ ತೆಗೆದುಕೊಂಡು ಮುದುಕನ ಬಾಯಿಗೆ ಹಿಡಿದು 'ಕುಡಿ, ಇದನ್ನು ಗಂಗಾಜಲವೆಂದು ಕುಡಿ. ಇದನ್ನು ಕುಡಿದ ಮೇಲೆ ಶಕ್ತಿ ಬಂದು ಸಂಪತ್ತು ಎಲ್ಲಿದೆ ಎಂದು ಹೇಳುವಿಯಂತೆ'' ಎಂದ.

ಆದರೆ ಆ ಮುದುಕ ತನ್ನ ಮುಖವನ್ನು ಹೊರಳಿಸಿಬಿಟ್ಟ, ಅವನ ಎದೆ ಹೊಯ್ದಾಡುತ್ತಿತ್ತು. ಆಗ ಗಫೂರಖಾನನು ಕ್ರೋಧದಿಂದ 'ಇದರಲ್ಲಿ ವೇಳೆ ಹಾಳು ಮಾಡುವುದು ಸಾಕು. ನಿನ್ನ ಖಡ್ಗದಿಂದ ಅವನ ಬಾಯಿಯನ್ನು ಹರಿ, ರಕ್ತವನ್ನು ಬಾಯಲ್ಲಿ ಸುರುವು' ಎಂದು ಆಜ್ಞಾಪಿಸಿದ. ನಿರ್ದಯರಾಗಿ ಅವನ ನಾಲಿಗೆಯನ್ನು ಹೊರ ತೆಗೆದು, ತುಟಿ ಸೀಳಿ, ರಕ್ತದ ಗುಟುಕು ಒಳಗೆ ಹಾಕಿದರು. ಗಲ್ಲವನ್ನು ಹಿರದು ಬಿಟ್ಟರು. ಅದೆಂಥ ಹೇಯ, ಬರ್ಬರ ಕೃತ್ಯವದು !!

ಆ ಬಳಿಕ ಗಫೂರಖಾನನು – ''ಇದನ್ನಾದರೂ ಹೇಳು, ಧನ–ಕನಕಾದಿಗಳನ್ನು ಎಲ್ಲಿ ಬಚ್ಚಿಟ್ಟಿರುವೆ ?''

''ನಾನು ಈಗಾಗಲೇ ಹೇಳಿರುವೆ, ನನ್ನಲ್ಲಿ ಬಂಗಾರವಿಲ್ಲ''ಎಂದು . ಇಷ್ಟರಲ್ಲಿ ಮನೆತುಂಬ ಪಿಂಢಾರಿಗಳು ಸೇರಿಬಿಟ್ಟಿದ್ದರು. ಆಗ ಗಫೂರಖಾನನು 'ಯಾರಾದರೂ ಒಬ್ಬರು ಎಣ್ಣೆಯನ್ನು , ಉರಿಯನ್ನು ತನ್ನಿರಿ'' ಎಂದು ಕೂಗಿದಾಗ ಸತ್ತು ಬಿದ್ದವರ ಮೇಲಿನ ದೋತರವನ್ನು ಹರಿದು ಬಟ್ಟೆ ಮಾಡಿದರು. ಎಣ್ಣೆ ತಂದರು. ಆ ಬಟ್ಟೆಯನ್ನು ಎಣ್ಣೆಯಲ್ಲಿ ಎದ್ದಿ ಆ ಮುದುಕನ ಬಟ್ಟುಗಳ ಸುತ್ತ ಕಟ್ಟಿದರು.

'ಉರಿಯನ್ನು ತರ್ರಿ'ಎಂದು ಖಾನ ಕೂಗಿದ. 'ನಿನಗೆ ಕೊನೆಯ ಅವಕಾಶ ಕೊಡುತ್ತೇವೆ.... ನೋಡು ಈ ಬೆರಳಿಗೆ ಏನಾಗುತ್ತದೆ ಎಂಬುದನ್ನು ತಿಳಿದುಕೊ... ಬೇಗ ಹೇಳು.... ನಿನ್ನ ಬೆರಳುಗಳು ಬೆಂಕಿಯ ದೀಪಗಳಾಂತಗುವವು.... ಅವುಗಳು ಬೆಳಕಿನಲ್ಲಿ ನೀನು ಬಚ್ಚಿಟ್ಟಿರುವ ಸಂಪತ್ತನ್ನೆನಲ್ಲ ಹುಡುಕಿ ತೆಗೆಯುವೆ... ನೀನು ಎಲ್ಲೋ ಕತ್ತಲು ಜಾಗದಲ್ಲಿ ಇಟ್ಟಿರಲೇ ಬೇಕು''ಎಂದು ಅಂದ.

'ಏನು ಬೇಕಾದರೂ ಮಾಡು, ನಿನ್ನ ಮುಖದ ಮೇಲೆ ಉಗುಳುವೆ' ಎಂದು ಮುದುಕನೆಂದ.

'ಬಟ್ಟಿಗೆ ಸುತ್ತಿದ ಬಟ್ಟೆಗೆ ಬೆಂಕಿ ಹಚ್ಚಿರಿ. ಉರಿಯಲಿ ದೀಪದಂತೆ. ಇದನ್ನು ನಾನು ಸಹಿಸಲಾರೆ' ಎಂದು ಅಂದ ಗಫೂರಖಾನ.

ಬೆರಳಿಗೆ ಸುತ್ತಿದ ಬಟ್ಟೆಗೆ ಉರಿ ಹಚ್ಚಿದರು. ಉರಿ ಮೇಲೇಳಲು ಅವನ ಕೈಗಳನ್ನು ಕೆಳಗೆ ಘಾಡಿಸಿದರು. ಉರಿಗೆ ಸಿಲುಕಿದ ಬೆರಳುಗಳಿಂದ ಸುಡುವ ಸಪ್ಪಳ ಬಂತು. ಅದಕ್ಕೆಆಗಾಗ್ಗೆ ಎಣ್ಣೆ ಹಾಕಿ ಜ್ವಾಲೆ ಹೆಚ್ಚಾಗುವಂತೆ ಮಾಡಿದರು. ಮುದುಕನು ಹೃದಯ ಬಿರಿಯುವಂತೆ ಚೀರಿಕೊಳ್ಳುತ್ತಿದ್ದ. ಅದನ್ನು ಕೇಳಿದ ಕಲ್ಲು ಹೃದಯವೂ ಕರಗುವಂತಿತ್ತು. ಆದರೆ ಗಫೂರಖಾನ ಆನಂದ, ಉನ್ಮಾದದಲ್ಲಿ ನಲಿಯುತ್ತಿದ್ದ. ಸಂಪತ್ತೆಲ್ಲಿಟ್ಟಿರುವೆ ಹೇಳು, ಹೇಳು ಎಂದು ಒತ್ತಾಯಿಸುತ್ತಲೇ ಇದ್ದ. ಸಿಟ್ಟಿನಿಂದ ಕ್ರೂರ ನಾಲಿಗೆ ಹೊರ ತೆಗೆಯುವಂತೆ ಬಾಯಿ ತೆರೆಯುತ್ತಲಿದ್ದ. 'ಬಾಯಿ ಚುಚ್ಚೊ ಕಾಫಿರ ' ಎಂದು ಒದರುತ್ತಿದ್ದ. ಇಲ್ಲವಾದರೆ ಇದಕ್ಕಿಂತಲೂ ಭೀಕರ ಚಿತ್ರಹಿಂಸೆ ಕಾದಿದೆ ಎಂದೆನ್ನುತ್ತಿದ್ದ.

ಆದರೆ ಮುದುಕ ಮಾತನಾಡಲೇ ಇಲ್ಲ. ಅರ್ಧಕ್ಕಿಂತ ಹೆಚ್ಚು ಸತ್ತಂತಾಗಿದ್ದ. ಹಿಂಸೆ, ವೇದನೆಗೆ ಬಲಿಯಾಗಿದ್ದ.

ಕೊನೆಗೆ ಗಫೂರಖಾನತನ್ನ ಖಡ್ಗವನ್ನು ಹೊರತೆಗೆದು, ಮುದುಕನ ತಲೆಯನ್ನೇ ತುಂಡರಿಸಿ ಹಾಕಿದ. ತಲೆಯಲ್ಲಿ ಹಣೆಯಲ್ಲಿ, ಎರಡು ಹೋಳುಗಳಾದವು.

ಇದನ್ನೆಲ್ಲ ಕಣ್ಣಾರೆ ಕಂಡ ಅಮೀರ ಅಲಿಗೆ ಗಫೂರಖಾನ ರಾಕ್ಷಸನಾಗಿರಲೇ ಬೇಕೆಂದು ಅನಿಸಿತು. ಕಣ್ಣಾರೆ ಕಂಡ ಭೀಕರ ದೃಶ್ಯವು ಅವನ ಕ್ರೂರಮನ ಮಿಡಿಯಿಯಿತು. ಆಗಲೇ ಆತ ಗಫೂರಖಾನನ್ನು ಕೊಲ್ಲಲು ನಿರ್ಧಾರ ಆಡಿದ.

ಥಗ್ಗನಾಗಿ ಅಮೀರಅಲಿಯು ನೂರಾರು ಜನರನ್ನು ಕೊಂದರೂ ಗಫೂರಖಾನನಂತೆ ದೈತ್ಯನಾಗಿ ವರ್ತಿಸಲಿಲ್ಲ. ಪಿಂಢಾರಿಗಳು ಮಾಡುವ ನಿರ್ದಯಯುತ ಹತ್ಯೆಗೂ ಥಗ್ಗರು ಮಾಡುವ ಹತ್ಯೆಗೂ ಬಹಹಳಷ್ಟು ವ್ಯತ್ಯಾಸ ಇದೆ. ಮತ್ತೊಬ್ಬರಿಗೆ ಚಿತ್ರಹಿಂಸೆ ಕೊಟ್ಟು ಅವರ ವೇದನೆಯಲ್ಲಿ ಆನಂದ ಪಡೆಯುವ ಪ್ರವೃತ್ತಿ ಥಗ್ಗರಲ್ಲಿಲ್ಲ. ತಾನೊಬ್ಬ ಪಿಂಢಾರಿಯಾಗಿದ್ದರೂ ಥಗ್ಗನಲ್ಲಿರುವ ಗುಣಗಳನ್ನು ಕಳೆದುಕೊಂಡಿರಲಿಲ್ಲ. ಅಮೀರ ಅಲಿಗೆ ಗಫೂರಖಾನನನ್ನು ಕೊಲ್ಲಲು ಕರವಸ್ತ್ರ ಸಾಕಾಗಿತ್ತು. ಗಫೂರಖಾನ ಸೆರೆ ಕುಡಿದಾಗ ಕರವಸ್ತ್ರ ಕೊರಳಿಗೆ ಬಿದ್ದಿತ್ತು. ಥಗ್ಗರು ಹಾಗೂ ಪಿಂಢಾರಿಗಳಿಬ್ಬರೂ ಬರ್ಬರ ಹತ್ಯೆ ಮಾಡುವವರೇ ಆಗಿದ್ದರು. ಆದರೆ ಥಗ್ಗರು ಪಿಂಡಾರಿಗಳಷ್ಟು ದೌರ್ಜನ್ಯ ಮಾಡುತ್ತಿರಲಿಲ್ಲ.

ಜಾಲೋನದ ರಾಜನ ಕೈಗೆ ಇಸ್ಮಾಯಿಲ್ ಹಾಗೂ ಅಮೀರ ಅಲಿ ಇಬ್ಬರೂ ಒಮ್ಮೆ ಸಿಕ್ಕು ಬಿದ್ದರು. ಇಸ್ಮಾಲ್‌ನಿಗೆ ಆನೆಯ ಕಾಲಿಂದ ತುಳಿಸಿ ಕೊಲ್ಲಿಸುವ ಶಿಕ್ಷೆ ಕೊಟ್ಟರು. ಅಮೀರ ಅಲಿಗೆ ಜೇಲಿನ ಶಿಕ್ಷೆ ಆಯಿತಲ್ಲದೆ ಆತ ಮಹಾಪರಾಧಿ, ಕೊಲೆಗಾರ ಎಂದು ತೋರಿಸುವುದಕ್ಕಾಗಿ ತಾಮ್ರದ ನಾಣ್ಯಗಳನ್ನು ಕಾಯಿಸಿ ಮುಖದ ಮೇಲೆ ಬರಿಕೊಟ್ಟರು. ಹೀಗೆ ಆತನಿಗೆ ಅಪಮಾನವನ್ನೂ, ಜೇಲು ಶಿಕ್ಷೆಯನ್ನೂ ಅನುಭವಿಸ ಬೇಕಾಯಿತು. ತನ್ನ ಗಂಡ ಥಗ್ಗನಾಗಿದ್ದನೆಂದು ತಿಳಿದ ಬಳಿಕ ಹೆಂಡತಿ ಅಝಿಮಾ ಎನ್ನುವವಳು ಎದೆ ಯೊಡೆದುಕೊಂಡು ಸತ್ತಳು. ಅಮೀರ ಅಲಿಗೆ ತನ್ನ ಮಗಳ ಮುಖವನ್ನು ನೋಡಲಿಕ್ಕಾಗಲಿಲ್ಲ. ಜೇಲು ಶಿಕ್ಷೆ ಮುಗಿಸಿ ಹೊರ ಬಂದ ಬಳಿಕ ಮತ್ತೆ ಥಗ್ಗ ವೃತ್ತಿಗೆ ಇಳಿದ. ಬ್ರಿಟಿಷ ಅಧಿಕಾರಿಗಳ ಕೈಯಲ್ಲಿ ಸಿಗುವ ತನಕ ಸಿರಿವಂತರ, ವ್ಯಾಪಾರಿಗಳ ಕೊಲೆ ಮಾಡುತ್ತ ಸಾಗಿದ. ಜೀವಾವಧಿ ಶಿಕ್ಷೆಗೆ ಒಳಪಟ್ಟು, ತಪ್ಪೊಪ್ಪಿಗೆಯೊಂದಿಗೆ, ಉಳಿದ ಥಗ್ಗರನ್ನು ಗುರುತಿಸುವ ಮುಚ್ಚಳಿಕೆಯೊಂದಿಗೆ , ಪೋಲೀಸ ಇಲಾಖೆಗೆ ಶರಣು ಹೋದ. ಹೀಗೆ ಕೊನೆಯ ದಿನಗಳನ್ನೆಲ್ಲ ಬೇಸರ ಪಡುತ್ತ ಜೇಲಿನಲ್ಲಿ ಕಳೆಯಬೇಕಾಯಿತು. ತಾನು ಮಾಡಿದ ಕೊಲೆಗಳನ್ನು ನೆನಪಿಸಿಕೊಳ್ಳುತ್ತ ಆತ ಕಾಲ ಕಳೆಯಬೇಕಾಯಿತು.

ಇಡೀ ಕಾದಂಬರಿಯಲ್ಲಿ ನಲ್ವತ್ತೆಂಟು ಚಾಪ್ಟರಗಳಿದ್ದುಒಂದಕ್ಕೊಂದು ಜೋಡಿಸುತ್ತ ಕಥೆ ಮುಂದುವರಿಯುತ್ತದೆ. ಕಾದಂಬರಿಯಲ್ಲಿನ ಅನೇಕ ಘಟನೆಗಳನ್ನು ಕರ್ನಲ್ ಸ್ಲಿಮನ್ನನ ವರದಿಯಿಂದಲೂ, ಥೋರೆಂಟೊನ್ನಿನ ಇತಿಹಾಸ ಪುಸ್ತಕದಿಂದಲೂ ತೆಗೆದುಕೊಳ್ಳಲಾಗಿದೆ. ಹಾಗೆ ನೋಡಿದರೆ ಈ ಕಾಂಧಬಯಲ್ಲಿ ಎರಡು ಭಾಗಗಳೇ ಇವೆ. ಮೊದಲನೆಯ ಭಾಗದಲ್ಲಿ ಥಗ್ಗರ ಬಗ್ಗೆ ಇದ್ದರೆ ಎರಡನೆಯ ಭಾಗದಲ್ಲಿ ಐತಿಹಾಸಿಕ ವ್ಯಕ್ತಿಯಾದ, ಪಿಂಢಾರಿಯಾಗಿದ್ದ ಚೀತೂನ ಚಟುವಟಿಕೆಗಳ ಬಗ್ಗೆ ಇದೆ. ಗಫೂರಖಾನನು ಕೊಟ್ಟ ಚಿತ್ರ ಹಿಂಸೆಯು ಸ್ಕಾಟನ ಆಯವ್ಹಾನಹೊ ಕಾದಂಬರಿಯಲ್ಲಿಯಂತೆ ಇದ್ದರೂ ಕಾಲ್ಪನಿಕವಾಗಿದೆ.

ಝೋರಾ ಎಂಬುವಳನ್ನು ಉಳಿಸಿದ್ದು, ಅಮೀರ ಅಲಿಯು ಅಝಿಮಾಳನ್ನು ಲಗ್ನವಾದದ್ದು ನಾಗರಿಕ ಜೀವನ ತೋರುತ್ತಿದ್ದರೂ ಅವು ಥಗ್ಗರ, ಪಿಂಢಾರಿಗಳ ಬರ್ಬರ ಹತ್ಯಾ ಕೃತ್ಯಗಳ ಮುಂದೆ ಅಮುಖ್ಯವೆನಿಸುತ್ತವೆ. ಇಲ್ಲಿ ಬರುವ ಪ್ರತಿಯೊಂದು ಘಟನೆಯು ಸ್ವತಂತ್ರ ಕಥೆಯಂತಿದ್ದು, ಅಮೀರ ಅಲಿಯಿಂದಲೇ ಒಂದಕ್ಕೊಂದು ಅಂಟಿಕೊಂಡು ಕಾದಂಬರಿಯ ಸ್ವರೂಪ ಪಡೆದಿದೆ. ಅನೇಕ ಕಡೆಗಳಲ್ಲಿ ವಿಷಯಾಂತರವಾಗಿ, ಹೇಳಿದ್ದನ್ನು ಹೇಳುವುದರಿಂದಲೂ ಕಾದಂಬರಿಯ ಕಲೆಗೆ ಧಕ್ಕೆ ಉಂಟಾಗಿದೆ. ಆದರೆ ಟೇಲರನ ಕಲ್ಪನಾ ಶಕ್ತಿಯಿಂದಲೂ, ತರ್ಕಬದ್ಧ ಬೆಳವಣಿಗೆಯಿಂದಲೂ ಕಾದಂಬರಿಗೆ ಬೇಕಾದ ಕಥಾವಸ್ತುವಿನ ಜೋಡಣೆ ಮಾಡಲಾಗಿದೆ.

ಊರೂರು ಅಲೆಯುವ ವಿಷಯವುಳ್ಳ ಈ ಕಾದಂಬರಿಗೆ ಸತ್ವ ತಂದವ ಅಮೀರ ಅಲಿಯಾಗಿದ್ದಾನೆ. ಅವನ ಪಾತ್ರ ಚಿತ್ರಣ ಸುಸ್ಪಷ್ಟವಾಗಿದ್ದು ಓದುಗರ ಮೇಲೆ ಅಚ್ಚಳಿಯದಂತೆ ಉಳಿಯುತ್ತದೆ.

ಕಥಾ ನಾಯಕನಾದ ಅಮೀರ ಅಲಿಯ ವರ್ಣನೆ ಹೀಗಿದೆ. - ''ಅವನ ಹಣೆಯು ಎತ್ತರವಾಗಿಯೂ, ಅಗಲವಾಗಿಯೂ, ಇತ್ತು. ಕಣ್ಣುಗಳು ದೊಡ್ಡವು, ಹೊಳಪುಳ್ಳವೂ ಅಗಿದ್ದು, ಸುಂದರವಾಗಿ ಮಾತನಾಡುವಾಗಲಂತೂ ಹೆಚ್ಚು ಚುರುಕಾಗಿರುತ್ತಲಿದ್ದವು. ಅವು ಮಾತಿನ ಭಾಷೆಯನ್ನು ಇಂಗ್ಲೀಷಿನಲ್ಲಿ ತರುವದು ಅಶಕ್ಯವೇ. ಅವನ ಗಲ್ಲಗಳು ಒಳ ಸೇರಿದಂತಿತ್ತು. ಮೂಗು ಚೂಪಾಗಿತ್ತು. ಬಾಯಿ - ತುಟಿ ಚಿಕ್ಕದಾಗಿದ್ದು ತಿದ್ದಿ ತೀಡಿದಂತಿತ್ತು. ಹಲ್ಲುಗಳು ಹೊಳಪುಳ್ಳವೂ, ಸುಂದರವಾಯೂ ಇದ್ದವು. ಮೇಲ್ತುಟಿ ಮೇಲೆ ಹುರಿ ಮೀಸೆ ಇದ್ದು, ಗಡ್ಡ ಚಿಕ್ಕದಾಗಿತ್ತು. ಅದರ ಹಿಂದಿರುವ ಗಂಟಲು ಮರೆಯಾಗಿ ಚಿತ್ರಕಾರನಿಗಾಗಲಿ, ಶಿಲ್ಪಿಗಾಗಲಿ ಆಕರ್ಷಕವೆನಿಸುವಂತಿತ್ತು. ಎಲ್ಲಕ್ಕೂ ಮಿಗಿಲಾಗಿ ಅವನ ಎದೆ ವಿಸ್ತಾರವಾಗಿದ್ದು ಟೊಂಕ ಮಾತ್ರ ಚಿಕ್ಕದಾಗಿ ಎದ್ದು ಕಾಣುತ್ತಿತ್ತು.

ಆತನ ವರ್ತನೆಯಲ್ಲಿ ವಿನಯ, ಸೌಜನ್ಯ ಇತ್ತು. ಅವನು ಸಭ್ಯ ಸುಶಿಕ್ಷಿತನಂತೆ ಕಾಣುತ್ತಿದ್ದನಲ್ಲದೆ, ನಿರರ್ಗಳವಾಗಿ ಮಾತನಾಡಬಲ್ಲವನಾಗಿದ್ದ.

ಇಂಥವನು ಥಗ್‌ನಾಗಿರಬೇಕೆಂದು ಯಾರಿಗೆ ತಾನೆ ಸಂಶಯ ಬಂದೀತು ? ಅವನು ತನ್ನ ಸೌಂದರ್ಯ, ದೈವೀ ದೇಣಿಗೆಗಳನ್ನು ತನ್ನ ವೃತ್ತಿಯಲ್ಲಿ ಉಪಯುಕ್ತವಾಗುಂತೆ ಬಳಸಿಕೊಳ್ಳುತ್ತಿದ್ದ. ಸಿರಿವಂತರನ್ನು ಮೋಹಗೊಳಿಸುವುದರಲ್ಲೂ, ಕರವಸ್ತ್ರವನ್ನು ಬಳಸುವಲ್ಲೂ ಪ್ರವೀಣನಾಗಿದ್ದ. ತನ್ನ ನಿಜ ರೂಪವನ್ನು ದುಷ್ಕೃತ್ಯದ ಜೀವನವನ್ನು ಸುಲಭವಾಗಿ ಅಡಗಿಸಿದ್ದನು. ಆತ ದೈತ್ಯನ ಅನುಯಾಯಿಯಾಗಿದ್ದ.

ಥಗ್ ವೃತ್ತಿಗಿಳಿದಾಗಲೂ ಮೊದಮೊದಲು ಅವನಲ್ಲಿ ಮಾನವೀಯ ಭಾವನೆಗಳಿದ್ದವು. ಇಸ್ಮಾಯಿಲ್ ಹಾಗೂ ಇನ್ನಿತರರು ಕೂಡಿ ತಂದೆಯೊಬ್ಬನನ್ನು ಕೊಂದು, ಅವನ ಮಗನನ್ನು ಕೊಲ್ಲುವುದನ್ನು ನೋಡಿ ಆತ ಆ ಭೀಕರ ದೃಶ್ಯದ ಸ್ಥಳದಿಂದ ಪಲಾಯನ ಮಾಡಬೇಕೆಂದು ಬಯಸಿದ್ದ. ದಯೆಯುಳ್ಳ ಅವನ ಮನದ ಮೇಲೆ ಆ ಭೀಕರ ಕೊಲೆಯ ಪ್ರಭಾವ ಹೇಗಾಗಿತ್ತು ಎಂಬುದನ್ನು ವಿವರಿಸಿದ್ದಾನೆ.

''.... ಆ ಮುದುಕನಿಗೆ ಯಾವ ವಿಪತ್ತು ಕಾದಿದೆ ಎಂಬುದರ ಅರಿವು ಇರಲಿಲ್ಲ.... ಆದರೆ ಅವನನ್ನು ನೋಡಿದ ನನಗೆ 'ಓಡಿಹೋಗು ಪಾರಾಗು' ಎಂದು ಒದರಬೇಕೆನಿಸಿತು... ನನ್ನ ಪ್ರಬಲ ಭಾವನೆಗಳ ಒತ್ತಡವನ್ನು ನಾನು ತಾಳಿಕೊಳ್ಳಲಾರದೆ.... ಎದ್ದು ಅವಸರದಿಂದ ನಡೆದೆ... ಅಯ್ಯೋ ದೇವ ! ಈಗಲೂ ಅವರು ನನ್ನ ಕಣ್ಣಮುಂದೆ ಬಂದು ನಿಂತಂತೆ ಅನ್ನಿಸುತ್ತಿದೆ, ಸಾಹೇಬರೆ (ಅದನ್ನು ಆತ ಬೊಟ್ಟು ಮಾಡಿ ತೋರಿಸಿದ).... ತಂದೆ ಮತ್ತು ಮಗ...... ಮಗನ ದೊಡ್ಡಕಣ್ಣುಗಳು ನನ್ನನ್ನು ನೋಡುತ್ತಲಿದ್ದವು. ನನ್ನ ದೃಷ್ಟಿಯೂ ಅವರ ಮೇಲೆಯೇ ಇತ್ತು. ಸಾಹೇಬರೆ, ನಾನು ಆ ರಾತ್ರಿಯನ್ನು ಹೇಗೆ ಕಳೆದೆ ಎಂದು ವರ್ಣಿಸಲೆ ! ನಾನು ಏನೇ ಮಾಡಿದರೂ ಆ ತಂದೆ ಹಾಗು ಮಗ ನನ್ನ ಮುಂದೆ ಇದ್ದಂತೆಯೇ ಭಾಸವಾಗುತ್ತಿತ್ತು. ಆ ಮುದಕನ ಧ್ವನಿ ಕೇಳಿಸಿ ಬಂದಂತಾದರೆ ಅವನ ಮಗನ ಕಣ್ಣುಗಳು ನನ್ನನ್ನೇ ನೋಡುತ್ತಿರುವಂತೆ ಅನಿಸುತ್ತಿತ್ತು. ನನ್ನ ಎದೆಯ ಮೇಲೆ ಸಾವಿರ ಸೈತಾನರು ಕುಳಿತಂತೆ ಅನ್ನಿಸುತ್ತಿತ್ತಲ್ಲದೆ ನಿದ್ರೆಯೆಂಬುದೇ ಬರಲಿಲ್ಲ. ಆ ಕೊಲೆ ನಿರ್ದಯವಾಗಿ ಮಾಡಿದ್ದು ವಿನಾಕಾರಣ ಮಾಡಿದ್ದು ಎಂದೆನಿಸಹತ್ತಿತು. ಅದನ್ನು ನಾನು ಮೌನವಾಗಿ ಹೇಗೆ ನೋಡಿದೆನೋ, ತಾಳಿಕೊಂಡನೋ ಎಂಬುದೇ ತಿಳಿಯದಾಯಿತು.''

ಇಂಥ ಭಾವನಾತ್ಮಕ ವ್ಯಕ್ತಿ ಮುಂದೆ ಮಾನವೀಯತೆಯನ್ನೇ ಕಳೆದುಕೊಂಡು, ಕಠೋರ ಹೃದಯದ ಕಟುಕನಾದ, ನಿರ್ದಯತೆಯ ಘೋರ ಕೊಲೆ ಪಾತಕಿಯಾದ ; ನಾರಕಿಯಾದ.

ಠಕ್ಕತನ, ಮೋಸ ಕೃತ್ಯಕ್ಕೆ ತನ್ನ ಶಾರೀರಿಕ ಸೌಂದರ್ಯ, ಬಟ್ಟೆ ಬರೆ, ವರ್ತನೆ, ಭಾಷೆ ಮೊದಲಾದವುಗಳನ್ನು ಬಳಸಿಕೊಂಡ. ಇವುಗಳಿಂದಲೇ ಸಂಚಾರಿಗಳ, ವ್ಯಾಪಾರಿಗಳ ಸಿರಿವಂತರ ಮನಸುರೆಗೊಂಡು ಅವರನ್ನು ತನ್ನ ಜಾಲದಲ್ಲಿ ಹಿಡಿದು ಬಿಡತ್ತಿದ್ದ. ಮುಗ್ಧ ಜನರಂತೂ ಇವನನ್ನು ಒಳ್ಳೆಯ ಮನುಷ್ಯ ಎಂದೇ ಬಗೆದಿದ್ದರು. ಆದರೆ ಅವನ ಅಂತರಂಗದ ಕೊಲೆಗಡುಕತನವನ್ನು ಕಂಡಿರಲಿಲ್ಲ. ಬಾಹ್ಯ ವ್ಯಕ್ತಿತ್ವವನ್ನು ನೋಡಿ ಅವನನ್ನು ಸಭ್ಯ, ಸಜ್ಜನ ಎಂದೇ ಪರಿಗಣಿಸುತ್ತಿದ್ದರು. ದಿನಕ್ಕೆಐದು ಸಲ ನಮಾಜ ಮಾಡುವ ಅತ್ಯಂತ ಧಾರ್ಮಿಕ, ಪವಿತ್ರ ಜೀವಿ ಎಂದೇ ಭಾವಿಸುತ್ತಿದ್ದರು. ರಮಜಾನದ ದಿನಗಲಲ್ಲಿ ಉಪವಾಸ ಮಾಡುವ, ಮೊಹರಮ್ಮದ ಸಮಯದಲ್ಲಿ ಹಸಿರು

ಬಟ್ಟೆ ತೊಡುವ ನಿಷ್ಠಾವಂತನೆಂದೆನಿಸಿಕೊಂಡಿದ್ದನು..... ಸ್ವಲ್ಪದರಲ್ಲಿ ಹೇಳಬೇಕೆಂದರೆ ಆತ ಸಾವಿರದ ಒಂದು ಧಾರ್ಮಿಕ ಕಾರ್ಯ ಮಾಡುವವನೆಂದು ಪ್ರಖ್ಯಾತನಾಗಿದ್ದ. ಅವನ ಅಂತರಂಗಕ್ಕೂ ಬಹಿರಂಗಕ್ಕೂ ಅದೆಷ್ಟು ವ್ಯತ್ಯಾಸವಿತ್ತು!

ಒಟ್ಟಾರೆ ಹೇಳುವುದಾದರೆ ಅಮೀರ ಅಲಿ ಒಬ್ಬ ಕೊಲೆಗಡುಕನಾಗಿದ್ದ. ಅವನ ಮುಂದೆ ಜಗತ್ತಿನ ಯಾವುದೇ ದೇಶದ ಕೊಲೆಗಡುಕನು ಸಾಮಾನ್ಯವಾಗಿ ಕಾಣಿಸಿಬಿಡುತ್ತಾನೆ. ಜರ್ಮನಿಯ ಫ್ರಿ ಬ್ಯಾಂಡ್ಸದವರು, ಲ್ಯಾಂಝಿಕ್ನೆಶ್ಚರು, ಮತ್ತು ಪೈರೇಟ್ಸ ಮೊದಲಾದವರು, ಅದರಂತೆ ನಮ್ಮ ಕಾಲದಲ್ಲಿಯ ಬರ್ಕ್ಸ ಮತ್ತು ಹೇರ್ಸರು... ಯಾವ ಲೆಕ್ಕಕ್ಕೆ ಹತ್ತುವರು ?

ಗಫೂರ ಖಾನನು ಅಷ್ಟೇ ಪೈಶಾಚಿಕನಾಗಿದ್ದಾನೆ. ಅಮೀರ ಅಲಿಗಿಂತ ಹೆಚ್ಚು ಕ್ರೂರ, ಹಿಂಸ್ರ, ಚಿತ್ರಹಿಂಸೆ ಕೊಡುವವನಾಗಿದ್ದಾನೆ. ಅವನು ಕೊಡುವ ದೈಹಿಕ ಹಿಂಸೆ ನೋಡಿದರೆ ಆತ ಆಸುರಿ ಪ್ರವೃತ್ತಿಯವನೆಂದೇ ಹೇಳಬೇಕಾಗುತ್ತದೆ. ಅವನಲ್ಲಿ ಮಾನವೀಯತೆಯ, ದಯೆಯ ಒಂದು ಕಣವೂ ಇರಲಿಲ್ಲ. ಥಗ್ಗರು, ಪಿಂಢಾರಿಗಳು ಇಬ್ಬರೂ ಪೈಶಾಚಿಕ ಪ್ರವೃತ್ತಿಯವರಾಗಿ ಭಾರತವು ಬರ್ಬರ ದೇಶವೆಂದು ತೋರಿಸಕೊಡುತ್ತಾರೆ. ಕಾದಂಬರಿಯಲ್ಲಿಯ ಇನ್ನಿತರ ಅಮುಖ್ಯ ಪಾತ್ರಗಳೂ ಬರ್ಬರ ಕೃತ್ಯದಲ್ಲಿ ತೊಡಗಿ ಭಯಾನಕ ಚಿತ್ರಣ ನೀಡುವಲ್ಲಿ ಸಹಕರಿಸುತ್ತವೆ.

ಪಿಂಢಾರಿಗಳ ಮುಖಂಡನಾದ ಚೀತೂ ನಿಜಾಗಿ ಇದ್ದ ಐತಿಹಾಸಿಕ ವ್ಯಕ್ತಿ ಆಗಿದ್ದಾನೆ. ತನ್ನದೇ ಆದ ಗುಂಪು ಕಟ್ಟಿಕೊಂಡು ಸುಲಿಗೆ ಮಾಡಿ, ಸಂಪತ್ತನ್ನು ಪಡೆದುಕೊಳ್ಳುವದೇ ಅವನ ವೃತ್ತಿ ಹಾಗೂ ಪ್ರವೃತ್ತಿ ತನಗೆ ಬೇಕಾದಾಗ ಬೇಕಾದಷ್ಟು ಹಣ ದೊರೆತರೆ ಪಿಶಾಚಿಯಂತೆ ವರ್ತಿಸುತ್ತಿರಲಿಲ್ಲ. ನೋಡಲು ಕ್ರೌರ್ಯದ ಮುಖ ಮುದ್ರೆ ಹೊಂದಿದವನಾಗಿದ್ದ. ಕೊನೆ ಕೊನೆಗೆ ತನ್ನ ಗುಂಪಿನ ಜನರ ಮೇಲೆ ನಿಯಂತ್ರಣ ಸಾಧಿಸುವಲ್ಲಿ ವಿಫಲನಾದ. ಹೀಗಾಗಿ ಇವನ ಜನರೆಲ್ಲ ಒಬ್ಬೊಬ್ಬರಾಗಿ ಇವನನ್ನು ಬಿಟ್ಟು ಬಿಟ್ಟರು. ಏಕಾಂಗಿಯಾಗಿ ಗುಡ್ಡಗಾಡಿನಲ್ಲಿ ಅಲೆದಾಡುತ್ತಲಿದ್ದಾಗ ಕೊನೆಗೆ ದಟ್ಟ ಅರಣ್ಯದಲ್ಲಿ ಹುಲಿಯ ಬಾಯಿಗೆ ಸಿಕ್ಕು ಸತ್ತು ಹೋದ. ಇದೆಲ್ಲ ಐತಿಹಾಸಿಕ ವಿಷಯವಾಗಿದೆ.

ಟೇಲರನು ಥಗ್ಗರ ಭಾಷೆಯನ್ನು ಚೆನ್ನಾಗಿ ಬಳಸಿಕೊಂಡಿದ್ದಾನೆ. ಹೋಶಿಯಾರ (ಎಚ್ಚರ) ಜೈಕಾಳಿ, ಪಾನಲಾವೋ(ವಿಳೇದೆಲೆ ತಾ) ತಂಬಾಕು ಲಾವೋ(ತಂಬಾಕು ತಾ) ಹುಕಾ ಲಾವೋ (ಹುಕ್ಕಾ ತಾ) ಮೊದಲಾದ ಶಬ್ದಗಳು ಅವರ ರಾಮಸಿ ಭಾಷೆಯಲ್ಲಿ ಸಾಂಕೇತಿಕ ಅರ್ಥ ಕೊಡುತ್ತವೆ. ಸಾಮಾನ್ಯರಿಗೆ ಅವುಗಳ ಅರ್ಥ ಬೇರೆಯಾಗುತ್ತದೆ. ಥಗ್ಗರಿಗೆ ಮಾತ್ರ ವಿಶಿಷ್ಟ ಅರ್ಥ ಕೊಡುವಂಥವಾಗಿವೆ. ಇವಲ್ಲದೆ ಆತ ನೂರಾರು ಹಿಂದುಸ್ತಾನಿ ಶಬ್ದ, ಗಾದೆ ಮಾತುಗಳನ್ನು ಔಚಿತ್ಯಪೂರ್ಣವಾಗಿ ಬಳಸಿ ಭಾಷೆಗೆ

ಅಧ್ಯಾಯ ೪

ಟೀಪೂ ಸುಲ್ತಾನ

(ಅರೆ ನಾಗರಿಕ ಭಾರತದ ಚಿತ್ರಣ)

ಈ ಕಾದಂಬರಿಯನ್ನು ೧೮೪೦ರಲ್ಲಿ ಪ್ರಕಟಿಸಿದ. ಇಂಗ್ಲೆಂಡಿನ ಜನ ಇವನಿಗೆ ಮತ್ತೊಂದು ಸುಂದರ ಐತಿಹಾಸಿಕ ಕಾದಂಬರಿ ಬರೆದುಕೊಡಬೇಕು ಎಂಬ ಬೇಡಿಕೆಯನ್ನಿತ್ತರು. ಬ್ರಿಟಿಷರ ಕಡು ವೈರಿ ಎನಿಸಿದ್ದ ಟೀಪೂ ಸುಲ್ತಾನನ ಜೀವನವನ್ನೇ ಆಧರಿಸಿ ಬರೆದರೆ ಹೆಚ್ಚು ಒಳ್ಳೆಯದು ಎಂಬ ಸಲಹೆಯೂ ಬಂತು. ಆ ವೇಳೆಗೆ ಕರ್ನಲ್ ವಿಲ್ಕ್ಸ್ ಎಂಬುವವನು 'ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌಥ ಇಂಡಿಯಾ' ಅರ್ಥಾತ್ 'ದ ಹಿಸ್ಟರಿ ಆಫ್ ಮೈಸೂರ' ಎಂಬ ಪುಸ್ತಕವನ್ನು ಪ್ರಕಟಿಸಿದ್ದ. ಅದು ಬಹಳಷ್ಟು ಪ್ರಸಿದ್ಧಿ ಪಡೆದದ್ದರಿಂದ ಟೇಲರನಿಗೆ ಟೀಪೂ ಸುಲ್ತಾನ ಎಂಬ ಕಾದಂಬರಿ ಬರೆಯಲು ಅವಶ್ಯವಾದ ವಸ್ತು ಸಾಮಗ್ರಿಯನ್ನು ಒದಗಿಸಿತು.

ದೌರ್ಜನ್ಯ, ಒರಟುತನ, ಕೌರ್ಯ, ಹಿಂಸೆ, ಕೊಲೆ, ಪಶುತ್ವ, ಹಿಂಸ್ರತನ ಮೊದಲಾದವುಗಳೆಲ್ಲ ಬರ್ಬರತೆಯನ್ನು ತೋರಿಸಿದರೆ ಕರುಣೆ, ದಯೆ, ಕನಿಕರ, ಮಿತ್ರತ್ವ, ವಿಶ್ವಾಸಿಕತನ, ಪರೋಪಕಾರ, ನಿಷ್ಠೆ ಘನತೆ, ಆದರಾತಿಥ್ಯ, ಹೃಯದ ವೈಶಾಲ್ಯ ಮೊದಲಾದವುಗಳು ಸಂಸ್ಕೃತಿ ಹಾಗೂ ನಾಗರಿಕತೆಯ ಪ್ರಮುಖ ಲಕ್ಷಣಗಳಾಗಿವೆ. ಈ ಕಾದಂಬರಿಯಲ್ಲಿ ಇವೆರಡರ ಕೊರತೆಯೇ ಇಲ್ಲ, ಹೀಗಾಗಿ 'ಟೀಪೂ ಸುಲ್ತಾನ : 'ಮೈಸೂರ ಯುದ್ಧದ ಒಂದು ಕಥೆ' ಎಂಬುದರಲ್ಲಿ ನಾಗರಿಕತೆ ಹಾಗೂ ಅನಾಗರಿಕತೆಯ ದ್ವಿಮುಖ ಚಿತ್ರಣವಿದೆ.

ಮೆರಗು ತಂದಿದ್ದಾನೆ. ಆ ಶಬ್ದಗಳು ವಿದೇಶಿಯರಿಗೆ ವಿಶೇಷವೆಂದೆನಿಸಲಿಕ್ಕಿಲ್ಲ, ಆದರೆ ಸತ್ವಪೂರ್ಣ, ಅರ್ಥಪೂರ್ಣವಾಗಿವೆ. ಆತ ಉರ್ದು, ಪರ್ಶಿಯನ್, ಸಂಸ್ಕೃತ ಹಾಗೂ ಮರಾಠಿ ಭಾಷೆಗಳ ಹಲವಾರು ಶಬ್ದಗಳನ್ನು ಸಮರ್ಪಕ ವಾತಾವರಣ ನಿರ್ಮಿಸಲು ಉಪಯೋಗಿಸಿದ್ದಾನೆ. ಉದಾಹರಣೆಗೆ - ರುಮಾಲ (ಕರವಸ್ತ್ರ) ಸಾಹುಕಾರ (ಶ್ರೀಮಂತ) ಗುಮಾಸ್ತ (ಕಾರಕೂನ) ಭಾಂಗ (ಗಾಂಜಾ) ಮಂತ್ರಾಸ (ಮಂತ್ರಗಳು) ಕೋರ್ಲಾ (ಚಾಬೂಕ, ಬಾರಕೋಲ) ಮಾಹುತ (ಮಾವುತ) ಅಂಕೂಸ (ಅಂಕುಶ) ಚಿಲಮ್ (ಹುಕ್ಕಾ) ಇನಾಮ (ಬಹುಮಾನ) ಇತ್ಯಾದಿ.

ಕಾದಂಬರಿಯಲ್ಲಿ ಪ್ರಮುಖ ನಾಯಕನೇ ಎಲ್ಲವನ್ನೂ ಹೇಳಿಬಿಡುವ ತಂತ್ರವನ್ನು ಬಳಸಿದ್ದಾನೆ. ಅಮೀರ ಅಲಿಯು ತಾನು ಮಾಡಿದ ಎಲ್ಲ ಕೊಲೆಗಳನ್ನು ಸವಿಸ್ತಾರವಾಗಿ, ಕಣ್ಮುಂದೆ ಬರುವಂತೆ ಶಾಂತಚಿತ್ತದಿಂದ ಹೇಳುತ್ತಾನೆ. ಅವನೇ ಮಾಡಿದವ, ಹೇಳುವವನಾದ್ದರಿಂದ ಎಲ್ಲವೂ ಸತ್ಯಯುತವೂ, ಅಧಿಕೃತವೂ ಆಗಿದೆ. ಟೇಲರನು ಕೇವಲ ಕೇಳುಗನಾಗಿ ಆತ ಹೇಳಿದ್ದೆಲ್ಲವನ್ನು ಬರೆದಿಟ್ಟುಕೊಂಡನು. ಭೀಕರತೆ, ಭಯಾನಕತೆಯಿಂದ ತುಂಬಿದ್ದರೂ ಸಹ ಕಾದಬಂರಿಯು ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. 'ಅರೇಬಿಯನ್ ನೈಟ್ಸ್' ಕಥೆಗ್ಳಲ್ಲಿಯ ಆಕರ್ಷಕತೆ, ಪ್ರಭಾವ ಇಲ್ಲಿಯೂ ನೋಡಬಹುದಾಗಿದೆ. ಪ್ರತಿಯೊಂದು ಪುಟವೂ ಕುತೂಹಲ ಕೆರಳಿಸಿಬಿಡುತ್ತದೆ. ಇದೆಲ್ಲ ಟೇಲರನು ಒಬ್ಬ ಸುಂದರ ಕತೆಗಾರ ಎಂಬುದನ್ನು ಸಾಬೀತು ಪಡಿಸತ್ತವೆ.

ಟೇಲರನ ಕಥನ ಕಲೆಯಲ್ಲಿ ದೋಷಗಳಿಲ್ಲವೆಂದಲ್ಲ, ಇವೆ. ಅನೇಕ ಕಥೆಗಳಲ್ಲಿ ವಿಷಯಾಂತರ ಮಾಡುತ್ತಾನೆ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾನೆ. ಹೀಗಾಗಿ ಕಥೆಯು ನೇರವಾಗಿ ಸಾಗುವುದಿಲ್ಲ, ಕೆಲವಡೆಗಳಲ್ಲಂತೂ ಟೇಲರನು ನೀತಿ ಬೋಧಕನಾಗಿ ಕಾಣಿಸಿಕೊಳ್ಳುತ್ತಾನೆ. ಆದ್ದರಿಂದ ಶ್ರೇಷ್ಠ ಕಲಾಕಾರನಾಗಿ ಗೋಚರಿಸುವದಿಲ್ಲ.

ಇದನ್ನು ಓದಿದ ಆಂಗ್ಲರು ಭಾರತವು ನಾಗರಿಕ ದೇಶವೇ ? ಎಂದು ಪ್ರಶ್ನಿಸುವಂತಾಯಿತು. ಥಗ್ಗರನ್ನು, ಪಿಂಢಾರಿಗಳನ್ನು ಸದೆಬಡಿದದ್ದನ್ನು ತೋರಿಸಲು ಹೋಗಿ ಭಾರತ ಬರ್ಬರ ದೇಶವೆಂದು ಪ್ರಚಾರಗೊಂಡಿತು. ಆ ತಪ್ಪು ಕಲ್ಪನೆ ನಿವಾರಿಸಲು ಆತ ಹಿಂದೂ, ಮುಸ್ಲಿಂ ಇಬ್ಬರೂ ಸುಸಂಸ್ಕೃತರೂ, ನಾಗರಿಕರೂ ಆಗಿದ್ದಾರೆಂದು ತಿಳಿಯ ಪಡಿಸಲು 'ಟೀಪೂಸುಲ್ತಾನ' ಎಂಬ ಕಾದಂಬರಿ ಬರೆಯಬೇಕಾಯಿತು.

ಈ ಐತಿಹಾಸಿಕ ಕಾದಂಬರಿಯಲ್ಲಿ ಕಾಸಿಮ ಅಲಿ ಪಟೇಲ ಹಾಗೂ ಅವನ ಪ್ರೇಯಸಿಯಾದ ಅಮಿನಾಳ ಪ್ರಣಯವೂ, ಅದರಂತೆ ಕ್ಯಾಪ್ಟನ್ ಕಾಮ್ಬೆನ್ ಎಂಬುವವನು ಪ್ರೇಯಸಿಯಾದ ಎಮಿ ಎಂಬುವವಳನ್ನು ಪ್ರೇಮಿಸಿದ್ದನ್ನು ಮೈಸೂರಿನ ಯುದ್ಧದ ಹಿನ್ನೆಲೆಯಲ್ಲಿ ತಂದಿದ್ದಾನೆ. ಸಂಪೂರ್ಣ ಭಾರತವನ್ನು ಕೈವಶ ಮಾಡಿಕೊಳ್ಳ ಬೇಕೆಂಬ ಬ್ರಿಟಿಷರ ಮಹಾತ್ವಾಕಾಂಕ್ಷೆಗೆ ಟೀಪೂ ಸುಲ್ತಾನ ಅಡ್ಡ ಬಂದಿದ್ದ. ಹೀಗಾಗಿ ಬ್ರಿಟಿಷರು ಅವನನ್ನು ಬಹಳಷ್ಟು ದ್ವೇಷಿಸುತ್ತಿದ್ದು, ಅವನನ್ನು ಸೋಲಿಸಿ, ಕೊಲ್ಲುವವರೆಗೂ ಬೆನ್ನು ಬಿಡಲಿಲ್ಲ. ಶಾಂತಿಯುತ ಒಪ್ಪಂದಗಳಾಗಿದ್ದರೂ, ಆಗಾಗ ಹೋರಾಟ ನಡೆದೇ ಇರುತ್ತಿತ್ತು. ೧೭೯೯ರಲ್ಲಿ ಮೈಸೂರಿನ ಕೊನೆಯ ಯುದ್ಧವಾಗಿ ಟೀಪೂನನ್ನು ಸೋಲಿಸಿ, ಕೊಂದರು. ಹೀಗಾಗಿ ಈ ಕಾದಂಬರಿಗೆ ಮೈಸೂರ ಯುದ್ಧದ ಒಂದು ಕಥೆ ಎಂಬ ಉಪ-ಶೀರ್ಷಿಕೆಯನ್ನು ಕೊಡಲಾಗಿದೆ.

ಐತಿಹಾಸಿಕ ಘಟನಾವಳಿಗಳಿಗೆ ಕಾಲ್ಪನಿಕ ಪಾತ್ರವಾದ ಕಾಸಿಂ ಅಲಿ ಪಟೇಲ ಎಂಬುವವನ ಪ್ರೇಮಪ್ರಕರಣವು, ಟೀಪೂವಿನ ಬಲಗೈ ಬಂಟನಾಗಿ ಆತ ಯುದ್ಧ ಮಾಡಿದ್ದು, ಸಾಯುವವರೆಗೂ ಆತ ನಿಜವಾದ ಪ್ರೇಮಿಯಾಗಿ ಬಾಳಿದ್ದು ಮುಖ್ಯ ಭಾಗವಾಗಿದೆ. ಈತ ಪ್ರೀತಿಸಿದ್ದು ಆಮೀನಾ ಅವಳು ರಹಮಾನ ಖಾನನೆಂಬ ಟೀಪೂವಿನ ವಯಸ್ಸಾದ ಸರದಾರನ ಮೂರನೆಯ, ತಾರುಣ್ಯವುಳ್ಳ ಹೆಂಡತಿ ಆಗಿದ್ದಳು. ಗಂಡನಾದ ರಹಮಾನಖಾನ ಮಡಿದ ಬಳಿಕ ಕಾಸಿಂ ಅಲಿ ಪಟೇಲ ಅವಳನ್ನು ಮದುವೆಯಾದ ಎಂಬ ಕಥೆಗೆ ಕ್ಯಾಪ್ಟನ್ ಕಾಮ್ಬೆನ್ ಎಂಬ ಬ್ರಿಟಿಷ್ ಯೋಧ ಟೀಪೂವಿನ ಕೈಗೆ ಸಿಕ್ಕು, ಅವನ ಕ್ರೂರ ಹಿಂಸೆಗೆ ಬಲಿಯಾಗಿ, ಕೈದಿಯಾಗಿ ಬಾಳಿದ. ಕೊನೆಗೆ ಯುದ್ಧಗೆದ್ದ ನಂತರ ಬಿಡುಗಡೆ ಹೊಂದಿ ತನ್ನ ದೇಶಕ್ಕೆ ಮರಳಿ ಹೋಗಿ, ಪ್ರೇಯಸಿಯಾದ ಎಮಿ ಹೇವರ್ಡಳನ್ನು ಕೂಡಿಕೊಂಡ ಎಂಬ ಕಾಲ್ಪನಿಕ ಕಥೆಯೂ ಸೇರಿದೆ. ಐತಿಹಾಸಿಕ ಸತ್ಯದ ಜೊತೆಗೆ ಕಾಲ್ಪನಿಕ ಕಥೆಯೂ ಸೇರಿಕೊಂಡದ್ದರಿಂದ ಕಾಂದಬರಿಯು ಸುಂದರವೂ, ಪ್ರಭಾವಿಯೂ ಆಗಿದೆ, ನೈಜ ಚಿತ್ರಣವನ್ನು ಕೊಟ್ಟಿದೆ.

ಬರ್ಬರತೆಯ ಅಂಶವು ಟೀಪೂವಿನ ಹಾಗೂ ಅವನ ಸೈನ್ಯದ ಅನೇಕ ಚಟುವಟಿಕೆಗಳಲ್ಲಿ ಗೋಚರಿಸಿದಂತೆ ಸಂಸ್ಕೃತಿ ಹಾಗೂ ನಾಗರಿಕತೆಯ ದರ್ಶನವು ಪ್ರಣಯ ಪ್ರಸಂಗಗಳಲ್ಲಿ ಗೋಚರಿಸುತ್ತವೆ. ಕೈದಿಗಳಿಗೆ ಟೀಪೂ ಕೊಡುತ್ತಿದ್ದ ಚಿತ್ರಹಿಂಸೆ, ಆತ ಹಿಂದುಗಳಿಗೆ ಕೊಡುತ್ತಿದ್ದ ತೊಂದರೆ, ಉದಾಹರಣೆಗೆ ತನಗೆ ಸಲಾಮು ಹೊಡೆಯಲಿಲ್ಲವೆಂಬ ಕಾರಣಕ್ಕೆ ಒಬ್ಬನಿಗೆ ಹತ್ತು ಸಲ ಬೆನ್ನಿಗೆ ಕೊಟ್ಟ ಘಟಂ ಶಿಕ್ಷೆ ಮತ್ತು ಬಡ ಬ್ರಾಹ್ಮಣನೊಬ್ಬನಿಗೆ ಮುಖದ ತುಂಬೆಲ್ಲ ರಕ್ತ ಹಚ್ಚಿ ಓಡಿಸಿದ್ದು ಅವನ ಪಾಶವೀ ಜೀವನದ ಪ್ರತೀಕಗಳಾಗಿವೆ.

ಟೀಪೂ ತನ್ನ ಶಿಸ್ತಿನ ಸೈನ್ಯದೊಂದಿಗೆ ಬಿದನೂರು ಕೋಟೆಯನ್ನು ಸಂರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ. ಬಂಡೆದ್ದ ನಾಯಕರನ್ನು ಸದೆ ಬಡಿದು

ತ್ರಾವಣಕೋರನ್ನು ಕೈವಶಮಾಡಿಕೊಂಡು, ಕೊಯಿಮತ್ತೂರಿನಲ್ಲಿ ಇಂಗ್ಲೀಷರನ್ನು ಸೋಲಿಸಿದ. ಅನೇಕ ಕ್ರಿಶ್ಚಿಯನ್ನರನ್ನು ಸೆರೆಯಾಳುಗಳನ್ನಾಗಿ ಮಾಡಿಕೊಂಡನಲ್ಲದೆ ಬಿದನೂರನ್ನು ಲೂಟಿ ಮಾಡಿದ, ಅನೇಕರ್ರು ಒತ್ತಾಯದಿಂದ ಮುಸ್ಲಿಂರನ್ನಾಗಿ ಮತಾಂತರ ಗೊಳಿಸಿದ. ಯಾವ ಯಾವ ನಾಯಕರು ಮತಾಂತರಕ್ಕೆ ಸಿದ್ಧರಾಗಲಿಲ್ಲವೋ ಅವರೆಲ್ಲರನ್ನು ಟೀಪೂ ಹಾಗೂ ಅವನ ಸೈನಿಕರು ಪ್ರಾಣಿಗಳನ್ನು ಬೆನ್ನಟ್ಟಿ ನಾಶ ಮಾಡುವಂತೆ ಹಾಳು ಮಾಡಿದರು. ಅದರಂತೆಯೇ ತ್ರಾವಣಕೋರದ ಮೇಲೂ ದಾಳಿ ಮಾಡಿದಾಗ, ವಶಪಡಿಸಿಕೊಂಡ ನಂತರ ಅವನ ಸೈನಿಕರು ಸ್ವೇಚ್ಛಾಚಾರ, ಅತ್ಯಾಚಾರ ಗೈದು ಅನಾಗರಿಕತೆಯನ್ನು ತೋರಿಸಿದರು. ಜನರನ್ನು ಮತಾಂತರಗೊಳಿಸುವುದು, ಮತ್ತು ಸೆರೆಯಾಳುಗಳನ್ನಾಗಿ ಮಾಡುವುದೇ ರಾಜಧರ್ಮವಾಗಿತ್ತು. ಇಸ್ಲಾಂ ಪ್ರಚಾರಕನಾಗಿ, ಪ್ರತಿನಿಧಿಯಾಗಿ ಹಿಂದುಗಳನ್ನು ಮತಾಂತರ ಗೊಳಿಸುವದು, ಸಾರ್ವಜನಿಕವಾಗಿ ಅವರಿಗೆ ಆಕಳ ಮಾಂಸ ತಿನ್ನಲು ಹಚ್ಚುವುದು, ಮತ್ತು ಗೋಹತ್ಯೆ ಮಾಡಿಸುವುದು ಅವನ ಕಾರ್ಯವಾಗಿತ್ತು. 'ಸುಡಿರಿ, ಕೊಲ್ಲಿರಿ, ಮತಾಂತರಗೊಳಿಸಿರಿ, ಲೂಟಿ ಮಾಡಿರಿ' - ಎಂಬುದು ಸಾಮಾನ್ಯ ರಾಜಾಜ್ಞೆಯಾಗಿತ್ತು. ಅನೇಕ ಕಡೆಗಳಲ್ಲಿ ಆತ ತಾನು ಕ್ರೂರ, ದರ್ಪ-ದೌರ್ಜನ್ಯದವ ಎಂದು ತೋರಿಸಿ ಕೊಡುತ್ತ ಇಸ್ಲಾಂ ಧರ್ಮಕ್ಕೆ ಜನರನ್ನು ಮತಾಂತರಗೊಳಿಸಿ ಬಿಡುತ್ತಿದ್ದ.

ಟೀಪೂವಿನ ಘೋರ ಕೃತ್ಯಗಳಿಂದ ಕೈದಿಗಳಿಗೆ ಕೊಡುವ ಕಠೋರ ಶಿಕ್ಷೆ, ಮತಾಂತರ ಪರಮತ ವೈರತ್ವಗಳೆಲ್ಲವೂ ಅವನನ್ನು ದುಷ್ಟ ಅಸಂಸ್ಕೃತ ಎಂಬುದನ್ನು ತೋರಿಸುತ್ತವೆ. ಆದರೆ ಆ ಕಾಲದ ಸ್ಥಿತಿ -ಗತಿಗಳನ್ನು ಅವಲೋಕಿಸಿದಾಗ ಅವನ ಕೃತ್ಯಗಳೆಲ್ಲವೂ ಸಹಜ ಹಾಗೂ ಅನಿವಾರ್ಯವೆಂದೂ ಅನಿಸುವವು. ಅವನು ಕೊಡುತ್ತಿದ್ದ ಶಿಕ್ಷೆಗಳೆಲ್ಲವೂ ಘೋರ ಹಾಗೂ ಕಠೋರವಾಗಿದ್ದವೇ ಹೊರತು ಅಮಾನುಷಾಗಿರಲಿಲ್ಲ.

ಸ್ವಮತ ಪ್ರೇಮ, ಪರಮತ ವೈರತ್ವ ಹಾಗೂ ಯುದ್ಧಗಳು ಅಲ್ಲದೆ ಅವನ ಹವ್ಯಾಸಗಳು, ಆಟ-ಚಲ್ಲಾಟಗಳೂ ಘೋರವಾಗಿದ್ದು ಬೇಟೆಯಾಟ ಮೊದಲಾದವುಗಳಲ್ಲಿ ಆತ ಅತ್ಯಾನಂದ ಪಡುತ್ತಿದ್ದನು. ಹೋರಿಯೊಂದನ್ನು ಕೊಂದು ಅದರ ರಕ್ತವನ್ನು ಒಬ್ಬ ಬ್ರಾಹ್ಮಣನ ಮುಖಕ್ಕೆ ಸವರುವದು, ಅದರಂತೆ ಆನೆಯ ಮರಿಗೆ ಖಡ್ಗದಿಂದ ಹೊಡೆದು ಬಿಡವುದು, ಅವನಲ್ಲಿರುವ ರಕ್ತಪಿಪಾಸುತನವನ್ನು ತೋರುತ್ತವೆ.

ತನ್ನ ಅರಮನೆಯಲ್ಲಿ ತೆಗೆಯಿಸಿದ ತೈಲ ಚಿತ್ರಗಳಲ್ಲೂ ಸಹ ಆತ ಕ್ರೂರ, ಸಂಸ್ಕೃತಿಹೀನ ಎಂಬುದನ್ನು ತೋರಿಸುತ್ತವೆ. ಅವನ ಅರಮನೆಯಾದ ದರಿಯಾ ದೌಲತದ ಗೋಡೆಗಳ ಮೇಲೆ ಮುಗ್ಧ ಕೈದಿಗಳಿಗೆ ಕೊಟ್ಟ ಶಿಕ್ಷೆ, ಹಿಂಸೆಗಳು ಅವನು ಭೀಕರ ಸ್ವಭಾವದ ವ್ಯಕ್ತಿಯಾಗಿದ್ದನೆಂಬುದರ ಸಾಕ್ಷಿಯಾಗಿವೆ.

ಈ ಭೀಕರತೆಯ ಹಿನ್ನೆಲೆಯಲ್ಲಿ ಕಾಸಿಂ ಅಲಿ ಪಟೇಲ ಎಂಬ ತರುಣ - ಪ್ರೇಮಿಯ, ಯುದ್ಧದಲ್ಲಿಯ ಸಾಹಸಗಳನ್ನು ಪ್ರೇಮ ಸಲ್ಲಾಪಗಳನ್ನು ಚಿತ್ರಿಸಿದ್ದರಿಂದ ಮೋಹಕ ವ್ಯತ್ಯಾಸ ಕಾಣುತ್ತದೆ. ಟೀಪೂವಿನ ನಿಷ್ಠ ಸೇವಕ, ಸರದಾರನಾಗಿ, ಕಾಸಿಂ ಅಲಿ ಪಟೇಲನು ಮೈಸೂರಿನ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿ ತನ್ನ ಶಕ್ತಿ - ಸಾಮರ್ಥ್ಯ, ಜಾಣ್ಮೆ, ಪರಾಕ್ರಮಗಳನ್ನು ವಿಶೇಷವಾಗಿ ತ್ರಾವಣಕೋರನ್ನು ವಶಪಡಿಸಿಕೊಂಡಾಗ ತೋರಿಸುತ್ತಾನೆ.

ತುಂಗಭದ್ರಾ ನದಿಯಲ್ಲಿ ಮುಳುಗಿ ಸಾಯುತ್ತಲಿದ್ದ ಅಮೀನಾಳನ್ನು ಅವಳ ಗಂಡನಾದ ರೆಹಮಾನಖಾನನು ಉಳಿಸಲಸಮರ್ಥನಾಗಿದ್ದಾಗ ತರುಣ ಕಾಸಿಂ ಅಲಿಯು ಈಸುತ್ತ ಹೋಗಿ ಬದುಕಿಸಿದಾಗ ಅವಳಲ್ಲಿ ಪ್ರೇಮ ಉಂಟಾಯಿತು. ಸುಂದರ ಯುವತಿಯಾದ ಅವಳೂ ಸಹ ಅವನಲ್ಲಿ ಅನುರುಕ್ತಳಾಗಿಬಿಟ್ಟಳು. ಆದರೆ ಅದನ್ನು ಅವಳು ವ್ಯಕ್ತಗೊಳಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಅವಳು ಮುದಿ ಸರದಾರನಾದ ರೆಹಮಾನಖಾನನ ಪತ್ನಿಯಾಗಿದ್ದಳು. ಕಾಸಿಂ ಅಲಿ ಪಟೇಲ ಹಾಗೂ ಅಮೀನಾಳಲ್ಲಿ ಉಂಟಾದ ಪ್ರಣಯವು ವಯಸ್ಕನಾದ ರಹಮಾನಖಾನನಲ್ಲಿಯ ಕಾಮುಕತೆಯನ್ನು ಹೀಗಳೆದು ಅವನಲ್ಲಿಯ ಸಹಜ ಪ್ರೇಮದ ಪತಾಕೆಯನ್ನು ಎತ್ತಿ ಹಿಡಿಯುತ್ತದೆ. ಅದರಂತೆಯೇ ಕ್ಯಾಪ್ಟನ್ ಕಾಮ್ಬನ್ನನು ತನ್ನ ಪ್ರೇಯಸಿಯಾದ ಎಮಿಯ ಬಗ್ಗೆ ಹೊಂದಿದ ಪ್ರೀತಿಯು ಕಾದಂಬರಿಯನ್ನು ಸಿರಿವಂತಗೊಳಿಸುತ್ತದೆ.

ರೆಮಾನಖಾನನ ಮೃತ್ಯವಿನ ನಂತರ, ಅಮೀನಾಳು ತನ್ನ ತವರೂರಾದ ಹೈದ್ರಾಬಾದಿಗೆ ಮರಳಿ ಹೋದಳು. ಅಲ್ಲಿಯೂ ಕಾಸಿಂ ಅಲಿಯು ಭೆಟ್ಟಿಯಾಗಿ ಅವಳನ್ನು ಮದುವೆಯಾದನು. ಈ ರೀತಿ ಕಾದಂಬರಿಯ ಪ್ರಣಯ ಭಾಗವು ಕಾಸಿಂ ಅಲಿಯು ಮಜನುವಿನಂತೆ, ಪ್ರೇಮದಲ್ಲಿ ನಿಷ್ಠನಾಗಿದ್ದನೆಂದು, ರುಸ್ತುಂನಂತೆ ಯುದ್ಧದಲ್ಲಿ ಮಹಾಪರಾಕ್ರಮಿ ಆಗಿದ್ದನೆಂದೂ ತಿಳಿಸಿಕೊಡುತ್ತದೆ.

ಒಂದು ಕಡೆ ಕಾದಂಬರಿಯು ಟೀಪೂವಿನ ಅರಸುತನ ತೋರಿದರೆ ಇನ್ನೊಂದೆಡೆ ಕಾಸಿಂ ಅಲಿ ಹಾಗೂ ಅಮೀನಾಳ ಸುಂದರ ಪ್ರೇಮದ ದರ್ಶನ, ಕ್ಯಾಪ್ಟನ್ ಹಾಗೂ ಎಮಿಯ ಪ್ರೇಮದ ದರ್ಶನ ಮಾಡಿಸುತ್ತದೆ. ಅನಾಗರಿಕತೆಯ, ದೌರ್ಜನ್ಯದ ಚಿತ್ರಣವನ್ನು ಪ್ರೇಮ ಪ್ರಸಂಗ, ವಿವಾಹದ ಚಿತ್ರಣವು ನಶಿಸಿಹಾಕಿ, ನಾಗರಿಕ ಜೀವನದ ಲಕ್ಷಣಗಳಾದ ಪ್ರೀತಿ, ವಿಶ್ವಾಸ, ಮಾನವೀಯತೆಯ ಮೌಲ್ಯವನ್ನು ಸಾರಿ ಹೇಳುತ್ತದೆ. ಹಾಗೂ ಆ ಕಾಲದ ಭಾರತದ ಚಿತ್ರಣವನ್ನು ವಾಸ್ತವಿಕವಾಗಿದ್ದಂತೆ, ಸುಂದರವಾಗಿ ಪ್ರಕಟಗೊಳಿಸುತ್ತದೆ.

ಈ ಕಾದಂಬರಿಗೆ ಮೂರು ಕಥೆಗಳನ್ನು ಜೋಡಿಸಿದ ವಸ್ತುವಿದೆ. ಮುಖ್ಯ ಕಥೆಯಲ್ಲಿ ಟೀಪೂವಿನ ಜೀವನ, ಹೋರಾಟ, ಸಾಹಸ, ದರ್ಪ-ದೌರ್ಜನ್ಯಗಳು

ಇದ್ದು ಅವು ಐತಿಹಾಸಿಕವಾಗಿವೆ. ಆತ ಮಾಡಿದಯುದ್ಧ, ದಾಳಿಗಳಲ್ಲಿಯ ಐದು ಪ್ರಮುಖ ಘಟನೆಗಳು ಇಂತಿವೆ.

೧. ಬಿದನೂರನ್ನು ವಶಪಡಿಸಿಕೊಂಡಿದ್ದು . ಆ ಬಳಿಕ ತಿರುಗಿ ಬಿಟ್ಟು ಕೊಟ್ಟದ್ದು ೧೭೮೪ರ ಮಂಗಳೂರು ಒಪ್ಪಂದದೊಂದಿಗೆ ಮುಗಿಯುತ್ತದೆ.

೨. ಟೀಪೂ ಪಶ್ಚಿಮ ಭಾಗಗಳಾದ ಮಲಬಾರ, ತ್ರಾವಣಕೋರ, ಮತ್ತು ಕೂರ್ಗನ್ನು ೧೭೮೫ರಿಂದ ೧೭೯೦ರ ಅವಧಿಯ ವರೆಗೆ ವಶಪಡಿಸಿಕೊಂಡ ಯತ್ನಗಳ ಬಗ್ಗೆ ಇದೆ.

೩. ಟೀಪೂ ನಿರ್ಝಾಮರ ಸಹಾಯದಿಂದ, ಮರಾಠರ ಸಹಾಯದಿಂದ ಹಾಗೂ ಫ್ರೆಂಚರ ಸಹಾಯದಿಂದ ತನ್ನ ಗಡಿಯನ್ನು ಸಂರಕ್ಷಿಸಿಕೊಳ್ಳಲೆತ್ನಿಸಿದ್ದು ಇದೆ.

೪. ಕಾರ್ನವಾಲೀಸನು ಕದನ ಮಾಡಿ ಬೆಂಗಳೂರನ್ನು ವಶಪಡಿಸಿಕೊಂಡು ೧೭೯೨ರಲ್ಲಿ ಶ್ರೀರಂಗಪಟ್ಟಣದ ಒಪ್ಪಂದ ಮಾಡಿಕೊಂಡಿದ್ದು ಇದೆ.

೪. ೧೭೯೯ರಲ್ಲಿ ಮೈಸೂರಿನ ಕೊನೆಯ ಯುದ್ಧವಾಗಿ ಟೀಪುವಿನ ಸೋಲು ಹಾಗೂ ಸಾವುಗಳವರೆಗೆ ಇದೆ.

ಈ ಐತಿಹಾಸಿಕ ವಿಷಯಗಳಿಗೆ ಸಾಹಸಿಯಾದ, ತರುಣನಾದ ಕಾಸಿಂ ಅಲಿ ಪಟೇಲನ ಪ್ರೇಮದ ಕಥಾ ಭಾಗವನ್ನು ಜೋಡಿಸಲಾಗಿದೆ. ಕಾಸಿಂ ಅಲಿಯು ಅಮೀನಾಳನ್ನು ಒಮ್ಮೆಯಲ್ಲ. ಎರಡುಸಲ ಸಾವಿನ ದವಡೆಯಿಂದ ಪಾರು ಮಾಡಿದ. ಮರಾಠರ ದಾಳಿಗಳು, ನಾಯಕರ ವಿರುದ್ಧ ನಡೆದ ಯುದ್ಧ, ಬೇಟೆಯಾಟ ಮೊದಲಾದವುಗಳು ಕಾದಂಬರಿಗೆ ಮೆರಗು ತಂದಿವೆ. ಇದರೊಡನೆ ಟೀಪೂವಿನ ಯುದ್ಧ ಕೈದಿಯಾಗಿದ್ದ ಕ್ಯಾಪ್ಟನ್ ಕಾಮ್ಬನ್ನನ ಪ್ರೇಮದ ಕಥೆಯು ಆಂಗ್ಲರ ಹಾಗೂ ಭಾರತೀಯ ಪ್ರೇಮ ವಿಧಾನದಲ್ಲಿಯ ವ್ಯತ್ಯಾಸವನ್ನೂ ತೋರಿಸುತ್ತದೆ. ಹೀಗೆ ಟೀಪೂ, ಕಾಸಿಂ ಅಲಿ, ಕ್ಯಾಪ್ಟನ್ ಕ್ರಾಂಪ್ಟನ್ನರು ಮೂರು ಕಥೆಗಳ ಪ್ರಮುಖ ವ್ಯಕ್ತಿಗಳಾಗಿ ಗೋಚರಿಸಿ, ಮೂರು ಕಥೆಗಳು ಹಾಸು ಹೊಕ್ಕಾಗಿರುವಂತೆ ಮಾಡುತ್ತದೆ

ಕಥೆಗಳನ್ನು ಮುಂದುವರೆಸಿಕೊಂಡು ಹೋಗುವಾಗ ಟೇಲರನು ವ್ಯತ್ಯಾಸ ಮಾಡುವ, ಒಂದರ ಬದಿಗೆ ಇನ್ನೊಂದನ್ನಿಟ್ಟು ನೋಡುವ ತಂತ್ರವನ್ನು ಬಳಸಿದ್ದಾನೆ. ಕಾಮ್ಬನ್ನನ ಪರಿಶುದ್ಧ ಪ್ರೇಮದ ಜೊತೆಗೆ ಕಾಸಿಂ ಅಲಿಯ ಪ್ರೇಮವನ್ನುಇಟ್ಟು ಅದರಲ್ಲಿಯ ಸಾಮ್ಯ ವೈಷಮ್ಯಗಳನ್ನು ತೋರಿಸಿಕೊಡುತ್ತಾನೆ. ಕತೆಗೆ ಇರುವ ಹಿನ್ನೆಲೆಯಲ್ಲೂ ನಾಗರಿಕ, ಅನಾಗರಿಕತೆಯ ಸ್ಪಷ್ಟವಾದ ಚಿತ್ರಣ ಕೊಡುತ್ತಾನೆ. ಟೀಪೂವಿನ ಮುಖಾಂತರ ಭಾರತವನ್ನು ತೋರಿದರೆ ಕ್ಯಾಪ್ಟನ್ ಕಾಮ್ಬನ್ನನ ಮುಖಾಂತರ ಇಂಗ್ಲಂಡನ್ನು ತೋರಿಸುತ್ತಾನೆ.

ತ್ರಾವಣಕೋರನ್ನು ಹಾಳುಗೆಡಹಿದ ನಂತರದ ವರ್ಣನೆಯಲ್ಲಿ ಕಂಡು ಬರುವ ಬರ್ಬರತೆ ಹೀಗಿದೆ.

''ನಗಾರಿ, ಗುಂಡು, ಸಿಡಿಮದ್ದುಗಳ ಸಪ್ಪಳದೊಡನೆ ಕೂಗಾಟವೂ ಸೇರಿತು. ಅದನ್ನು ಕೇಳಿದವರಿಗೆ ಕಿವಿ ಗಡಚಿಕ್ಕಿದಂತಾಗುತ್ತಿತ್ತು.

..... ಆರು ದಿನಗಳಲ್ಲಿ ಸುಮಾರು ಇಪ್ಪತ್ತು ಮೈಲು ಪ್ರದೇಶವನ್ನು ಯಾವುದೇ ಬಗೆಯ ಉಪಯೋಗಕ್ಕೆ ಬರದಂತೆ ಹಾಳು ಮಾಡಿಬಿಟ್ಟರು'' ಆದರೆ ಇಂಗ್ಲೆಂಡಿನ ವರ್ಣನೆ ಹೀಗಿದೆ.

''ಜೂನ ತಿಂಗಳ ಸಂತಸದಾಯಕ ದಿನಗಳಲ್ಲಿಅದು ಒಂದಾಗಿತ್ತು. ಇಡೀ ನಿಸರ್ಗವು ಮಾನವರು ಮೆಚ್ಚಿ ಕೊಂಡಾಡುವಂತೆ ತನ್ನ ಸಂಪತ್ತನ್ನು ಪ್ರದರ್ಶಿಸುತ್ತಿತ್ತು. ಕೌಸ್ಲಿಪ್, ಡೇಸಿ, ಬಟರಕಪ್ ಮೊದಲಾದ ಸಾವಿರ ಬಗೆಯ ಹೂಗಳು ತನ್ನಸೌಂದರ್ಯ ಹಾಗೂ ಪರಿಮಳದೊಂದಿಗೆ ಸೂರ್ಯನ ಬೆಳಕಿನಲ್ಲಿ ವಿಕಸನಗೊಂಡು ಬಿಟ್ಟಿದ್ದವು ಮತ್ತು ಉಪಕೃತ ಭಾವನೆಯೊಂದಿಗೆ ಮೌನವಾಗಿ ಪ್ರೇಮಿಸುತ್ತಿದ್ದವು''

ಭಾರತದ ಭೀತಿದಾಯಕ ಹಿನ್ನೆಲೆಯನ್ನು, ಶಾಂತವಾದ ಮತ್ತು ಸುಂದರವಾದ ಇಂಗ್ಲಂಡಿನ ನಿಸರ್ಗದ ರಮಣೀಯತೆಯ ಹಿನ್ನೆಲೆಯೊಡನೆ ಆತ ವ್ಯತ್ಯಾಸಿಸಿದ್ದು ಹೀಗೆ.

ಪಾತ್ರ ಚಿತ್ರಣದಲ್ಲೂ ನಾಗರಿಕ ಹಾಗೂ ಅನಾಗರಿಕ ಎಂಬೆರಡು ಭಾಗಗಳಿವೆ. ಟೀಪೂ ಹಾಗೂ ಜಾಫರ ಇವರಿಬ್ಬರು ಅನಾಗರಿಕರಾಗಿದ್ದಾರೆ. ಕಾಸಿಂ ಅಲಿ, ರಹಮಾನಖಾನ,ಅಮೀನಾ, ಫಕೀರ ಮೊದಲಾದವರು ನಾಗರಿಕತೆಯುಳ್ಳವ ರಾಗಿದ್ದಾರೆ.

ಟೀಪು ಸುಲ್ತಾನನು ಕ್ರೂರ, ದೌರ್ಜನ್ಯವುಳ್ಳ ಧರ್ಮಾಂಧನಾಗಿದ್ದು ಹಿಂದುಗಳನ್ನು ಕ್ರಿಶ್ಚಿಯನ್ ಕೈದಿಗಳನ್ನು ಶಿಕ್ಷಿಸುವಲ್ಲಿ ನಿರ್ದಯನಾಗಿದ್ದನು. ಆತ ಬ್ರಿಟಿಷರು ಭಾರತವನ್ನು ವಶಪಡಿಸಿಕೊಳ್ಳುವರೆಂದು ಬಗೆದು ಅವರನ್ನು ಬಹಳಷ್ಟು ದ್ವೇಷಿಸುತ್ತಿದ್ದ. ತನ್ನನ್ನು ಮಾತ್ರ ದೇವದೂತ ಎಂದು ಬಗೆದಿದ್ದ. ಮುಸ್ಲಿಮರ ಬಗ್ಗೆ ಮೃದು ಧೋರಣೆ ತಾಳಿದ್ದ. ಈತ ತನ್ನ ರಾಜ್ಯದಲ್ಲಿ ಮುಸಲ್ಮಾರನು ಏನು ಬೇಕಾದ್ದನ್ನು ಮಾಡಲಿ ಎಂದು ಬಿಡುತ್ತಿದ್ದ. ತನಗೆ ಬಿದ್ದ ಹಗಲು ಗನಸುಗಳು ಹಾಗೂ ಗ್ರಹ ನಕ್ಷತ್ರಗಳ ಸ್ಥಿತಿಗತಿಗಳು ದೇವರು ತಿಳಿಸಿಕೊಟ್ಟವಂಥವುಗಳಾಗಿವೆ ಎಂದು ಭಾವಿಸಿ ಎಲ್ಲ ಬಗೆಯ ಅತ್ಯಾಚಾರ, ಅನಾಚಾರಗಳಲ್ಲಿ ತೊಡಗುತ್ತಿದ್ದ. ಮತ್ತು ತಾನು ಮಾಡಿದ್ದೆಲ್ಲವು ಧಾರ್ಮಿಕವಾದುದು, ಪವಿತ್ರಯುದ್ಧವಾದುದು ಎಂದು ವಿಚಾರಿಸುತ್ತಿದ್ದ. ಈ ರೀತಿಯಾಗಿ ಮೊಟ್ಟ ಮೊದಲು ಟೀಪು ನಮಗೆ ಗೋಚರಿಸುವುದು ಅತೀವ ದುಷ್ಟ ನೀಚ ವ್ಯಕ್ತಿಯಾಗಿ.

ಟೀಪುವು ತನ್ನ ವೈರಿಗಳಲ್ಲಿ ಭಯಭೀತಿಯನ್ನು ಹುಟ್ಟಿಸುವದಕ್ಕಾಗಿಯೇ ಅತೀ ಘೋರ ಶಿಕ್ಷೆಯನ್ನು ಕೊಡುತ್ತಿದ್ದ. ಅದರಲ್ಲಿ ಸಂತಸ ಪಡುತ್ತಿದ್ದ. ತಾನು ಘೋರವಾಗಿ ವಿಧಿಸುವ ಶಿಕ್ಷೆಯನ್ನು ಕೊಡುವುದನ್ನು ಕಾರ್ಯಗತವನ್ನಾಗಿ ಮಾಡಲು ಕೆಲವು ನಿರ್ದಯದ ಜನರನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿದ್ದ. ಬ್ರಿಟಿಷ ಕೈದಿಗಳನ್ನು ಗುಡ್ಡದ ತುದಿಯ ವರೆಗೆ ಒಯ್ದು ಅಲ್ಲಿಂದ ಕೆಳಗೆಒಗೆಸಿ ಕೊಲ್ಲುವದು ಅವನು ಕೊಡುವ ಸಾಮಾನ್ಯ ಶಿಕ್ಷೆಯಾಗಿತ್ತು. ಅದನ್ನು ಬಣ್ಣಿಸಿದೆ. –

''..... ತರುಣನನ್ನು ಶಿಕ್ಷೆ ಕೊಡುವವರಿಬ್ಬರು ಎತ್ತಿಕೊಂಡು ಶೀಘ್ರವೇ ಗುಡ್ಡದ ತುದಿಗೆ ತಂದು ನಿಲ್ಲಿಸುತ್ತಿದ್ದರು. .... ಮುಂದೆ ಅವರೇ ಅವನನ್ನು ಕೆಳಗೆ ಎಸೆದು ಬಿಡುತ್ತಿದ್ದರು'' ಈ ಸ್ಥಳಕ್ಕೆ ಮೃತ್ಯುವಿನ ಬಂಡೆ ಎಂದು ಕರೆಯುತ್ತಿದ್ದರು. ಯಾವ ಬ್ರಿಟಿಷ ಕೈದಿಗಳು ಈ ಮೃತ್ಯುವಿನ ಬಂಡೆಗಲ್ಲಿನ ಬಗ್ಗೆ ಕೇಳಿರುತ್ತಿದ್ದರೋ ಅವರಿಗೆ ಭೀಕರವಾದ ಇದೆಲ್ಲವೂ ನಂಬಲಿಕ್ಕಾಗದು, ಸುಳ್ಳು ಎಂದು ಅನಿಸುತ್ತಿರಲಿಲ್ಲ.

ಯಾವಾಗ ಕೈದಿಯಾಗಿದ್ದ ಕ್ಯಾಪ್ಟನ್ ಕಾಮ್ಬನ್ನನು ಒರಟುತನದಿಂದ ಟೀಪುವಿನ ಮುಂದೆ ವರ್ತಿಸಿದನೋ ಆಗ ಟೀಪು ''ನಿನ್ನ ಹೀನ ಹಾಗೂ ಅಪವಿತ್ರ ಧರ್ಮವನ್ನು ದ್ವೇಷಿಸುವೆ''ಎಂದು ಬೈಯುತ್ತ ಜೋರಾಗಿ ಗರ್ಜಿಸಿದನು. ''ಏ ಹಂದಿ, ಹೊಲಸು ಹೆಣ್ಣಿನ ಮಗನೆ, ನರಕದವನೆ, ನನ್ನ ಧರ್ಮಕ್ಕೆ ಬೈಯ್ಯುವಿಯಾ ? '' ಎಂದಂದು ಅವನನ್ನು ಮೃತ್ಯುವಿನ ಬಂಡೆಗೆ ಒಯ್ದು ಎಸೆಯಿರಿ ಎಂದು ಆಜ್ಞಾಪಿಸಿದನು. ಆತನನ್ನು ಎಳೆದು ಕೊಂಡು ಒಯ್ದಾಗ ಕಂಡದ್ದರ ವರ್ಣನೆ –

''..... ತನ್ನ ಬಾಂಧವರ ಶರೀರಗಳು, ಶರೀರದ ಭಾಗಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು... . ನೂರಾರು ಹದ್ದುಗಳು ಹಾರಿ ಬರುತ್ತಿದ್ದವು. .... ಅವೆಲ್ಲವುಗಳು ಹೆಣಗಳನ್ನು ಚುಚ್ಚಿ ಚುಚ್ಚಿ ಚುಂಚಿನಿಂಧ ಹರಿಯುತ್ತಿದ್ದವು. ಆದರೆ ಹರ್ಬರ್ಟ ಕಾಮ್ಬನ್ನನಿಗೆ ಇವು ಕಾಣಿಸಲಿಲ್ಲ. ಮೊಟ್ಟಮೊದಲು ಅಲ್ಲಿ ಅವನಿಗೆ ಬಂದ ದುರ್ವಾಸನೆಯೆ ಜಡ್ಡಾದಂತೆ ಮಾಡಿತು.... ಉದ್ವೇಗಕ್ಕೊಳಗಾಗಿ ಮೂರ್ಛೆ ಹೋದ. ''

ಇದಕ್ಕಿಂತ ಕೆಟ್ಟ ಶಿಕ್ಷೆ ಎಂದರೆ ತನ್ನ ವೈಯಕ್ತಿಕ ಆನಂದಕ್ಕಾಗಿ, ಹಾಡಲು, ನರ್ತಿಸಲು, ಇಟ್ಟುಕೊಂಡ ಕ್ರಿಶ್ಚಿಯನ್ ಹುಡುಗರನ್ನುಕೊಂದು ಹಾಕಲು ಆಜ್ಞೆ ನೀಡಿವದು ಆಗಿತ್ತು. ಬ್ರಿಟಿಷರು ತನ್ನನ್ನು ಹತ್ತಿಕ್ಕಿ ಸೋಲಿಸಿ ತುಳಿದು ಹಾಕುವರೆಂಬುದು ಗೊತ್ತಾದಾಗ ಆತ ತನ್ನ ಬಲಗೈ ಬಂಟನಾದ ಶೇಕ ಜಾಫರನಿಗೆ, ಹುಡುಗರನ್ನೂ ಕೊಲ್ಲಲು ಆದೇಶವಿತ್ತ. ಈ ಘಟನೆಯು ಭೀಕರವಾಗಿ ಚಿತ್ರಿತವಾಗಿದೆ.

''ಒಳ್ಳೆಯವನಾದ ಜಾಫರ, ಈಗ ಕೇಳು. ಕೈದಿಗಳಾದ ಆ ಹುಡುಗರು ಈ ಶಾಪಿತ ಫಿರಂಗಿಗಳು, ಅವರ ಬಗ್ಗೆ, ಇತರರ ಬಗ್ಗೆ ಗೊತ್ತಿದೆ ತಾನೆ ? ''

''ಭೂಮಿಯ ಬೆಳಕೆ ಅವರ ಬಗ್ಗೆ ತ್ರಾಸ ಪಡಬೇಡ. ಇನ್ಶಲ್ಲಾ, ನಿನ್ನ ಆಳಾದ ನಾನು ನಿನ್ನ ಸೇವೆ ಮಾಡುವೆ. ''

''ಅವರನ್ನು ಹೇಗೆ ವಾಪಸ ಕೊಡುವಿ ? ''

''ಅವರನ್ನು ವಾಪಸ ಮಾಡುವದೇ ? ಇಲ್ಲ ಆಜ್ಞಾಪಿಸಿರಿ. ನಿಮ್ಮ ಆಜ್ಞೆಯನ್ನು ಶಿ ಶಿರಸಾ ಪಾಲಿಸುವೆ. ''

''ನೀನು ಏನನ್ನು ಉಪದೇಶಿಸುವೆ ?''

''ಆ ಹುಡುಗರೋ, ಚಿಕ್ಕವರಾಗಿದ್ದಾರೆ. ಅವರು ಹೆಣ್ಣು ಮಕ್ಕಳ ಹಾಗೆ ಇದ್ದಾರೆ. ಇಲ್ಲ, ಅವರ ಬಗ್ಗೆ ಏಕೆ ಇಷ್ಟು ಅನುಮಾನ ? ''

''ಜಾಫರ, ನಿನ್ನ ಮನದಲ್ಲೇನಿದೆ ಹೇಳಿಬಿಡು. ''

''ಮರಣ'' ಎಂದು ಸಾವಕಾಶವಾಗಿ ಅಂದ. ಜೋರಾಗಿ ಅಂದರೆ ಅದರ ಪ್ರತಿಧ್ವನಿ ಕೇಳಿಸಿ ಬಂದೀತೆಂದು.

''ಒಳ್ಳೆಯದು '' ಸುಲ್ತಾನನೆಂದ. ಆದರೆ ಹೀಗೆನ್ನುವಾಗ ಅವನ ತುಟಿ ಲಘು ನಡುಗಿದವು.

''ನಿನಗೆ ಲೇಖಿಯಲ್ಲಿ ಆಜ್ಞೆ ಬೇಕಾದರೆ ಬರೆದು ತಾ, ಅದಕ್ಕೆ ರಾಜಮುದ್ರೆಯನ್ನೊತ್ತಿ ಕೊಡುವೆ. ''

''ಓ ಸುಲ್ತಾನ ನನಗೆ ಬರೆಯಲು ಬರುವುದಿಲ್ಲ. ''

''ಛೇ, ಜನ ಏಕೆ ಇಷ್ಟೊಂದು ಹುಚ್ಚರಾಗಿರುತ್ತಾರೋ ! ಮಸಿ ದೌತಿಯನ್ನು ತಾ. ಹೋಗು ಅಲ್ಲಿ ಇದೆ ನೋಡು. ಇದೆಲ್ಲ ಮೌನವಾಗಿ ಸಾಗಲಿ. ಜನರಿಗೆ ಗೊತ್ತಾಗಬಾರದು. ಒಬ್ಬರ ನಂತರ ಒಬ್ಬರನ್ನು - ನಿನಗೆ ಗೊತ್ತೇ ಇದೆ. ಮತ್ತು ರಕ್ತ ಚೆಲ್ಲಬೇಡ. ''

ಇಗೇ ರೀತಿ ಹಿಂದೂಗಳನ್ನು ದ್ವೇಷಿಸುತ್ತಲಿದ್ದ. ಮತ್ತು ಅವರಿಗೆ ದೈಹಿಕ ಶಿಕ್ಷೆ ಕೊಟ್ಟು ಸಂತೋಷ ಪಡುತ್ತಿದ್ದ. ಈ ಬರ್ಬರತೆ ಎಂಬುದು ಅವನಲ್ಲಿ ಗಟ್ಟಿಯಾಗಿತ್ತು. ಮತ್ತು ಅದು ಅವನ ಆಯುಷ್ಯ ಪರ್ಯಂತ ಕಾರ್ಯ ಮಾಡಿತು. ಒಮ್ಮೆ ಒಬ್ಬ ಬಡ ಬ್ರಾಹ್ಮಣನು ನ್ಯಾಯದಾನಕ್ಕಾಗಿ ಆತನ ಬಳಿಗೆ ಬಂದ. ಆತನಿಗೆ ನ್ಯಾಯ ಸಿಗುವ ಬದಲು ಅವನು ಆನೆಯ ಕಾಲಿಗೆ ಸಿಕ್ಕು ಸಾಯಬೇಕಾಯಿತು. ಅದರ ವರ್ಣನೆ ಯಾರ ಹೃದಯವನ್ನಾದರೂ ಕಲುಕುವುದು.

''..... ನ್ಯಾಯ ಸಿಗಲಿ, ನ್ಯಾಯ..... ನ್ಯಾಯ '' ಎಂದು ಆ ಹಿಂದು ಗೋಗರೆಯುತ್ತ ನೆಲದ ಮೇಲೆ ಬಿದ್ದು ಕೇಳಿದ. ಸುಲ್ತಾನನ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕಿದ. ವಿಚಿತ್ರ ಸ್ವಭಾವದ ರಾಜ ರೊಚ್ಚಿಗೆದ್ದು ಕಣ್ಣು ಕೆಂಪಗೆ ಮಾಡಿ ಆತನಿಗೆ ಯಾರು ನೀನು ಎಂದು ಕೇಳಿದ. ಆತ ನಡುಗುತ್ತ ಎದ್ದು ನಿಂತು.

''ನೀವೇ ನಮ್ಮ ತಂದೆ –ತಾಯಿ.... ನೀವೇ ನಮ್ಮ ಸುಲ್ತಾನರು.... ನೀವೇ ನಮ್ಮ ದೇವರು.... ನನ್ನದೆಲ್ಲವನ್ನು ದೋಚಿಕೊಂಡಿದ್ದಾರೆ..... ಜಾಫರ ಸಾಹೇಬ ಎನ್ನುವ ದೈತ್ಯ ನನ್ನನ್ನು ಹೊಡೆದು ಹಾಕಿದ್ದಾನೆ. ಅವನಿಗೆ ನನ್ನಪ್ರಾಣ ಬೇಕಂತೆ. ಅದಕ್ಕಾಗಿ ನಾನು ನನ್ನ ತಮ್ಮ ಸಿಂಹಾಸನದ ಬಳಿಗೆ ದಯೆ, ಬೇಡಲು ಬಂದಿದ್ದೇನೆ. ''

''ನಿನಗೆ ಅದು ಸಿಗುತ್ತದೆ.'' ಶಾಂತವಾಗಿ ಸುಲ್ತಾನನು ಅಂದನು. ನಸು ವಿಕಟ ನಗೆಯಲ್ಲಿ ಅಂದಾಗ ಅವನ ಅಧಿಕಾರಿಗಳಿಗೂ ಅವರ ರಕ್ತ ಹೆಪ್ಪುಗಟ್ಟಿದಂತಾಯಿತು.

''ಅದು ನಿನಗೆ ಸಿಗುತ್ತದೆ, ಅವನನ್ನು ಎಳೆದೊಯ್ಯಿರಿ. ಅಗೋ ಅಲ್ಲಿ ನನಗೆ ಆನೆಯೊಂದು ಕಾಣುತ್ತಲಿದೆ. ಇವನನ್ನು ಅದರ ಕಾಲಿಗೆ ಕಟ್ಟಿಬಿಡಿರಿ. ಯಾವ ಸ್ಥಳವನ್ನು ಈತ ಅಪವಿತ್ರಗೊಳಿಸಿದನೋ ಆ ಸ್ಥಳದಲ್ಲಿ ಇವನನ್ನು ಎಳೆದಾಡಿಕೊಂದು ಬಿಡಲಿ'' ಎಂದು ಸಿಟ್ಟಿನಿಂದ ಸೀಳಿದ ಧ್ವನಿಯಲ್ಲಿ ಎಂದ.

ಪಾಪ ... ಆತ ನಡುಗುತ್ತಲೇ ಸುಲ್ತಾನನ್ನು ನೋಡತೊಡಗಿದ. ಹುಚ್ಚರಂತೆ ನಗತೊಡಗಿದ. ಚೀರುತ್ತಿದ್ದ ಅವನನ್ನು ಎಳೆದು ಒಯ್ದರು. ಎಲ್ಲರೂ ಭಯಗ್ರಸ್ತರಾಗಿ ಆಲಿಸಿದರು...... ಆನೆಯ ಕಾಲಿಗೆ ಆತನನ್ನು ಕಟ್ಟಿದಾಗ ಆನೆಯು ದೊಡ್ಡ ಧ್ವನಿಯಿಂದ ಒದರಿತು.... ಅವನನ್ನು ಕೊಂದು ಅವನ ವೇದನೆಯನ್ನು ಮುಗಿಸಿಬಿಟ್ಟಿತು.

ಟೀಪುವಿನ ದುಷ್ಟತನ, ದೌರ್ಜನ್ಯಕ್ಕೆ ಮಿತಿಯೇ ಇರಲಿಲ್ಲ. ಇದೇ ಬಗೆಯ ದೌರ್ಜನ್ಯವನ್ನು ಪ್ರಾಣಿಗಳ ಮೇಲೆ ತೋರಿಸಿ ಸಂತೋಷ ಪಡುತ್ತಿದ್ದ. ಒಮ್ಮೆ ಬೇಟೆಯಾಟಕ್ಕೆ ಹೋದಾಗ ಆನೆಯ ಮರಿಗೆ ಖಡ್ಗದಿಂದ ನಿರ್ದಯವಾಗಿ ಹೊಡೆದು ಕೊಂದು ಹಾಕಿದ್ದ. ಆ ಆನೆಯ ಮರಿಯನ್ನು ಅವನ ಮುಂದೆ ತಂದು ನಿಲ್ಲಿಸಿದಾಗ ''ಅದನ್ನು ಚೆನ್ನಾಗಿ ಕಟ್ಟಿರಿ ''ಎಂದು ಒದರಿದ. '' ದೇವರ ಅನುಗ್ರಹದಿಂದ ನಮ್ಮಲ್ಲಿ ನಿಪುಣತೆಯಿದೆಯೆಂದು ಬಗೆದಿದ್ದೇನೆ. ಅದನ್ನು ತೋರಿಸಿ ಕೊಡುವೆ'' ಹೀಗೆಂದು ತನ್ನ ಹರಿತವಾದ ಖಡ್ಗವನ್ನು ಹೊರ ತೆಗೆದ. ತನ್ನ ತೋಳೇರಿಸಿ ಕಾಲಮೇಲೆ ಸರಿಯಾಗಿ ಭಾರ ಹಾಕಿ ನಿಂತು ಝಳಪಿಸುತ್ತಿರುವ ಖಡ್ಗವನ್ನು ತಲೆಯ ಮೇಲೆತ್ತಿದ. ಆ ಖಡ್ಗ ಜೋರಾಗಿ ಕೆಳಗೆ ಬಂತು. ಆ ಆನೆಯ ಮರಿಯ ಮೇಲೆ ಬಲವಾಗಿ ಬಿತ್ತು, ಆಗ ಅದು ಜೋರಾಗಿ ಕಿರುಚಿತು. ಮಾನವರಂತೆ ಚೀರಿತು. ಸುಲ್ತಾನನು ಮತ್ತೆ ಮತ್ತೆ ಬೆನ್ನ ಮೇಲೆ ಹೊಡೆದ. ಕೊನೆಗೆ ಬೇಸತ್ತು ಖಡ್ಗವನ್ನು ನೆಲದ ಮೇಲೆ ಎಸೆದು ಒದರಿದ – 'ಈ ಖಡ್ಗ ಚೂಪಾಗಿಲ್ಲ, ಚೂಪಾಗಿದ್ದರೆ ನಾವು ಒಂದೇ ಹೊಡೆತಕ್ಕೆ ಇದನ್ನು ಎರಡು ಹೋಳಾಗಿ ತುಂಡರಿಸಿ ಬಿಡುತ್ತಿದ್ದೆವು. ಈ ಘೋರ ಹಿಂಸಾಕೃತ್ಯವನ್ನು ನೋಡಿದ ಇತರರು, ಸೈನಿಕರು ಮತ್ತು ಅಲ್ಲಿದ್ದ ಹಿಂದುಗಳು ಅವನ ಪಾಪಕೃತ್ಯ ಕಂಡು ನಡುಗಿದರು. ಹಾಗೂ ಮರುಗಿದರು

ಹಿಂದುಗಳಿಗೆ ವಿಶೇಷ ರೀತಿಯ ಅಪಮಾನ ಮಾಡಿ ಅದರಲ್ಲಿ ಆತ ಆನಂದ ಪಡುತ್ತಿದ್ದ ಘಟನೆ ಆಗಲೇ ಬಂದಿದೆ. ಆದರೆ ಈಗ ತನಗೆ ಆನೆಯ ಮರಿಯನ್ನು ಕೊಲ್ಲಲಿಕ್ಕಾಗದಕ್ಕೆ ರಾಮಾಸೇಠ ಎಂಬುವವನ್ನು ಕರೆದು ಈ ಆನೆಯನ್ನು ಕೊಲ್ಲು ಎಂದು ಆಜ್ಞಾಪಿಸಿದ. ಆಗ ರಾಮಾಸೇಠನು ಎಂದಿಗೂ ತಾನು ಸೈನಿಕನಾಗಿರಲಿಲ್ಲ ಎಂದು ಅಂಗಲಾಚಿ ಹೇಳಿದ. ಅಲ್ಲದೆ ಹಿಂದೂಗಳಿಗೆ ಆನೆಯಂತಹ ಪ್ರಾಣಿ ಹತ್ಯೆಯು ಎಂದಿಗೂ ಸೇರಿಬರುವುದಿಲ್ಲ.

ಕೂಡಲೇ ಟೀಪೂವಿನಲ್ಲಿಯ ಧರ್ಮಾಂಧತೆ ಪುಟಿದೆದ್ದಿತು. ರಾಮಾ ಸೇಠನ ಮಾತನ್ನು ಕೇಳಿದಾಕ್ಷಣವೇ

''ಈತ ಕಾಫಿರ... ನಮ್ಮ ಧರ್ಮದ ವೈರಿ .... ತೆಗೆದುಕೋ ಖಡ್ಗವನ್ನು ಅತಿ ಪವಿತ್ರನಾದ ಸಾಹುಕಾರನೆ ಈ ಪಶುವಿಗೆ ಹೊಡೆ,''

ಈ ರೀತಿ ಅಂದು ವಿಕಟವಾದ ನಸು ನಗೆ ಬೀರಿದ. ಆ ನಗೆಯನ್ನು ಬಹಳಷ್ಟು ಜನ ಮರೆಯಲಿಲ್ಲ. ಭೀತಿಯಿಂದ ರಾಮಾಸೇಠನು ಆನೆಯ ಬಳಿಗೆ ಬಂದು ತನ್ನಿಂದಾಗದು ಎಂದು ಹೇಳುತ್ತ ದುರ್ಬಲವಾಗಿ ಅದಕ್ಕೆ ಹೊಡೆದ. ಒಂದಲ್ಲ ಎರಡುಸಲ ಅಲ್ಲ ಅನೇಕ ಬಾರಿ ಹೊಡೆಯಲು ಹಚ್ಚಿದ. ಇಂಥ ಅಮಾನವೀಯ ಬರ್ಬರ ಹತ್ಯೆಯ ಕಾರ್ಯದಲ್ಲಿ ಭಾಗಿಯಾಗಲು ಪ್ರತಿಯೊಬ್ಬ ಅಲ್ಲಿದ್ದ ಹಿಂದುವು ಮುಂದೆ ಬರಬೇಕಾಯಿತು.

ಹಿಂದುಗಳು ಪೂಜಿಸುವ ಹೋರಿಯನ್ನು ಅಮಾನವೀಯವಾಗಿ ಬರ್ಬರತೆಯಿಂದ ಕೊಲ್ಲುವ ಮತ್ತೊಂದು ಉದಾಹಣೆಯೂ ಇದೆ. ಒಮ್ಮೆ ಆತನ ಎದುರುಗಡೆಯಿಂದ ಒಂದು ಹೋರಿ ಓಡಿ ಬರುವದನ್ನು ನೋಡಿದ. ಮುಗ್ಧ ಪ್ರಾಣಿಯಾದ ಅದ್ನು ಕೊಂದುಬಿಡಲು ಅವನಿಗೆ ಒಂದು ಅವಕಾಶ ಸಿಕ್ಕಿತು. ತನ್ನ ಜನರಿಗೆ ಹೇಳಿದ –

''ಗೆಳೆಯರೆ, ಈಗ ಇದರ ಬೇಟೆಯಾಡೋಣ ಬನ್ನಿ. ಆ ಪಶು ನನ್ನನ್ನು ಅಂಜಿಸಬಯಸುತ್ತದೆ. ಇಸ್ಲಾಂದ ಸಲುವಾಗಿ ಯಾರು ಅದನ್ನು ಹೊಡೆದು ಬಿಡುತ್ತೀರಿ?''

ತನ್ನನ್ನು ಬೆನ್ನಟ್ಟಿದ್ದಾರೆಂದು ತಿಳಿದುಕೊಂಡ ಹೋರಿ ತಪ್ಪಿಸಿಕೊಂಡು ಓಡಿ ಹೋಗುವ ಸಲುವಾಗಿ ಅದು ಹೊರಳಿ ನಿಂತಿತು.ಆದರೆ ಅಷ್ಟು ಮಾಡುವದರಲ್ಲಿ ತಡವಾಗಿತ್ತು. ಅದು ಹೊರಳುವದರೊಳಗಾಗಿ ಸುಲ್ತಾನನ ಭರ್ಚಿ ಅದರ ಹೊಟ್ಟೆಯನ್ನು ಹೊಕ್ಕಿತ್ತು ; ವಿಲಿವಿಲಿ ಒದ್ದಾಡುತ್ತ ಗಾಯದ ಜಾಗದದಿಂದ ರಕ್ತ ಸುರಿಸುತ್ತ, ನೋವಿನಿಂದ ಒದರುತ್ತ ನೆಲಕ್ಕೆ ಕುಸಿಯಿತು. .....ಯಾವುದೇ ವಿರೋಧ ಮಾಡದ ಆ ಹೋರಿ ಹೊಟ್ಟೆಗೆ ಸುಲ್ತಾನ ಭರ್ಚಿಯಿಂದ ಸತತವಾಗಿ ಚುಚ್ಚಿ ಚುಚ್ಚಿ ಹಾಕಿದ. ಕೊನೆಗೆ ನೊಂದು ನರಳುತ್ತ ನೆಲಕ್ಕುರುಳಿತು.

ಟಿಪ್ಪೂವಿನ ಕ್ರೌರ್ಯದ ಆಟ–ಪಾಟ ಇಲ್ಲಿಗೇ ಮುಗಿಯಲಿಲ್ಲ. ಬ್ರಾಹ್ಮಣರಿಗೆ ಮಾಡಲಾಗದ್ದನ್ನು ಮಾಡಲು ಹಚ್ಚಿ ಇಂಥ ರಕ್ತಪಾತದಲ್ಲಿ ಭಾಗಿಯಾಗಿಸಿ ಆನಂದ ಪಡೆಯುತ್ತಿದ್ದ. ಆ ಪ್ರಾಣಿ ಹತ್ಯೆ ರಕ್ತ ಪಾತ ನೋಡಿ ಮರುಕ ವ್ಯಕ್ತಪಡಿಸುತ್ತಿದ್ದ ಬ್ರಾಹ್ಮಣನೊಬ್ಬನನ್ನು ನೋಡಿ ಆತನಿಗೆ ''ಹಾ ಇದು ನಿನಗೆ ಸೇರುವದಿಲ್ಲವಲ್ಲವೇ? ಮಹಮ್ಮದ ಹೆಸರಿನಲ್ಲಿ ಅದುನಿನಗೆ ಸೇರುವಂತೆ ಮಾಡುವೆ. ಸೇವಕರೆ ಅವನನ್ನು ಬಿಡಬೇಡಿರಿ, ಈ ಹೋರಿಯ ರಕ್ತದಿಂದ ಅವನ ಮುಖಕ್ಕೆ ಸವರಿಬಿಡಿರಿ.''

ಟಿಪ್ಪೂವಿನ ಆಜ್ಞೆಯನ್ನು ಶಬ್ದಶಃ ಪಾಲಿಸಿದರು. ಟೀಪೂ ಯಾವ ಆಜ್ಞೆ ಮಾಡಿದ್ದಾನೆಂದು ಆ ಮನುಷ್ಯನಿಗೆ ತಿಳಿಯುವ ಮುನ್ನವೇ ಅವನನ್ನು ಹಿಡಿದು ಬಿಸಿರಕ್ತದಿಂದ ಮುಖದ ತುಂಬ ಸವರಿಸಿ, ಅವನ ಬಾಯಿಯಲ್ಲೂ ಹಾಕಿದರು. ಈ ಘಟನೆಯನ್ನು 'ಕನ್ಫೆಶನ್ಸ ಆಫ್ ಎ ಥಗ್' ದಲ್ಲಿ ಒಬ್ಬ ಬ್ರಾಹ್ಮಣನ ಬಾಯಿ ಹರಿದು ರಕ್ತ ಕುಡಿಸಿದ್ದರ ಜೊತೆಗೆ ಹೋಲಿಸಿ ನೋಡಬಹುದು. ಇಂಥ ಕ್ರೂರ, ದೌರ್ಜನ್ಯದ ಕೃತ್ಯಗಲ್ಲಿ ಟೀಪೂ ಯಾವಾಗಲೂ ಸಂತಸಪಡುತ್ತಿದ್ದ ಮತ್ತು ಈ ಘಟನೆಗಳೆಲ್ಲ ಅವನಲ್ಲಿಯ ರಕ್ತಪಿಪಾಸುತನವನ್ನು ತೋರಿಸಿಕೊಡುತ್ತವೆ.

ಟೀಪೂ ತನ್ನ ಪಾಶವಿ, ರಾಕ್ಷಸಿ ಸ್ವಭಾವವನ್ನು ಚಿತ್ರಕಲೆಯಲ್ಲೂ ಪ್ರಕಟಿಸಿ ಅದರ ವೈಭವೀಕರಣ ಮಾಡಿದ್ದಾನೆ. ದರಿಯಾ ದೌಲತ್ ಅರಮನೆಯ ಹೊರಭಾಗದ ಗೋಡೆಗಳ ಮೇಲೆ ತೆಗೆಯಿಸಿದ ವರ್ಣ ಚಿತ್ರಗಳಲ್ಲಿ ಅವನು ಸೋಲಿಸಿದ ಇಂಗ್ಲೀಷರ ಚಿತ್ರಗಳಲ್ಲಿ ಎದ್ದು ಕಾಣುತ್ತದೆ. –

''ಕಾಫಿರರನ್ನು ತುಡಡಿ ತುಕಡಿಯಾಗಿ ತುಂಡರಿಸಿದಾಗ ಅವರ ರಕ್ತವು ನೆಲದ ಮೇಲೆ ನೀರಿನಂತೆ ಹರಿಯುತ್ತಿತ್ತು. ಇದು ನೆಲಕಚ್ಚಿ ಬಿದ್ದ ಯುರೋಪಿಯನ್ನರ ಮೇಲಿಂದ ಗೊತ್ತಾಗುತ್ತದೆ. ಮುಸಲ್ಮಾನರು ಅವರನ್ನು ತಮಗಿಂತಲೂ ಉದ್ದವಾದ ಖಡ್ಗದಿಂದ ಕತ್ತರಿಸಿದಾಗ, ಕೆಂಪು ರಕ್ತವು ನೀರಿನಂತೆ ಹರಿದದ್ದು ಕಂಡು ಬರುತ್ತದೆ.''

ಈ ರೀತಿ ಟೀಪೂ ತನ್ನ ಕರಾಳ ಅಂತರಂಗವನ್ನು ಅಲಂಕೃತವರ್ಣ ಚಿತ್ರಗಳ ಮುಖಾಂತರ ತೋರಿಸಕೊಟ್ಟಿದ್ದಾನೆ. ಧರ್ಮ ಪ್ರಸಾರದ' ನೆಪದಲ್ಲಿ ಆತ ಮಾಡಿದ ಅನೇಕ ಕುಕೃತ್ಯಗಳಲ್ಲಿ ಹಿಂದುಗಳ ಮತಾಂತರವೂ ಒಂದಾಗಿದೆ. ಇಸ್ಲಾಮನ್ನು ಅಂಗೀಕಾರ ಮಾಡದವರಿಗೆ ನಿರ್ದಯತೆಯಿಂದ ಮರಣದಂಡನೆ ಕೊಟ್ಟಿದ್ದಾನೆ. ಆತ ಅವರ 'ದೇವಾಲಯಗಳನ್ನು ನಾಶ ಮಾಡಿದ್ದಾನೆ, ಮೂರ್ತಿಗಳನ್ನು ಮುರಿದು ಹಾಕಿದ್ದಾನೆ, ಸಂಪತ್ತಿನ ಲೂಟಿ ಮಾಡಿದ್ದಾನೆ.''

ಟೀಪುವಿನ ಬಗ್ಗೆ ಆತ ಪಾಶವಿ ವ್ಯಕ್ತಿ ಎಂಬ ಭಾವನೆ ಬಂದರೂ ಆತ ಸಂಪೂರ್ಣವಾಗಿ ಪಶುವಿನಂತಿರಲಿಲ್ಲ. ಅವನಲ್ಲಿ ಮಾನವೀಯ ಸದ್ಗುಣಗಳಾದ ಗೌರವದ ಬಗ್ಗೆ ಪ್ರೀತಿ, ಒಳ್ಳೆಯ ಗುಣಗಳನ್ನು ಮೆಚ್ಚಿಕೊಳ್ಳುವ ಪ್ರವೃತ್ತಿ, ತನ್ನ ಸೈನಿಕರಲ್ಲಿಯ, ಸೇವಕರಲ್ಲಿಯ , ಪರಾಕ್ರಮದ ಹೊಗಳುವಿಕೆಯಲ್ಲಿ ಕಾಣುತ್ತೇವೆ.

ಟೀಪೂವಿನ ವ್ಯಕ್ತಿತ್ವದಲ್ಲಿ ಒಳ್ಳೆಯ ತನವೂ ಇತ್ತು. ಬೌದ್ಧಿಕವಾಗಿ ಮೆಚ್ಚಲೇ ಬೇಕಾದ ಅನೇಕ ಗುಣಗಳು ಅವನಲ್ಲಿದ್ದವು. ಅವನಲ್ಲಿದ್ದ ಯುದ್ಧ ಚಾತುರ್ಯ ಮತ್ತು ರಾಜ್ಯಾಳಿತದಲ್ಲಿಯ ನಿಪುಣತೆಗಳು ಅಸಾಮಾನ್ಯ, ಹೋಲಿಕೆ ರಹಿತವಾಗಿದ್ದುವು. ರಾಜಕೀಯ ತಜ್ಞನಾಗಿದ್ದ ಆತ ಮಹತ್ವಾಕಾಂಕ್ಷಿ ಬ್ರಿಟಿಷರ ವಿರುದ್ಧ ಹೋರಾಡಲು ತನ್ನ ಸೈನ್ಯವನ್ನು ತಯಾಸಿರಿ ಕೊಂಡಿದ್ದ. ಅದಕ್ಕಾಗಿ ಆತ ಮರಾಠರ ಜೊತೆಗೂ , ಹೈದ್ರಾಬಾದಿನ ನಿಜಾಮರ ಜೊತೆಗೂ ಸ್ನೇಹ ಹಸ್ತ ಚಾಚಿದ್ದ. ಟೀಪೂವಿನ ಸೈನಿಕ ಕಾರ್ಯಾಚರಣೆಯ ಪಡೆಯು ನಿಶ್ಚಿತವಾಗಿಯೂ ಬ್ರಿಟಿಷ ಪಡೆಗಿಂತ ಹೆಚ್ಚು ಉತ್ತಮವಾಗಿತ್ತು. ಉದಾರಹಣೆಗೆ, ಬಿದನೂರಿನ ಮೇಲೆ ದಂಡೆತ್ತಿ ಹೋದಾಗ ಅವರು – ''ಜೀವಂತವಾಗಿ ವಾಪಸು ಹೋಗಲಿಕ್ಕಾಗದು '' ಎಂದಿದ್ದರು.

ಆತ ಕೈದಿಯಾಗಿದ್ದ ಕ್ಯಾಪ್ಟನ್ ಕಾಮ್ಬನ್ನನ ಮುಖಾಂತರ ಆತ ಬ್ರಿಟಿಷರ ಯುದ್ಧ ತಂತ್ರವನ್ನು ಕಲಿತುಕೊಳ್ಳ ಬಯಸಿದ್ದ. ಯುದ್ಧದಲ್ಲಿ ತೋರುವ ಪರಾಕ್ರಮವನ್ನು, ಸ್ವಾಮಿನಿಷ್ಠೆಯನ್ನು ಆತ ಯಾವಾಗಲೂ ಕೊಂಡಾಡುತ್ತಿದ್ದ , ಪ್ರೀತಿಸುತ್ತಿದ್ದ. ಕಾಸಿಂ ಅಲಿಗೆ ಉನ್ನತಸ್ಥಾನವನ್ನು ಕಲ್ಪಿಸಿಕೊಟ್ಟಿದ್ದನ್ನು ನೋಡಿದರೆ ಆಕನಿಗೆ ಒಳ್ಳೆಯ ಗುಣಗಳಾದ ಪ್ರಾಮಾಣಿಕತೆ, ನಿಷ್ಠೆ ಸಮರ್ಪಣೆ ಭಾವದ ಸೇವೆ, ಸ್ವದೇಶ ಪ್ರೇಮ, ಸ್ವಧರ್ಮ ಪ್ರೇಮಗಳು ಸೇರುತ್ತಿದ್ದವು. ಟೀಪೂವಿನ ಅತಿ ಕ್ರೌರ್ಯಕ್ಕೆ ಬೇಸತ್ತು ಸ್ವಾಮಿನಿಷ್ಠನಾದ ಕಾಸಿಂ ಅಲಿಯು ಸೇವಾ ನಿವೃತ್ತಿ ಪಡೆದು ತನ್ನ ಊರಿಗೆ ತೆರಳುವದಾಗಿ ಹೇಳಿದಾಗಿ ಟೀಪೂ ಆತನಿಗೆ ಯೋಗ್ಯಹಾಗೂ ಆತ್ಮೀಯತೆಯ ಬೀಳ್ಕೊಡುಗೆ ಕೊಟ್ಟನು. ಆಗ ಅವನಿಗೆ ಎರಡು ಕಾಶ್ಮೀರಿ ಶಾಲುಗಳನ್ನು, ತಲೆಗೆ ಪೇಟಾವೊಂದನ್ನು, ಹಣೆಗೆ ಅಮೂಲ್ಯವಾದ ರತ್ನವೊಂದನ್ನು ಉಡುಗೊರೆಯಾಗಿ ಕೊಟ್ಟನು. ಪ್ರೇಮ ಭಾವನೆಯಿಂದ

''ನನ್ನನ್ನು ಅಪ್ಪಿಕೋ , ನಿನ್ನನ್ನು ನಾನು ಪ್ರೀತಿಸುತ್ತೇನೆ. ಉಪಕೃತ ಭಾವನೆಯಿಂದ ನಾನು ನಿನ್ನನ್ನು .ಯಾವಾಗಲೂ ನೆನಪಿಸಿಕೊಳ್ಳುತ್ತೇನೆ, ಕಾಸಿಂ ಅಲಿ. ನಿನಗೆ ಮುಂದೆ ಎಂದಾದರೂ ಮತ್ತೆ ನನ್ನೆಡೆಗೆ ಬರಬೇಕೆನಿಸಿದರೆ, ನಿನ್ನ ಸ್ಥಾನ ನಿನಗೆ ಲಭಿಸುತ್ತದೆ. ಅಥವಾ ನಮ್ಮ ಅತಿಥಿಯಾಗಿ ಬಂದರೂ ನಿನಗೆ ಸ್ವಾಗತ ಸಿಗುತ್ತದೆ '' ಎಂದು ಅಂದನು.

ತನ್ನ ಜನರಿಗೆ ನಿಜವಾಗಿಯೂ ಟೀಪು ಅಂತಃಕರುಣಿಯೂ, ಕೊಡುಗೈ ದೊರೆಯೂ ಆಗಿದ್ದನು. ಮತ್ತು ಉತ್ತಮ ಗುಣವುಳ್ಳವರನ್ನು ಪ್ರೀತಿಸುತ್ತಿದ್ದನು. ಆತ ಸಂಪೂರ್ಣವಾಗಿ ದುಷ್ಟನಾಗಿರಲಿಲ್ಲ. ಯಾಕೆಂದರೆ ''ಮಾನಸಿಕ ಕರಾಳ ವಿಚಾರಗಳ ಮಧ್ಯದಲ್ಲಿಯೂ ಆತನಲ್ಲಿ ತನ್ನ ಮಕ್ಕಳ ಬಗ್ಗೆ, ಅಧಿಕಾರಿಗಳ ಬಗ್ಗೆ, ರೋಗಕ್ಕೊಳಗಾದ ಆಳಿನ ಬಗ್ಗೆ ದಾಯಳುತನದ ಭಾವನೆಗಳು ಕಂಡು ಬರುತ್ತಿದ್ದವು.

ರಾಜಕೀಯ ಬುದ್ಧಿಚಾತುರ್ಯಕ್ಕೆ, ಯುದ್ಧದಲ್ಲಿಯ ಪರಾಕ್ರಮಕ್ಕೆ, ಸ್ವಾತಂತ್ರ್ಯ ಪ್ರೇಮದ ಬಗ್ಗೆ ಟೀಪೂವನ್ನು ಮೆಚ್ಚಿಕೊಳ್ಳುತ್ತಿದ್ದರು. ಬ್ರಿಟಿಷರ ಅಧೀನನಾಗಿ ಬಾಳುವದು ಆತನಿಗೆ ಸೇರುವುದಿಲ್ಲವೆಂಬುದು ಅವನ ಘನತೆಯನ್ನು ತೋರಿಸುತ್ತದೆ. ಮೈಸೂರಿನ ಕೊನೆಯ ಯುದ್ಧದಲ್ಲಿ ಆತ ಮಹಾ ಪರಾಕ್ರಮಿಯಾಗಿ ಕಾದಾಡಿದ್ದನ್ನು ಕಂಡು ಬ್ರಿಟಿಷರೂ ಮೆಚ್ಚುಗೆ ವ್ಯಕ್ತಪಡಿಸಿದರು. ಅವನಿಗೆ ಶಾಂತರೀತಿಯಲ್ಲಿ ವೈರಿಯಾದರೂ ಸಹ ಅಂತಿಮ ಗೌರವ ಸಲ್ಲಿಸಿ, ತಮ್ಮ ತಲೆಯ ಮೇಲಿನ ಹ್ಯಾಟು ತೆಗೆದು, ಸಕಲ ಮರ್ಯಾದೆಯೊಂದಿಗೆ ಅಂತ್ಯ ಸಂಸ್ಕಾರ ನೆರವೇರಿಸಿದರು.

ಟೀಪೂವನ್ನು ತನ್ನ ಮಗನೆಂದೇ ಭಾವಿಸಿ, ಪಾಲಿಸಿ ಪೋಷಿಸಿ ಬೆಳೆಸಿದ ವೃದ್ಧೆಯೊಬ್ಬಳು ತನಗಾದ ವಿಪರೀತ ದುಃಖವನ್ನು ಗೋಳಾಡಿ ಅತ್ತು ವ್ಯಕ್ತಪಡಿಸಿದಳು.

ಇವೆಲ್ಲವುಗಳು ಟೀಪುವು ತನ್ನ ಜನರಿಗೆ ಬೇಕಾದವನೂ, ಆತ್ಮೀಯನೂ ಆಗಿದ್ದನೆಂದು ತೋರಿಸುತ್ತವೆ. ಒಂದು ವೇಳೆ ಇತರರಿಗೂ ಅಂಥ ಸದ್ಭಾವನೆಯನ್ನು ತೋರಿದ್ದರೆ ಆತನೊಬ್ಬ ಅತ್ಯಂತ ಆದರ್ಶರಾಜನಾಗುತ್ತಿದ್ದ. ದುರ್ದೈವದಿಂದ ಅವನ ಸದ್ಗುಣ, ಸದ್ಭಾವನೆ, ಬೌದ್ಧಿಕತೆಗಳೆಲ್ಲ ಕರಾಳ ಹೃದಯದ ತಳದಲ್ಲಿ ಸಿಲುಕಿ, ಧರ್ಮಾಂಧತೆಯ ಕೆಳಗೆ ಸಿಕ್ಕು, ರಕ್ತ ಪಿಪಾಸುತನ, ಕ್ರೌರ್ಯ, ದೌರ್ಜನ್ಯಗಳಲ್ಲಿ ತೊಡಗಿ ಅವನನ್ನು ದುರುಳನನ್ನಾಗಿಸಿದವು.

ಇನ್ನುಳಿದ ಬ್ರಿಟಿಷರು ಟೀಪುವನ್ನು ಅನಾಗರಿಕ ಎಂದು ಸಂಪೂರ್ಣವಾಗಿ ದುಷ್ಟ ದುರ್ಜನ ಎಂದು ಚಿತ್ರಿಸಿದರೆ ಟೇಲರನು ಮಾತ್ರ ಪಿಶಾಚಿ ಎಂದು ಚಿತ್ರಿಸಲಿಲ್ಲ. ನಿಜವಾದ ಟೀಪುವಿನಲ್ಲಿಯ ಸದ್ಗುಣಗಳನ್ನು, ದುರ್ಗುಣಗಳನ್ನು ಆತ ನಿರ್ಮಾತ್ಸರ್ಯದಿಂದ ಚಿತ್ರಿಸಿದ್ದಾನೆ.

ಬರ್ಬರತನವನ್ನು ತೋರುವ ಇನ್ನೊಬ್ಬ ವ್ಯಕ್ತಿಯೆಂದರೆ ಶೇಖ ಜಾಫರ ಎಂಬುವವನಾಗಿದ್ದಾನೆ. ಆತ ಕುಕೃತ್ಯಗಳಲ್ಲಿ ಪ್ರವೀಣನಾಗಿದ್ದು ಸ್ವಾರ್ಥಿ, ವಂಚಕ, ನೀಚನಾಗಿ ಕಾರ್ಯ ಮಾಡಿದ್ದಾನೆ. ಟೀಪೂವಿನ ವಿಶ್ವಾಸಿಕ ಸೇವಕನಾಗಿ ಅವನಿಗೆ ಉಪದೇಶಕನಾಗಿ, ಹೊಂಚು ಹಾಕುವವನಾಗಿ, ಸಂಚು ಮಾಡುವವನಾಗಿ, ಆಜ್ಞಾಪಾಲಕನಾಗಿ, ಕಾರ್ಯಮಾಡಿದ್ದಾನೆ. ವಿಧ್ವಂಸಕ ಕೃತ್ಯವೆಸಗುವದು, ಮತಾಂತರ ಗೊಳಿಸುವದು, ಬಲಾತ್ಕಾರ ಮಾಡುವದು, ಇವುಗಳಲ್ಲಿ ಆತ ಅತ್ಯಾನಂದ ಪಡೆಯುತ್ತಲಿದ್ದ. ಟೀಪೂವಿನ ಪ್ರತಿರೂಪದಂತಿದ್ದು ದೌರ್ಜನ್ಯವೆಸಗುತ್ತಿದ್ದ.

ಈ ಜಾಫರನು ಒಮ್ಮೆ ಅಮೀನಾಳು ಕಾಸೀಂ ಅಲಿಯ ಬಾಹುಗಳಲ್ಲಿ ಇದ್ದುದನ್ನು ನೋಡಿದ. ಕೂಡಲೇ ಅವಳ ಗಂಡನಾದ ಅಬ್ದುಲ್ ರಹಮಾನನ್ನು ಅಲ್ಲಿಗೆ ಕರೆತಂದು ತೋರಿಸಿ, ಕಾಸಿಂ ಅಲಿ ಹಾಗೂ ಅಮೀನಾಳ ಬಗ್ಗೆ ವಿಷ ಬೀಜ ಬಿತ್ತಿದ. ಅಬ್ದುಲ್ ರಹಮಾನನು ವೃದ್ಧನಾದುದರಿಂದ ತರುಣಿಯಾದ ಅಮೀನಾಳ ಕಡೆಗೆ

ಗಮನ ಹರಿಸತ್ತಿರಲಿಲ್ಲ, ತನ್ನ ದುರ್ಬಲತೆಯನ್ನು ತಿಳಿದುಕೊಳ್ಳದೆ, ಅದರಂತೆ ತಾರುಣ್ಯದ ಸಹಜವಾಗಿರುವ ತನ್ನ ಹೆಂಡತಿಯ ಸುಖ-ತೃಪ್ತಿಯನ್ನು ಅರ್ಥ ಮಾಡಿಕೊಂಡಿರಲಿಲ್ಲ, ಜಾಫರನ ಪ್ರಚೋದನಾತ್ಮಕ ಮಾತು ಕೇಳಿ ಹುಚ್ಚುತನದಲ್ಲಿ ತನ್ನ ಹದಿವಯಸ್ಸಿನ ಹೆಂಡತಿಯನ್ನು ಕೊಲ್ಲಲು ಯತ್ನಿಸಿದ ರಹಮಾನ ಖಾನ.

ಅದರಂತೆ ಜಾಫರನು ಟೀಪೂವಿನ ಮನದಲ್ಲಿ ವಿಷಬೀಜ ಬಿತ್ತಿದ್ದ. ಕಾಸಿಂ ಅಲಿ ಪಟೇಲನು ಟೀಪೂವಿನ ಆಸ್ಥಾನವನ್ನು ಬಿಟ್ಟು ತನ್ನೂರಿಗೆ ಮರಳಿ ಹೋಗಲೆತ್ನಿಸುತ್ತಿದ್ದಾಗ ಜಾಫರನು ಟೀಪೂವಿಗೆ ಕಾಸಿಂ ಅಲಿಯು ನಿನ್ನ ವಿರುದ್ಧವಾಗಿ ಬ್ರಿಟಿಷರನ್ನು ಸೇರಿಸಿಕೊಳ್ಳಬಹುದೆಂಬ ಸಂಶಯವನ್ನು ವ್ಯಕ್ತಪಡಿಸಿದ. ಟೀಪೂ ಅದನ್ನು ನಂಬಿ ಬಿಟ್ಟನಲ್ಲದೆ ಊರಿಗೆ ಹೊರಟಾಗ ದಾರಿಯಲ್ಲಿ ಕಾಸಿಂ ಅಲಿ ಪಟೇಲನನ್ನು ಕೊಂದು ಬಿಡಲು ರಹಸ್ಯವಾದ ಆಜ್ಞೆ ಕೊಟ್ಟು ಸೈನಿಕರನ್ನು ಕಳಿಸಿದ. ಟೀಪುವಿನ ಸೈನಿಕರಿಗೆ ಕಾಸಿಂ ಅಲಿಯನ್ನು ಕೊಲ್ಲಲಿಕ್ಕಾಗಲಿಲ್ಲ. ಟೀಪೂವೇ ತನ್ನನ್ನು ಕೊಲ್ಲಲು ಇವರನ್ನು ಕಳಿಸಿದ್ದಾನೆಂದು ತಿಳಿದು ಬರಲು ಆತ ಟೀಪೂವಿನ ವೈರಿಯಾಗಿ ಬಿಟ್ಟ, ಅವನ ವಿರುದ್ಧ ಕಾರ್ಯ ಮಾಡಲು ನಿಶ್ಚಯಿಸಿದ. ಇದೆಲ್ಲದಕ್ಕೆ ಶೇಖ ಜಾಫರನೇ ಕಾರಣೀಭೂತನಾಗಿದ್ದ. ವಿನಾಕರಾಣ ಹೀಗೆಲ್ಲ ಮಾಡಿದ್ದನ್ನು ನೋಡಿದರೆ ಆತ ಇಯಾಗೋ ಆಗಿದ್ದನೆಂದು ಗೊತ್ತಾಗುವುದು. ಪೈಶಾಚಿಕ ಕೃತ್ಯಗಳಲ್ಲಿಯೇ ವೈಭವವನ್ನು ಕಾಣುತ್ತಿದ್ದ, ಕೊಲೆ-ಸುಲಿಗೆ , ದರ್ಪ, ದೌರ್ಜನ್ಯಗಳಲ್ಲಿ ಸಂತಸಪಡುತ್ತಿದ್ದ, ಜಾಫರನು ಬರ್ಬರತೆಯಲ್ಲಿ ತನ್ನ ದೊರೆಯಂತೆಯೇ ಇದ್ದ.

ಪರಾಕ್ರಮದ ಯುದ್ಧದ ಭಾಗದಲ್ಲಿ ಟೀಪುವು ಪ್ರಮುಖವಾಗಿದ್ದರೆ, ಪ್ರೇಮ - ಪ್ರಣಯದಲ್ಲಿ ಕಾಸಿಂ ಅಲಿ ಪಟೇಲನು ಪ್ರಮುಖ ಪಾತ್ರಧಾರಿಯಾಗಿದ್ದಾನೆ. ಕಾಸಿಂ ಅಲಿಯು ಸುಂದರ, ಸಾಹಸಿ, ಯುವಕನಾಗಿದ್ದು ಟೀಪೂವಿನ ವ್ಯತ್ಯಾಸದ ಗುಣವುಳ್ಳವನಾಗಿದ್ದಾನೆ. ಟೀಪುವು ಬರ್ಬರತೆಯ ಪ್ರತೀಕವಾಗಿದ್ದರೆ,. ಕಾಸಿಂ ಅಲಿಯು ಮಾನವೀಯತೆಯ, ನಾಗರಿಕತೆಯ ಪ್ರತೀಕವಾಗಿದ್ದಾನೆ. ಟೀಪು ಧರ್ಮಾಂಧ, ಸ್ವಮತಪ್ರೇಮಿಯಾಗಿದ್ದರೆ, ಕಾಸಿಂ ಅಲಿ ಧರ್ಮ ಸಹಿಷ್ಣುವಾಗಿದ್ದಾನೆ. ಟೀಪುವು ಹಿಂದುಗಳನ್ನು ಕ್ರಿಶ್ಚಿಯನ್ನರನ್ನು ಬದ್ಧ ವೈರಿಗಳೆಂದು ಬಗೆದಿದ್ದರೆ, ಕಾಸಿಂ ಅಲಿಯು ಅವರನ್ನು ಪ್ರೀತಿಸಿ, ಕೊಂಡಾಡುತ್ತಿದ್ದ. ಟೀಪುವು ಬಲಾತ್ಕಾರ, ವಿಧ್ವಂಸಕತೆ, ದೌರ್ಜನ್ಯದಲ್ಲಿ ಸಂತಸ ಪಡುತ್ತಿದ್ದರೆ, ಕಾಸಿಂ ಅಲಿ ಅವುಗಳನ್ನು ದ್ವೇಷಿಸುತ್ತಿದ್ದ, ಯಾವಾಗಲೂ ಪ್ರೀತಿ -ಪ್ರಾಮಾಣಿಕತೆ, ವಿಶ್ವಾಸಗಳಿಗೆ ಮನ್ನಣೆ ಕೊಡುತ್ತಿದ್ದ. ಕಾಸಿಂ ಅಲಿಯು ಟೀಪೂವಿನ ಅತ್ಯಂತ ಪ್ರೀತಿಯ ವ್ಯಕ್ತಿಯಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ, ಆದರೆ ಆತ ತನ್ನ ದೊರೆಯಲ್ಲಿಯ ದುರುಳುತನವನ್ನು ಎಂದಿಗೂ ಮೆಚ್ಚಿಕೊಳ್ಳಲಿಲ್ಲ. ಈ ಬಗೆಯ ವೈಷಮ್ಯ, ವ್ಯತ್ಯಾಸದಲ್ಲಿಯೆ ಭಾರತದ ನಾಗರಿಕತೆ, ಹಾಗೂ' ಅನಾಗರಿ ಕತೆಗಳು ಗೋಚರಿಸುತ್ತವೆ. ಟೀಪೂವಿನ ಬಲಗೈ ಬಂಟನಾಗಿಯೂ ಕಾಸಿಂ ಅಲಿಯು

ಸುಸಂಸ್ಕೃತನಾಗಿ ಎದ್ದು ಕಾಣುತ್ತಾನೆ. ಜಾಫರನು ಟೀಪುವಿನ ಪ್ರತಿ ರೂಪವಾಗಿ ಕಂಡರೆ ಕಾಸಿಂ ಅಲಿಯು ತನ್ನ ಸದ್ಗುಣಗಳಿಂದ ವಿಭಿನ್ನ ರೂಪದವನಾಗಿ ಕಾಣುತ್ತಾನೆ.

ಕರುಣಾಳುವಾದ, ದಯಾಮಯನಾದ ಕಾಸಿಂ ಅಲಿಯು ಸದಾಕಾಲ ಬಡವರಿಗೆ, ದುಃಖಿಗಳಿಗೆ, ಅಸಹಾಯಕರಿಗೆ, ಜಾತಿ-ಮತ ಲೆಕ್ಕಿಸದೆ ಸಹಾಯ ಮಾಡಲು ಸಿದ್ಧನಾಗಿರುತ್ತಿದ್ದ. ಬಲಿಷ್ಠನಾದುದರಿಂದ ರುಸ್ತುಂನಂತೆ ಸಮಯ ಬಂದಾಗಲೆಲ್ಲ ಪರಾಕ್ರಮ ತೋರುತ್ತಿದ್ದ. ರಹಮಾನಖಾನನ ತರುಣ ಹೆಂಡತಿಯಾದ ಅಮೀನಾಳು ತುಂಗಭದ್ರಾ ನದಿ ದಾಟುವಾಗ ಪ್ರವಾಹಕ್ಕೆ ಸಿಕ್ಕು ಒದ್ದಾಡುತ್ತಿದ್ದಾಗ, ಉಳಿಸಿರಿ ಎಂದು ಕೂಗುತ್ತಿದ್ದಾಗ ಕಾಸಿಂ ಅಲಿಯು ತಾನಾಗಿಯೇ ನದಿಯಲ್ಲಿ ಈಸಿ ಅವಳನ್ನು ಬದುಕಿಸಿ ದಂಡೆಗೆ ತಂದ. ತನ್ನ ತರುಣ ಹೆಂಡತಿಯ ಪ್ರಾಣ ಉಳಿಸಿದ್ದಕ್ಕಾಗಿ ರಹಮಾನನು ಟೀಪೂ ಆತನಿಗೆ ಆಸ್ಥಾನದಲ್ಲಿ ಕೆಲಸ ಕೊಡಿಸಿದ. ಮತ್ತೊಂದು ಪ್ರಸಂಗದಲ್ಲಿ ಅಮೀನಾಳು ಪಲ್ಲಕ್ಕಿಯಲ್ಲಿ ಕುಳಿತಾಗ ಮದೋನ್ಮತ್ತ ಆನೆಯೊಂದು ಅಲ್ಲಿಗೆ ಬಂದು ಪಲ್ಲಕ್ಕಿ ಉರುಳಿಸಿದಾಗಲೂ ಅವಳ ಜೀವ ಉಳಿಸಿದ. ಹೀಗೆ ಎರಡು ಸಲ ಮೃತ್ಯುವಿನ ದವಡೆಯಿಂದ ಪಾರು ಮಾಡಿದ್ದಕ್ಕಾಗಿ ಅಮೀನಾ ಕಾಸಿಂ ಅಲಿಯಲ್ಲಿ ಅನುರಾಗ ಹೊಂದಿದಳು. ಇಬ್ಬರಲ್ಲೂ ಪವಿತ್ರ ಪ್ರೇಮ ಅಂಕುರಿಸಿತು. ಕಾಸಿಂ ಅಲಿಯು ಒಮ್ಮೆ ಯುದ್ಧದಲ್ಲಿ ಗಾಯ ಗೊಂಡಾಗ ಅತ್ಯಂತ ಪ್ರೇಮದಿಂದ ಅವನ ಆರೈಕೆ ಮಾಡಿದಳು. ಅಮೀನಾಳಿಗೆ ಜಡ್ಡಾಗಿ ಸೊರಗಿ ಹೋದಾಗ ಲೈಂಗಿಕ ಸುಖದಾಸೆಯ ರಹಮಾನಖಾನ ಅವಳನ್ನು ನಿರ್ಲಕ್ಷಿಸಿಬಿಟ್ಟ. ಕಾಸಿಂ ಅಲಿಗೆ ಅವಳ ಔಷಧೋಪಚಾರ ಮಾಡಲು ತಿಳಿಸಿದ. ಅಸಹಾಯಕ ಕ್ರಿಶ್ಚಿಯನ್ ಸೆರೆಯಾಳುಗಳ ಬಗ್ಗೆ ಕಾಸಿಂ ಅಲಿಯು ಅವರು ವೈರಿಯಾಗಿದ್ದರೂ ದಯೆ ತೋರುತ್ತಿದ್ದ. ಮತ್ತೊಬ್ಬರ ನೋವಿನಲ್ಲಿ ಆತ ಎಂದಿಗೂ ಸಂತಸ ಪಡುತ್ತಿರಲಿಲ್ಲ. ಅವನಲ್ಲಿಯ ಸಹಜವಾದ ಮಾನವೀಯ ಗುಣಗಳನ್ನು ಕಾಣಬಹುದು.

''...... ಅದನ್ನು ಕಣ್ಣಾರೆ ಕಂಡಾಗ ಅವನಿಗೆ ಅಳುವು ಬಂತು. ಹೊರತು ಕೈದಿಗಳ ಬಗ್ಗೆ ದುರ್ಭಾವನೆ ಬರಲಿಲ್ಲ.''

ಕ್ರಿಶ್ಚಿಯನ್ ಸೆರೆಯಾಳುಗಳಿಗೆ ಸಂಕೋಲೆ, ಸರಪಳಿ ತೊಡಿಸಿ ಕರೆದುಕೊಂಡು ಹೋಗುತ್ತಲಿದ್ದಾಗ ಕೆಲವು ಉಡಾಳ ಹುಡುಗರು ಅವರತ್ತ ಕಲ್ಲು ಎಸೆದರು. ಅಸಹಾಯಕ ಕೈದಿಗಳತ್ತ ಒಬ್ಬ ಕಲ್ಲು ಒಗೆಯುವುದನ್ನು ಕಂಡು ಕಾಸಿಮನು ತನ್ನ ಕೈಯಲ್ಲಿಯ ಚಾಬೂಕಿನಿಂದ ಆತನನನ್ನು ಅನೇಕ ಸಲ ಹೊಡೆದ. ಈ ಘಟನೆಯು ಕಾಸಿಂ ಅಲಿಯಲ್ಲಿಯ ದ್ವೇಷ ರಹಿತ ಭಾವನೆ ತೋರಿ, ಯುದ್ಧ ಕೈದಿಯಲ್ಲಿಯ ದ್ವೇಷ ರಹಿತ ಭಾವನೆ ತೋರಿ, ಯುದ್ಧ ಕೈದಿಗಳ ಬಗ್ಗೆ ಅವನಲ್ಲಿರುವ ದಯಾಳುತನವನ್ನು ಪ್ರಕಟಕೊಳಿಸುತ್ತದೆ. ''ಯಾಕೆ ಇಷ್ಟೊಂದು ಇಂಗ್ಲಿಷರನ್ನು ದ್ವೇಷಿಸುತ್ತಾರೆ ? '' ಎಂದು ತನ್ನೊಳಗೆ ತಾನು ಪ್ರಶ್ನಿಸಿಕೊಳ್ಳುತ್ತಿದ್ದ. ಕಾಸಿಂ ಅಲಿಯಲ್ಲಿ ಪರಧರ್ಮ ದ್ವೇಷ

ಇರಲಿಲ್ಲವೆಂಬುದು ಇದರಿಂದ ಗೊತ್ತಾಗುತ್ತದೆ. ಈ ರೀತಿ ಆತ ಮಾನವೀಯತೆಯ, ಧರ್ಮ ಸಹಿಷ್ಣುತೆಯ ಪ್ರತಿನಿಧಿಯಾಗಿ ನಿಲ್ಲುತ್ತಾನೆ. ಈ ಎರಡೂ ಗುಣಗಳು ನಾಗರಿಕ ಸಮಾಜದ ದ್ಯೋತಕಗಳಾಗಿವೆ.

ಕೇವಲ ಯುದ್ಧದ ಪರಾಕ್ರಮ ಹೊಂದಿರದೆ ಕಾಸಿಂ ಅಲಿಯು ಪ್ರೀತಿಗೆ, ಆದರಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದ. ಅನೇಕ ಸೈನಿಕರು ಕ್ಯಾಪ್ಟನ್ ಕಾಮ್ಬೆಲ್ನನ್ನು ಹೊಡೆಯಲು ತಮ್ಮ ಖಡ್ಗಗಳನ್ನು ಮೇಲೆತ್ತಿದಾಗ ಟೀಪುವಿನ ಸಮಕ್ಷಮದಲ್ಲಿಯೆ ಆತನೆಂದ –

''ಹೊಡೆಯದಿರಿ, ನೀವು ಮಾನವರೆ ? ಯಾವನೊಬ್ಬ ವ್ಯಕ್ತಿ ಮಹಿಳೆಯಂತೆ ಅಸಹಾಯಕನಾಗಿ ನಿಂತಿದ್ದಾನೋ ಅವನಿಗೆ ಹೊಡೆಯುವ ಸೈನಿಕರೇನು ನೀವು ? ಘನತೆಗೆ, ಆಡಿದ ಸತ್ಯಕ್ಕೆ ನಿಮಗೆ ಗೌರವ ಭಾವನೆ ಇಲ್ಲವೆ ?''

ಸುಲ್ತಾನನ ಮುಂದೆ ಇಷ್ಟೊಂದು ಧೈರ್ಯದಿಂದ ಮಾತನಾಡಲು ಅವನಲ್ಲಿ ಅದೆಂಥ ಸಾತ್ವಿಕತೆಯಿರಬೇಕು! ತನ್ನ ಜೀವಕ್ಕೆ ಹೀಗೆ ಮಾತಾಡಿದರೆ ಅಪಾಯವಿದೆ ಯೆಂಬುದನ್ನು ಲೆಕ್ಕಿಸದೆ ಆತ ಮಾತನಾಡಿ ಕ್ಯಾಪ್ಟನ್ ಕಾಮ್ಬೆಲ್ನನ ಪ್ರಾಣ ಉಳಿಸಿದ. ಕ್ಯಾಪ್ಟನ್ ಕಾಮ್ಬೆಲ್ನನ ರಕ್ಷಣೆ ಗಾಗಿ ಆತ ದನಿಯೆತ್ತಿದ್ದು ಅವನ ಮಾನವೀಯ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತದೆ.

ಕಾಸಿಂ ಅಲಿಯು ಹಿಂದುಗಳನ್ನೂ ಪ್ರೀತಿಸಿ ಹೊಗಳುತ್ತಿದ್ದ. ಏಕೆಂದರೆ ಅವರಲ್ಲಿ ಕಲೆ, ವಿಜ್ಞಾನಗಳಲ್ಲಿ ಅಪಾರ ಜ್ಞಾನವಿದೆಯೆಂದು ತಿಳಿದಿದ್ದ. ಹಿಂದುಗಳಲ್ಲಿರುವ ಸಭ್ಯತೆ, ಸೌಜನ್ಯತೆಗೆ ಅವರನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದ. ರಹಮಾನಖಾನನು ಹಿಂದೂ ದೇವಾಲಯವೊಂದನ್ನು ವೀಕ್ಷಿಸಿ ಹೊಗಳಿದಾಗ –

''ನಾನು ಅರಮನೆಯ ಆವರಣದಲ್ಲಿಯೆ ಇರುವದರಿಂದ ಇಂಥ ಶಾಂತ ಸ್ಥಳವನ್ನು ಕಂಡಿರಲಿಲ್ಲ. ಇದನ್ನು ಕಟ್ಟಿದ ಕಾಫಿರ ನಿಜವಾಗಿಯೂ ಬುದ್ಧಿವಂತ ನಾಗಿರಬೇಕು. ಒಮ್ಮೆಯಾದರೂ ನಾನು ಆ ಶಾಪಗ್ರಸ್ತ ಜನಾಂಗವನ್ನು ಮೆಚ್ಚಬೇಕು. ಕಾಸಿಂ ನೀನೇನು ಅನ್ನುತ್ತಿ ? '' ಎಂದು ಕೇಳಿದಾಗ ಕಾಸಿಂ ಅಲಿಯು

''ಖಾನ ಸಾಹೇಬರೆ, ನನಗೆ ಅನೇಕ ಜನ ಹಿಂದು ಮಿತ್ರರಿದ್ದಾರೆ. ಅವರು ಮೂರ್ತಿಪೂಜಕರಾಗಿದ್ದಾರೆಂದು ದ್ವೇಷವಿದ್ದರೂ ಅವರಲ್ಲಿಯ ಕೌಶಲ್ಯ, ನಿಪುಣತೆಯನ್ನು ಕೊಂಡಾಡುತ್ತೇನೆ. ಅಲ್ಲಾನು ನಮಗೆಷ್ಟು ದೇವರ ದೇಣಿಗೆಯಾಗಿ ಅದನ್ನು ಕೊಟ್ಟಿದ್ದಾನೋ ಅಷ್ಟೇ ಅವರಿಗೂ ದಯಪಾಲಿಸಿದ್ದಾನೆ ''– ಎಂದನು.

ಇದು ಕಾಸಿಂ ಅಲಿಯು ಟೀಪುವಿನಂತಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಬೇರೆ ಧರ್ಮದವನಾಗಿದ್ದರೂ ಸಹ ಆತ ಹಿಂದುಗಳಲ್ಲಿಯ ಸುಸಂಸ್ಕೃತ ಗುಣಗಳನ್ನು ಹೊಗಳುತ್ತಿದ್ದ.

ತನ್ನ ಸಾಹಸ, ಪರಾಕ್ರಮಗಳಿಂದಲೇ ಆತ ಟೀಪೂವಿನ ಪ್ರೀತಿ, ಗೌರವಕ್ಕೆ ಪಾತ್ರನಾಗಿದ್ದನಲ್ಲದೆ, ಸ್ವಲ್ಪ ಸಮಯದಲ್ಲಿಯೇ ಅವನ ಬಲಗೈ ಬಂಟನಾದ. ಟೀಪೂವಿನ ರಕ್ಷಕನಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಆತ ಜಾಫರನಂತೆ ಬಾಯಿ ಮಾತಿನ ಹೊಗಳಿಕೆಯಿಂದ ಟೀಪೂವಿನಪ್ರೀತಿಗೆ ಪಾತ್ರನಾಗಿರಲಿಲ್ಲ. ಸ್ವಾಮಿ ನಿಷ್ಠನಾದ ಆತ ಟೀಪೂವಿನ ಆಪ್ತ ಅಂಗರಕ್ಷಕನಾಗಿದ್ದ. ಕರ್ತವ್ಯ ಪ್ರಜ್ಞೆಯುಳ್ಳ ಆತ ಟೀಪೂವಿಗೆ ಅಪಾಯಕಾರಿ, ಪ್ರಾಣಕ್ಕೆರವಾಗುವ ಕಾರ್ಯ ಮಾಡದಂತೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದ. ತನ್ನ ಯಜಮಾನನ ಸೇವೆಗೆ ಸದಾ ಸಿದ್ಧ ಹಾಗೂ ಬದ್ಧನಾಗಿದ್ದ. ಯಾವುದೇ ತ್ಯಾಗಕ್ಕೂ ತಯಾರಾಗಿರುತ್ತಿದ್ದ. ತ್ರಾವಣಕೋರದ ಯುದ್ಧದಲ್ಲಿ ಟೀಪುವು ಒಮ್ಮೆ ನೆಲದ ಮೇಲೆ ಬಿದ್ದಾಗ ಕಾಸಿಂ ಅಲಿಯೇ ಅವನ ಪ್ರಾಣ ರಕ್ಷಣೆಗೆ ಮುಂದಾದ. ಟೀಪುವಿನ ಎಲ್ಲ ದಂಡಯಾತ್ರೆಗಳಲ್ಲಿ ಕಾಸಿಂ ಅಲಿಯದೇ ಪ್ರಮುಖ ಪಾತ್ರವಿರುತ್ತಿತ್ತು.

ಗುಂಡು ಹಾರಿಸುವ ವಿದ್ಯೆಯಲ್ಲೂ ಆತ ಪ್ರವೀಣನಾಗಿದ್ದನಲ್ಲದೆ ಗುರಿ ಇಟ್ಟಲ್ಲಿಸರಿಯಾಗಿ ಹೊಡೆಯುತ್ತಿದ್ದ. ಒಮ್ಮೆ ಟೀಪುವು ರಹಮಾನಖಾನನಿಗೆ ದೂರದಲ್ಲಿ ಮೇಯುತ್ತಿರುವ ಒಂದು ಕುರಿಗೆ ಕಾಸಿಂ ಅಲಿ ಗುರಿಯಿಟ್ಟ ಹೊಡೆಯಬಲ್ಲನೆ ? ಎಂದು ಕೇಳಿದ. ಆಗ ಕಾಸಿಂ ಅಲಿಯು ಆತ್ಮ ವಿಶ್ವಾಸದಿಂದ ಆ ಆಹ್ವಾನವನ್ನು ಸ್ವೀಕರಿಸಿದ. ಗುರಿ ಇಟ್ಟು ನೇರವಾಗಿ ಗುಂಡು ಹಾಸಿರಿದ. ಗುಂಡು ಆ ಕುರಿಯ ಕುತ್ತಿಗೆಯಲ್ಲಿ ಸೇರಿತು. ಅದನ್ನು ಸುಲ್ತಾನನು ಮೆಚ್ಚಿಕೊಂಡರೂ ಆಕಸ್ಮಿಕವೆಂದು ಬಗೆದನು. ವಿನೋದದಿಂದ –''ಇದು ಆಕಸ್ಮಿಕವನಾಗಿದೆ. ಅಲ್ಲಾನ ದಯೆಗೆ ಪಾತ್ರರಾದ ನಮಗೂ ಸಹ ಹೀಗೆ ಸರಿಯಾಗಿ ಹೊಡೆಯಲು ಬರುವುದಿಲ್ಲ'' ಎಂದು ಉದ್ಗಾರ ತೆಗೆದ. ಹುಲಿಯ ಬೇಟೆಯ ಸಮಯದಲ್ಲಿ, ಆನೆಗಳ ಬೇಟೆಯ ಸಮಯದಲ್ಲಿ, ಟೀಪುವು ಕಾಸಿಂ ಅಲಿಗೆ ಶುಭಾಶಯಗಳನ್ನು ಹೇಳುತ್ತ, ಪ್ರೋತ್ಸಾಹನೆಗಾಗಿ, ಧೈರ್ಯ ತುಂಬಿ ಶಹಬ್ಬಾಸ ಎಂದು ಅವನ ನೈಪುಣ್ಯ ಮೆಚ್ಚಿಕೊಳ್ಳುತ್ತಿದ್ದ.

ಕಾಸಿಂ ಅಲಿಗೆ ವಿನಾಕಾರಣ ಮಾಡುವ ಹಿಂಸೆ ಎಳ್ಳಷ್ಟೂ ಸೇರುತ್ತಿರಲಿಲ್ಲ. ವಿನಾಕಾರಣವಾಗಿ ಟೀಪುವು ಮಾಡುತ್ತಿದ್ದ ಪ್ರಾಣಿಗಳ, ಮಾನವರ ರಕ್ತಪಾತ ಅವನಿಗೆ ಸರಿ ಬರುತ್ತಿರಲಿಲ್ಲ. ಟೀಪುವಿನ ಬರ್ಬರ ಹತ್ಯೆಗಳನ್ನು ನೋಡಿ ಆತ ಅನೇಕ ಸಲ ಅವನ ಸೇವೆ ಮಾಡುವುದನ್ನು ಬಿಟ್ಟು ಹೋಗಬೇಕೆಂದೂ ಬಯಸುತ್ತಿದ್ದ. ಒಂದು ಹೋರಿಯನ್ನು ಕೊಂದು ಅದರ ರಕ್ತವನ್ನು ಒಬ್ಬ ಬ್ರಾಹ್ಮಣನ ಮುಖಕ್ಕೆ ಸವರಿಸಲು ಹಚ್ಚಿದ್ದನ್ನು ನೋಡಿ ಆತ –''.... ಅದೆಲ್ಲವನ್ನೂ ಒಲ್ಲದ, ಸೇರದ ಮನಸ್ಸಿನಿಂದ ನೋಡಿದ. ಮನಃಪೂರ್ವಕವಾಗಿ ಮುಸ್ಲಿಂನಾಗಿದ್ದರೂ ಸಹ ಪವಿತ್ರ ಹೋರಿಯನ್ನು ಕೊಲ್ಲುವದನ್ನು ಕೇಳಿರಲಿಲ್ಲ, ಅಂಥ ಹೋರಿಯನ್ನು ಕೊಂದಿದ್ದರಲ್ಲಿ ಆತನಿಗೆ ಕ್ರೌರ್ಯವೇ ಕಾಣಿಸಿತು. ''

ಮತ್ತೊಂದು ಪ್ರಸಂಗದಲ್ಲಿಯೂ ಕಾಸಿಂ ಅಲಿಗೆ ಜಿಗುಪ್ಸೆ, ತಾತ್ಸಾರ ಭಾವ ಉಂಟಾಯಿತು. ಅದಾವುದೆಂದರೆ ಆನೆಯ ಮರಿಯ ಬೆನ್ನಿಗೆ ಟೀಪುವು ಖಡ್ಗದಿಂದ ಪದೆ ಪದೇ ಹೊಡೆದದ್ದು, ಅದಕ್ಕೆ ಹಿಂಸೆ ಕೊಟ್ಟಿದ್ದು ಆತ ರಹಮಾನ ಖಾನನಿಗೆ

''ಇಂಥದ್ದು ಮತ್ತೊಮ್ಮೆ ಮರುಕಳಿಸಿದರೆ ನಾನು ಅವನ ಸೇವೆ ಮಾಡುವದನ್ನು ಬಿಟ್ಟು ತೊಲಗುವೆ ಎಂದು ಆಣೆ ಮಾಡಿ ಹೇಳುತ್ತೇನೆ. ನಾನು ಕಂಡ ಎರಡನೆಯ ಹಿಂಸಾಕೃತ್ಯವಿದು. ಆ ಹೋರಿಯನ್ನು ನೀನು ಮರೆತೆಯಾ ? '' ಎಂದು ಕೇಳಿದನು.

ಟೀಪುವು ಹಿಂಸಾಚಾರದಲ್ಲಿ ಘೋರ ಕೃತ್ಯಗಳಲ್ಲಿ ಸಂತಸಪಡುತ್ತಿದ್ದರೆ, ಕಾಸಿಂ ಅಲಿಯು ಅವುಗಳನ್ನು ದ್ವೇಷಿಸುತ್ತಿದ್ದ.

ಕಾಸಿಂ ಅಲಿಯು ಹಿಂಸಾಕೃತ್ಯಗಳನ್ನಷ್ಟೇ ದ್ವೇಷಿಸುತ್ತಿರಲ್ಲಿಲ. ಅದನ್ನು ಕಲೆಯಲ್ಲಿ ಅಭಿವ್ಯಕ್ತಗೊಳಿಸುವುದನ್ನೂ ನಿಂದಿಸುತ್ತಿದ್ದ. ಅರಮನೆಯ ಗೋಡೆಯ ಮೇಲೆ ತೆಗೆದ ವರ್ಣ ಚಿತ್ರಗಳನ್ನು ನೋಡಿ ಆತ ಕಲಾಕಾರನ ಕಲೆಯನ್ನು ಹೊಗಳಿದನೇ ಹೊರತು ಟೀಪುವಿನ ಅಭಿರುಚಿಯನ್ನು ಮೆಚ್ಚಲಿಲ್ಲ.

ದೇವರಿಗೆ ಪ್ರತಿ ನಿತ್ಯ ಪ್ರಾರ್ಥನೆ ಸಲ್ಲಿಸುವ ಉತ್ತಮ ಮುಸಲ್ಮಾನ ಆಗಿದ್ದ ಆತ. ಪಶುತ್ವ ಗುಣಗಳನ್ನು ಟೀಪೂ ತೋರಿಸದಿದ್ದರೆ ಅವನ ಆಸ್ಥಾನದಲ್ಲಿಯ ಸ್ಥಾನ ತ್ಯಜಿಸಿ ಈತ ಹೋಗುತ್ತಿರಲಿಲ್ಲ. ಟೀಪೂವಿನೊಡನೆ ಸತತ ಸಂಪರ್ಕ ಬಂದುದರಿಂದ ಟೀಪೂವಿನ ಸ್ವಭಾವ, ಗುಣ–ದೋಷಗಳು ಅವನಿಗೆ ಚೆನ್ನಾಗಿ ಗೊತ್ತಾದವು. ಟೀಪುವು ಉನ್ನತ ಶ್ರೇಷ್ಠ ಮಾತುಗಳನ್ನಾಡಿದಾಗಲೆಲ್ಲ ಅವನನ್ನು ಈತ ಕೊಂಡಾಡುತ್ತಿದ್ದ. ಆದರೆ ಟೀಪುವಿನಲ್ಲಿ ಕ್ಷುಲ್ಲಕ ವಿಚಾರಗಳು, ಸುಳಿದು ಹುಚ್ಚುತನಕ್ಕೆ ಇಳಿದಾಗ ಆತನನ್ನು ಒಪ್ಪುತ್ತಿರಲಿಲ್ಲ. ತನ್ನ ದೊರೆಯಲ್ಲಿ ಎಷ್ಟೋ ಲೋಪದೋಷಗಳಿದ್ದರೂ ಆತನ ಸೇವೆಯನ್ನು ಮನಃಪೂರ್ವಕವಾಗಿ ಪ್ರಾಮಾಣಿಕತನದಿಂದ ಮಾಡಿದ. ಯಾವಾಗ ಅವನ ಅತಿರೇಕತೆ ತಡೆದುಕೊಳ್ಳದಂತಾಯಿತೋ ಆಗ ಅವನ ಸೇವೆಯಿಂದ ಮುಕ್ತನಾಗಿ, ನಿವೃತ್ತನಾಗ ಬಯಸಿದ.

ಕಾಸಿಂ ಅಲಿಯು ಟೀಪುವಿನ ಸ್ವಭಾವ, ವ್ಯಕ್ತಿತ್ವವನ್ನು ತಿಳಿದು ಕೊಂಡಿದ್ದಂತೆ ಆತನೂ ಸಹ ಕಾಸಿಂ ಅಲಿಯ ಸಭ್ಯ ಗಣಗಳನ್ನು ತಿಳಿದಿದ್ದ. ಆತ ಎಂದಿಗೂ ಕಾಸಿಮನಿಗೆ ವಿಧ್ವಂಸಕ, ಅತ್ಯಾಚಾರದ , ಅನಾಚಾರದ ಕಾರ್ಯ ಮಾಡಲು ಹೇಳುತ್ತಿರಲಿಲ್ಲ. ಯಾಕೆಂದರೆ ಕಾಸಿಂ ಅಲಿಗೆ ಅದರಲ್ಲಿ ಇಷ್ಟವಿರುತ್ತಿರಲಿಲ್ಲ. ಕಾಸಿಂ ಅಲಿಯ ಅರ್ಹತೆ ಯೋಗ್ಯತೆಗಳೆರಡನ್ನೂ ಟೀಪೂ ಚೆನ್ನಾಗಿ ಬಲ್ಲವನಾಗಿದ್ದ.

ಇಂಥ ಕಾಸಿಂ ಅಲಿ ಟೀಪುವಿನ ವಿರುದ್ಧ ಬೀಳಲು ಸ್ವತಃ ಟೀಪು ಹಾಗೂ ಜಾಫರರೇ ಕಾರಣರಾಗಿದ್ದರು. ಜಾಫರನ ಮಾತಿಗೆ ಕಿವಿಗೊಟ್ಟು ಟೀಪುವು ಕಾಸಿಮನು ಬ್ರಿಟಿಷರಿಗೆ ಸೇರಿಕೊಂಡರೆ ಹೇಗೆ ಎಂದು ಶಂಕಿತನಾದ. ಹುಚ್ಚುತನದಲ್ಲಿ ಅವನನ್ನು

ಸಂಹರಿಸಿ ಬರಲು ಸೇವಕರಿಗೆ ಆಜ್ಞೆಯಿತ್ತ. ಯಾವ ಕಾಸಿಂ ಅಲಿಯು ಅತ್ಯಂತ ಸ್ವಾಮಿನಿಷ್ಠ, ಶ್ರೇಷ್ಠ ಸೇವಕನಾಗಿದ್ದನೋ ಅವನೇ ಟೀಪೂವಿನ ಸೋಲಿಗೂ, ಸಾವಿಗೂ ಕಾರಣೀಭೂತನಾದ.

ಇಂಥ ಕಾಸಿಂ ಅಲಿ ಕೊನೆಗೇ ಅಮೀನಾಳನ್ನು ಪ್ರೀತಿಯಿಂದ ಲಗ್ನವಾಗಿ ಬಾಳಿದ. ಅವರ ಪ್ರೇಮ ಮತ್ತು ವಿವಾಹವು ಭೀರಕ ಕೊಲೆ, ದೌರ್ಜನ್ಯ ದುಷ್ಕೃತ್ಯಗಳ ಮಧ್ಯದಲ್ಲಿ ಸಂತಸದ ಅಲೆಯನ್ನು ತರುತ್ತದೆ. ಅಮೀನಾಳು ವಯಸ್ಕ ಸರದಾರನ ಮೂರನೆಯ ಹೆಂಡತಿಯಾಗಿದ್ದಾಗ ಹದಿನೈದು ಹಾಗೂ ಐವತ್ತೈದು ವಯಸ್ಸಿನ ಅಂತರ ಹೊಂದಿತ್ತು. ಹೀಗಿದ್ದಾಗ ನಿಜವಾದ ತಾರಣ್ಯದ ಪ್ರೇಮ ಅವರಲ್ಲಿ ಹೇಗೆ ಅಂಕುರಿಸೀತು ? ಕಾಸಿಂ ಅಲಿಯ ಬಗ್ಗೆ ಎದ್ದ ಭಾವನೆಗಳಂತೆ ಗಂಡ ರಹಮಾನಖಾನನ ಬಗ್ಗೆ ಏಳುತ್ತಿರಲಿಲ್ಲ. ಎರಡು ಸಲ ತನ್ನ ಪ್ರಾಣ ಉಳಿಸಿದ್ದಕ್ಕೆ ಅವಳು ಅವನಿಗೆ ಉಪಕೃತಳಾಗಿದ್ದಳು. ತನ್ನ ಸಹಜ ಪ್ರೇಮವನ್ನು ಅಭಿವ್ಯಕ್ತಗೊಳಿಸುವದೂ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಅವನ ಯುದ್ಧ ಕೌಶಲ್ಯವನ್ನು ಮೆಚ್ಚಿ ಎಂಥ ಪರಾಕಮ್ರಿ ಈತ! ಎಂದೂ ಉದ್ಗರಿಸಿದಳು. ಅವರ ರಹಸ್ಯ ಪ್ರೇಮ ರೆಹಮಾನಖಾನನಿಗೆ ತಿಳಿದು ಬಂತು. ಆದರೆ ಅಮೀನಾ 'ಬಂಗಾರದ ಪಂಜರದಲ್ಲಿ ಸಿಕ್ಕ ಹಕ್ಕಿಯಂತೆ ಬಾಳುತ್ತಿದ್ದಳು. ಆ ಹಕ್ಕಿ ಹಾಡಿದಂತೆ ಮಾಡಿದರೂ ಅದಕ್ಕೆ ಬೇಕಾದದ್ದು ಸ್ವಾತಂತ್ರ್ಯ ಹಾಗೂ ಪ್ರಿಯ ಗಂಡು ಹಕ್ಕಿಯ ಸ್ನೇಹವಾಗಿತ್ತು. ಈ ರೀತಿಯ ಪಾತ್ರ ಚಿತ್ರಣ ಅವಳದಾಗಿದೆ.

ಅವಳ ಗಂಡ ರಹಮಾನ ಖಾನನು ಮೋಸ ವಂಚನೆಗಳ ಬಲೆಯಲ್ಲಿ ಸಿಕ್ಕ ವಿನೋದಿ ನಾಟಕದ ಪಾತ್ರದಂತಿದ್ದಾನೆ. ಅವನ ಇಬ್ಬರು ಹೆಂಡತಿಯರಾದ ಹಮ್ಮೂಬಿ, ಹರಮತಬಿ – ಇಬ್ಬರಿಬ್ಬರೂ ಮಧ್ಯವಯಸ್ಸಿನವರಾಗಿದ್ದಾರೆ. ಬಹಳಷ್ಟು ಹಣ ತೆತ್ತು ಕೊಂಡುಕೊಂಡ ಅಮೀನಾ ಸುಂದರ ತರುಣ ಹೆಂಡತಿಯಾಗಿದ್ದಾಳೆ. ಸರದಾರನಾಗಿ ಶೂರನಾಗಿದ್ದರೂ ಸಹ ಮೂವರು ಹೆಂಡತಿಯರ ಗಂಡನಾಗಿ ಮಾತ್ಸರ್ಯ ಹೊಂದಿ ಅಪಹಾಸ್ಯಕ್ಕೆ ಗುರಿಯಾಗುತ್ತಾನೆ. ರಹಮಾನಖಾನನು ಪ್ರಿಯ ತರುಣ ಪತ್ನಿಯ ಪ್ರಾಣವನ್ನು ಎರಡು ಸಲ ಉಳಿಸಿದ್ದಕ್ಕೆ ಉಪಕೃತನಾಗಿದ್ದಾನೆ ; ಪ್ರೀತಿ, ದಯೆ ಉಳ್ಳವನಾಗಿದ್ದಾನೆ. ತಾನು ಯುವತಿಯೋರ್ವಳನ್ನು ಮದುವೆಯಾಗಿ ಎಂಥ ತಪ್ಪು ಮಾಡಿದ ಎಂಬುದು, ಯಾವಳು ಅವನಿಗೆ ಮಗಳಂತಿರಬೇಕಾಗಿತ್ತು ಅಂಥವಳನ್ನು ಮದುಯಾದದ್ದು, ಸರಿಯಲ್ಲವೆಂಬುದು ತಡವಾಗಿ ತಿಳಿದು ಬಂತು. ಆತ ನಿಜವಾಗಿಯೂ ಯುದ್ಧ ಭೂಮಿಲ್ಲಿ ಸತ್ತು ಹೋದರೂ ಅವನಲ್ಲಿರುವ ಪ್ರಿಯಕರನೆಂಬ ಪ್ರೇಮ ಭಾವ ಎಷ್ಟೋ ವರ್ಷಗಳ ಹಿಂದೆಯೇ ಸತ್ತುಹೋಗಿತ್ತು. ಅವನ ಮರಣದ ನಂತರ ತನ್ನ ಊರಾದ ಹೈದರಾಬಾದಿಗೆ ಅವಳು ಮರಳಿ ಹೋದಳು. ಯಾವ ಅಬ್ದುಲ್ ಹರಮಾನಖಾನನು ಕಾಸಿಂ ಅಲಿಯನ್ನು ತನ್ನ

ತಮ್ಮನೆಂದು ಬಗೆದು, ತನ್ನ ದತ್ತಕ ಮಗನೆಂದು ಬಗೆದು ಪ್ರೀತಿಸುತ್ತಿದ್ದನೋ ಅವನಿಗೆ ತನ್ನ ವಾರಸುದಾರನಾಗಿ ಅಪಾರ ಸಂಪತ್ತನ್ನು ಬಿಟ್ಟು ಹೋಗಿದ್ದನು. ಅದರಂತೆ ತನ್ನ ಮೂವರು ಹೆಂಡತಿಯರಿಗೆ ಆಸ್ತಿ-ಪಾಸ್ತಿಯನ್ನು ಬರೆದಿಟ್ಟಿದ್ದನು. ಈರೀತಿಯ ಪಾತ್ರ ಚಿತ್ರಣ ಅವನದಾಗಿದೆ. ಅವನನ್ನು ಕಾಮುಕ, ಮಾತ್ಸರ್ಯಪೂರ್ಣ ವ್ಯಕ್ತಿಯನ್ನಾಗಿಯೂ, ಅರ್ಧ ಮರ್ಧ ನಾಗರಿಕ, ಅನಾಗರಿಕ ವ್ಯಕ್ತಿಯನ್ನಾಗಿಯೂ ಚಿತ್ರಿಸಲಾಗಿದೆ.

ಟೀಪುವಿನ ಮುಗ್ಧ ಕೈದಿಯಾಗಿದ್ದ ಕ್ಯಾಪ್ಟನ್ ಕಾಮ್ಟನ್ನನನ್ನು ಅತ್ಯಂತ ಆದರ್ಶ ಪ್ರೇಮಿಯನ್ನಾಗಿ ಚಿತ್ರಿಸಿ ಅವನ ಪ್ರೇಯಸಿಯಾದ ಎಮಿ ಹೆವರ್ಡ ಎನ್ನುವವಳನ್ನು ಅಮೀನಾಳಂತೆ ಸುಂದರ ಯುವತಿಯನ್ನಾಗಿ ಪಾತ್ರ ರಚನೆ ಮಾಡಿದ್ದಾನೆ. ಕ್ಯಾಪ್ಟನ್ ಕಾಮ್ಟನ್ನನು ಭಾರತಕ್ಕೆ ಬಂದು ಬಿದನೂರ ಯುದ್ಧದಲ್ಲಿ ಟೀಪುವಿನ ಸೆರೆಯಾಳಾಗಿ ಬಿಡುತ್ತಾನೆ. ಟೀಪೂವು ಅವನ ಗೆಳತನ ಮಾಡಿ ಅವನಿಂದ ಬ್ರಿಟಿಷರ ಸೈನಿಕ ಹಾಗೂ ಯುದ್ಧ ನೀತಿಗಳ ಬಗ್ಗೆ ತಿಳಿದುಕೊಳ್ಳಲು ಯತ್ನಿಸಿದ. ಆದರೆ ನಿಜವಾದ ಆಂಗ್ಲನು ಆತನಾದುದರಿಂದ ಅದಕ್ಕೊಪ್ಪದೆ ಜೇಲಿನಲ್ಲಿ ಕೈದಿಯಾಗಿಕೊಳೆಯುವದಾಗಿ ಹೇಳಿದನು. ತನ್ನ ದೇಶಕ್ಕಾಗಲಿ, ರಾಜರಿಗಾಗಲಿ ದ್ರೋಹ ಬಗೆಯುವುದಿಲ್ಲವೆಂದು ಸ್ಪಷ್ಟಪಡಿಸಿದನು. ರಾಜ ಸಭೆಯಲ್ಲಿ ಟೀಪುವನ್ನು ಅವನ ಧರ್ಮವನ್ನು ಹೀಗಳೆದು ತನ್ನ ದಾರ್ಷ್ಟ್ಯ ತೋರಿದನು.

ದೈಹಿಕವಾಗಿ ಬಳಲಿದ, ದುರ್ಬಲನಾದ ಅವನನ್ನು 'ಫೇಟಲ್‌ರಾಕ' ದ ಮೇಲಿನಿಂದ ಎಸೆದರು. ಸುದೈವದಿಂದ ಸಾಯಲಿಲ್ಲ. ಮೂರ್ಛೆ ಹೋಗಿ ಬಿದ್ದಾಗ ಅವನನ್ನು ಫಕೀರ ಎನ್ನುವವನೊಬ್ಬನು ತನ್ನ ಮನೆಗೆ ಒಯ್ದು ಉಪಚರಿಸಿದಾಗ ಎಚ್ಚರಗೊಂಡನು. ಗುಣಮುಖನಾದನು. ಆ ಬಳಿಕ ಆತನನ್ನು ಆಜೀವ ಪರ್ಯಂತ ಜೇಲಿನಲ್ಲಿಟ್ಟರು. ೧೭೯೯ರ ಮೈಸೂರಿನ ಕೊನೆಯ ಯುದ್ಧದಲ್ಲಿ ಬ್ರಿಟಿಷರು ಗೆದ್ದ ನಂತರ ಬಿಡುಗಡೆ ಹೊಂದಿದನು. ತನ್ನ ದೇಶಕ್ಕೆ ಮರಳಿ ಬಂದು ಮದುವೆಯಾಗದೆ ಅವನ ಬರುವಿಕೆಯ ದಾರಿಕಾಯುತ್ತಿದ್ದ ಎಮಿಳನ್ನು ಸುಖ - ಸಂತೋಷದಲ್ಲಿ ಕೂಡಿಕೊಂಡನು. ಈ ರೀತಿ ಕ್ಯಾಪ್ಟನ್ ಕಾಮ್ಟನ್ ಹಾಗೂ ಎಮಿ ಇಬ್ಬರೂ ಆದರ್ಶ ಪ್ರೇಮಿಗಳಾಗಿ ಚಿತ್ರಸಲ್ಪಟ್ಟಿದ್ದಾರೆ. ಬೇರೆ ಬೇರೆ ದೇಶಗಳಲ್ಲಿದ್ದರೂ ಅವರ ಹೃದಯ ಒಂದಾಗಿತ್ತು. ಅವರದೂ ಅತ್ಯಂತ ಪರಿಶುದ್ಧ ಪವಿತ್ರ ಪ್ರೇಮವಾಗಿದೆ.

ಅಮುಖ್ಯ ಪಾತ್ರವಾದ ಫಕೀರನು ದಯಾಳುವಾಗಿ ಸರ್ವರಿಗೂ ಉಪಕಾರ ಮಾಡುವವನಾಗಿ, ಅತ್ಯಂತ ಸುಸಂಸ್ಕೃತವಾಗಿ ಚಿತ್ರಿತನಾಗಿದ್ದಾನೆ. ಇಸ್ಲಾಂ ಹೇಳಿದಂತೆಯೇ ಬಾಳಿದ ಫಕೀರ ಅವನಾಗಿದ್ದಾನೆ. ಮಾನವೀಯತೆಯಲ್ಲಿ, ಧರ್ಮ ಸಹಿಷ್ಣುತೆಯಲ್ಲಿ, ಎಲ್ಲರೂ ಬಂಧು ಬಾಂಧವರೆಂದು ಬಗೆಯುವುದರಲ್ಲಿ ಯಾವದು ಸುಸಂಸ್ಕೃತ ನಾಗರಿಕತೆಯ ಲಕ್ಷಣವಾಗಿದೆಯೋ ಅವುಗಳಲ್ಲಿ ಅಗ್ರಗಣ್ಯನಾಗಿದ್ದಾನೆ.

(ಅನೇಕ ಮುಸಲ್ಮಾನರು ಸಜ್ಜನ, ಸಭ್ಯ, ಘನವಂತರೆಂದು ತೋರಿಸಿಕೊಡುತ್ತಾನೆ) ಕ್ಯಾಪ್ಟನ್ ಕಾಮ್ಟನ್ನನನ್ನು ಪ್ರೀತಿಯಿಂದ ಕರುಣೆಯಿಂದ ಉಪಚರಿಸಿ ಬದುಕಿಸುತ್ತಾನೆ, ಯೋಗ್ಯ ಔಷಧೋಪಚಾರವನ್ನೂ ಮಾಡುತ್ತಾನೆ. ಅವನಿಗೆ ಫಕೀರನು ''ವಿದೇಶಿಯನೆ, ಸಂತಸಪಡು. ನೀನು ಬದುಕಿ ಉಳಿದಿದದ್ದಕ್ಕೆ ದೇವರಿಗೆ ಋಣಿಯಾಗಿರು. ಆತ ನಿನಗೆ ಕರುಣೆ ತೋರಿ ಬದುಕಿಸಿದ್ದಾನೆ. ಆರು ದಿನಗಳ ಕಾಲ ನೀನು ಬಂಡೆಯ ಬುಡದಲ್ಲಿ ಪ್ರಜ್ಞಾಹೀನನಾಗಿ ಬಿದ್ದಿದ್ದೆ. ಯಾವ ಉಸಿರಾಟ ಮೂಗಿನ ಹೊಳ್ಳೆಗಳಲ್ಲಿ ನಡೆದಿತ್ತೋ ಅದು ನಿನಗೆ ಜೀವ ತಂದು ಕೊಟ್ಟಿದೆ. ಅದಕ್ಕಾಗಿ ನೀನು ದೇವರ ಉಪಕಾರ ಸ್ಮರಿಸು''ಎಂದನು. ಅದಕ್ಕೆ ಆತ – ' ಶಹ ಸಾಹೇಬರೆ , ನನ್ನನ್ನು ದಯೆ ತೋರಿ ಉಳಿಸಿದ್ದಕ್ಕೆ ಉಪಕೃತ ಆಗಿದ್ದೇನೆ'' ಎಂದ. ಅಷ್ಟೇ ಅಲ್ಲದೆ –

''...... ನನ್ನಲ್ಲಿ ಜೀವ ಇರುವವರೆಗೂ, ನಾನು ನಿನ್ನನ್ನು ಮರೆಯುವುದಿಲ್ಲ, ನನ್ನ ಕಷ್ಟದ ಸಮಯದಲ್ಲಿ ನೀನು ಮಿತ್ರನಾಗಿ ವರ್ತಿಸಿರುವೆ'' – ಎಂದ. ಈ ರೀತಿ ವಿಭಿನ್ನ ಧರ್ಮದವರಾಗಿ ಪ್ರೇಮ ಹಾಗೂ ಮಾನವತೆಯಿಂದ ಜೋಡಿಸಲ್ಪಟ್ಟವರಾಗಿದ್ದರು. ದೌರ್ಜನ್ಯದ ಪ್ರತೀಕಗಳ ಮಧ್ಯದಲ್ಲಿ ಈ ಫಕೀರನು ದೇವದೂತನಂತೆ ಕಾರ್ಯ ಮಾಡಿದ್ದಾನೆ. ಒಳ್ಳೆಯ ಸಂಸ್ಕೃತಿ ಹಾಗೂ ನಾಗರಿಕತೆಯನ್ನು ತೋರಿದ್ದಾನೆ.

ಸಂಭಾಷಣೆಯಲ್ಲೂ ಸಹ ದುಷ್ಟರು ಕೆಟ್ಟ ಭಾಷೆಯಲ್ಲಿ ಮಾತನಾಡಿದ್ದನ್ನು , ಶಿಷ್ಟರು ಸುಶಿಕ್ಷಿತರ ಭಾಷೆಯಲ್ಲಿ ಮಾತನಾಡಿದ್ದನ್ನು ನೋಡಬಹುದಾಗಿದೆ. ಇವನ್ನು ಕ್ಯಾಪ್ಟನ್ ಕಾಮ್ಟನ್ ಹಾಗೂ ಫಕೀರರ ಸಂಭಾಷಣೆಯಲ್ಲಿ ನೋಡಬೇಕು. ಕಾಮ್ಟನ್ ಎಂದನು –

''ಶೇಖ ಸಾಹೇಬರೆ, ನಾನು ನಿಮ್ಮ ದಯಾಗುಣಕ್ಕೆ ಉಪಕೃತನಾಗಿದ್ದಾನೆ. ಅದಕ್ಕೆ ಫಕೀರನೆಂದನು – '' ಆಗಿ ಹೋದುದರ ಬಗ್ಗೆ ನೀನು ಚಿಂತಿಸಬೇಡ... ಈಗಂತೂ ನೀನು ಸುರಕ್ಷಿತವಾಗಿರುವಿ. ಈಗ ನೀನು ಅಲ್ಲಾನ ಬಡ ಗುಲಾಮನಾದ ನನ್ನ ತೋಟದಲ್ಲಿರುವಿ....''

ಮೂರು ಭಿನ್ನ ಕಥೆಗಳ ಸುಂದರ ಜೋಡಣೆಯೊಂದಿಗೆ ಕಾದಂಬರಿಯು ಮುಂದವರಿಯುತ್ತದೆ. ಕಥೆಗಾರನಾಗಿ ಕಾದಂಬರಿಕಾರನು ಅನೇಕ ಘಟನೆಗಳನ್ನು ನಾಟಕೀಕರಣ ಮಾಡುತ್ತ ಸಾಗುತ್ತಾನೆ. ಎಮಿ ಹಾಗೂ ಕಾಮ್ಟನ್ನರ ಪ್ರಣಯ ದೃಶ್ಯವು ಇಂಗ್ಲೆಂಡಿನಲ್ಲಿದ್ದರೆ ಕಾಸಿಮ ಅಲಿ ಹಾಗೂ ಅಮೀನಾರ ಪ್ರಣಯವು ಭಾರತದಲ್ಲಿದೆ. ಹೀಗೆ ಎರಡನ್ನೂ ಒಂದರ ಬದಿಯಲ್ಲೊಂದಾಗಿರಿಸಿ ಆಪ್ಯಾಯಮಾನವಾಗುವಂತೆ ವಿವರಿಸುತ್ತಾನೆ.

ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಭಾವಾನುಸಾರ ಶಬ್ದಗಳನ್ನು ಬಳಸಿದ್ದಾನೆ. ಟೀಪುವು ಯಾವಾಗಲೂ ಹೊಲಸು, ಅಶ್ಲೀಲ ಪದಗಳನ್ನು ಬಳಸಿದರೆ - ಹಂದಿ, ನಕರದವನೆ, ಕಾಫಿರ ಮುಂತಾದವುಗಳು, ಕಾಸಿಂ ಅಲಿಯಂಥವರು ಸುಸಂಸ್ಕೃತ ಸಭ್ಯ ಶಬ್ದಗಳನ್ನು ಬಳಸಿದ್ದಾರೆ. 'ಪವಿತ್ರ ಅಲ್ಲಾ' 'ಪವಿತ್ರ ಪ್ರವಾದಿ' ಎಂಬ ಶಬ್ದಗಳು ಅವನ ನಾಲಿಗೆಯ ಮೇಲೆ ಇರುತ್ತಿದ್ದವು. ಎಲ್ಲಾ ಪಾತ್ರಗಳು ತಮ್ಮ ಸ್ಥಾನ ಮಾನಕ್ಕೆ ತಕ್ಕಂತೆ ಮಾಡನಾಡಿದ್ದಾರೆ. ಭಾರತಿಯ ಹಿಂದುಸ್ತಾನಿ ಶಬ್ದಗಳಾದ ಸಾಹಿಬ, ಇನ್ಶಲ್ಲಾ, ಖುದಾವಂದ, ಜೋಹುಕುಂ - ಮುಂತಾದವುಗಳನ್ನು ಅಲ್ಲಲ್ಲಿ ಕಾಣುತ್ತೇವೆ.

ಅದರಂತೆ ವರ್ಣನೆಯಲ್ಲೂ ಟೇಲರನು ವಾಸ್ತವಿಕತೆಯನ್ನು ತಂದಿದ್ದಾನೆ. ಭಾರತದಲ್ಲಿಯ ಬೇಸಿಗೆಯ ರಾತ್ರಿಯಲ್ಲಿಯ ಬೆಳದಿಂಗಳನ್ನು ವರ್ಣಿಸುತ್ತಾ ''ಪೂರ್ವ ದೇಶಗಳಲ್ಲಿ ಕಾಣಸಿಗುವ ಭವ್ಯ ಬೆಳದಿಂಗಳ ರಾತ್ರಿ ಅದಾಗಿತ್ತು.... ನಿಸರ್ಗಕ್ಕೆ ಇದಕ್ಕಿಂತ ಹೆಚ್ಚಿನ ಸೌಂದರ್ಯಭರಿತ ಯೋಗ್ಯ ಆನಂದವನ್ನು ಈ ಬೆಳದಿಂಗಳಿಗಿಂತ ಹೆಚ್ಚಿಗೆ ಯಾವುದೂ ಕೊಡಲಾರದು..... ಎಲ್ಲೆಲ್ಲೂ ಬೆಳ್ಳಿಯ ಬೆಳಕು ಹಬ್ಬಿತ್ತು...'' ಅದರಂತೆ ಯುದ್ಧನಂತರ ಹಾಳು ಹಾಳಾಗಿದ್ದ ದೃಶ್ಯದ ವರ್ಣನೆ ಹೀಗಿದೆ.

''.....ಹೆಣಗಳ ರಾಶಿಗಳ ಮೇಲೆ, ಎಲ್ಲೆ ನೋಡಿದಲ್ಲೆಲ್ಲ... ಹದ್ದುಗಳು, ಚೀರುತ್ತ, ತಮ್ಮ ತಮ್ಮಲ್ಲಿ ಹೊಡೆದಾಡುತ್ತ ಹೆಣಗಳನ್ನು ಮುತ್ತಿ ಬಿಟ್ಟಿದ್ದವು. ಆಗ ಸಾವಿರಾರು ಕಾಗೆಗಳು ಸತತವಾಗಿ ಕೂಗುತ್ತ, ಹಾರುತ್ತ, ಇದ್ದವು.....''

ನೀಲಗಿರಿ ಬೆಟ್ಟದ ವರ್ಣನೆ ಹೀಗಿದೆ -

''ಎಲ್ಲಿ ನೋಡಿದಲ್ಲಿ ನಾನಾ ಬಗೆಯ ಹೂಗಳು ಅರಳಿದ್ದವು. ಹೂಗಳ ಸಂಪತ್ತಿನ ರಾಶಿ ಎಲ್ಲೆಡೆ ಪಸರಿಸಿದ್ದನ್ನು, ಸಂತಸಗೊಂಡು ಪುಳಕಿತನಾದ ಹರ್ಬರ್ಟ ಕಾಮ್ಟನ್ನನು - ಇಂಥ ಸ್ವರ್ಗವು ಇಲ್ಲಿದೆ ಎಂಬುದು ನಮ್ಮವರಿಗೆ ಗೊತ್ತಿಲ್ಲ'' ಎಂದು ಅಂದನು.

ಟೇಲರನ ಟೀಪೂ ಸುಲ್ತಾನ ಕಾದಂಬರಿಯನ್ನು ಸರ್ ವಾಲ್ಟರ ಸ್ಕಾಟರು ಬರೆದ 'ದ ಸರ್ಜನ್ಸ ಡಾಟರ' ಎಂಬ ಕಾಂದರಿಯ ಜೊತೆಗೆ ಹೋಲಿಸಬಹುದಾಗಿದೆ. ಯಾಕೆಂದರೆ ಅವೆರಡೂ ಕಾದಂಬರಿಗಳಲ್ಲಿ ಟೀಪುವೇ ಪ್ರಮುಖ ಪಾತ್ರವಾಗಿದ್ದಾನೆ. ನಿಜವಾಗಿ ಹೇಳುವುದಾದರೆ ಟೇಲರನ ಕಾದಂಬರಿಯು ಸ್ಕಾಟನ ಕಾದಂಬರಿಯ ಮುಂಭಾಗದಂತಿದೆ. ಸ್ಕಾಟನ ಕಾದಂಬರಿಗೆ ಐತಿಹಾಸಿಕ ಔಚಿತ್ಯ ಬಹಳಿಲ್ಲ, ಮತ್ತು ಅದರಲ್ಲಿ ಭಾರತದ ಸಂಪೂರ್ಣ ಚಿತ್ರಣವಿಲ್ಲ.

ಸ್ಕಾಟನ ಕಾದಂಬರಿಯಲ್ಲಿ ಟೀಪುವನ್ನು ಕಾಮುಕನಾಗಿ ತೋರಿಸಲಾಗಿದ್ದು ಕ್ರಿಶ್ಚಿಯನ ಯುವತಿಯನ್ನು ಪ್ರೇಯಸಿಯನ್ನಾಗಿಸಿಕೊಳ್ಳುವ ಯತ್ನ ಮಾಡಿದ್ದನ್ನು

ತೋರಿಸಲಾಗಿದೆ. ಸ್ಕಾಟನು ಹೈದರ ಅಲಿಯನ್ನು ಸಮರ್ಥ, ಯೋಗ್ಯ, ನೀತಿವಂತನನ್ನಾಗಿ ಚಿತ್ರಿಸಿ ತನ್ನ ಮಗನನ್ನು ಕಾಮುಕತೆಗೆ ಅಪಮಾನಗೊಳಿಸಿದ್ದು ಬರುತ್ತದೆ. ತನ್ನ ಮಗನನ್ನು ಸಾರ್ವಜನಿಕವಾಗಿ ಅವಮಾನಗೊಳಿಸಿ ಕ್ರಿಶ್ಚಿಯನ್ ಯುವತಿಯಾದ ಮಿನಿ ಗ್ರೆ ಎನ್ನುವವಳ ಮಾನ ರಕ್ಷಣೆ ಮಾಡಿದ ಕಥೆ ಇದೆ. ಆದರೆ ಟೇಲರನು ಟೀಪುವನ್ನು ಕಾಮುಕನನ್ನಾಗಿ ಚಿತ್ರಿಸಿಲ್ಲ, ಅದರ ಬದಲು ಅವನನ್ನು ಬರ್ಬರತೆಯ ವ್ಯಕ್ತಿಯನ್ನಾಗಿ ತೋರಿಸಲಾಗಿದೆ. ಸರ್ ವಾಲ್ಟರ್ ಸ್ಕಾಟನು ಭಾರತಕ್ಕೆ ಬರದೆ, ಮೈಸೂರು ಪ್ರದೇಶವನ್ನೆಲ್ಲ ಕಲ್ಪಿಸಿಕೊಂಡು ಬರೆದಿದ್ದಾನೆ. ಆದರೆ ಟೇಲರನು ಮಾತ್ರ ಭಾರತದಲ್ಲಿದ್ದು ಎಲ್ಲ ಬಗೆಯ ಜನರನ್ನು ಪ್ರತ್ಯಕ್ಷ ನೋಡಿ, ಮೈಸೂರು ಪ್ರದೇಶಗಳಲ್ಲೆಲ್ಲಾ ಅಡ್ಡಾಡಿ, ಅನುಭವಿಸಿ ವಾಸ್ತವಿಕವಾಗಿರುವದನ್ನು ಚಿತ್ರಿಸಿದ್ದಾನೆ. ಸ್ಕಾಟನ ಕಾದಂಬರಿಯಲ್ಲಿ ಒಂದು ಮುಖ್ಯ ಘಟನೆಯ ಬಗ್ಗೆ ಬರೆದ ಕಥೆ ಇದ್ದರೆ ಟೇಲರ ಸವಿಸ್ತಾರವಾದ ಇತಿಹಾಸವನ್ನು , ನೈಜಯುತ ಜೀವನವನ್ನು ಸಮಗ್ರವಾಗಿ ಚಿತ್ರಿಸಿದ್ದಾನೆ.

******

''ಈ ರೀತಿ ಉಗಮವಾದ ವೃತ್ತಿಯಲ್ಲಿ ಹಿಂದುಗಳು, ಮುಸಲ್ಮಾನರು ಸೇರಿಕೊಂಡಿದ್ದು, ಮೂಢನಂಬಿಕೆಗಳಲ್ಲಿಯೇ ಬೆರೆತುಬಾಳಿದ್ದು ಅಚ್ಚರಿಯ ವಿಷಯವಾಗಿದೆ.''

ಈ ಭಕ್ತರು ಮಹಾಕಾಳಿಯ ಪೂಜಕರಾಗಿದ್ದು ಕತ್ತಲಲ್ಲೆ ಬದುಕಿ ಅವಳನ್ನು ಆರಾಧಿಸಲು ಮುಗ್ಧರನ್ನು ಪಶುಬಲಿಯನ್ನಾಗಿಸುತ್ತಿದ್ದರು. ಅದಕ್ಕಾಗಿಯೇ ಅವರು ಕರಾಳ ದೇವತೆಗೆ ಕರಾಳ ಸಮಯದಲ್ಲಿಯೇ ಸಂತಸಗೊಳಿಸಿ ಬೆಳಕನ್ನು ದ್ವೇಷಿಸಹತ್ತಿದರು. ಸಜ್ಜನರಂತೆ ನಟಿಸಿ, ಜನರಿಗೆ ಮೋಸಮಾಡಿ ಬಿಡುವವನೇ ಥಗ್ಗನೆಂದು ಹೆಸರು ಪಡೆದುಕೊಂಡನು.

''ಮರಮಾತಿಗೆ ಬೀಳಿಸಿ, ಸಹಚರರನ್ನು ಮೋಸಗೊಳಿಸಿ, ಕೊನೆಗೆ ಕೊಂದು ಹಾಕುವವರೇ ಥಗ್ಗರಾದರು.... ಅವರ ಜೊತೆಗೆ ಸುಂದರ ಸ್ತ್ರೀಯರೂ ಇರುತ್ತಿದ್ದು ಅವರು ದಾರಿಯಲ್ಲಿ ದುಃಖಿತರಂತೆ ನಟಿಸಿ ಸಂಚಾರಿ ಜನರಿಗೆ ಮರಳು ಮಾಡಿ ಸಹಾಯ ಮಾಡುತ್ತಿದ್ದರು.''

ತಾವು ದೇವರಿಂದಲೇ ಹುಟ್ಟಿ ಬಂದವರೆಂಬುದು ಅವರ ನಂಬಿಗೆಯಾಗಿದೆ. ಆದರೆ ವಾಸ್ತವದಲ್ಲಿ ಅವರು ನರಕದಿಂದ ಬಂದವರಾಗಿದ್ದರು. ದೇವರಿಂದಲೇ ತಮ್ಮ ಉತ್ಪತ್ತಿಯಾಗಿದೆಯೆಂದು ಒಬ್ಬ ಥಗ್ ಹೇಳುವದೆಲ್ಲ ಹೀಗೆ –

''ಥಗ್ ವೃತ್ತಿಯಲ್ಲಿ ಹಿಂದು, ಮುಸಲ್ಮಾನರು ಅಣ್ಣ ತಮ್ಮಂದಿರಂತೆ ಒಕ್ಕಟ್ಟಾಗಿರುತ್ತಾರೆ. ಅವರಲ್ಲಿ ಅವಿಶ್ವಾಸವೆಂಬುದೇ ಇಲ್ಲ, ತಮ್ಮ ವೃತ್ತಿಗೆ ದೈವೀ ಒಪ್ಪಿಗೆ ಇದೆಯೆಂದೇ ಬಗೆಯುತ್ತಾರೆ. ಹಿರಿಯರಾಗಲಿ, ಕಿರಿಯರಾಗಲೀ, ಎಲ್ಲರಲ್ಲೂ ಒಂದೇ ಥರದ ಉತ್ಸಾಹ ಇರುತ್ತದೆ. ಎಲ್ಲಿ ಬೇಕಾದಲ್ಲಿ ಹೋಗಿ ನೋಡಿದರೂ ಇದೇ ಭ್ರಾತೃತ್ವ ಇರುತ್ತದೆ. ..... ಧೈರ್ಯವಂತನಾಗಿರು, ದೃಢ ನಿರ್ಧಾರ ಹೊಂದಿರು, ಕುಶಾಗ್ರನಾಗಿರು, ಉಳಿದವರೊಡನೆ ವಿಶ್ವಾಸಿಕನಾಗಿರು.... ಇಷ್ಟಿದ್ದರೆ ಹೆಚ್ಚಿಗೇನೂ ಬೇಕಿಲ್ಲ. ಇವು ಥಗ್ಗನೊಬ್ಬನ ಶ್ರೇಷ್ಠ ಅರ್ಹತೆಗಳಾಗಿವೆ.'' ಇಂಥ ಮನೋಭಾವದ ಜೊತೆಗೆ ಕೈಯಲ್ಲೊಂದು ವಸ್ತ್ರವಿದ್ದರೆ ಸಾಕು. ಗುಪ್ತವಾಗಿ ಹತ್ಯೆ ಮಾಡಿಬಿಡಬಲ್ಲೆ, ಈ ಕರವಸ್ತ್ರವೇ ಅವನ ಮಹಾ ಶಸ್ತ್ರವಾಗಿದೆ. ಅದು ಯಾರ ಕೊರಳಿಗೆ ಸುತ್ತಿರುತ್ತದೋ ಆತ ಕೂಡಲೇ ಸತ್ತು ಹೋಗಬೇಕು. '' ಹೀಗಿದೆ ಅವರ ರಹಸ್ಯಮಯ ಕಾರ್ಯ.

ಈ ವೃತ್ತಿಯಲ್ಲಿ ಪ್ರವೇಶಿಸುವಾಗ ನಡೆಸುವ ಧಾರ್ಮಿಕ ಕಾರ್ಯ ಕಲಾಪಗಳನ್ನು ಅಮೀರ ಅಲಿ ವಿವರಿಸಿದ್ದಾನೆ.

''..... ನನಗೆ ಸ್ನಾನಕ್ಕೆ ಹಾಕಿ ಹೊಸ ಬಟ್ಟೆ ತೊಡಿಸಿದರು. ನನ್ನ ಬಲಗೈ ಹತ್ತಿರ ನಮ್ಮ ಸಂಕೇತವಾದ ಗುದ್ದಲಿಯನ್ನು ಇಟ್ಟರು. ಅದರ ಬುಡದಲ್ಲಿ ಒಂದು ಬಿಳಿ ಕರವಸ್ತ್ರ ವನ್ನಿಟ್ಟಿದ್ದರು. ನಾನು ಅದನ್ನು ನನ್ನ ಎದೆಯವರೆಗೆ ಎತ್ತಿ ಹಿಡಿಯಬೇಕು.

''ತಾರಾ ಎಂಬುದು ಮೂರು ಕಾದಂಬರಿಗಳ ಮಾಲಿಕೆಯಲ್ಲಿ ಮೊದಲನೆಯದು. ಭಾರತದಲ್ಲಿದ್ದಾಗ ಮೂರು ಮಹತ್ವದ ಘಟನೆಗಳಲ್ಲಿ ಮೊದಲನೆಯದಾದ ಮರಾಠಾ ರಾಜ್ಯದ ಉದಯದ ಬಗ್ಗೆ ಇದೆ. ಮತ್ತು ೧೬೫೭ರಲ್ಲಿ ಮರಾಠರು ಮುಸಲ್ಮಾನ ರಾಜರಿಗೆ ಕೊಟ್ಟಹೊಡೆತದ ಬಗ್ಗೆ ಇದೆ.''

ಈ ಕಾದಂಬರಿಯಲ್ಲಿ ಹೆಚ್ಚಾಗಿ ಮರಾಠರ ಬಗ್ಗೆ ಬಂದುದರಿಂದ ಇದಕ್ಕೆ 'A Maratha Tale' ಎಂಬ ಉಪ ಶೀರ್ಷಿಕೆ ಕೊಟ್ಟಿದ್ದಾನೆ. (ಮಾರಾಠರ ಸುಸಂಸ್ಕೃತ, ನಾಗರಿಕ ಜೀವನವನ್ನು ಕಣ್ಣಾರೆ ಕಂಡು, ಪಕ್ವತೆಯಿಂದ ಬರೆದ ಕಾದಂಬರಿ ಇದಾಗಿದೆ.

ಈ ಮನಮೋಹಕ ಕಾದಂಬರಿಯ ಐತಿಹಾಸಿಕ ವಿಷಯವನ್ನು ವಿಜಾಪುರದ ಆದಿಲ್ ಶಾಹಿಗಳ ಆಸ್ಥಾನದ ಇತಿಹಾಸಕಾರನಾದ ಮಹಮ್ಮದ ಕಾಸಿಮ ಫರಿಶ್ತಾನಿಂದ ಪಡೆದುಕೊಂಡಿದ್ದಾನೆ. ಫರಿಶ್ತಾನ ಇತಿಹಾಸ ಪುಸ್ತಕವನ್ನು 'ಸ್ಕಾಟ ಎಂಬುವವನು 'ಡಕ್ಕನ' ಎಂಬ ಹೆಸರಿನಿಂದ ಭಾಷಾಂತರಿಸಿ ಪ್ರಕಟಿಸಿದ್ದನು. ಅದರಂತೆಯೇ ಗ್ರಾಂಟ ಡಫ್‌ನು ಬರೆದ 'Hostory of the Marathas' ಎಂಬ ಗ್ರಂಥದ ಪ್ರಥಮ ಭಾಗದಿಂದ ಮರಾಠರ ಜೀವನದ ಬಗೆಗಿನ ವಿವರಗಳನ್ನು ಪಡೆದು ಕೊಂಡಿದ್ದಾನೆ.

ವಿಜಾಪುರದ ಆದಿಲ್ ಶಾಹಿಗಳ ವಜೀರನಾಗಿದ್ದ ಖಾನ ಮಹಮ್ಮದ ಎಂಬುವವನು ಮಾಡಿದ ರಾಜಕೀಯ ದ್ರೋಹ, ಅವನ ಕೊಲೆಯ ಬಗ್ಗೆ ಬರುವ ಐತಿಹಾಸಿಕ ವಿಷಯ ಈ ಕಾದಂಬರಿಯಲ್ಲಿದೆ. ಆದಿಲ್‌ಶಹನು ಚಿಕ್ಕವನಾಗಿದ್ದಾಗ, ಪಟ್ಟದ ಮೇಲೆ ಕುಳಿತಾಗ, ಹಿಂದೂ ರಾಜ್ಯವನ್ನು ಸ್ಥಾಪಿಸಬೇಕು ಎಂಬ ಮಹಾ ಆಸೆ ಹೊಂದಿದ ಶಿವಾಜಿಯು ಆದಿಲ್ ಶಹನ ವಿರುದ್ಧ ತಲೆಯೆತ್ತಿ ನಿಂತನು. ರಾಜಕೀಯ ಒಪ್ಪಂದದ ನೆಪಮಾಡಿ ಶಿವಾಜಿಯನ್ನು ಮುಗಿಸಿಬಿಡಬೇಕೆಂದು ಆದಿಲ್‌ಶಹನು ಹವಣಿಸಿದನು. ಅದಕ್ಕಾಗಿ ಅಫಝುಲ್ ಖಾನ ಎಂಬುವವನ್ನು ಪ್ರತಾಪಗಡಕ್ಕೆ ಕಳಿಸಿಕೊಟ್ಟನು. ಶಾಂತಿ -ಸಂಧಾನಕ್ಕಾಗಿ ಯಾಕೆಂದರೆ ಶಿವಾಜಿಯನ್ನು ನೇರವಾಗಿ ಎದುರಿಸಿ ಸೋಲಿಸುವದು ಆಗದ ಮಾತಾಗಿತ್ತು. ಪ್ರತಾಪಗಡಕ್ಕೆ ಹೊರಟಾಗ ಅಪಝುಲ ಖಾನನ ಸೈನಿಕರು ತುಳಜಾಪುರದ ತುಳಜಾಭವಾನಿಯ ಗುಡಿಯನ್ನು ನಾಶಪಡಿಸಿದರು. ಅದಕ್ಕಾಗಿ ಅಫಝುಲಖಾನನ ಮೇಲೆ ಅವನ ಸೈನಿಕರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಶಿವಾಜಿಯು ಪಣತೊಟ್ಟು ಸನ್ನದ್ಧನಾದನು. ಅದರ ಪರಿಣಾಮವಾಗಿ ಅಫಝುಲ ಖಾನ ಸಾಯಬೇಕಾಯಿತು. ಮತ್ತು ಅವನ ಸೈನ್ಯವೆಲ್ಲ ಚಲ್ಲಾಪಿಲ್ಲಿಯಾಗಿ ಬಿಟ್ಟು ಪಲಾಯನ ಮಾಡಿತು.

ಈ ಐತಿಹಾಸಿಕ ಚೌಕಟ್ಟಿನಲ್ಲಿ ಅಫಝುಲ್ ಖಾನನ ಮಗನಾದ ಫಝುಲ್ ಖಾನ ಎಂಬುವವನು, ತುಳಜಾಪುರದ ಸನಾತನ ಬ್ರಾಹ್ಮಣ ಅರ್ಚಕನಾಗಿ ವ್ಯಾಸಶಾಸ್ತ್ರೀ ಎಂಬುವವನ ಮಗಳು, ಬಾಲವಿಧವೆಯಾದ ತಾರಾ ಎಂಬುವವಳನ್ನು ಪ್ರೇಮಿಸಿ ಮದುವೆಯಾದ ಕಾಲ್ಪನಿಕ ಕಥೆಯು ಸೇರಿ ಕೊಂಡಿದೆ.

ದಕ್ಷಿಣ ಹಿಂದುಸ್ತಾನದ ಸುಸಂಸ್ಕೃತ ನಾಗರಿಕರಾದ ಹಿಂದು ಹಾಗೂ ಮುಸ್ಲಿಮರ ಜೀವನವನ್ನು ಚಿತ್ರಿಸುವದೇ ಕಾದಂಬರಿಕಾರನ ಮುಖ್ಯ ಉದ್ದೇಶವಾಗಿದೆ. ಈ ಕಾದಂಬರಿಯಲ್ಲಿ ರಾಜಕೀಯ ಹಾಗೂ ಸಾಮಾಜಿಕ ಎಂಬ ಎರಡು ಭಾಗಗಳನ್ನು ಮಾಡಬಹುದಾಗಿದೆ. ಸಾಮಾಜಿಕ ಭಾಗದಲ್ಲಿ ಕೌಟುಂಬಿಕ, ಧಾರ್ಮಿಕ ಜೀವನವು, ವಿಶೇಷವಾಗಿ ಶಿವಾಜಿ ಹಾಗೂ ವ್ಯಾಸ ಶಾಸ್ತ್ರಿಗಳದು, ಒಂದೆಡೆ ಇದ್ದರೆ ಮತ್ತೊಂದೆಡೆ ಆದಿಲ್ ಶಹ ಹಾಗೂ ಅಫಝುಲಖಾನರದು ಬರುತ್ತದೆ. ಫಝಿಲ್ ಖಾನ ಹಾಗೂ ತಾರಾ ಇವರ ಪ್ರಣಯ - ವಿವಾಹದಲ್ಲಿ ಕೌಟುಂಬಿಕ ಜೀವನದ ಅತ್ಯಾಕರ್ಷಕ ಚಿತ್ರವನ್ನು ಟೇಲರನು ಕೊಡುತ್ತಾನೆ. ರಾಜಕೀಯ ಜೀವನದಲ್ಲಿ ಮುಸ್ಲಿಂ ದೊರೆಯಾದ ಆದಿಲ್ ಶಹ ಹಾಗೂ ಮರಾಠರ ರಾಜ, ಶಿವಾಜಿಯರ ಜೀವನ ಚಿತ್ರಿತವಾಗಿದೆ.

ಶಿವಾಜಿ ಭೋಸಲೆಯ ಕುಟುಂಬವು ಆದರ್ಶ ಹಿಂದು ಕುಟುಂಬವಾಗಿದ್ದು ಶಿವಾಜಿಯ ತಾಯಿಯು ತುಳಜಾ ಭವಾನಿಯ ಭಕ್ತಳಾಗಿದ್ದಳು. ಶಿವಾಜಿಯನ್ನು ಒಬ್ಬ ಆದರ್ಶ ಮಗನನ್ನಾಗಿ ಚಿತ್ರಿಸಲಾಗಿದ್ದು ಆತ ತನ್ನ ತಾಯಿಯಿಂದಲೇ ಶಿಕ್ಷಣ, ಮಾರ್ಗದರ್ಶನ ಪಡೆಯುತ್ತಿದ್ದ. ಶಿವಾಜಿಯೂ ತನ್ನ ಕುಲದೇವತೆಯಾದ್ದ ತುಳಜಾಭವಾನಿಯನ್ನು ಪೂಜಿಸುತ್ತಿದ್ದ. ಅದರಂತೆ ವ್ಯಾಸ ಶಾಸ್ತ್ರಿಯ ಕುಟುಂಬವೂ ಹಿಂದೂ ಧರ್ಮ ಹಾಗೂ ಸಂಸ್ಕೃತಿಯನ್ನು ತೋರಿಸಿ ಕೊಡುತ್ತಿದ್ದವು. ಆತ, ಆತನ ಹೆಂಡತಿ ಹಾಗೂ ಆತನ ಮಗಳಾದ ಬಾಲವಿಧವೆ, ತಾರಾಳಲ್ಲಿ ಹೊಂದಾಣಿಕೆ ಇತ್ತು.

ಶಾಸ್ತ್ರಿಯ ಮನೆಯು ವಿದ್ಯೆಯ ಆಗರವಾಗಿತ್ತು. ಶಾಸ್ತ್ರಿಯು ವೇದಶಾಸ್ತ್ರ ಪಾರಂಗತನಾಗಿದ್ದು ಸಂಸ್ಕೃತ ಸಾಹಿತ್ಯದ ಅಧ್ಯಯನ ಮಾಡಿದ್ದ. ಅದಕ್ಕಾಗಿಯೇ ಭಾರತದ ನಾನಾ ಕಡೆಗಳಿಂದ ವಿದ್ಯಾರ್ಥಿಗಳು ಅವನ ಶಿಷ್ಯರಾಗಿ ಧರ್ಮಶಾಸ್ತ್ರ ತತ್ವಜ್ಞಾನಗಳ ಅಧ್ಯಯನ ಮಾಡಲು ಬರುತ್ತಿದ್ದರು. ಅವನ ಮನೆಯನ್ನು ವರ್ಣಿಸಲಾಗಿದೆ -

''ತಲೆಬಾಗಿಲಿನ ಮೇಲೆ ಶ್ರೀ ಮಾರ್ತಂಡ ಪ್ರಸನ್ನ'' ಎಂದು ಕೆಂಪು ಬಣ್ಣದಲ್ಲಿ ಸಂಸ್ಕೃತದಲ್ಲಿ ಬರೆದಿತ್ತು. ....ಒಣಗಿದ ಮಾವಿನ ತಳಿರಿನ ಸರ ಮಾಲೆ ಜೊತಾಡುತ್ತಿತ್ತು. ವ್ಹರಾಂಡದಲ್ಲಿ ತುಳಸಿಗಿಡವಿತ್ತು.... ಒಳಗಡೆ ಚಿಕ್ಕ ದೇವರ ಗುಡಿ ಇತ್ತು.... ಅಲ್ಲಲ್ಲಿ ತೆಗೆದ ಹೂವು ಹಕ್ಕಿಗಳ ಚಿತ್ರ ಬಿಟ್ಟರೆ ಬೇರೆ ಚಂದ ಕಾಣಿಸುವಂಥದ್ದೇನೂ ಇರಲಿಲ್ಲ... '' ಈ ವರ್ಣನೆಯು ಶಾಸ್ತ್ರಿಯ ಮನೆ ಧಾರ್ಮಿಕ, ಸಾಂಸ್ಕೃತಿಕ ವಾತಾವರಣವನ್ನು ಸ್ಪಷ್ಟಪಡಿಸುವದು . ಮನೆಯನ್ನು ಸಾರಿಸಿ , ರಂಗೋಲಿ ಹಾಕಿದ್ದು ಸಹ ವರ್ಣಿತವಾಗಿದೆ.

ಇಂಥ ಶಾಸ್ತ್ರಿಗೆ ಸಂಕಷ್ಟವಾಗಲಿ ಚಿಂತೆಯಗಾಲಿ ಇರಲಿಲ್ಲವೆಂದಲ್ಲ. ಮುಖ್ಯವಾಗಿ ಅವನಿಗೆ ಗಂಡು ಮಗ ಇರಲಿಲ್ಲ, ಗಂಡುಮಗ ಇರದಿದ್ದರೆ ಸದ್ಗತಿ ದೊರೆಯುವುದಿಲ್ಲೆಂಬ ಚಿಂತೆ ಕಾಡುತ್ತಿತ್ತು . ಅದಕ್ಕಾಗಿ ಅವನ ಹೆಂಡತಿಯಾದ

ಆನಂದಾ ಬಾಯಿಯು ಅವನಿಗೆ ಎರಡನೆ ಮದುವೆಯಾಗಲು ಸೂಚಿಸಿದ್ದಳು. ಅದರಂತೆಯೇ ಆದ ಎರಡನೆಯ ಮದುವೆಯನ್ನು ಸಮಾಜ ಶಾಸ್ತ್ರಜ್ಞನಾಗಿ ಟೇಲರನು ಬಣ್ಣಿಸಿದ್ದಾನೆ.

ಶಾಸ್ತ್ರಿಯ ಇನ್ನೊಂದು ದೊಡ್ಡ ಚಿಂತೆ ಎಂದರೆ ಅವನಿಗೆ ಮಗಳಾದ ತಾರಾ ಬಾಲ್ಯದಲ್ಲಿಯೇ ವಿಧವೆಯಾದದ್ದು. ಕೊನೆಗೆ ತಾರಾ ಅಫಝುಲ್ ಖಾನನ ಮಗನಾದ ಫಝಿಲ್ ಖಾನನನ್ನು ಮದುವೆಯಾದುದನ್ನು ಅಂಗೀಕರಿಸಿದನು.

ಈ ರೀತಿ ಹಿಂದು ಕುಟುಂಬದಲ್ಲಿ ಲೋಪ-ದೋಷಗಳನ್ನು ಸೌಹಾರ್ದಗಳನ್ನು ವರ್ಣಿಸಿದಂತೆಯೇ ಟೇಲರನು ಬಿಜಾಪುರದ ಅಫಝುಲ ಖಾನನ ಮುಸ್ಲಿಂ ಕುಟುಂಬದಲ್ಲಿಯ ಸುಖ, ಶಾಂತಿ ಪ್ರೀತಿಗಳ ವರ್ಣನೆಯನ್ನು ಮಾಡುತ್ತಾನೆ. ಉತ್ತಮ ತಂದೆಯಾದ ಅಫಝುಖಾನನಿಗೆ ಲರ್ಲಿಬೇಗಂ ಎಂಬ ಹೆಂಡತಿ, ಫಝಿಲ್ ಖಾನನೆಂಬ ತರುಣ ಮಗ ಝ್ಯುನಾ ಎಂಬ ತರುಣಿಯಾದ ಮಗಳು ಇದ್ದಾರೆ. ಎಲ್ಲರೂ ಸುಶಿಕ್ಷಿತರು, ಸುಸಂಸ್ಕೃತರು ಆಗಿದ್ದಾರೆ. ಝ್ಯುನಾ ಹದಿನಾಲ್ಕು ವರ್ಷದ ಹುಡುಗಿ. ತನ್ನ ಅಣ್ಣ ತಾರಾ ಎಂಬ ಹಿಂದು ಬಾಲವಿಧವೆಯನ್ನು ಮದುವೆ ಮಾಡಿಕೊಂಡಿದ್ದನ್ನು ಪ್ರೀತಿಯಿಂದ ಸಮ್ಮತಿಸುತ್ತಾಳೆ. ಅಫಝುಲ್ ಖಾನನ ಮೊದಲ ಹೆಂಡತಿ ಸತ್ತು ಹೋದುದರಿಂದ ಎರಡನೆಯವಳನ್ನಾಗಿ ಲರ್ಲಿಬೇಗಂಳನ್ನು ಮದುವೆ ಆಗಿದ್ದಾನೆ. ಈ ಕುಟುಂಬದ ಮುಖಾಂತರ ಭಾರತದಲ್ಲಿಯ ಮುಸ್ಲಿಮರು ಎಷ್ಟೊಂದು ಸೌಜನ್ಯತೆಯಿಂದ , ಗೌರವಾನ್ವಿತರಾಗಿ ಬಾಳುತ್ತಿದ್ದಾರೆಂಬುದನ್ನು ತೋರಿಸುತ್ತಾನೆ ಟೇಲರ.

ರಾಜಕೀಯ ಜೀವನದಲ್ಲೂ ಶಾಂತಿ ಹಾಗೂ ಹೊಂದಾಣಿಕೆಗಳಿದ್ದವು. ಆದಿಲ ಶಹನು ಹಿಂದುಗಳಿಗೆ ತನ್ನ ಆಸ್ಥಾನದಲ್ಲಿ ದರ್ಬಾರಿನಲ್ಲಿ ಯೋಗ್ಯ ಸ್ಥಾನ -ಮಾನಗಳನ್ನು ಕಲ್ಪಿಸಿಕೊಟ್ಟಿದ್ದನು. ನೀಲಕಂಠರಾಯನೆಂಬ ವಯಸ್ಕನಾದವನು ರಾಜ್ಯದ ಹಣಕಾಸಿನ ವ್ಯವಸ್ಥೆಯ ಮುಖ್ಯಸ್ಥನಾಗಿ, ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ಕಾರ್ಯ ಮಾಡುತ್ತಿದ್ದನು. ಆಗಾಗ ಯುವರಾಜನಿಗೆ ರಾಜ್ಯಭಾರದ ವಿಷಯಗಳನ್ನು ತಿಳಿಸಿಕೊಡುತ್ತಿದ್ದನು. ಶಿವಾಜಿ ಭೋಸಲೆ, ತಾನಾಜಿ ಮಾಳೂಸ್ರೆಯವರು ಬರೆದು ಕಳಿಸಿದ ಪತ್ರಗಳ ಒಳ ಅರ್ಥವೇನೆಂದು ಗ್ರಹಿಸಲು ಆದಿಲ್‌ಶಹಾನು ನೀಲಕಂಠರಾಯನಿಗೆ ಓದಲು ಹೇಳುತ್ತಿದ್ದನು. ಆಗಾಗ 'ನೀಲಕಂಠರಾಯರೆ, ಭಯಪಡಬೇಡಿ, ನಿಮಗೆ ಅನಿಸಿದ್ದನ್ನು ಸ್ಪಷ್ಟವಾಗಿ ಹೇಳಿರಿ' ಎಂದು ಸಮಾಧಾನ ಪಡಿಸುತ್ತಲಿದ್ದನು. ಆದಿಲ ಶಹನಿಗೆ ಯುದ್ಧಗಳು ಬೇಕಾಗಿರಲಿಲ್ಲ, ಶಾಂತಿ ಬೇಕಾಗುತ್ತಿತ್ತು. ಅದಕ್ಕಾಗಿಯೇ ಒಪ್ಪಂದಕ್ಕೆಂದು ಆತ ಅಫಝುಲ್ ಖಾನನನ್ನು ಶಿವಾಜಿಯೊಡನೆ ಸಂಧಾನಮಾಡಿಕೊಂಡು ಬರಲು ಕಳಿಸಿದ್ದನು. ಹಿಂದು ಮುಸ್ಲಿಂರ ಐಕ್ಯವೇ ಅವನ ಪರಮಗುರಿಯಾಗಿತ್ತು. ಅವನ

ಆಸ್ಥಾನದಲ್ಲಿಯ ಪೀರನೆಂಬುವವನು ಮಾತ್ರ ಧರ್ಮ ವಿರೋಧಿಯಾಗಿದ್ದನು. ಆತ 'ಒಂದು ಲಕ್ಷ ಹಿಂದೂಗಳ ತಲೆ ಕತ್ತರಿಸಿ ಅವರ ಪಿರಾಮಿಡ್ಡನ್ನು ಮಾಡಿ ಅರಮನೆಯ ಮುಂದೆ ಇಡುವೆ'ಎಂದು ತನ್ನ ಧರ್ಮಾಂಧತೆಯನ್ನು ತೋರುತ್ತಿದ್ದನು. ಆದರೆ ಅದು ರಾಜಧರ್ಮವಾಗಲಿ,ಆದಿಲ್‌ಶಾಹಿಗಳ ಇಚ್ಛೆಯಾಗಲಿ ಇರಲಿಲ್ಲ. ಮತ್ತು ಇಂಥ ಕೋಪಾವೇಶದ ಮಾತುಗಳನ್ನು ಅವನು ಸಹಿಸುತ್ತಿರಲಿಲ್ಲ. ಆದಿಲ್ ಶಹನಾಗಲಿ, ಶಿವಾಜಿಯಾಗಲಿ ಅತ್ಯಂತ ಸಂಸ್ಕೃತಿ, ನಾಗರಿಕತೆ ಉಳ್ಳವರಾಗಿದ್ದರಂತೆ. ಅವರ ಸೈನಿಕರೂ ,ಇತರರೂ ಒಳ್ಳೆಯವರಾಗಿ ಬಾಳುತ್ತಿದ್ದರು.

ಹಿಂದೂಗಳು, ಮುಸ್ಲಿಮರು ಕಲಾಪ್ರೇಮಿಗಳೂ, ರಸಿಕರೂ ಆಗಿದ್ದರು. ಶಿಲ್ಪಕಲೆಯಲ್ಲಂತೂ ಮುಸ್ಲಿಮರು ಅಗಾಧ ಸಾಧನೆಯನ್ನು ಮಾಡಿ ತೋರಿಸಿದ್ದರು. ಇದಕ್ಕೆ ವಿಜಾಪುರದಲ್ಲಿಯ ಐತಿಹಾಸಿಕ ಕಟ್ಟಡಗಳೇ ಸಾಕ್ಷಿಯಾಗಿವೆ.

ಯಾವದೇ ಸುಶಿಕ್ಷಿತ ನಾಗರಿಕ ಸಮಾಜವು 'ಬಾಳು ಇತರರಿಗೆ ಬಾಳಲು ಬಿಡು' ಎಂದು ಬೋಧಿಸುತ್ತದೆ. ಶಾಂತಿಯುತ ಸಹಬಾಳ್ವೆ, ಪರಧರ್ಮ ತಿಳುವಳಿಕೆ, ಸಹಿಷ್ಣುತೆಗಳು ಅದಕ್ಕೆ ಬೇಕು. ಈ ಕಾದಂಬರಿಯಲ್ಲಿಯ ಎಲ್ಲ ಪ್ರಮುಖ ಪಾತ್ರಗಳು ಆ ಸದ್ಗುಣಗಳನ್ನು ಹೊಂದಿವೆ. ವ್ಯಾಸಶಾಸ್ತ್ರಿ ಹಾಗೂ ಶಿವಾಜಿಯ ಕುಟುಂಬದ ಜನರು ಹಿಂದುತ್ವದ ಪ್ರತೀಕವಾಗಿದ್ದರೆ, ಅಫಝುಲ್ ಖಾನ ಹಾಗೂ ಆದಿಲಶಹರು ಇಸ್ಲಾಂದ ಪ್ರತೀಕವಾಗಿದ್ದಾರೆ.

ಅದರಂತೆಯೇ ಸಾಮರಸ್ಯವೆಂಬುದನ್ನು ಕೌಟುಂಬಿಕ, ಸಾಮಾಜಿಕ, ಹಾಗೂ ರಾಜಕೀಯ ಈ ಮೂರು ವಿಭಾಗಗಳಲ್ಲಿ ಕಾಣಬಹುದಾಗಿದೆ. ಕಲಾರಾಧನೆ, ಸದಭಿರುಚಿಗಳು ನಾಗರಿಕ ಜೀವನದ ಪ್ರಮುಖ ಅಂಶಗಳಾಗಿ ಇಲ್ಲಿ ಕಂಡು ಬರುತ್ತವೆ. ಸ್ತ್ರೀಯರ ವಿಷಯದಲ್ಲಿ ತೋರುವ ಗೌರವ, ಆದರದ ಬಗ್ಗೆ ಶಿವಾಜಿ ಹಾಗೂ ಅಫಝುಲ್ ಖಾನರನ್ನೇ ಉದಾಹರಣೆಯಾಗಿ ನೋಡಬಹುದು. ಮದುವೆ ಎಂಬುದು ನಾಗರಿಕ ಸಮಾಜದ ಲಕ್ಷಣವಾಗಿದೆ. ಅದರಲ್ಲಿ ಅಂತರ್ಧರ್ಮೀಯ ವಿವಾಹವು ಹೆಚ್ಚಿನ ಲಕ್ಷಣವಾಗಿದೆ. ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳು ಅತಿ ಹೆಚ್ಚಿನ ನಾಗರಿಕತೆ ಹೊಂದಿದ ಸಮಾಜದಲ್ಲಿ ಮಾತ್ರ ಸಾಧ್ಯವಾಗುವವು.

ಈ ಕಾದಂಬರಿಯ ಹಿನ್ನೆಲೆಯಾಗಿ ತುಳುಜಾಪುರ ಹಾಗೂ ವಿಜಾಪುರ ಇವೆ. ತುಳಾಜಪುರ ಹಿಂದೂ ಧರ್ಮದ ಪ್ರತೀಕವಾಗಿದ್ದರೆ ವಿಜಾಪುರವು ಇಸ್ಲಾಂದ ಪ್ರತೀಕವಾಗಿದೆ. ಒಂದೆಡೆ ತುಳುಜಾಪುರದ ದೇವಾಲಯದ ವರ್ಣನೆ ಬಂದರೆ ಮತ್ತೊಂದೆಡೆ ವಿಜಾಪುರದ ಮಸೀದಿಯ ವರ್ಣನೆ ಬರುತ್ತದೆ. ತುಳಜಾಪುರದಲ್ಲಿ ಸಂಸ್ಕೃತ ಮಂತ್ರ ಪಠಣ ನಡೆದಿದ್ದರೆ ವಿಜಾಪುರದಲ್ಲಿ ಕುರಾನ ಪಠಣ ನಡೆಯುತ್ತಿದೆ.

ಸುಂದರ ಶಿಲ್ಪಕಲಾಕೃತಿಯಾದ ಜುಮ್ಮಾ ಮಸೀದಿಯ ವರ್ಣನೆ ಹೀಗಿದೆ – ''ಮಸೀದಿಯ ಮುಖ್ಯ ಭಾಗದಲ್ಲಿ ಸುವರ್ಣಾಕ್ಷರಗಳಲ್ಲಿ 'ದೇವರು ಒಬ್ಬನೇ ಆಗಿದ್ದಾನೆ. ಮಹಮದ ಪೈಗಂಬರನು, ಪ್ರವಾದಿಯಾಗಿದ್ದಾನೆ' ಎಂದು ಕಲ್ಲಿನಲ್ಲಿ ಕೊರೆಯಲಾಗಿದೆ. ಪ್ರಾರ್ಥನಾ ಸ್ಥಳವು ಬಹು ವಿಶಾಲವಾಗಿದೆ.... '' ಅದರಂತೆ ತುಳಜಾ ಭವಾನಿಯ ಗುಡಿಯ ವರ್ಣನೆ ಹೀಗಿದೆ.... ''ಕಲ್ಲಿನಲ್ಲಿ ನಿರ್ಮಿಸಿದ ಆಕಳ ಬಾಯಿಯಿಂದ ನೀರು ಹರಿದು ಬರುತ್ತಿದ್ದು ಗಂಗಾ ನದಿಯಿಂದ ಬರುತ್ತದೆಂದು ಭಾವಿಸುತ್ತಾರೆ... ಗಂಡಸರು, ಹೆಂಗಸರು ದೇವಿಗೆ ಪೂಜೆ ಸಲ್ಲಿಸುವ ಮೊದಲು ಸ್ನಾನದ ಹೊಂಡದಲ್ಲಿ ಸ್ನಾನ ಮಾಡುತ್ತಾರೆ'' ಅದರಂತೆ ಪಶ್ಚಿಮ ಘಟ್ಟದ ವರ್ಣನೆ ಹೀಗಿದೆ.

''ಭಾರತದ ಪಶ್ಚಿಮ ಭಾಗದಲ್ಲಿರುವ ಪರ್ವತ ಶ್ರೇಣಿಯು ಅದ್ಭುತವಾಗಿದೆ...'' ಮಹಾಬಳೇಶ್ವರದಲ್ಲಿ ಕೃಷ್ಣಾನದಿಯ ಉಗಮವಾಗಿದೆ.....

'' ಈ ವರ್ಣನೆಗಳಲ್ಲಿ ಭಾರತದ ಭೌಗೋಳಿಕತೆ ತೋರುತ್ತವೆ.

ಇಡೀಕಾದಂಬರಿಯಲ್ಲಿ ಎರಡು ಘಟನೆಗಳು ಮಾತ್ರ ನಾಗರಿಕ ಎಂದೆನಿಸಿ ಕೊಳ್ಳುವದಿಲ್ಲ. ಮೊದಲನೆಯದು ತುಳುಜಾ ಭವಾನಿಯ ಗುಡಿಯನ್ನು ನಾಶ ಮಾಡಿಸಿದ್ದು, ಎರಡನೆಯದು ಸಹಗಮನಪದ್ಧತಿ, ಇವನ್ನು ಬಿಟ್ಟರೆ ಕಾದಂಬರಿಯಲ್ಲಿ ಎಲ್ಲವೂ ಸಂಸ್ಕೃತಿ – ನಾಗರಿಕತೆಗಳನ್ನು ಪ್ರತಿಬಿಂಬಿಸುತ್ತವೆ. ತುಳಜಾ ಭವಾನಿಯ ಗುಡಿಯ ನಾಶಕ್ಕೆ ಸೈನಿಕರು ಕಾರಣರಾಗಿದ್ದರೇ ಹೊರತು ಅದಕ್ಕೆ ರಾಜಾಜ್ಞೆ ಇರಲಿಲ್ಲ.

ಹಿಂದು ಧರ್ಮ ಸಂಸ್ಕೃತಿಕ ಪ್ರತಿನಿಧಿಸುವಲ್ಲಿ ವ್ಯಾಸ ಶಾಸ್ತ್ರಿಯ ಪಾತ್ರವೇ ಮುಖ್ಯವಾಗಿದೆ. ಆತನ ಜೀವನದಲ್ಲಿ ಹಿಂದೂ ಧರ್ಮದ ಎಲ್ಲಾ ಆದರ್ಶಗಳು ಸೇರಿ ಕೊಂಡಿವೆ. ಆತ ವೇದಶಾಸ್ತ್ರ ಸಂಪನ್ನನಾದ್ದರಿಂದ , ಪ್ರಕಾಂಡ ಪಂಡಿತನಾಗಿದ್ದರಿಂದ ಅವನ ಮನೆ ಅಧ್ಯಯನದ ಪೀಠವಾಗಿತ್ತು. ದೇಶದ ನಾನಾ ಕಡೆಗಳಿಂದ ಅವನ ಹತ್ತಿರ ಅಧ್ಯಯನ ಮಾಡಲು ಬರುತ್ತಿದ್ದರು.

ಮಧ್ಯವಯಸ್ಸಿನವನಾದ ಆತ ಗಟ್ಟಿಗನೂ, ಬಲಶಾಲಿಯೂ ಆಗಿದ್ದ. ಏಕೆಂದರೆ ಎಲ್ಲ ಬಗೆಯ ಶಾರೀರಿಕ ವ್ಯಾಯಾಮಗಳನ್ನು ನಿತ್ಯವೂ ಮಾಡುತ್ತಲಿದ್ದ. ಆದರ್ಶ ತಂದೆಯಾಗಿ, ಆದರ್ಶಗಂಡನಾಗಿ ಆನಂದ ಬಾಯಿಯ ಜೊತೆಗೆ ಬಾಳುತ್ತಲಿದ್ದ. ಅವನಲ್ಲಿ ಸಂಪತ್ತು, ಜ್ಞಾನ, ವೈಭವ, ಗೌರವ – ಎಲ್ಲವೂ ಇದ್ದರೂ ಗಂಡುಮಗು ಇಲ್ಲ ಎಂಬ ಖೇದ ಅವನಲ್ಲಿತ್ತು. ಅಲ್ಲದೆ ಮಗಳಾದ ತಾರಾ ಬಾಲವಿಧವೆಯಾಗಿದ್ದಳು. ವಂಶ ಮುಂದವರಿಯಬೇಕೆಂಬ ಇಚ್ಛೆಯಿಂದ ಅವನ ಹೆಂಡಿತಿಯಾದ ಆನಂದಬಾಯಿಯೇ ರಾಧಾ ಎಂಬ ಯುವತಿಯನ್ನು ಹುಡುಕಿ ಗಂಡನಿಗೆ ಎರಡನೇ ಮದುವೆ ಮಾಡಿಕೊಳ್ಳಲು ಹಚ್ಚಿದಳು. ಮದುವೆ ಎಂದ ಮೇಲೆ ಕೇಳುವುದೇನು, ವಿಧಿ –ವಿಧಾನ ಪ್ರಕಾರ , ಸ್ನಾನ , ಪೂಜೆ ಮೃಷ್ಟಾನ್ನ ಭೋಜನ ಎಲ್ಲವೂ ನೆರವೇರಿತು. ಅಂಥ

ಸಂತಸದ, ಸಂಭ್ರಮದ ಮದುವೆಯನ್ನು ಬಹಳಷ್ಟು ಜನರು ಕಂಡಿರಲಿಲ್ಲ. ಆದರೆ ಶಾಸ್ತ್ರಿಯ ಎರಡನೆಯ ಚಿಂತೆಗೆ ಮಗಳು ಬಾಲವಿಧವೆಯಾದುದಕ್ಕೆ ಯಾವ ಪರಿಹಾರವೂ ಇರಲಿಲ್ಲ. ಒಮ್ಮೆ ದೇವಿಗೆ ಪೂಜೆ ನೆರವೇರಿಸಿ ಮುಂದೇನು ಮಾಡಬೇಕೆಂದು ಕೇಳಿದಾಗ ಅವಳು 'ಮುರ್ಲಿ' ಮಾಗಿ ದೇವಿಯ ಸೇವೆ ಮಾಡುತ್ತಲಿರಲಿ ಎಂಬ ವಾಣಿ ಕೇಳಿಸಿತು. ಅನಿವಾರ್ಯವಾಗಿ ಅವಳು ಹಾಗೆಯೇ ಬಾಳಬೇಕಾಯಿತು. ಕಾಲಕ್ರಮದಲ್ಲಿ ಅಫಝುಲಖಾನನ ಸೈನಿಕರು ದೇವಿಯ ಗುಡಿಯನ್ನು ಹಾಳುಗೆಡಹುವಾಗ ಮಗಳು ಎಲ್ಲಿಯೂ ಕಾಣದಂತಾದಳು. ಬಹುಶಃ ಅವಳು ಮಡಿದು ಹೋಗಿರಬಹುದೆಂದು ಬಗೆದು ಸತ್ತ ಮೇಲೆ ಮಾಡುವ ಧಾರ್ಮಿಕ ಕರ್ಮಗಳನ್ನು ಮಾಡಿದ.

ತನ್ನ ಮಗಳಾದ ತಾರಾ ಮುಸಲ್ಮಾನೊಬ್ಬನನ್ನು ಮದುವೆ ಆದಾಳು ಎಂದು ಆತ ಕನಸು ಮನಸ್ಸಿನಲ್ಲೂ ವಿಚಾರಿಸಿರಲಿಲ್ಲ. ಸ್ವತಃ ಜ್ಯೋತಿಷ್ಯಶಾಸ್ತ್ರ ಬಲ್ಲವನಾದ್ದರಿಂದ ಅವಳ ಕುಂಡಲಿಯನ್ನು ಅನೇಕ ಬಾರಿ ನೋಡಿದ್ದ. ಯಾವುದೂ ಹೊಳೆದಿರಲಿಲ್ಲ. ಕೊನೆಗೆ ಅವಳು ಅಂತರ್ಜಾತಿಯ ವಿವಾಹ ಮಾಡಿಕೊಂಡಾಗ – ''ಅವಳ ಕರ್ಮ, ಅವಳು ಹಿಂದಿನ ಜನ್ಮದಲ್ಲಿ ಮಾಡಿದ ಯಾವುದೋ ಪಾಪದ ಫಲ'' ಎಂದು ಬಗೆದ.

ವ್ಯಾಸಶಾಸ್ತ್ರಿ ವಿಶಿಷ್ಟ ಬ್ರಾಹ್ಮಣ ಪೂಜಾರಿಯಾಗಿ ಚಿತ್ರಿತನಾಗಿದ್ದಾನೆ. ಬೋಳಿಸಿದ ತಲೆ, ಹಣೆಯ ಮೇಲೆ ಭಸ್ಮ, ಕೊರಳಲ್ಲಿ ಜನಿವಾರ, ಬಾಯಲ್ಲಿ ಮಂತ್ರ, ಕೈಯಲ್ಲಿ ಧರ್ಮಗ್ರಂಥ, ಧಾರ್ಮಿಕ ಆಚಾರ ವಿಚಾರಗಳೆಲ್ಲವೂ ಅವನ ವ್ಯಕ್ತಿತ್ವವನ್ನು ತೋರಿಸುತ್ತವೆ.

ಅವನ ಮಗಳಾದ ತಾರಾ ಬಾಲಿಕೆಯಾಗಿದ್ದಾಳೆ. ಬಾಲ ವಿಧವೆಯಾಗಿ, ದೇವರ ದಾಸಿಯಾಗಿ ಬಾಳುವದು ಅವಳ ವಿಧಿಯಲ್ಲಿತ್ತು. ಅವಳ ತಾರುಣ್ಯದ ಸೊಬಗನ್ನು ನೋಡಿ ಅವಳ ಸಂಬಂಧಿಕನಾದ ಮೋರೊ ತ್ರಿಮಲ್ ಎಂಬುವವನು ಅವಳ ಮೇಲೆ ಕಾಮುಕ ದೃಷ್ಟಿ ಬೀರಿದ್ದ. ಅವಳ ಬಗ್ಗೆ ದಯೆ – ಅನುಕಂಪವಿರದ ಆತ ಅವಳನ್ನು ಅಪಹರಿಸುವ ಹೊಂಚು ಹಾಕಿದ್ದ. ದುರ್ದೈವಿಯಾದ ಆಕೆ ಅತಿ ದುಃಖದಲ್ಲಿ ಬಾಳುವ ಕಾಲ ಬಂದಿತ್ತು. ಸಂಪ್ರದಾಯದಂತೆ ಅವಳು ತಲೆಯ ಮೇಲಿನ ಕೂದಲನ್ನು ತೆಗೆಯಿಸಿಕೊಂಡು ಬಿಡಲು ಸಿದ್ಧಳಿರಲಿಲ್ಲ. ಎಲ್ಲರೆಡೆಗೆ ಸೆರಗಿನಿಂದ ಮುಖ ಮುಚ್ಚಿಕೊಂಡು ಅಡ್ಡಾಡು ಎಂದು ತಾಯಿ ಹೇಳಿದಾಗ ಅದೇಕೆ ಎಂದು ವಾದಿಸುತ್ತಿದ್ದಳು. ತಾರಾಳಿಗೆ ರಾಧಾ ಎಂಬುವವಳು ಮಲತಾಯಿಯಾದಳು. ಅವಳ ಅಣ್ಣನೇ ಕಾಮುಕನಾದ ಮೋರೋ ತ್ರಿಮಲ್ ಆಗಿದ್ದ. ಅವಳ ತಾರುಣ್ಯ, ಸೌಂದರ್ಯಕ್ಕೆ ಮಾರುಹೋಗಿ ಅವಳನ್ನು ಪಡೆಯಲು ಯತ್ನಿಸುತ್ತಿದ್ದ. ಒಮ್ಮೆ ಸಮಯ ಸಾಧಿಸಿದಾಗ ಗುಡಿಯನ್ನು ಧ್ವಂಸ ಮಾಡಿದಾಗ ಅವಳು ಓಡಿ ಹೋಗುತ್ತಲಿದ್ದಾಗ ಮೋರೋ ತ್ರಿಮಲ್ ಅವಳನ್ನು

ಹಿಡಿದುಕೊಂಡು ಬಿಟ್ಟ, ಅವಳ ಮಾನಭಂಗವಾಗುವ ಸಮಯದಲ್ಲಿ ಅಕಸ್ಮಾತ್ತಾಗಿ ಅಲ್ಲಿಗೆ ಬಂದ ಫರ್ಝುಲ್ ಖಾನ ಅವಳ ರಕ್ಷಣೆ ಮಾಡಿದ. ಅವಳು ಅವನಿಗೆ ಉಪಕೃತಳಾಗಿ ಬಿಟ್ಟಳು. ಮತ್ತು ಅವನ ಸೆರೆಯಾಳಾದಳು. ಮತ್ತೊಮ್ಮೆ ಮೋರೋ ತ್ರಿಮಲನು ಅವಳನ್ನು ಓಡಿಸಿಕೊಂಡು ಹೊರಟಾಗ ಬಾಬಾಸಾಹೇಬ (ಗೋವಿಂದ ರಾವ) ಎಂಬುವವನು ಅವಳನ್ನು ರಕ್ಷಿಸಿ ತನ್ನ ಮನೆಗೆ ಕರೆದೊಯ್ದು ಆಶ್ರಯವನ್ನಿತ್ತ. ಆದರೆ ಈ ಒಳಗಾಗಿ ಅವಳು ಫರ್ಝಿಲ್ ಖಾನನಲ್ಲಿ ಅನುರುಕ್ತಳಾಗಿದ್ದಳು. ಆತ ಪರ ಧರ್ಮೀಯನಾಗಿದ್ದರೂ ಅವನಲ್ಲಿಯ ಶ್ರೇಷ್ಠ ಮಾನವೀಯ ಗುಣಗಳಿಗೆ ಮಾರು ಹೋಗಿದ್ದಳು. ''ಶಸ್ತ್ರಾಸ್ತ್ರಗಳನ್ನು ಧರಿಸಿದ ಯೋಧನ ಮೋಹಕ ರೂಪ ಅವಳ ಮನಸ್ಸನ್ನು ಗೆದ್ದು ಬಿಟ್ಟಿದ್ದವು. ಅಂಥ ಯುವಕನನ್ನು ಅವಳು ಈ ಮೊದಲು ನೋಡಿರಲೇ ಇಲ್ಲ.

ಬಾಬಾ ಸಾಹೇಬನ ಮನೆಯಲ್ಲಿಅವಳಿಗೆ ಆಶ್ರಯ ಸಿಕ್ಕಿತೇನೋ ನಿಜ.ಆದರೆ ಮನೆಯವಲ್ಲಿಯ ಜನರು ಕಿರಿಕಿರಿ ಕೊಟ್ಟು ಅವಳನ್ನು ತುಚ್ಛವಾಗಿ ಕಾಣತೊಡಗಿದರು. ಏಕೆಂದರೆ ಅವಳು ಸಕೇಶಿಯಾಗಿದ್ದಳು. ಅವಳ ಮನದಲ್ಲಿ ವಿಧವೆಯಾಗಿ ದುಃಖದಲ್ಲಿ ಬಾಳಬೇಕೋ ಅಥವಾ ಫರ್ಝುಲ್ ಖಾನನನ್ನು ವರಿಸಿ ಲಗ್ನವಾಗಬೇಕೋ ಎಂಬ ಭಾವನೆಗಳ ತಾಕಲಾಟ ನಡೆದಿತ್ತು. ಸನಾತನ,ಶ್ರೇಷ್ಠ ಬ್ರಾಹ್ಮಣರ, ಪೂಜಾರಿಗಳ ಮನೆತನದಲ್ಲಿ ಹುಟ್ಟಿ ಮುಸಲ್ಮಾನನೊಬ್ಬನನ್ನು ಲಗ್ನವಾಗುವದು ಸರಿಯೋ , ತಪ್ಪೋ ಎಂಬ ಚಿಂತೆ ಅವಳನ್ನು ಕಾಡುತ್ತಿತ್ತು. ತಾನು ತುಳಜಾ ಮಾತೆಯ ಪರಿಶುದ್ಧ ದಾಸಿ, ಅವಳನ್ನು ಎಷ್ಟೇ ಅಂಗಲಾಚಿ ಕೇಳಿಕೊಂಡರೂ ಅವಳಿಗೆ ದಯೆ, ಕರುಣೆ ತೋರುವವರು ಬದುಕಿದ್ದಾರೋ ಇಲ್ಲವೋ ಎಂಬುದೂ ಅವಳಿಗೆ ಗೊತ್ತಾಗಲಿಲ್ಲ. ತಾನು ಅಸಹಾಯಕ ಬಾಲ ವಿಧವೆ ಎಂದು ಹೇಳಿದಾಗಲೂ, ದೇವತೆಯ ಸೇವಕಿ ಎಂದು ತಿಳಿಸಿದಾಗಲೂ ರಮಾಬಾಯಿ ಎನ್ನುವವಳು– ''ಏನೇ ತಲೆ ಮೇಲೆ ಕೂದಲು ಇಟ್ಟುಕೊಂಡ ನೀನೆಂಥ ವಿಧವೆ ?'' ಎಂದು ಬೈದಳು. ''ಮೊದಲು ತಲೆ ಬೋಳಿಸಿಕೋ'' ಎಂದಳು. ಇಂಥ ಘೋರ ದುಃಖಮಯ ಜೀವನ ಸಾಗಿಸುವ ಬದಲು ಹೊಸ ಜೀವನ ವನ್ನು ಹೊಸ ಬಾಳನ್ನು ಅವನನ್ನು ಮದುವೆ ಮಾಡಿಕೊಂಡು ಬಾಳಬಾರದೇಕೆ?' ಎಂದು ಮನದಲ್ಲಿ ಆಲೋಚಿಸಿದಳು. ಎರಡು ಸಲ ತನ್ನನ್ನು ರಕ್ಷಿಸಿ ಮಾನಭಂಗದ ಅಪಮಾನದಿಂದ ಪಾರು ಮಾಡಿದ ಫರ್ಝುಲ್ ಖಾನನನ್ನು ಲಗ್ನವಾಗಬೇಕೋ ಇಲ್ಲವೇ ಸತಿ ಹೋಗಬೇಕೋ ಎಂಬುದನ್ನು ವಿಚಾರಿಸಿದಳು. ತನ್ನ ದುಃಖಮಯ ಜೀವನದಲ್ಲಿ ಅವಳು ತಾಳ್ಮೆಗೆಡಲಿಲ್ಲ.. ಧೈರ್ಯಗುಂದಲಿಲ್ಲ. 'ಅಯ್ಯೋ ದೇವರೆ, ನೀನೇ ನನಗೆ ದಾರಿ ತೋರು. ನನ್ನನ್ನು ರಕ್ಷಿಸುವವರು ಯಾರೂ ಇಲ್ಲ' ಎಂದು ನೊಂದು ನುಡಿಯುತ್ತಿದ್ದಳು. ಕೊನೆಗೆ ಅವಳುಇರಬೇಕೋ ಇರಬಾರದೋ ಎಂಬ ನಿರ್ಣಯಕ್ಕೆ ಬರಬೇಕಾಯಿತು. ಕೊನೆಗೆ ಸತಿ ಹೋದರಾಯಿತು ಎಂಬ ನಿರ್ಧಾರಕ್ಕೆ ಬಂದಳು. ಸತಿ ಹೋಗುವದೆಂದರೆ

ಧಾರ್ಮಿಕತೆಯ ಘನತೆ - ಗೌರವಗಳಲ್ಲಿ ಮಾಡಿಕೊಳ್ಳುವ ಆತ್ಮಹತ್ಯೆಯೇ ಸರಿ. ಅದರಲ್ಲೂ ಅವಳು ದಿಟ್ಟತನ, ತಾಳ್ಮೆ ತೋರಿದಳು. ಭವ್ಯ ಮೆರವಣಿಗೆಯಲ್ಲಿ ಬಂದು ಚಿತೆ ಏರಬೇಕೆನ್ನುವಾಗ ಅವಳನ್ನು ನೋಡಿದ ಫಝುಲ್‌ಖಾನನು ಅವಳನ್ನು ಮತ್ತೆ ರಕ್ಷಿಸಿಕೊಂಡು ತನ್ನ ಊರಿಗೆ ಕರೆದುಕೊಂಡು ಬಂದು ಅಲ್ಲಿ ಲಗ್ನವಾದನು. ಧರ್ಮದ ಘೋರ ಸಂಕೋಲೆಗಳಿಂದ ಅವಳನ್ನು ಪಾರು ಮಾಡಿದನು. ಯಾವ ಫಝುಲ್ ಖಾನನು ಅವಳನ್ನು ಸಾವಿನಿಂದ , ಘೋರ ಅಪಮಾನಗಳಿಂದ ಪಾರು ಮಾಡಿದ್ದನೋ ಅವನೇ ಅವಳಿಗೆ ಹೊಸ ಜೀವನವನ್ನು ಒದಗಿಸಿಕೊಟ್ಟನು. ಈ ರೀತಿ ತಾರಾ ಸುಸಂಸ್ಕೃತ ಸಮಾಜದ, ಧಾರ್ಮಿಕ ಜೀವಿಯಾಗಿ ದುಃಖದಲ್ಲಿ ತೊಳಲಾಡಿ. ಕೊನೆಗೆ ಲಗ್ನವಾಗಿ ಬಾಳಹತ್ತಿದಳು. ಒಟ್ಟಾರೆ ಅವಳು 'ಸುಂದರ ಯುವತಿಯಾಗಿ, ಕಷ್ಟ ಕಾರ್ಪಣ್ಯ ಎದುರಿಸಿ, ಧರ್ಮ ಧಿಕ್ಕರಿಸಿ' ಬಾಳಿದ ನಾಯಕಿಯಾಗಿ ಚಿತ್ರಿತಳಾಗಿದ್ದಾಳೆ.

ವ್ಯಾಸ ಶಾಸ್ತ್ರಿಯ ಕುಟುಂಬದ ಇನ್ನಿಬ್ಬರು ಮಹಿಳೆಯರೆಂದರೆ ಅವನ ಹೆಂಡತಿಯರಾದ ಆನಂದಾಬಾಯಿ ಹಾಗೂ ರಾಧಾ. ತನಗೆ ಗಂಡು ಮಕ್ಕಳಾಗದ್ದಕ್ಕೆ ಆನಂದಾಬಾಯಿ ತನ್ನ ಗಂಡನಿಗೆ ಎರಡನೆ ಮದುವೆ ಮಾಡಿಕೊಳ್ಳಲು ಒತ್ತಾಯಿಸಿದಳು. ವಿಜೃಂಭಣೆಯಿಂದ ಮದುವೆಯೂ ಆಯಿತು. ಎರಡನೆಯ ಹೆಂಡತಿಯಾಗಿ ಬಂದ ರಾಧಾಳನ್ನು ತನ್ನ ತಂಗಿಯಂತೆ ನೋಡಿಕೊಂಡಳು. ಅವರಿಬ್ಬರಲ್ಲಿ ವೈಮನಸ್ಸೆಂಬುದು ಇರಲ್ಲಿಲ. ಹೀಗಾಗಿ ಕುಟುಂಬ ಜೀವನ ಚೆನ್ನಾಗಿ ಸಾಗಿತು.

ತುಳಜಾಪುರವನ್ನು ಸೈನಿಕರು ನಾಶಮಾಡಿದಾಗ ಶಾಸ್ತ್ರಿ ಪರಿವಾರವು ಚಲ್ಲಾಪಿಲ್ಲಿಯಾಯಿತು. ಆದರೆ ನಾಶವಾಗಿರಲಿಲ್ಲಿ. ಅವರು ಸಿಂದಫುಲ ಎಂಬ ಊರಲ್ಲಿ ಆಶ್ರಯವನ್ನು ಪಡೆದರು. ದೇವಾಲಯವನ್ನು ರಕ್ಷಿಸಲು ಯತ್ನಿಸಿದಾಗ ವ್ಯಾಸ ಶಾಸ್ತ್ರಿಗೆ ಹೊಡೆತಗಳು ಬಿದ್ದಿದ್ದವು. ಅದಕ್ಕಾಗಿ ಅವನಿಗೆ ಆರೈಕೆ ಅವಶ್ಯವಾಗಿತ್ತು. ಆಗ ಅವನ ಇಬ್ಬರೂ ಹೆಂಡತಿಯರು ಸೇವೆ, ಉಪಚಾರ ಮಾಡಿದರು. ಆರೋಗ್ಯ ಸುಧಾರಿಸಿತು.

ತನ್ನ ಮಗಳು ತಾರಾ ಬದುಕಿದ್ದಾಳೆಂದೂ, ಫಝುಲ್‌ಖಾನನನ್ನು ಮದುವೆ ಆಗಿದ್ದಾಳೆದೂ ತಿಳಿದು ಬರಲು ಆನಂದಬಾಯಿಗೆ ಆನಂದವೇ ಆಯಿತು ಅನ್ಯ ಧರ್ಮದವರನ್ನು ಮುದವೆಯಾದರೂ ಸುಮ್ಮನಿರಲೇಬೇಕಾಯಿತು. ಅವಳು ವಿಶಾಲ ಮನೋಭಾವದವಳಾಗಿದ್ದರಿಂದ, ಸುಸಂಸ್ಕೃತಳಾಗಿದ್ದರಿಂದ ಆ ವಿವಾಹವನ್ನು ಅಂಗೀಕರಿಸಿದಳು. ಈ ರೀತಿಯಾಗಿ ಅವಳ ಪಾತ್ರ ಚಿತ್ರಿತವಾಗಿದೆ.

ಮುಸಲ್ಮಾನ ಕುಟುಂಬದಲ್ಲಿ ರಾಜ ಮನೆತನವಾದ ಆದಿಲಶಾಹಿಗಳು ಪ್ರಮುಖರಾಗಿದ್ದಾರೆ. ಆದರೆ ಆದಿಲ್ ಶಾಹಿಗಳ ಆಂತರಿಕ ಜೀವನದ ಬಗ್ಗೆ ಬಹಳಷ್ಟು ಗೊತ್ತಾಗುವುದಿಲ್ಲ. ಆದರೆ ರಾಜಕೀಯ ಜೀವನ ಚೆನ್ನಾಗಿ ವಿವರಿಸಲ್ಪಟ್ಟಿದೆ.

ಆದಿಲ ಶಹನ ಪಾತ್ರವು ಪ್ರಮುಖವಾಗಿರದಿದ್ದರೂ ಆತ ನಮ್ಮ ಮುಂದೆ ಯುವಕನಾಗಿ , ಜಾಣ್ಮೆಯುಳ್ಳವನಾಗಿ , ಹಿಂದೂ - ಮುಸ್ಲಿಂ ಐಕ್ಯತೆಯ ಪ್ರತಿಪಾದಕನಾಗಿ ಎದ್ದು ಕಾಣುತ್ತಾನೆ. ವಯಸ್ಸಿನಿಂದ ಚಿಕ್ಕವನಾದುದರಿಂದ ರಾಜಕೀಯ ನೈಪುಣ್ಯವನ್ನಾಗಲಿ, ಚಾಣಾಕ್ಷತನವನ್ನಾಗಲಿ, ಆತ ತೋರುವದಿಲ್ಲ. ದೇವರಿಗೆ ಆತ ಧೈರ್ಯ ಸಾಹಸ, ಜಾಣ್ಮೆ ಕೊಡು ಎಂದು ಬೇಡಿಕೊಳ್ಳುತ್ತಾನೆ.

ಆದಿಲ ಶಾಹಿಯು ಹಿಂದೂಗಳೊಡನೆ ಚೆನ್ನಾಗಿ, ಕ್ರೂರತನವಿಲ್ಲದೆ ಬಾಳಿದ್ದಾನೆ. ಹಿರಿಯ ಹಿಂದುವಿನ ಮಾರ್ಗದರ್ಶನ ಪಡೆಯುತ್ತಾನೆ. ಕಂದಾಯ ಇಲಾಖೆಯ ಮಂತ್ರಿಯಾದ ನೀಲಕಂಠ ರಾಯನಿಗೆ ಆದರ, ಗೌರವ ಸಲ್ಲಿಸುತ್ತಿದ್ದ.

ಪಹಾರ ಸಿಂಗನೆಂಬ ರಹಸ್ಯ ವಿಷಯ ಸಂಗ್ರಹಕನು ಸಹಾಯ ಮಾಡಿರದಿದ್ದರೆ ಆತ ದ್ರೋಹಿಗಳ ವಂಚನೆಗೆ ಬಲಿಯಾಗುತ್ತಿದ್ದ. ತರುಣ ರಾಜಕುಮಾರನಾಗಿ ಧಾರ್ಮಿಕ ವಿಷಯದಲ್ಲೂ, ರಾಜಕೀಯ ವಿಷಯದಲ್ಲೂ ಸಹಿಷ್ಣುವಾಗಿದ್ದನು. ಇದು ಅವನ ಶ್ರೇಷ್ಠ ನಾಗರಿಕ ಗುಣವಾಗಿತ್ತು. ಅದಕ್ಕೆಂದೇ ಪ್ರಜೆಗಳು ಅವನಿಗೆ ಮಾನ ಮನ್ನಣೆ ಕೊಡುತ್ತಿದ್ದರು. ರಾಜಕೀಯದಲ್ಲಿ ಒಕ್ಕಟ್ಟು ಅವನಿಗೆ ಬೇಕಾಗಿರುತ್ತಿತ್ತು. ಅಲ್ಲದೆ ರಾಜ್ಯದಲ್ಲಿ ಶಾಂತಿಯನ್ನು ಬಯಸಿದ್ದ. ಹೀಗಾಗಿ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಬಯಸುತ್ತಿದ್ದ. ಸತ್ಯಪ್ರಿಯನಾದ,ದೇವಭೀರುವಾದ ಆತ ವಿಜಾಪುರದ ಸುಸಂಸ್ಕೃತ ಪ್ರಜೆಗಳ ಪ್ರತಿನಿಧಿಯಾಗಿದ್ದ.

ಇವನ ತರುವಾಯ ಪ್ರಾಮುಖ್ಯ ವ್ಯಕ್ತಿಯೆಂದರೆ ಅಫಝುಲ್ ಖಾನ. ಅವನ ಮೊದಲ ಹೆಂಡತಿ ಫಝುಲ್ ಖಾನನಿಗೆ ಜನ್ಮವಿತ್ತ ನಂತರ ಮಡಿಧಳು. ಆಗ ಆತ ಲರ್ಲಿಬೇಗಂ ಎಂಬ ಎರಡನೆಯವಳನ್ನು ಲಗ್ನವಾದ. ಅವಳಿಗೆ ಗ್ರಹ ಗತಿಗಳ ಬಗ್ಗೆ ಅತಿರೇಕ ವಿಶ್ವಾಸ. ಅವಳ ಪ್ರೀತಿಯ ಅಚ್ಚು ಮೆಚ್ಚಿನ ಗಂಡನಾಗಿ ಬಾಳುತ್ತಿದ್ದ. ಮೊದಲನೆಯ ಹೆಂಡತಿಯಿಂದ ಹುಟ್ಟಿದ ಮಗ, ಮಗಳನ್ನು ಬಹುವಾಗಿ ಪ್ರೀತಿಸುವ ತಂದೆಯಾಗಿದ್ದನಾತ. ತಾರಾ ಸೊಸೆಯಾಗಿ ಬಂದಾಗ ಅವಳನ್ನು ಸ್ವಾಗತಿಸಿದ.

ತನ್ನ ರಾಜನಿಗೆ ಆತ ಅತ್ಯಂತ ನಿಷ್ಠನಾಗಿದ್ದ ಎಂತಲೇ ಅವನನ್ನು ಶಿವಾಜಿ ಯೊಡನೆ ಸಂಧಾನ ಮಾಡಿಕೊಂಡು ಬರಲು ಕಳುಹಿಸಿದ. ರಾಜಾಜ್ಞೆಯನ್ನು ಶಿರಸಾ ಪಾಲಿಸಲು ಸಿದ್ಧನಾದ. ಶಿವಾಜಿಯನ್ನು ಬಂಧಿಸಿ ತರುವುದಾಗಿ ಸಾರಿದ.ಆಗ ಅಫಝುಲಖಾನನು ಜಂಭಕೊಚ್ಚಿಕೊಳ್ಳುವವನಲ್ಲವೆಂದು ಬಲ್ಲವನಾಗಿದ್ದ. ತುಂಬಿದ ಸಭೆಯಲ್ಲಿ ಯುವರಾಜ ಆನೆಯ ಮೇಲಿನ ಅಂಬಾರಿಯಿಂದ ಇಳಿದು ಅಫಝುಲ್ ಖಾನನನ್ನು ಅಪ್ಪಿಕೊಂಡು ಅವನನ್ನು ಫಝುಲ್ ಖಾನನನ್ನೂ ಬೀಳ್ಕೊಟ್ಟ.

ಅಫಝುಲ್ ಖಾನ ಎಂದಿಗೂ ಧರ್ಮಾಂಧನಾಗಿರಲಿಲ್ಲ. ತುಳಜಾಪುರದಲ್ಲಿ ಸೈನಿಕರು ಗುಡಿಯನ್ನು ನಾಶಮಾಡಿದ್ದು ಅವನಿಗೆ ಸರಿ ಎನಿಸಲಿಲ್ಲ. ಪೀರ ಸಯ್ಯದ

ಎಂಬುವವನ ಪ್ರಚೋದನೆಯಿಂದ ಆದದ್ದು ಎಂದು ತಿಳಿದು ದುಃಖಿಸಿದ. ಶಾಂತಿ ಸಮಾಧಾನಕ್ಕಾಗಿ ತೆರಳಿದ ಆತನ ಮೃತ್ಯುವಾದದ್ದು ದುರ್ದೈವದ ಸಂಗತಿ ಆಗಿದೆ. ಅದರ ಬಗೆಗಿನ ವಾದ-ವಿವಾದ ತರವಲ್ಲ, ಈ ರೀತಿಯಾಗಿ ಆತ ಆದರ್ಶ ಪತಿಯಾಗಿ, ಆದರ್ಶ ತಂದೆಯಾಗಿ ,ಯೋಗ್ಯ ಮುಖಂಡನಾಗಿ, ಧಾರ್ಮಿಕ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ , ಈತ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ.

ಫರ್ಝುಲ್ ಖಾನ್ ಪ್ರೇಮ ವಿವಾಹದ ನಾಯಕನಾಗಿದ್ದಾನೆ. ಶೂರ, ಸಮರ್ಥ, ಪರೋಪಕಾರಿ, ಮಹಿಳೆಯರ ಮಾನ ರಕ್ಷಕನಾಗಿ ಕಾರ್ಯ ಮಾಡಿದ್ದಾನೆ. ಎಲ್ಲ ದೃಷ್ಟಿಯಿಂದಲೂ ಸುಸಂಸ್ಕೃತ ನಾಗರಿಕನಾಗಿದ್ದಾನೆ. ಬಳವಂತರಾವ ಎನ್ನುವ ಬ್ರಾಹ್ಮಣ ಇವನ ಗುರು ಹಾಗೂ ಮಾರ್ಗದರ್ಶಕನಾಗಿದ್ದ. ಹೀಗಾಗಿ ಅವನಿಗೆ ಹಿಂದೂ ಧರ್ಮ, ಸಂಸ್ಕೃತಿಯ ಬಗ್ಗೆ ಚೆನ್ನಾಗಿ ತಿಳುವಳಿಕೆ ಇತ್ತು. ಯಾವುದೇ ಜಾತಿ –ಮತ – ಪಂಥದ ಬಗ್ಗೆ ದ್ವೇಷ, ಅಸೂಯೆ ಇರಲಿಲ್ಲ, ಮರಾಠರೂ ಕೂಡ ಮುಸ್ಲಿಂರಷ್ಟೇ ಒಳ್ಳೆಯವರೆಂದು ಬಗೆದಿದ್ದ. ಆದ್ದರಿಂದ ಅವರಿಗೆ ಗೌರವ, ಮನ್ನಣೆ ಕೊಡುತ್ತಿದ್ದ.

ರಾಜಕೀಯದಲ್ಲಿ ದ್ರೋಹ, ಅವಿಶ್ವಾಸತನ ಅವನಿಗೆ ಸರಿ ಬರುತ್ತಿರಲಿಲ್ಲ. ತಂಗಿಯಾದ ಝೈನಾಳು ಒಮ್ಮೆ ಅವನಿಗೆ ರಾಜಕೀಯ ಅಶಾಂತಿ, ಹೊಡೆದಾಟ ಏಕಾಗುತ್ತಿದೆ ಎಂದು ಪ್ರಶ್ನಿಸಿದಾಗ ಆತ–

''ಯಾಕೆಂದರೆ ಮಹಾತ್ವಾಕಾಂಕ್ಷೆ, ದುರಾಸೆ ಎಂಬುದು ಜನರಲ್ಲಿ ಇದೆ. ಸಂಪತ್ತನ್ನು ಪಡೆಯಲು ರಾಜ್ಯವನ್ನು ಬಲಿಕೊಡುವರು,....ಸ್ವಾರ್ಥಕ್ಕಾಗಿ ಮೋಸ, ವಂಚನೆ, ದ್ರೋಹಗಳು ಉಂಟಾಗುತ್ತಿವೆ. ಈ ದುರ್ಗುಣಗಳ ಪಟ್ಟಿ ದೊಡ್ಡದಾಗುತ್ತದೆ. ಅಯ್ಯೊ.... ''ಎಂದ.

ಆತನಿಗೆ ಹಿಂದೂ ಧರ್ಮ, ಹಿಂದೂ ದೇವಾಲಯಗಳು ಸೇರುತ್ತಿದ್ದವು. ತುಳಜಾಪುರವನ್ನು ಹಾಳು ಮಾಡಿ ವಿಧ್ವಂಸಕ ಕೃತ್ಯ ಮಾಡಿ ಸಾವಿರಾರು ಹಿಂದುಗಳನ್ನು ನಿರ್ದಯವಾಗಿ ಕೊಂದಾಗ ಆತ ಅತೀವ ದುಃಖಕ್ಕೆ ಒಳಗಾದ. ಕೊಲೆ, ಸುಲಿಗೆ, ರಕ್ತಪಾತವನ್ನು ನೋಡಿ ಮರುಕದಿಂದ ತನ್ನ ತಂದೆಗೆ ಇದೇನಾಯಿತು? ಎಂದು ಪ್ರಶ್ನಿಸಿದನಲ್ಲದೆ ''ಇಂಥ ದಾರುಣ ದೃಶ್ಯವು ಮತ್ತೆಂದಿಗೂ ನನ್ನ ಕಣ್ಣಿಗೆ ಬೀಳದಿರಲಿ ಎಂದು ಅಲ್ಲಾನಲ್ಲಿ ಪಾರರ್ಥಿಸುವೆ. ತಂದೆ, ಎಷ್ಟೊಂದು ಮನೆಗಳು ನಿನ್ನೆ ನಾವು ಇಲ್ಲಿಗೆ ಬರುವವರೆಗೆ ಸುಖದಲ್ಲಿದ್ದವು. ಆದರೆ ಈಗ ಅವೆಲ್ಲ ಹಾಳು ಬಿದ್ದಿದೆಯಲ್ಲ!''ಎಂದು ತಳಮಳಿಸಿದ. ಅವನಲ್ಲಿ ಹಿಂದುಗಳ ಬಗ್ಗೆ ಅಷ್ಟೊಂದು ಸಹಾನುಭತಿಯಿತ್ತು. ಪೀರ ಖಾನನೆಂಬ ದುರುಳ ಈ ಧ್ವಂಸ ಕೃತ್ಯದಲ್ಲಿ ನಿನಗೆ ಆನಂದವೆನಿಸುವುದಿಲ್ಲವೇ ? ಎಂದು ಕೇಳಿದಾಗ ಆತ ''ನಾವು ಅರ್ಚಕರ ಜೊತೆಗೆ, ಹೆಣ್ಣು ಮಕ್ಕಳ ಜೊತೆಗೆ ಯುದ್ಧ ಮಾಡುವವರಲ್ಲ'' ಎಂದು ಉತ್ತರಿಸಿದ. ಆತ ಯಾವಾಗಲೂ ದ್ವೇಷ, ಹಿಂಸೆ ಬಯಸುತ್ತಿರಲಿಲ್ಲ.

ಕೇವಲ ದಯಾಳು, ಅಂತಃಕರಣಿ, ಆಗಿರದೆ ಆತ ಮಹಾಮೇಧಾವಿ ಆಗಿದ್ದ. ತಾರಾಳನ್ನು ಮೋರೇ ತ್ರಿಮಲ್ ಎಂಬ ಕಾಮುಕನು ಅಪಹರಿಸಿ ಒಯ್ಯುತ್ತಿರುವಾಗ ಅವಳ ರಕ್ಷಣೆಗೆ, ಮಾನ ರಕ್ಷಣೆಗೆ ಧಾವಿಸಿದ. ತಾರಾಳೊಂದಿಗೆ ಆತ ಯಾವಾಗಲೂ ಗೌರವಾನ್ವಿತ ರೀತಿಯಲ್ಲಿ ವರ್ತಿಸಿದ. ಅವಳನ್ನು ಲಗ್ನ ಮಾಡಿಕೊಂಡು ಸಂಸಾರ ಸಾಗಿಸುವಾಗ ಅವನ ತಂಗಿ, ತಾಯಿ, ತಾರಾಳೊಂದಿಗೆ ಸೌಜನ್ಯದಿಂದ ವರ್ತಿಸಿದರು. ಅವಳು ಬಾಲವಿಧವೆ, ದೇವ-ದಾಸಿ ಎಂದು ತಿಳಿದು ಬಂದಾಗ ನೊಂದುಕೊಂಡ. ಅದರಂತೆ ಅವಳ ಸಂಬಂಧಿಕನೇ ಓಡಿಸಿಕೊಂಡು ಹೋಗುತ್ತಿದ್ದುದನ್ನು ತಿಳಿದು ದುಃಖಿಸಿದ.

ಯುದ್ಧದ ನಿಯಮಾವಳಿಯ ಪ್ರಕಾರ ತಾರಾ ಅವನ ಸೆರೆಯಾಳಾಗಿದ್ದರೂ ಆತ ಅವಳಿಗೆ ಅನ್ಯಾಯ, ಅವಮಾನ ಮಾಡಲಿಲ್ಲ. ಅವಳನ್ನು ರಾಜರ ಝನಾನಾಕ್ಕೆ ಕಳಿಸಿ ಎಂದು ಪೀರ ಸಯ್ಯದ ಬಂದಗಿ ಹೇಳಿದಾಗ ಆತ ಅದಕ್ಕೆ ಒಪ್ಪಲಿಲ್ಲ-

'ಅವಳು ನನ್ನ ಸೆರೆಯಾಳು.... ನಾನು ಅವಳನ್ನು ನೋಡಿಕೊಳ್ಳಬಹುದು ಅಥವಾ ಬಿಡುಗಡೆ ಮಾಡಿ ಕಳುಹಿಸಬಹುದು.... ಅವಳನ್ನು ಅರಮನೆಗೆ ಕಳಿಸುವುದಿಲ್ಲ... ಅವಳು ಸತ್ತರೂ ಒಳ್ಳೆಯದು. ಅಥವಾ ಬೀದಿಗಳಲ್ಲಿ ಅಲೆದಾಡಿದರೂ ಪರವಾ ಇಲ್ಲ.... ''ಎಂದು ತನ್ನ ಘನತೆ ತೋರಿದನು.

ಫಝಲ್ ಖಾನ ನಿಜವಾದ ಪ್ರೇಮಿಯಾಗಿದ್ದ. ಅವರಿಬ್ಬರಲ್ಲಿ ಸಹಜ ಪ್ರೇಮ ಅಂಕುರಿಸಿತ್ತು. ಪ್ರೇಮದಲ್ಲಿದ್ದರೂ ಆತ ವರ್ತನೆಯಲ್ಲಿ ರಭಸವನ್ನು ತೋರಲಿಲ್ಲ. ಸದಾ ಸಂಯಮದಿಂದ ನಡೆದುಕೊಂಡ. ಅವನ ಮಾತು, ಕೃತಿ, ವರ್ತನೆ ವಿಚಾರ ಮೊದಲಾದವುಗಳಲ್ಲಿ ಆತ ಶ್ರೇಷ್ಠವಾದ ಸಂಸ್ಕೃತಿಯ ಗುಣಗಳನ್ನು ತೋರಿದ. ಮದುವೆಯಾದ ಬಳಿಕವೂ ತಾರಾಳನ್ನು ಮತಾಂತರ ಗೊಳಿಸದೆ ತನ್ನಿಚ್ಛೆಯಂತೆ ಬಾಳಲು ಅವಕಾಶ ಮಾಡಿಕೊಟ್ಟ. ತಾರಾಳಿಗೆ ಅಯೇಷಾ ಎಂಬ ನಾಮಕರಣ ಮಾಡಿದ. ಆದರೆ ಕೇವಲ ಹೆಸರು ಬದಲಾದರೆ ವ್ಯಕ್ತಿಯ ವ್ಯಕ್ತಿತ್ವ ಬದಲಾಗುವುದಿಲ್ಲ ಎಂಬುದನ್ನು ಅರಿತಿದ್ದ. ಲಗ್ನವಾದ ಬಳಿಕವೂ ತಾರಾ ಹಿಂದುತ್ವವನ್ನು ಬಿಟ್ಟುಕೊಡುವ ಪ್ರಸಂಗ ಬರಲಿಲ್ಲ. ''ನೀನು ಆಯೇಷಾ ಆದರೂ ನನ್ನವಳೇ, ತಾರಾ ಆದರೂ ನನ್ನವಳೇ. ಇದಕ್ಕೆ ನನ್ನ ಹಾಗೂ ನಿನ್ನ ದೇವರುಗಳೇ ಸಾಕ್ಷಿ'' ಎಂದ.

ಈ ರೀತಿಯಾಗಿ ಪ್ರೇಮ ಕಥೆಯ, ಪ್ರೇಮ ವಿವಾಹದ ನಾಯಕನಾದ ಫಝಲ್ ಖಾನನದು ಮೆಚ್ಚತಕ್ಕ ವ್ಯಕ್ತಿತ್ವವಾಗಿದೆ. ಆದರ್ಶ ವ್ಯಕ್ತಿಯಾಗಿ, ಆದರ್ಶ ಪತಿಯಾಗಿ ಬಾಳಲು ಯತ್ನಿಸಿದ. ಆತ ಸುಸಂಸ್ಕೃತ ನಾಗರೀಕತೆಯ ಕಳಶಪ್ರಾಯ ವ್ಯಕ್ತಿಯಾಗಿದ್ದಾನೆ. ಆತ ಐತಿಹಾಸಿಕ ವ್ಯಕ್ತಿಯಾದರೂ ಅವನ ಬಗ್ಗೆ ಬಹಳಷ್ಟು ಬರೆದವರಿಲ್ಲ.

ಟೇಲರನ ಆತ್ಮ ಚರಿತ್ರೆಯಾದ 'The Stopry of My life' ಎಂಬ ಪುಸ್ತಕದ ಸಂಪಾದಕನಾದ ಹೆನ್ರಿ ಬ್ರೂಸ ಎನ್ನುವವನು ಪ್ರೇಮಿಯಾಗಿ ಚಿತ್ರಿತನಾದ ಫಝಲ್

ಖಾನನು 'ದುರ್ಬಲ'ನಾಗಿ ಕಾಣುತ್ತಾನೆ ಎಂದು ವಿಮರ್ಶಿಸಿದ್ದಾನೆ. ಆದರೆ ಅದು ತಪ್ಪು. ಆತ ಮಹೋನ್ನತ ಗುಣಗಳನ್ನು ಹೊಂದಿದ ಭವ್ಯ ಪಾತ್ರವಾಗಿದ್ದಾನೆ. ತಾರಾಳ ಬಗ್ಗೆ ಅವನಲ್ಲಿದ್ದ ಪ್ರೇಮ ಅತ್ಯಂತ ಪರಿಶುದ್ಧವಾಗಿದೆ.

ಇನ್ನು ಅಘಝುಲ್ ಖಾನನ ಎರಡನೆಯ ಹೆಂಡತಿಯಾದ ಲರ್ಲಿ ಖಾನಂಳು ವಿನೋದ ಪಾತ್ರವಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಸುಸ್ವಭಾವದ , ಸೌಮ್ಯ ವ್ಯಕ್ತಿಯಾದ ಅವಳು ನಿಗ್ರಹ ನಕ್ಷತ್ರಗಳ ಬಗ್ಗೆ, ಅವುಗಳ ಚಲನ-ವಲನಗಳ ಬಗ್ಗೆ ಬಹಳಷ್ಟು ಅಭ್ಯಾಸ ಮಾಡಿದವಳಾಗಿದ್ದಾಳೆ. ಈ ಶಾಸ್ತ್ರವು ಅದ್ಭುತವಾಗಿದ್ದು ಜನ ಸಾಮಾನ್ಯರಿಗೆ ಇದು ತಿಳಿಯುವಂಥದ್ದಲ್ಲವೆಂದು ಅನ್ನುತ್ತಿದ್ದಳು. ಅವಳು ಉಪಯೋಗಿಸುವ ಕೆಲವು ವಿಶಿಷ್ಟ ಪದಗಳು ಅಘಝುಲ ಖಾನನಿಗೆ ಆಗಾಗ್ಗೆ ತ್ರಾಸನ್ನೇ ಕೊಡುತ್ತಿದ್ದವು. ಆಗ ಆತ ಅವಳಿಗೆ 'ಸಾಕು ಬಿಡು, ಸಾಕು' ಎಂದು ಹೇಳಿ ಸುಮ್ಮನಾಗಿರಿಸುತ್ತಿದ್ದ. 'ಅಯ್ಯೊ ಅಯ್ಯೊ ಗ್ರಹ ನಕ್ಷತ್ರಗಳ ಬಗ್ಗೆ ಅಸಡ್ಡೆ ತೋರುವುದು ತರವಲ್ಲ, ತೋಬಾ, ತೋಬಾ'' ಎಂದೂ ಅವಳು ಪುನಃ ಅವುಗಳ ಬಗ್ಗೆ ಹೇಳುತ್ತಿದ್ದಳು. ಆಗ ಝೈನಾಳು ಅವರನ್ನು ಸಾಂತ್ವನ ಗೊಳಿಸಲು ''... ದೇವರು ಇವೆಲ್ಲವುಗಳಿಗಿಂತ ಮಿಗಿಲಾಗಿದ್ದಾನೆ'' ಎಂದು ಅನ್ನುತ್ತಿದ್ದಳು. ಆದರೂ ಕೇಳದೆ ಅವಳು ತನ್ನ ಗಂಡನಿಗೆ ''ಕಾಳಜಿಯಿಂದಿರು ಖಾನ, ಗ್ರಹ -ನಕ್ಷತ್ರಗಳು ಸೂಚಿಸವದನ್ನು ಅಲಕ್ಷಿಸಬೇಡ, ಎಚ್ಚರಿಕೆ ವಹಿಸು'' ಎಂದು ಭವಿಷ್ಯ ನುಡಿದಂತೆ ಮಾಡುತ್ತಿದ್ದಳು.

ಇಂಥ ಸಂತಸದಾಯಕ ಕೌಟುಂಬಿಕ ವಿನೋದವು ಇಲ್ಲಿದೆ. ಲಕ್ಷಾವಧಿ ಭಾರತೀಯರು ಜೋತಿಷ್ಯಶಾಸ್ತ್ರವನ್ನು ನಂಬಿರುವದನ್ನು ಅವಳು ಪ್ರತಿನಿಧಿಯಾಗಿ ತೋರಿಸುತ್ತಾಳೆ. ಫಝುಲ್ ಖಾನನು ತಾರಾಳನ್ನು ಮದುವೆಯಾದಾಗ ಅತ್ಯಂತ ಆನಂದಗೊಂಡು ಇದೊಂದು ಒಳ್ಳೆಯ ಮಿಲನವಾಗಿದೆ. ಏಕೆಂದರೆ "Tara is Air and Fazil is Fire. Fire and Air agree best" ಎಂದೆನ್ನುತ್ತಾಳೆ. ಬಾಹ್ಯ ರಾಜಕೀಯ ಕೋಲಾಹಲದ ಒತ್ತಡವನ್ನು ಈ ಪಾತ್ರವು ಹಗುರಗೊಳಿಸುತ್ತದೆ.

ಝೈನಾ ಹದಿನಾಲ್ಕರ ಹರೆಯದ ಹುಡುಗಿಯಾಗಿದ್ದಾಳೆ. ಪ್ರೀತಿಯ ತಂಗಿ. ಅಣ್ಣ ತಂಗಿಯರಲ್ಲಿ ಆದರ್ಶ ಪ್ರೀತಿ ಇವರಲ್ಲಿದೆ. ತಾರಾಳನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾಳೆ. ಅವಳನ್ನು ತಂಗಿಯೆಂದು ಬಗೆಯುತ್ತಾಳೆ. ಒಟ್ಟಾರೆ ಆ ಇಡೀ ಕುಟುಂಬವೇ ಸುಸಂಸ್ಕೃತ ಮಸ್ಲಿಂ ಕುಟುಂಬವಾಗಿದೆ ಎಂಬುದಾಗಿ ತಿಳಿದು ಬರುತ್ತದೆ.

ಸುಂದರ, ಉತ್ತಮ ಕಥೆಗಾರನಾಗಿ ಟೇಲರನು ಮಾನವಿಯ ಸ್ವಭಾವದ ಸಹಜ ಚಿತ್ರಣವನ್ನು ತನ್ನೆಲ್ಲ ಪಾತ್ರಗಳ ಮುಖಾಂತರ ಕೊಡುತ್ತಾನೆ. ಪಾತ್ರಗಳ ಸೃಷ್ಟಿಯಲ್ಲಿ ವೈವಿಧ್ಯತೆ ಇದೆ. ಮೂರು ದಶಕಕ್ಕಿಂತಲೂ ಹೆಚ್ಚುಕಾಲ ಭಾರತೀಯರನ್ನು ಚೆನ್ನಾಗಿ ವೀಕ್ಷಿಸಿದ ಆತ ವಾಸ್ತಾವಿಕ ಚಿತ್ರವನ್ನೀಯಲು ಸಮರ್ಥನಾಗಿದ್ದಾನೆ. ಶಿವಾಜಿಯ

ತಾಯಿ ಜೀಜಾಬಾಯಿ ಅಮುಖ್ಯಪಾತ್ರವಾಗಿದ್ದರೂ, ಮಗನಿಗೆ ಪ್ರೋತ್ಸಾಹ ನೀಡಿ ಹುರಿದುಂಬಿಸುತ್ತಿದ್ದಳು. ಇಲ್ಲಿಯ ತಾಯಂದಿರ ಪಾತ್ರಗಳು ರಸವತ್ತಾಗಿವೆ. ಅದರಂತೆ ನೀಲಕಂಠರಾಯ, ಬಳವಂತ ರಾಮ, ಮೊದಲಾದವರ ಪಾತ್ರ ಚಿತ್ರಣ ಚಿಕ್ಕದಾದರೂ ಚೊಕ್ಕ ಆಗಿವೆ. ಅದಕ್ಕೆಂತಲೇ ತಾರ ಕಾದಂಬರಿಯು ಟೇಲರನ 'best and great' ಎಂಬುದಾಗಿ ಪ್ರಸಿದ್ಧವಾಯಿತು. ಬಹುತರ ಎಲ್ಲಾ ಪಾತ್ರಗಳು ಸುಸಂಸ್ಕೃತ ಸಭ್ಯ ಸಜ್ಜನಿಕೆಯ ಸುಧಾರಿತ ಸಮಾಜವನ್ನು ಪ್ರತಿರೂಪಿಸುತ್ತವೆ. ಈ ಕಾದಂಬರಿಯಲ್ಲಿ ಮುಂದಾಗುವದನ್ನು ಮೊದಲೇ ಸೂಚಿಸುವ ತಂತ್ರವನ್ನು ಬಳಸಿದ್ದಾನೆ. ಉದಾಹರಣೆಗೆ ತಾರಾ ಹಾಗೂ ಫಝುಲ್ ಖಾನರು ಕಾಣುವ ಸುಂದರ ಕನಸುಗಳು. ಅವರು ಮುಂದೆ ಸತಿ –ಪತಿಯರಾಗುವರೆಂಬುದನ್ನು ಸೂಚಿಸುತ್ತವೆ.

ಆಯಾ ಪಾತ್ರಗಳು ತಮ್ಮ ಧರ್ಮ, ಸಂಸ್ಕೃತಿ , ರೀತಿ ರಿವಾಜುಗಳಂತೆ ಸಹಜವಾಗಿ ಸಂಭಾಣೆ ಮಾಡುತ್ತಾರೆ. ಸಂಭಾಷಣೆಯಲ್ಲೂ ನೈಜತೆ ಇದೆಯೇ ಹೊರತು ಕೃತಕತೆ ಇಲ್ಲ. ಅವರವರ ಮಾತುಗಳಲ್ಲಿ ಅವರವರ ವ್ಯಕ್ತಿತ್ವ ಪ್ರಕಟವಾಗುತ್ತದೆ. ತಾರಾಳನ್ನು ಕಂಡಾಗ ಅಫಝುಲ ಖಾನನ ಮನೆಯಲ್ಲಿಯ ಹೆಣ್ಣಾಳುವಾದ ಗುಲಾಬಿ ಎನ್ನುವವಳು ಅಕ್ಕರತೆಯಿಂದ ಅವಳಿಗೆ 'Poor little rose ! my petty dove ! my lily ! my own life ಎಂದು ಸಂಬೋಧಿಸುತ್ತಾಳೆ. ತಾರಾಳು ಫಝುಲ್ ಖಾನನಿಗೆ "I would rather be Tara to thee, my lord for ever" ಎಂದು ತಾರಾ ಎಂದರೆ ನಕ್ಷತ್ರ ಎಂಬುದನ್ನು ಸೂಚಿಸುತ್ತಾಳೆ.

ಹೋಲಿಸಿ ಹೇಳುವುದು ಟೇಲರನ ತಂತ್ರಗಳಲ್ಲೊಂದು. ಭಾರತೀಯರು ಪ್ರೀತಿಸುವ ಪದ್ಧತಿಯನ್ನು, ಬ್ರಿಟಿಷರು ಪ್ರೀತಿಸುವ ಪದ್ಧತಿಯನ್ನು ಹೋಲಿಸಿ –

'' ಪೂರ್ವದೇಶದ ಜನರು ನಮ್ಮಲ್ಲಿ ನಡೆಯುವ ಪ್ರೇಮದ ಅಭಿವ್ಯಕ್ತಿಗಳನ್ನು, ತಿರಸ್ಕರಿಸುವದನ್ನು ಅಂಗೀಕರಿಸುವದಿಲ್ಲ, ನಮ್ಮ ಸಾಮಾಜಿಕ ಚಟಗಳನ್ನು ಒಪ್ಪುವದಿಲ್ಲ, ಇದರರ್ಥ ಅವರ ಪ್ರೇಮ ಭಾವನೆಗಳು ಕಮ್ಮಿ ಇರುತ್ತವೆ ಎಂದು ಬಗೆಯಬಾರದು.

ಅದರಂತೆ ಭಾರತೀಯರ ನಾಟಕಗಳನ್ನು ಇಂಗ್ಲಂಡಿನ ನಾಟಕಗಳಗೆ ವ್ಯತ್ಯಾಸ ಮಾಡುತ್ತ ಹೇಳುತ್ತಾನೆ –

''ಹಿಂದೂ ನಾಟಕಗಳನ್ನಾಡುವದು ಇಂಗ್ಲೀಷ್ ನಾಟಕವಾಡಿದಂತಲ್ಲ, ಇಲ್ಲಿಯ ನಾಟಕವು ಅನೇಕ ದಿನಗಳ ವರೆಗೆ ನಡೆಯುತ್ತದೆ.... ನಾವು ನಮ್ಮ ನಾಟಕ ನೋಡಲು ಕೆಲವು ಗಂಟೆಗಳ ವರೆಗೆ ಮಾತ್ರ ಕುಳಿತುಕೊಂಡಿರುತ್ತೇವೆ. ....''

ಕಾದಂಬರಿಗಳಲ್ಲಿ ಬರುವ ಮಹತ್ವದ ಘಟನೆಗಳನ್ನೆಲ್ಲ ನಾಟಕೀಯವಾಗಿ ತರುತ್ತಾನೆ. ತುಳಜಾಪುರದ ವಿನಾಶ, ತಾರಾ ಹಾಗೂ ಫಝುಲ್‌ಖಾನರ ಪ್ರಥಮ

ಭೇಟಿ, ಜೀಜಾಬಾಯಿಯು ಶಿವಾಜಿಗೆ ಕೊಟ್ಟ ಹುರುಪು, ಉಪದೇಶ ಮೊದಲಾದವುಗಳು ಅತ್ಯಂತ ನಾಟಕೀಯ ಸನ್ನಿವೇಶಗಳಾಗಿವೆ.

ಆದರಂತೆ ವರ್ಣನೆಗಳೆಲ್ಲ ಸುಂದರವು, ನೈಜಯುತವೂ ಆಗಿವೆ. ಯಾವುದರಲ್ಲೂ ಅವಾಸ್ತವಿಕತೆ, ಅತಿರೇಕತೆ ಎಂಬುದಿಲ್ಲ. ಇದನ್ನು ತುಳಜಾಪುರದ ಭಕ್ತರು ದಿನಾಲು ಮಾಡುವ ಪೂಜೆಗಳಲ್ಲಿ, ತಾರಾ ಸತಿ ಹೋಗುವ ಸಂದರ್ಭದಲ್ಲಿ ಕಾಣಬಹುದಾಗಿದೆ. ಆದರಂತೆ ನಿಸರ್ಗದ ರಮ್ಯತೆಯನ್ನೂ ಅಲ್ಲಲ್ಲಿ ಬಣ್ಣಿಸಿದ್ದಾನೆ. ಉದಾಹರಣೆಗೆ

''ಈಗ ಸುಂದರವಾದ ಬಿಸಿಲು ಬಿದ್ದಿತ್ತು. ಮುಂಜಾನಿನ ತಾಜಾತನ ಎಲ್ಲೆಡೆ ಕಾಣುತ್ತಿತ್ತು. ಪ್ರತಿಯೊಂದು ವಸ್ತುವೂ ಮಳೆಯಾಗಿ ಹೋದ ಬಳಿಕ ತೊಳೆದು ಇಟ್ಟಂತೆ ಹೆಚ್ಚು ಲಕಲಕ ಹೊಳಪುಳ್ಳದ್ದಾಗಿ ಕಂಗೊಳಿಸುತ್ತಿತ್ತು...

ಸಹಜತೆಯೊಡನೆ ಸೌಂದರ್ಯವು ಅವನ ಭಾಷೆ ಹಾಗೂ ಶೈಲಿಯಲ್ಲಿ ನೋಡಬಹುದಾಗಿದೆ.

*****

೨. ರಾಲ್ಫ ಡಾರ್ನೆಲ್

೧೮೬೫ರಲ್ಲಿ ಪ್ರಕಟವಾದ ಈ ಕಾದಂಬರಿಯು ಮೂರರ ಗುಂಪಿನಲ್ಲಿಯ ಎರಡನೆಯ ಕಾದಂಬರಿ ಆಗಿದೆ. ಇದು ಹದಿನೆಂಟನೆಯ ಶತಮಾನದ ಸುಸಂಸ್ಕೃತ ಭಾರತದ ನಾಗರಿಕ ಜೀವನವನ್ನು ತೋರಿಸುತ್ತದೆ. ಬ್ರಿಟಿಷರು ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಆರಂಭಿಸಿದ ಐತಿಹಾಸಿಕ ವಿಷಯ ಇದರಲ್ಲಿ ಬರುತ್ತದೆ.

''....... ೧೭೫೭ರ ಜೂನ್ ೨೩ರಂದು ಭಾರತದ ಹಿಂದು, ಮುಸ್ಲಿಂರ ಬಲದ ಮೇಲೆ ದೊಡ್ಡ ಹೊಡೆತ ಬಿತ್ತು. ಪ್ಲಾಸಿ ಯುದ್ಧದ ನಂತರ ಭಾರತದ ಆಡಳಿತವು ಈವರೆಗೂ ಮಹತ್ವದ್ದೆಂದು ಎನಿಸಿದ ಬ್ರಿಟಿಷರ ಕೈಗೆ ಸಿಕ್ಕಿತು'' ಬ್ರಿಟಿಷ ಈಸ್ಟ ಇಂಡಿಯ ಕಂಪನಿಯು ಬಂಗಾಲದಲ್ಲಿ ಮಾಡಿದ ಮಹತ್ಸಾಧನೆ ಇಲ್ಲಿ ಬರುತ್ತದೆ. ಪ್ಲಾಸಿ ಯುದ್ಧ ಹಾಗೂ ಬ್ರಿಟಿಷ ಸಾಮ್ರಾಜ್ಯ ಸ್ಥಾಪನೆಯೆ ಕಾದಂಬರಿಗೆ ವಸ್ತುವಾಗಿದೆ.

ಬ್ರಿಟಿಷರು ಹಾಗೂ ಫ್ರೆಂಚರು ಭಾರತವನ್ನು ವಶಪಡಿಸಿಕೊಳ್ಳುವುದರಲ್ಲಿ ತೊಡಗಿದ್ದಾಗ ಬಂಗಾಲದ ನವಾಬನಾದ ಸಿರಾಜ ಉದ್ದೌಲನು ತನ್ನ ರಾಜ್ಯದ ಮೇಲೆ, ಸೈನಿಕರ ಮೇಲೆ ಹತೋಟಿಯನ್ನು ಕಳೆದುಕೊಂಡನು. ಆಗ ಬ್ರಿಟಿಷರು ತಮ್ಮ ವ್ಯಾಪಾರವನ್ನು ಹೆಚ್ಚಾಗಿಸಿಕೊಳ್ಳುವಲ್ಲಿ ಉಳಿದ ಯುರೋಪಿಯನ್ ದೇಶದವರಿಗಿಂತ ಮೇಲುಗೈ ಸಾಧಿಸಿದರು.

ರಾಜಕೀಯ ಚದುರಂಗದಾಟದಲ್ಲಿ ಲಾರ್ಡ ಕ್ಲೈವನು ಚಾಣಾಕ್ಷೆಯನ್ನು ತೋರಿದನು. ಮೀರ ಜಾಫರನ ಜೊತೆಗೆ ಮಿತ್ರತ್ವ ಸಾಧಿಸಿ ಬಂಗಾಲದ ನವಾಬನಾಗಿದ್ದ ಸಿರಾಜ ಉದ್ದೌಲನನ್ನು ಕೊನೆಗೆ ಸೋಲಿಸಿದನು. ಆತನ ಹತ್ತಿರ ಐವತ್ತು ಸಾವಿರದಷ್ಟು ಉತ್ತಮ ತರಬೇತಿ ಹೊಂದಿದ ಸೈನ್ಯವಿದ್ದರೂ ಸೋತನು. ಪ್ಲಾಸಿ ನಿರ್ಣಾಯಕ ಯುದ್ಧದಲ್ಲಿ ವಿಜಯ ಸಾಧಿಸಿದ ಕ್ಲೈವನು ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯ ಸ್ಥಾಪನೆಯ ಪ್ರಮುಖ ವ್ಯಕ್ತಿಯಾಗಿದ್ದನು.

ಈ ಐತಿಹಾಸಿಕ ವಿಷಯದ ಚೌಕಟ್ಟಿನಲ್ಲಿ ರಾಲ್ಫ ಡಾರ್ನೆಲ್ ಎಂಬುವವನು ಭಾರತಕ್ಕೆ ಬಂದು ಬ್ರಿಟಿಷ ಸೈನ್ಯದ ಸಹಾಯಕನಾಗಿ ಕಾರ್ಯ ಮಾಡಿ, ಬ್ರಿಟಿಷ ಅಧಿಪತ್ಯ ಸ್ಥಾಪಿಸುವಲ್ಲಿ ಭಾಗಿಯಾಗಿ, ನವಾಬನ ವಿರುದ್ಧ ಕ್ಲೈವನ ಜೊತೆಗೂಡಿ ಯುದ್ಧ ಮಾಡಿ ಗೆಲುವು ಸಂಪಾದಿಸುವಲ್ಲಿ ಯಶಸ್ವಿಯಾದ. ಆ ಬಳಿಕ ಪ್ರೇಮಿಯಾದ. ನೂರ-ಉಲ್-ನಿಸಾ ಎಂಬುವವಳನ್ನು ಮದುವೆಯಾದ. ತಾನು ಹುಟ್ಟಿನಿಂದ ಕ್ರಿಶ್ಚಿಯನ್ ಧರ್ಮದವನಾಗಿದ್ದರೂ ಮುಸ್ಲಿಂ ವಿಧವೆಯನ್ನು ಮದುವೆಯಾದ. ಅವರಿಬ್ಬರ ವಿವಾಹವು ಎರಡು ಭಿನ್ನ ಸಂಸ್ಕೃತಿ, ಧರ್ಮ, ನಾಗರಿಕತೆಗಳ ಮಿಲನದ ಸಂಕೇತವಾಗಿದೆ. ಮತ್ತೂ ರಾಜ್ಯವಾಳುವವರ ಹಾಗೂ ಪ್ರಜೆಗಳ ಸಮಾಗಮದ ಸೂಚಕವೂ ಆಗಿದೆ.

ಯುದ್ಧದಲ್ಲಿ ಸೋತು ಹೋದ ಸಿರಾಜ್ ಉದ್ದೌಲನು ಬರ್ಬರತೆ ಹಾಗೂ ದೌರ್ಜನ್ಯದ ಪ್ರತೀಕದಂತಿದ್ದಾನೆ. ಆದರೆ ಕ್ಲೈವ ಮತ್ತು ಮೀರ ಜಾಫರ ಕೂಡಿಕೊಂಡಿದ್ದು ಮುಸ್ಲಿಂ – ಕ್ರಿಶ್ಚಿಯನ್ನರ ಏಕತೆಯನ್ನು ತೋರಿಸುತ್ತದೆ. ಬ್ರಿಟಿಷ್ ವ್ಯಾಪಾರಿಗಳಾಗಿ ಬಂದು ಸಾವಕಾಶವಾಗಿ ಅವರು ಭಾರತವನ್ನು ಅಂಕಿತದಲ್ಲಿ ತಂದುಕೊಂಡು ಕಡಿಮೆ ನಾಗರೀಕತೆ ಹೊಂದಿದ ಭಾರತೀಯರಿಗೆ ಸುಧಾರಣೆಯಾಗಲು ಸುಶಿಕ್ಷಿತರಾಗಲು ಹಚ್ಚಿದ್ದೂ ಇದರಲ್ಲಿ ಬರುತ್ತದೆ.

ಸಿರಾಜಉದ್ದೌಲನ ದುರಾಡಳಿತಕ್ಕೆ ಬೇಸತ್ತ ಭಾರತೀಯರು ಆತ ಯುದ್ಧದಲ್ಲಿ ಸೋತಾಗ, ಸತ್ತಾಗ ಸಂತಸಪಟ್ಟರು. ಬ್ರಿಟಿಷರು ಆಧಿಪತ್ಯ ವಹಿಸಿಕೊಂಡಾಗ ಜನರು 'ಕ್ಲೈವನಿಗೆ ಜಯವಾಗಲಿ , ಬ್ರಿಟಷರಿಗೆ ಜಯವಾಗಲಿ ಎಂದು ಕೂಗಿ, ಹಾರೈಸಿದರು. ಕ್ಲೈವನು ಯುದ್ಧ ಗೆದ್ದುದು ಒಳ್ಳೆಯದಾಯಿತೆಂದು ಬಗೆದರು, ಅದರ ದ್ಯೋತಕವಾಗಿ ವಿಜೃಂಭಣೆಗಳನ್ನು ತೋರಿದರು. ಪರಕೀಯರ ಆಡಳಿತವನ್ನು ಸ್ವಾಗತಿಸಿದರು. ಯಾಕೆಂದರೆ ಅವರ ಆಡಳಿತದಲ್ಲಿ ಶಿಸ್ತು, ಕಾನೂನು ಪಾಲನೆ, ಒಳ್ಳೆಯತನಗಳು ಇದ್ದವು. ಬಂಗಾಲದಲ್ಲಿ ಮೊದ ಮೊದಲು ಪರಸ್ಪರ ವೈರಿಗಳಿಂತಿದ್ದ ಮುಸಲ್ಮಾನರು ಹಾಗೂ ಕ್ರಿಶ್ಚಿಯನ್ನರು ನಂತರ ಒಂದಾದರು, ಶಾಂತಿ ಹಾಗೂ ಸೌಹಾರ್ದತೆ ನೆಲೆಸುವಂತೆ ಮಾಡಿದರು.

ಕಾದಂಬರಿಯ ಶೀರ್ಷಿಕೆಯು ಸೂಚಿಸುವಂತೆ ರಾಲ್ಫಡಾರ್ನೆಲ್ ಎಂಬ ಬ್ರಿಟಿಷ ಸೇನಾಧಿಕಾರಿಯೇ ಇದರ ನಾಯಕನಾಗಿದ್ದಾನೆ. ಅವನು ಯುದ್ಧದಲ್ಲಿ ಭಾಗಿಯಾಗಿ ಗೆದ್ದು, ಮದುವೆಯಾಗುವದೇ ಕಥಾವಸ್ತುವಾಗಿದೆ. ಆದರೆ ರಾಲ್ಫನು ಭಾರತಕ್ಕೆ ಬರುವ ಮುನ್ನ ಬಂದ ಮೇಲೆ ತನ್ನ ತಂದೆ ಯಾರು ? ಎಂಬುದನ್ನು ಪತ್ತೆ ಹಚ್ಚಲು ಯತ್ನಿಸುತ್ತಾನೆ. ಅವನ ತಂದೆ – ತಾಯಿ ಯಾರು ಎಂಬುದನ್ನು ರುಜುವಾತು ಪಡಿಸಲು ಕ್ಲೈವನು ಅವನಿಗೆ ಒಂದು ಪ್ರಮಾಣ ಪತ್ರವನ್ನು ಬರೆದುಕೊಟ್ಟಿರುತ್ತಾನೆ. – ಆಗ ಆತ

"Oh ! Sir, my poor mother was married ! Thank God !

and I am not...... I am not.... " ಎಂದು ಉದ್ಗರಿಸುತ್ತಾನೆ. ಹೆನ್ರಿ ಡಾರ್ನೆಲ್ ಎಂಬ ತಂದೆ ಗ್ರೇಸಸ್ಮಿಥ್ಸನ್ ಎನ್ನು ವ ತಾಯಿ ಇವನಿಗಿದ್ದರು. ರುಜುವಾತು ಪಡಿಸುವ ಕಾಯಿದೆ ಬದ್ಧ ಕಾಗದಪತ್ರಅವನ ಹತ್ತಿರ ಇರಲಿಲ್ಲ. ಕ್ರಿಶ್ಚಿಯನ್ನನಾಗಿ ಈತ ಕೊನೆಗೆ ಮುಸ್ಲಿಂ ಬೇಗಂಳನ್ನು ಲಗ್ನವಾಗುವುದು, ವಿಧವಾ ಪುನರ್ವಿವಾಹ ಹಾಗೂ ಅಂತರ್ಧರ್ಮೀಯ ವಿವಾಹವಾಗುವದು ಯೋಗ್ಯವೆಂದು ಟೇಲರನ ಅಭಿಮತವಾಗಿದೆ.

ಬ್ರಿಟಿಷ ಆಡಳಿತಕಾಲದಲ್ಲಿ ಎಲ್ಲ ಬಗೆಯ ಬರ್ಬರತೆ ನಿಂತು ಹೋಯಿತು, ಶಾಂತಿ ನೆಲೆಸಿತು. ಜನಸಾಮಾನ್ಯರ ವಿತ್ತ ಜೀವಿತಗಳ ರಕ್ಷಣೆಯಾಗತೊಡಗಿತು.

ಆದರಂತೆ ಅಪರಾಧಿಗಳಿಗೆ ಯೋಗ್ಯ ಶಿಕ್ಷೆಯಾಗತೊಡಗಿತು. ಇವೆಲ್ಲವುಗಳಿಂದ ಸಾಮಾಜಿಕ ಜೀವನವು ಸುರಕ್ಷಿತವಾಗಿ ಸುಧಾರಿಸ ಹತ್ತಿತ್ತು.

ರಾಲ್ಫನ ಜೀವನವನ್ನು ತೋರಿಸುವ ಈ ಕಥೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಇಂಗ್ಲೆಂಡದಲ್ಲಿ ರಾಲ್ಫನ ಜೀವನ. ಎರಡನೇ ಭಾಗದಲಿ ರಾಲ್ಫನು ಭಾರತಕ್ಕೆ ಬಂದು ಹೋರಾಟದಲ್ಲಿ ಭಾಗವಹಿಸಿ ದೇಶಪ್ರೇಮ ತೋರಿದ್ದು ಇದೆ. ಮೂರನೇ ಭಾಗದಲ್ಲಿ ಆತ ಮರಳಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಬಾಳಿದ್ದು ನಂತರ ಮಡಿದದ್ದು ಬರುತ್ತದೆ. ಈ ರೀತಿಯಾಗಿ ಈ ಕಾದಂಬರಿಯಲ್ಲಿ ಮೂರು ಭಾಗಗಳು ಇವೆ.

ರಾಲ್ಫನು ಭಾರತಕ್ಕೆ ಬಂದು ದೇಶ ಪ್ರೇಮಿಯಾಗಿ ಯುದ್ಧದಲ್ಲಿ ಭಾಗವಹಿಸಿ ಕಲ್ಕತ್ತಾದ 'ಬ್ಲ್ಯಾಕ ಹೋಲ'ದಲ್ಲಿ ಸಿಕ್ಕು ಅಲ್ಲಿ ಮಿಸೆಸ್ ಜ್ಯುಲಿಯಾ ವ್ಹಾರ್ಟನ್‌ಳ ಜೊತೆಗೆ ಇದ್ದು ಬದುಕಿ ಹೊರಬಂದುದು ವಿಸ್ತಾರವಾಗಿ ಬಣ್ಣಿಸಲಾಗಿದೆ. ಪ್ಲಾಸಿಯ ಯುದ್ಧದ ನಂತರ ಸಿರಾಜ ಉದ್ದೌಲನು ಸೋತು, ಸತ್ತು ಹೋದ ಬಳಿಕ ಅವನ ಪತ್ನಿ ನೂರ-ಉಲ್-ನಿಸ್ಸಾ ಎಂಬುವವಳು ವಿಧವೆಯಾದರೂ ಅವಳನ್ನು ಮದುವೆ ಮಾಡಿಕೊಂಡು ಬಾಳುವದು ಕಾದಂಬರಿಯ ಮಹತ್ವದ ಭಾಗವಾಗಿದೆ.

ಈ ಕಾದಂಬರಿಯಲ್ಲಿ ಒಂದು ಮಹತ್ವದ ಐತಿಹಾಸಿಕ ಘಟನೆ ಬರುತ್ತದೆ. ಅದೇನೆಂದರೆ 'ಬ್ಲಾಕ್ ಹೋಲ್ ಆಫ್ ಕಲ್ಕತ್ತಾ' ಎಂಬುದಾಗಿದೆ. ಒಂದೇ ಒಂದು ಅತಿ ಚಿಕ್ಕದಾದ ಅಂದರೆ ಕೇವಲ ಹದಿನೆಂಟು ಚೌರದಷ್ಟು ವಿಸ್ತಾರವಾದ ಕೋಣೆಯಲ್ಲಿ ಒಂದು ನೂರಾ ನಲ್ವತ್ತೈದು ಜನರನ್ನು ಉಸಿರುಗಟ್ಟುವಂತೆ ತುರುಕಿದ್ದು, ಆ ಕೋಣೆಯಲ್ಲಿ ಸಿಕ್ಕಿಕೊಂಡವರೆಲ್ಲರೂ ತಮ್ಮ ಜನರನ್ನು ತಾವೇ ತುಳಿದು, ಹಿಸುಕಿ ಕೊಂದಂತಾಗುವಂತಿತ್ತು.

ಉತ್ತರ ಹಿಂದುಸ್ತಾನ, ವಿಶೇಷವಾಗಿ ಬಂಗಾಲವು ಈ ಕಾದಂಬರಿಗೆ ಹಿನ್ನೆಲೆಯಾಗಿದೆ. ಕಲ್ಕತ್ತಾದ ಫೋರ್ಟ್ ವಿಲಿಯಮ್ಸ ಎಂಬುದು ಬ್ರಿಟಿಷರು ವ್ಯಾಪಾರ, ಕಾರ್‍ಯ ಮಾಡುವ ಸ್ಥಳವಾಗಿತ್ತು. ಮತ್ತು ತಮ್ಮ ವ್ಯಾಪಾರೋದ್ಯೋಗದಲ್ಲಿಯೇ ನಿರತರಾಗಿದ್ದ ಅವರು ಮೊದಲು ಭಾರತದ ರಾಜಕೀಯದಲ್ಲಿ ಆಸಕ್ತಿ ಹೊಂದಿರಲಿಲ್ಲ. ನಿಧಾನವಾಗಿ ಬ್ರಿಟಿಷ ಹಡಗುಗಳು ಸೈನಿಕರು ಭಾರತಕ್ಕೆ ಬಂದು ಪ್ರಾಬಲ್ಯ ಹೆಚ್ಚಿಸಿಕೊಳ್ಳ ಹತ್ತಿದರು. ಸಿರಾಜ ಉದ್ದೌಲನ ತಂದೆಯಾದ ಅಲಿ ವರ್ದಿಖಾನನು ಬ್ರಿಟಿಷರಿಗೆ ನಾಡಿನಲ್ಲಿ ವ್ಯಾಪಾರ ಮಾಡಿಕೊಂಡಿರಲು ಅನುಮತಿ ಇತ್ತನು. ರಾಲ್ಫ ಡಾರ್ನೆಲ್ ಕುಟುಂಬದವರು ಭಾರತದಲ್ಲಿ ವ್ಯಾಪಾರಕ್ಕಾಗಿ ಅಪಾರ ಹಣವನ್ನು ತೊಡಗಿಸಿದ್ದರು. ಆ ಕಾರಣದಿಂದ ರಾಲ್ಫ ಭಾರತಕ್ಕೆ ಬರುವಂತಾಯಿತು.

ಈ ಕಾದಂಬರಿಯಲ್ಲಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಪಾತ್ರಗಳು ಪ್ರಮುಖವಾಗಿವೆ. ಬ್ರಿಟಿಷರಲ್ಲಿ ರಾಲ್ಫ ಡಾರ್ನೆಲ್, ಲಾರ್ಡ ಕ್ಲೈವ, ಹೆನ್ರಿ ವ್ಹಾರ್ಟನ್

ಮತ್ತು ಮಿಸೆಸ್ ಜುಲಿಯಾ ವ್ಹಾರ್ಟನ್ ಇದ್ದರೆ ಮುಸ್ಲಿಂರಲ್ಲಿ ಸಿರಾಜ ಉದ್ದೌಲ, ಅವನ ಹೆಂಡತಿ ನೂರ -ಉಲ್ - ನಿಸ್ಸಾ, ಸಿರಾಜನ ತಾಯಿ, ಸೋಝುನ್ ಎಂಬ ಹೆಣ್ಣುಮಗಳು, ಹಾಗೂ ದರ್ವೇಶ - ಇವರು ಪ್ರಮುಖರಾಗಿದ್ದಾರೆ.

ರಾಲ್ಫ ಡಾರ್ನೆಲ್‌ನ ಪ್ರಭಾವ ಭಾರತಿಯರ ಮೇಲೆ ವಿಶೇಷವಾಗಿ ಮುಸ್ಲಿಮರ ಮೇಲೆ ಬಹಳಷ್ಟು ಆಯಿತು. ಆತ ಭಾರತಕ್ಕೆ ಬಂದೊಡನೆ ಮಿಸ್ಟರ ಹೆನ್ರಿ ವ್ಹಾರ್ಟನ್ ಹಾಗೂ ಮಿಸೆಸ್ ಜ್ಯೂಲಿಯಾ ವ್ಹಾರ್ಟನ್ನರ ಮನೆಯಲ್ಲಿ ಅತಿಥಿಯಾಗಿ ಇದ್ದು ತನ್ನ ಸಭ್ಯ ಹಾಗೂ ಸೌಮ್ಯ ವರ್ತನೆಯಿಂದ ಅವರಿಗೆ ಅತ್ಯಂತ ಪ್ರೀತಿಯವನಾದನಲ್ಲದೆ ಜ್ಯುಲಿಯಾ ವ್ಹಾರ್ಟನ್ನಳನ್ನು ತನ್ನ ಅಕ್ಕ ಎಂದೇ ಬಗೆಯುತ್ತಿದ್ದ. ತಾನು ಒಂದು ವೇಳೆ ಹೋರಾಟ, ಯುದ್ಧದಲ್ಲಿ ಮಡಿದರೆ ತನ್ನ ಹೆಂಡತಿಯ ಕಾಳಜಿಯನ್ನು ತೆಗೆದುಕೊಳ್ಳಬೇಕೆಂದು ವ್ಹಾರ್ಟನ್ ರಾಲ್ಫನಿಗೆ ವಿನಂತಿಸಿಕೊಂಡ. ತನ್ನ ಪ್ರಾಣವನ್ನು ಪಣಕ್ಕಿಟ್ಟು ಹಾಗೆ ಮಾಡುವದಾಗಿ ರಾಲ್ಫ ಆತನಿಗೆ ವಚನವನಿತ್ತ. ಯಾವಾಗ ರಾಲ್ಫ ಹಾಗೂ ಜ್ಯೂಲಿಯಾ ವ್ಹಾರ್ಟನ್ ಇಬ್ಬರೂ ಬ್ಲ್ಯಾಕ್ ಹೋಲದಲ್ಲಿ ಸಿಕ್ಕಿ ಬಿದ್ದಿದ್ದರೋ ಆಗ ಅವಳು ಉಸಿರುಗಟ್ಟಿ ಸಾಯುವಂತಾದಾಗ ಅವಳಿಗೆ ಉಸಿರಾಡಲು ಹವೆ ದೊರೆಯುವಂತೆ ಮಾಡಿ ಉಳಿಸಿದ, ಸೇವೆ ಮಾಡಿದ.

ಯುದ್ಧ ಭೂಮಿಯಲ್ಲೂ ಸಹ ರಾಲ್ಫನು ತನ್ನಲ್ಲಿರುವ ದಯಾಗುಣ ಹಾಗೂ ಗೌರವ ಭಾವನೆಗಳನ್ನು ವ್ಯಕ್ತಪಡಿಸಿದ. ಯಾವಾಗ ಅಫಘಾನದ ನರ್ತಿತಿಯಾಗ ಸೋಝುನ್ನಳು ಯೋಧನಂತೆ ಹೋರಾಡಿದಾಗ ಅವನಿಗೆ ಅತ್ಯಾಶ್ಚರ್ಯವಾಯಿತಲ್ಲದೆ, ತನ್ನ ಕೈಯಲ್ಲಿಯ ಕಿರುಗತ್ತಿಯಿಂದ ಅವಳ ತಲೆ ಸೀಳಿ ಹಾಕುವ ಭಾವನೆ ಬಂದರೂ ಹಾಗೆ ಮಾಡದೆ, "It is a woman God, help me, I came strike her". ಎಂದು ಅಂದು ಅವಳನ್ನು ತನ್ನ ತಂಗಿಯೆಂದೇ ಬಗೆದ.

ಅದೇ ರೀತಿ ಆತ ಯುದ್ಧಭೂಮಿಯಲ್ಲಿ ತಾನಾರೆಂಬುದನ್ನು ತೋರಗೊಡದೆ, ವೈರಿಗಳ ಪಡೆಯಲ್ಲಿ ಹೊಕ್ಕು ಅವರ ಬಲಾಬಲವನ್ನು ವೀಕ್ಷಿಸುತ್ತಿದ್ದ. ನಿಜವಾದ ಹೋರಾಟದಲ್ಲಿ ಅತೀವ ಗಾಯಗೊಂಡು ಆತ ನೆಲಕ್ಕ ಬಿದದಾಗ, ಒಬ್ಬ ಸೈನಿಕ ಅವನನ್ನು ಕೊಲ್ಲಲೆತ್ನಿಸುತ್ತಿದ್ದಾಗ, ಅದೇ ಸೋಝುನ್ ಅಲ್ಲಿಗೆ ಧಾವಿಸಿ ಬಂದು ಪ್ರಾಣಾಪಾಯದಿಂದ ಅವನನ್ನು ಉಳಿಸಿದಾಗ ಆತ ಅವಳಿಗೆ ಎಲ್ಲಿಲ್ಲದ ಗೌರವ ಕೊಟ್ಟ ಆದರ ತೋರಿದ.

ಒಬ್ಬ ನಿಜವಾದ ಕ್ರಿಶ್ಚಿಯನ್ ಆಗಿ ಆತ ದೇವರಲ್ಲಿ ನಂಬುಗೆ ಇರಿಸಿದ್ದ. ದೇವರ ಇಚ್ಛೆಯಲ್ಲಿ ನಂಬುಗೆ ಇರಿಸಿದ್ದ. ಆದರೆ ಖಗೋಳ ಸಾಸ್ತ್ರದಲ್ಲಿ ನಂಬುಗೆ ಇಟ್ಟಿರಲಿಲ್ಲ -

''ಇಲ್ಲ, ನಮ್ಮ ಜನರು ನಕ್ಷತ್ರಗಳನ್ನು ನೋಡಿ ಭವಿಷ್ಯ ತಿಳಿಯುವ ಹುಚ್ಚುತನ ಮಾಡುವುದಿಲ್ಲ. ಆದರೆ ದೇವರ ಇಚ್ಛೆಯಲ್ಲಿ ನಂಬಿಕೆ ಇಟ್ಟಿರುತ್ತಾರೆ.'' ದೇವತ್ವದಲ್ಲಿ

ನಂಬುಕೆ ಇದ್ದುದರಿಂದಲೇ ದೇವರಿಗೆ ಬೇಡಿಕೊಳ್ಳುತ್ತಿದ್ದ. ''ದೇವರೇ, ನಿನಗೆ ಇಚ್ಛೆಯಾದಲ್ಲಿ ನನ್ನನ್ನು ಕರೆದೊಯ್ಯು. ನಿನ್ನ ಇಚ್ಛೆ ಬಂದಂತೆ ನನಗೆ ಮಾಡು'' ಎಂದು.

ಪ್ಲಾಸಿಯ ಕಾಳಗದ ನಂತರ, ಮತ್ತು ವಿಜಯದ ನಂತರ, ರಾಲ್ಫನು ಸಿರಾಜನ ಅರಮನೆಯನ್ನು ಪ್ರವೇಶಿಸಿದನು ಮತ್ತು ಬಂಧನದಲ್ಲಿ ಇಡಲ್ಪಟ್ಟಿದ್ದ ಮಿಸೆಸ್ ಜುಲಿಯಾ ವ್ಹಾರ್ಟನ್ನಳನ್ನು ಬಿಡುಗಡೆಗೊಳಿಸಿದನು. ನವಾಬನ ಆರಕ್ಷಕರು ಅರಮನೆಯಲ್ಲಿ ಇನ್ನಿತರ ಹೆಣ್ಣು ಮಕ್ಕಳಿದ್ದು ಅವರು ಬ್ರಿಟಿಷ್ ಸೈನಿಕರಿಂಥ ಬಲಾತ್ಕಾರಕ್ಕೊಳಗಾಗ ಬಹುದೆಂದು ಅಂಜಿ ಕುಳಿತಿದ್ದಾರೆ ಎಂದು ಹೇಳಿದರು. ಆದರೆ ಬ್ರಿಟಿಷ ಸೈನಿಕರಲ್ಲೊಬ್ಬನಾದ ವಾಲ್ಶ ಎನ್ನುವವನು ಕಾವಲುಗಾರರಿಗೆ ಎಂದನು - ''ಅವರ ಗೌರವವೂ ನಮ್ಮ ಗೌರವ ಆಗಿದೆ. ಅವರು ನಮ್ಮ ಅಕ್ಕ-ತಂಗಿಯರು ಹಾಗೂ ತಾಯಂದಿರಿದ್ದಂತೆ''

ಇಂಥ ಸೌಜನ್ಯತೆಯ ವರ್ತನೆಯನ್ನು ಬ್ರಿಟಿಷರು ಹಾಗೂ ರಾಲ್ಫನಂಥ ವರು ಭಾರತೀಯ ಮಹಿಳೆಯರ ಬಗ್ಗೆ ತೋರಿದ್ದು ಅವರ ಶ್ರೇಷ್ಠ ನೈತಿಕ ಮಟ್ಟ ಹಾಗೂ ಸಂಸ್ಕೃತಿಯನ್ನು ತೋರಿಸಿ ಕೊಡುತ್ತದೆ.

ತರುಣನಾದ ರಾಲ್ಫನು ಬೇಗಂಳ ಅಪೂರ್ವ ಸೌಂದರ್ಯವನ್ನು ಕಂಡು ಬೆರಗಾದನು. ಸೌಂದರ್ಯವು ಪ್ರೇಮವನ್ನು ಬೇಗನೇ ಅಂಕುರಿಸಿ ಬಿಡುವದು. ಸೌಂದರ್ಯ ಹಾಗೂ ಪ್ರೇಮ ಇವು ತಮ್ಮ ಅದ್ಭುತವಾದ ಶಕ್ತಿಯಿಂದ ಜನರನ್ನು ಒಳ್ಳೆಯವರನ್ನಾಗಿಸಿ ಬಿಡುವವು. ಮತ್ತು ನಾಗರಿಕ ಸಮಾಜದಲ್ಲಿ ಪರಸ್ಪರರರನ್ನು ಒಂದುಗೂಡಿಸುವವು. ಬೇಗಂಳ ಸ್ವಭಾವವನ್ನು ಚೆನ್ನಾಗಿ ಬಲ್ಲ ಜ್ಯೂಲಿಯಾ ವ್ಹಾರ್ಟನ್ನಳು ಅವಳಲ್ಲಿಯ ಒಳ್ಳೆಯ ಗುಣಗಳನ್ನು ಕೊಂಡಾಡುತ್ತಾ, ರಾಲ್ಫನಿಗೆ ಹೇಳಿದಳು.

'' ಓ, ರಾಲ್ಫ, ನಾನು ಕ್ರಿಶ್ಚಿಯನ್ನಳಾಗಿ ನನ್ನವರಿಂದ ಕಲಿತದ್ದಕ್ಕಿಂತ ನಾನು ಇವಳಿಂದ ಹೆಚ್ಚಾಗಿ ಕಲಿತುಕೊಂಡಿರುವೆ. ಅವಳ ಧರ್ಮವೂ, ನಮ್ಮ ಧರ್ಮವೂ ದೇವರ ದಯೆ ಹಾಗೂ ಕರುಣೆಯ ಮೇಲೆಯೇ ನಿಂತುಕೊಂಡಿದೆ ಎಂಬುದನ್ನು ನಾನು ಅವಳಿಂದಲೇ ತಿಳಿದುಕೊಂಡೆ.'' ಜ್ಯೂಲಿಯಾವ್ಹಾರ್ಟನ್ನಳು ಆಗಾಗ್ಗೆ ರಾಲ್ಫನ ಮುಂದೆ - ''ಓ , ಅವಳೂ ನಮ್ಮಂತೇ ಕ್ರಿಶ್ಚಿಯನ್ ಆಗಿದ್ದರೆ, ಹಾಗೂ ನೀನು ಅವಳನ್ನು ಮದುವೆ ಆಗಿದ್ದರೆ ನೀನು ಬಹಳ ಸುಖಪಡುತ್ತಿದ್ದಿ.... ಅವಳು ಕ್ರಿಶ್ಚಿಯನ್ ಇದ್ದರೆ !...''

ರಾಲ್ಫ ತನ್ನ ನಿಜ ಪ್ರೇಮದಿಂದ ಬೇಗಂಳನ್ನು ಲಗ್ನವಾಗುವ ವಿಚಾರ ವ್ಯಕ್ತ ಪಡಿಸಿದ. ಕ್ಲೈವನಿಗೆ ಆ ವಿಷಯವನ್ನು ತಿಳಿಸಿದ. ರಾಲ್ಫನ ಉನ್ನತ ಸ್ಥಾನ-ಮಾನಗಳನ್ನು ಬಲ್ಲ ಕ್ಲೈವನು....

''ನಿನ್ನ ಸ್ಥಾನದಲ್ಲಿ ನಾನಿದ್ದಿದ್ದರೆ ನಾನೂ ಅದನ್ನೇ ಮಾಡುತ್ತಿದ್ದೆ. ಭಾರತಿಯ ಉಚ್ಚ ಮನೆತದನದ, ಸಿರಿವಂತ ಹೆಣ್ಣು ಮಗಳನ್ನು ಲಗ್ನವಾಗುವದರಲ್ಲಿ ಅಪಮಾನವೆಂಬುದೇನೂ ಇಲ್ಲ.''

ತಮ್ಮಲ್ಲಿ ಹಾಗೂ ಭಾರತೀಯರಲ್ಲಿ ಒಂದು ಹೊಸ ಸಂಬಂಧ ಉಂಟಾಗುವುದೆಂದು ಬಗೆದು ವಿವಾಹ ಮಾಡಿಕೊಂಡ. ಎರಡು ದೇಶಗಳು, ಎರಡು ಧರ್ಮಗಳು, ಎರಡು ಸಂಸ್ಕೃತಿ – ನಾಗರಿಕತೆಗಳು ಸಮ್ಮಿಲನಗೊಂಡವು. ಲಗ್ನವಾಗಿ ಇಪ್ಪತ್ತು ವರ್ಷಗಳ ಕಾಲ ಸುಖ ಶಾಂತಿಯಲ್ಲಿ ಇಬ್ಬರೂ ಬಾಳಿದರು. ಕೊನೆಗೆ ಬೇಗಂ ಮಡಿದಳು. ರಾಲ್ಫ ಬಹು ದುಃಖದಲ್ಲಿಯೂ ಏಕಾಂಗಿಯಾಗಿಯೂ ಆದ. ಆತ ದುಃಖದಿಂದಲೇ ಇಂಗ್ಲಂಡಿಗೆ ತೆರಳಿದ. ಇಂಗ್ಲೆಂಡದಲ್ಲಿ ಅವನಿಗೆ ' ನೈಟಹುಡ್' ದೊರೆಯಿತಲ್ಲದೆ ಜನರಲ್‌ಎಂಬ ಪದವಿಯಿಂದ ಗೌರವಿಸಲ್ಪಟ್ಟ, ಏಕೆಂದರೆ ತನ್ನ ದೇಶಕ್ಕಾಗಿ ತನ್ನ ದೇಶಪ್ರೇಮ ತೋರಿಸಿ ಮಹಾಕಾರ್ಯ ಮಾಡಿದ್ದ. ಅನೇಕರು ಅವನ ಮತ್ತೊಂದು ವಿವಾಹ ಮಾಡುವ ವಿಚಾರ ಮಾಡಿದರು. ಆದರೆ ಆತ ಅದಕ್ಕೆ ಒಪ್ಪಿಕೊಳ್ಳಲಿಲ್ಲ, "For eighteen years - a little, soft face rested here .... here on my breast, and nestled close to my heart. ... nand she died here peacecfully.... sleeping her life away.... " ಎಂದು ಭಾರವಾದ ಮನದಿಂದ ನುಡಿದ. ಭಾರತದಲ್ಲಿ ಬಾಳಿದ್ದರಿಂದ ಭಾರತದಲ್ಲಿರುವ ಏಕಪತ್ನಿವ್ರತವು ಅವನಿಗೆ ಸೇರಿದ್ದರಿಂದ ಆತ ಮತ್ತೊಂದು ಮದುವೆಗೆ ಸಿದ್ಧನಾಗಲಿಲ್ಲ. ಹೆಂಡತಿ ಮಡಿದರೂ ಅವಳ ಮೂರ್ತಿಯೊಂದನ್ನು ಮಾಡಿಸಿ ತನ್ನ ವೈಯಕ್ತಿಕ ಕೋಣೆಯಲ್ಲಿ ಅದನ್ನಿರಿಸಿಕೊಂಡು ಆಗಾಗ್ಗೆ ಅದನ್ನು ನೋಡುತ್ತಲಿದ್ದ. ಅದೆಂಥ ಅಮರ ಪ್ರೇಮ ಅವನದು ! ಅವರಿಬ್ಬರ ಪ್ರೇಮ ವಿವಾಹವು ಪೂರ್ವ ಪಶ್ಚಿಮಗಳ ಸಂಗಮದ ಸಂಕೇತವಾಗಿತ್ತು. ಎರಡು ಧರ್ಮ – ಸಂಸ್ಕೃತಿಗಳ ಮಿಲನವೂ ಆಗಿತ್ತು. ಹೆನ್ರಿ ಬ್ರೂಸನು ಇದರ ಮರ್ಮವನ್ನರಿಯದೆ ಅವರ ವಿವಾಹ 'hopeless' ಆಗಿತ್ತು ಎಂದಿದ್ದಾನೆ. ಆ ಮಾತು ಬೇರೆ. ಆದರೆ ಟೇಲರನ ಮನಸ್ಸು ಬುದ್ಧಿ ಅಂತರಂಗ ಏನನ್ನು ಬಯಸುತ್ತಿತ್ತು ಎಂಬುದಕ್ಕೆ ಸ್ಪಷ್ಟ ನಿದರ್ಶನ ಇದಾಗಿದೆ.

ಐತಿಹಾಸಿಕ ವ್ಯಕ್ತಿಯಾದ ಲಾರ್ಡ ಕ್ಲೈವನು ಚತುರ ರಾಜಕಾರಣಿಯಾಗಿ, ಸನ್ಮಿತ್ರನಾಗಿ, ಸಮರ್ಥ ಸೇನಾನಾಯಕನಾಗಿ, ಭವ್ಯ ಗೆಲುವಿನ ರೂವಾರಿಯಾಗಿ ಚಿತ್ರಿತನಾಗಿದ್ದಾನೆ. ಅವನ ಗೆಲುವು ಸಿರಾಜನ ಬರ್ಬರತೆಯ ಮೇಲೆ ಸಾಧಿಸಿದ ಗೆಲುವಾಗಿದೆ. ಚಿಕ್ಕ ಸೈನಿಕ ಪಡೆ ಹೊಂದಿ ಬಹುದೊಡ್ಡ ಸೈನ್ಯ ಸೋಲಿಸಿ ಸಾಮ್ರಾಜ್ಯ ಸಂಸ್ಥಾಪಿಸಿ ಮಾಡಿದ್ದು ಸಾಹಸದ ಮಾತಾಗಿದೆ. ಸಿರಾಜನ ತಂಗಿಯ ಗಂಡನಾದ ಮಿರ ಜಾಫರನನ್ನು ಪಡೆದುಕೊಂಡು ಹಸ್ತ ಲಾಘನ ಮಾಡಿ, ವಿಜಯ ಸಾಧಿಸಿದ್ದು ರಾಜಕೀಯ ಚಾಣಾಕ್ಷತನದ ಪ್ರದರ್ಶನವಾಗಿದೆ. "A poor son of a poor lawyer" ಆಗಿದ್ದರೂ ಸಹ ಆತ ಭಾರತಕ್ಕೆ ಬಂದು ಯುದ್ಧಗೆದ್ದು ಮಹಾನಾಯಕನಾದದ್ದು ಸುದೈವದ ಮಾತಾಗಿದೆ. ತನ್ನ ಐತಿಹಾಸಿಕ ಗೆಲುವಿನ ನಂತರಆತ ಮಾಡಿದ ಭಾಷಣ ಇಂತಿದೆ –

".....state after state, prince after prince, must disappear before us... before the might of England and her civilized power."

ರಾಲ್ಫನ ಸನ್ಮಿತ್ರನಾಗಿ, ಅನೇಕ ಸಂದರ್ಭಗಳಲ್ಲಿ ಆತನಿಗೆ ಸಹಾಯ ಮಾಡಿದ ; ವಿಶೇಷವಾಗಿ ಆತ ತನ್ನ ತಂದೆ ತಾಯಿಗಳು ಧಾರ್ಮಿಕವಾಗಿ ಮಾಡಿಕೊಂಡ ವಿವಾಹದ ಕಾಗದ ಪತ್ರ ಹುಡುಕಾಡುತ್ತಿದ್ದ. ರಾಲ್ಫನ ಹೆಂಡತಿ – ಬೇಗಂಳು ಕೊಟ್ಟ ಕೆಲವು ಕಾಣಿಕೆಗಳನ್ನು ಪ್ರೀತಿಯಿಂದ ಕೊಟ್ಟದ್ದನ್ನು, ತನ್ನೊಡನೆ ತನ್ನ ದೇಶಕ್ಕೆ ಒಯ್ದ. ಅಷ್ಟೇ ಅಲ್ಲದೇ ಇಂಗ್ಲಂಡಿನಲ್ಲಿ ತನ್ನ ಜನರಿಗೆ '' ನಾನು ಭಾರತದಲ್ಲಿ ಕಂಡ ಅತಿ ಸುಂದರ ಹಾಗೂ ಪ್ರೀತಿಯ ಹೆಣ್ಣುಮಗಳೊಬ್ಬಳು ಕೊಟ್ಟ ಕಾಣಿಕೆಗಳು ಇವು'' ಎಂದು ತೋರಿಸಿದ.

ಈ ರೀತಿ ಕ್ಲೈವನು 'one of the finest fellows that ever served the king' ಎಂತಲೂ ಮತ್ತುಇಂಗ್ಲೆಂಡದಿಂದ ಬಂದ, ನಾಗರಿಕತೆ ತಂದ ಶಕ್ತಿ ಎಂತಲೂ ಭಾರತವನ್ನು ಮೆಚ್ಚಿಕೊಂಡವನೆಂತಲೂ ಚಿತ್ರತನಾಗಿದ್ದಾನೆ.

ಹೆನ್ರಿ ವ್ಹಾರ್ಟನ್ ಹಾಗೂ ಜ್ಯೂಲಿಯಾ ವ್ಹಾರ್ಟನ್ನರು ಭಾರತಕ್ಕೆ ಮೊದ ಮೊದಲಿಗೆ ಬಂದು ನೆಲೆಸಿದಂಥ ವ್ಯಕ್ತಿತ್ವಗಳ ಪ್ರತೀಕವಾಗಿ ಚಿತ್ರಿಸಲ್ಪಟ್ಟಿದ್ದಾರೆ. ಹೆ.ನ್ರಿ ವ್ಹಾರ್ಟನ್‌ನು ಭಾರತಕ್ಕೆ ಬಂದು ಇಲ್ಲಿಯ ಮುಸ್ಲಿಂ ಮಹಿಳೆಯೊಬ್ಬಳನ್ನು ಲಗ್ನವಾಗಿದ್ದನು. ಅಲ್ಲದೆ ಮಕ್ಕಳೂ ಆಗಿದ್ದವು. ಈ ವಿವಾಹವು ಪೂರ್ವ ಮತ್ತು ಪಶ್ಚಿಮದೇಶಗಳನ್ನು ಒಂದುಗೂಡಿಸಿತ್ತು. ಜ್ಯೂಲಿಯಾ ಭಾರತಕ್ಕೆ ಬಂದಾದ ಮೇಲೆ ತನ್ನ ಮೊದಲಿನ ಹೆಂಡತಿಯ ಮಕ್ಕಳಿಗೆ ಅಪಾರ ಹಣವನ್ನಿತ್ತು ಅವಳನ್ನು ಲಗ್ನವಾದ. ಹೆನ್ರಿ ವ್ಹಾರ್ಟನ್ನನ ಪಾತ್ರವು ರಾಲ್ಫನಿಗೆ ತದ್ವಿರುದ್ಧವಾಗಿದೆ. ಏಕೆಂದರೆ ರಾಲ್ಫನು ಮದುವೆಯಾದ ಮೇಲೆ ಬೇಗಂಳನ್ನು ಎಂದಿಗೂ ಬಿಡಲಿಲ್ಲಿ, ಜ್ಯೂಲಿಯಾ ಹಾಗೂ ಹೆನ್ರಿ ಇಬ್ಬರೂ ರಾಲ್ಫನು ಅವರೆಡೆಗೆ ಬಂದಾಗ ಅವನನ್ನು ಕೇವಲ ಅತಿಥಿಯೆಂದು ಬಗೆಯದೆ ತಮ್ಮನೆಂದು ಬಗೆದರು. ಅವರಿಬ್ಬರೂ ರಾಲ್ಫನನ್ನು ಬಹಳಷ್ಟು ಆತ್ಮೀಯವಾಗಿ ಕಂಡರು. ಅಂಥದೇ ಪ್ರೇಮ, ಗೌರವ ಭಾವನೆಗಳನ್ನು ರಾಲ್ಫ ಅವರ ಬಗ್ಗೆ ತಳೆದಿದ್ದ. ಇಷ್ಟೇ ಅಲ್ಲದೆ ಜ್ಯೂಲಿಯಾ ವ್ಹಾರ್ಟನ್ನಳು 'ಬ್ಲ್ಯಾಕ್ ಹೋಲ'ದಲ್ಲಿ ಸಿಕ್ಕು ಒದ್ದಾಡುತ್ತಿದ್ದಾಗ ರಕ್ಷಿಸಿದ.

ಸಿರಾಜ್ ಉದ್ದೌಲನ ಸೆರೆಯಾಳಾಗಿ ಜ್ಯೂಲಿಯಾ ವ್ಹಾರ್ಟನ್ ಸಿಕ್ಕಾಗ ಆತ ನಿನಗೆ ಎಲ್ಲಾ ಸಂಪತ್ತು ಹಾಗೂ ದನ ದೌಲತ್ತು ಕೊಡುವೆ, ಲಗ್ನವಾಗು ಎಂದು ಆಮಿಷ ತೋರಿದಾಗ ಅವಳು ಅದಕ್ಕೆ ವಶವಾಗಲಿಲ್ಲ, ಅವಳು ಎಲ್ಲ ಬಗೆಯ ಬೇಕು ಬೇಡಿಕೆಗಳಿಗೆ ಮನಸೋಲಲಿಲ್ಲ, ಬೇಗಂಳ ಜೊತೆಗೆ ಅವಳನ್ನೂ ಕೈದಿಯಾಗಿ ಬಂಧನ ದಲ್ಲಿಟ್ಟಾಗ ಅವಳ ಸಹವಾಸದಲ್ಲಿ ಜ್ಞಾನ, ಆನಂದ ಪಡೆದುಕೊಂಡಳು. ಅವರಲ್ಲಿದ್ದ

ಪರಸ್ಪರ ಪ್ರೀತಿ, ಆದರ, ಅಭಿಮಾನಗಳು, ಅಕ್ಕ ತಂಗಿಯರಂತೆ ಬಾಳಿದ್ದು - ಎಲ್ಲವೂ ಪೂರ್ವ ಪಶ್ಚಿಮಗಳ ಭಾವನಾತ್ಮಕ ಹೊಂದಾಣಿಕೆಯ, ಐಕ್ಯತೆಯ ಸಂಕೇತವಾಗಿತ್ತು.

ಬೇಗಂಳ ಮುಖಾಂತರ ಭಾರತೀಯ ಮಹಿಳೆಯರ ಬಗ್ಗೆ ಅಪಾರ ಗೌರವ ತಾಳಿದ ಜ್ಯುಲಿಯಾ ಬೇಗಂಳ ವಿವಾಹವನ್ನು ರಾಲ್ಫನ ಜೊತೆಗೆ ಮಾಡುವಲ್ಲಿ ಮಹತ್ವದ ಪಾತ್ರವನ್ನಾಡಿದಳು. ತನ್ನ ದೇಶದ ಜನರನ್ನು ಕೊಂಡಾಡಿ...

''ನಮ್ಮ ಜನರನ್ನು ನೋಡು, ಎಷ್ಟೊಂದು ಸುಂದರ ಹಾಗೂ ಪರಾಕ್ರಮಿಗಳಿದ್ದಾರೆ. ನೀನು ಅವರನ್ನು ಪ್ರೀತಿಸಬಯಸುವೆ'' ಎಂದು ಅಂದಳು.

ಈ ರೀತಿಯಾಗಿ ಅವಳು ಪೂರ್ವ ಹಾಗೂ ಪಶ್ಚಿಮ ದೇಶಗಳನ್ನು ಜೋಡಿಸುವ ಕೊಂಡಿಯಂತೆ ಕಾರ್ಯ ಮಾಡಿದಳು.

ಇನ್ನು ಮುಸ್ಲಿಂ ಪಾತ್ರಗಳಲ್ಲಿ ಸಿರಾಜ ಉದ್ದೌಲನು ಒಬ್ಬ 'coward, a profligate, and a traitor' ಎಂದು ಚಿತ್ರಿಸಿದ್ದಾನೆ. ಬ್ರಿಟಿಷರನ್ನು ಸಂಪೂರ್ಣ ವಾಗಿ ಹತ್ತಿಕ್ಕಿ ಭಾರತದಿಂದ ಹೊರದಬ್ಬುವ ಆಶೆ ಹೊಂದಿದವನಾಗಿದ್ದಾನೆ. ಬ್ರಿಟಿಷರು ತನಗೆ ಯೋಗ್ಯ ರೀತಿಯಲ್ಲಿ ಕಪ್ಪು -ಕಾಣಿಕೆಗಳನ್ನು ಸಲ್ಲಿಸಿ ಗೌರವಿಸಲಿಲ್ಲ ಎಂಬ ಮುಖ್ಯ ಕಾರಣಕ್ಕಾಗಿ ಅವರೊಡನೆ ಹೋರಾಡಿದ. ಆದರೆ ಅವನಲ್ಲಿ ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬ ಸಾಮಾನ್ಯಜ್ಞಾನ ಇರಲಿಲ್ಲ. ಜ್ಯೋತಿಷ್ಯ,. ಭವಿಷ್ಯ ಹೇಳುವ ದರವೇಶನ ಮೇಲೆ ವಿಶ್ವಾಸ ಇಟ್ಟು ಸಾಗಿದ. ಪರಕೀಯರಾದ ಫ್ರೆಂಚರು, ಆಂಗ್ಲರು, ಪರಸ್ಪರರಲ್ಲಿ ಹೋರಾಟ ನಡೆಸಿದ್ದರು. ಆದರೆ ಅದನ್ನು ಹತ್ತಿಕ್ಕುವಷ್ಟು ಗಮನ ಹರಿಸಲಿಲ್ಲ. ಏಕೆಂದರೆ ಅವನಲ್ಲಿ ಅಷ್ಟು ಧೈರ್ಯವಾಗಲಿ, ಸಾಮರ್ಥ್ಯವಾಗಲಿ , ಜ್ಞಾನವಾಗಲಿ , ಬುದ್ಧಿಶಕ್ತಿಗಳಾಗಲಿ ಇರಲೇ ಇಲ್ಲ.

ಸಿರಾಜನ ದೌರ್ಜನ್ಯಕ್ಕೆ ಮಿತಿಯೇ ಇರಲಿಲ್ಲ, ಅದನ್ನು ಆತ ಬ್ರಿಟಿಷ ಕೈದಿಗಳಿಗೆ ವಿಧಿಸಿದ ಶಿಕ್ಷೆಯಲ್ಲಿ ನೋಡಬಹುದು. ಸೋಝುನ್ ಎಂಬ ನರ್ತಕಿಯ ಹುರುಪಿನ ಅಸ್ತಿತ್ವದಲ್ಲಿ ತನ್ನ ಸೈನಿಕರಿಗೆ ಕಾಸಿಂ ಬಝಾರದಲ್ಲಿಯ ಇಂಗ್ಲಿಷ್ ಫ್ಯಾಕ್ಟರಿಯ ಮೇಲೆ ದಾಳಿ ಮಾಡಲು ಆಜ್ಞಾಪಿಸಿದ. ಅವರನ್ನು ಅನೇಕರು ಬಂಧಿಸಿ ತಂದಾಗ ಅವರಲ್ಲಿಯ ಒಂದು ನೂರಾ ನಲ್ವತ್ತೈದು ಜನರನ್ನು ಕೇವಲ ಹದಿನೆಂಟುಫೂಟು ಉದ್ದಗಲವುಳ್ಳ ಕೋಣೆಯಲ್ಲಿ ತುರುಕಿದ. ಒಂದು ಡಬ್ಬಿಯಂತಿದ್ದ ಕೋಣೆಯಲ್ಲಿ ಅವರನ್ನು ತುರುಕಿದಾಗ ಒಬ್ಬರ ಮೇಲೊಬ್ಬರು ಬಿದ್ದು ಕೆಳಗೆ ಸಿಕ್ಕು, ಉಸಿರುಗಟ್ಟಿ ಸತ್ತರು. ತಮ್ಮ ಅಣ್ಣ ತಮ್ಮಂದಿರನ್ನು ಅಕ್ಕ ತಂಗಿಯರನ್ನು ತಾವೇ ಕೊಂದು ಹಾಕಿದಂತೆ ಅವರಿಗೆ ಅನಿಸಿತು. ಉಸಿರಾಡಲು ಹವೆ, ಕುಡಿಯಲು ನೀರು ಸಿಗದೆ ಅನೇಕರು 'Air water' ಎಂದು ಕೂಗುತ್ತಾ ಪ್ರಾಣ ಬಿಟ್ಟರು. ಈ ಘಟನೆ ಸಿರಾಜನು ಎಷ್ಟೊಂದು ಕ್ರೂರನಾಗಿದ್ದ ಎಂಬುದನ್ನು ತೋರಿಸುತ್ತದೆ. ಬ್ರಿಟಿಷ ಕೈದಿಗಳನ್ನು ಎಷ್ಟೊಂದು ಅವಮಾನವೀಯತೆಯಿಂದ ಶಿಕ್ಷಿಸಿದ ಎಂಬುದಕ್ಕೆ ನಿದರ್ಶನವಾಗಿದೆ.

ಮಹಿಳೆಯರೊಡನೆ ವರ್ತಿಸುವಲ್ಲಿಯೂ ಸಿರಾಜ ದೌರ್ಜನ್ಯ ತೋರಿದ. ತನ್ನ ತಾಯಿಗೆ ಯಾವ ಗೌರವವನ್ನೂ ಕೊಡಲಿಲ್ಲ. ಅವರು ತಿಳಿಹೇಳಿದ ಉಪೇದಶವನ್ನು ಲೆಕ್ಕಿಸಲಿಲ್ಲ. ತನ್ನ ಸುಂದರ, ತರುಣ ಹೆಂಡತಿಯನ್ನೇ ಬಂಧನದಲ್ಲಿಟ್ಟ, ಸೋಝುನ್ನಳ ಮಾತಿಗೆ ಮಾರು ಹೋಗಿ ಬ್ಲ್ಯಾಕಹೋಲದಲ್ಲಿ ಸಿಕ್ಕುಬಿದ್ದ ಜ್ಯುಲಿಯಾಳನ್ನು ಹೊರಗೆ ತೆಗೆದ. ಅವಳನ್ನು ಮತಾಂತರಗೊಳಿಸಿ ಲಗ್ನವಾಗ ಬಯಸಿದ. ಆದರೆ ಯಾವಾಗ 'an English womam would not be the wife of the Emperor of Delhi ' ಎಂದು ಗೊತ್ತಾಯಿಯೋ ಆಗ ಲಗ್ನವಾಗುವ ವಿಚಾರ ಬಿಟ್ಟುಕೊಟ್ಟ. ಅದೆಂಥ ಕಾಮುಕ ಅವನಾಗಿದ್ದ ಎಂಬುದು ಗೊತ್ತಾಗುವದು. ಮುಸ್ಲಿಂ ಸೈನಿಕರು ಬ್ರಿಟಿಷರ ಕೈಗೆ ಸಿಕ್ಕುಸತ್ತಾಗ ಸಿಂಹದಂತೆ ಗರ್ಜಿಸಿ ತನ್ನ ರೋಷ ವ್ಯಕ್ತಪಡಿಸಿದ. ಅವನ ಈ ಮೊದಲಿನ ವಿಜಯಕ ಸೋಝುನ್ನಳೆ ಕಾರಣಳಾಗಿದ್ದಳು ಆದರೆ ಮುಂದೆ ಅವಳನ್ನೇ ಬಂಧನದಲ್ಲಿರಿಸಿದ. ಬಂಧನದಿಂದ ಬಿಡುಗಡೆ ಹೊಂದಿದ ಬಳಿಕ ಅವಳು ಒಬ್ಬ ಫಕೀರನಿ ಆಗಿ ಊರು ಬಿಟ್ಟು ಹೋದಳು.

ಕ್ರೌರ್ಯವನ್ನು ಹೇಡಿತನವನ್ನೂ ತೋರಿದ ಸಿರಾಜನ ಸೈನ್ಯವು ಅವನನ್ನು ತ್ಯಜಿಸುತ್ತ ನಡೆಯಿತು. ಹೀಗಾಗಿ ಆತ ಅಧಿಕಾರ, ನಿಯಂತ್ರಣ ಆಸೆ ಎಲ್ಲವನ್ನೂ ಕಳೆದುಕೊಂಡ. ಇದಕ್ಕಿಂತ ದೊಡ್ಡ ತಪ್ಪೆಂದರೆ ಸುರಾಪಾನದಲ್ಲಿ ಮಗ್ನನಾಗತೊಡಗಿದ. ಅವನ ವಿಚಿತ್ರ ವರ್ತನೆ, ಭಾವೋದ್ರೇಕ ಎಲ್ಲರಿಗೂ ಬೇಸರ ಉಂಟು ಮಾಡಹತ್ತಿತು.

ಬಹುದೊಡ್ಡ ಸೈನ್ಯವಿದ್ದರೂ ಪ್ಲಾಸಿ ಕಾಳಗದಲ್ಲಿ ಸೋತು ಬಿಟ್ಟ, ಯುದ್ಧ ಭೂಮಿಯಿಂದ ಪ್ರಾಣ ಉಳಿಸಿಕೊಳ್ಳಲು ಪಯಾಯನ ಮಾಡಬೇಕಾಯಿತು. ಆದರೆ ಸಿಕ್ಕು, ಘೋರ ಅಮಾನ ಅನುಭವಿಸಬೇಕಾಯಿತು. ಯಾವ ದರವೇಶನ ಕಿವಿಗಳನ್ನು ಕತ್ತರಿಸಲು ಆಜ್ಞಾಪಿಸಿದ್ದನೋ ಆ ದರವೇಶನೇ ಇವನನ್ನು ಎಳೆದಾಡಿ ಕೊಂದು ಹಾಕಿದ.

ಸಿರಾಜ ಉದ್ದೌಲನ ಸೋಲು ಹಾಗೂ ಸಾವು ಎರಡೂ ಭಾರತದಲ್ಲಿಯ ದರ್ಪ ದೌರ್ಜನ್ಯದ ಆಳ್ವಿಕೆಯ ಮುಕ್ತಾಯವನ್ನು ಸೂಚಿಸುತ್ತವೆ. ಸಿರಾಜನ ಕ್ರೌರ್ಯ, ಅನೈತಿಕತೆಗೆ ಯಾವ ಭಾರತೀಯರು ರೋಸಿ ಹೋಗಿದ್ದರೋ, ಜಿಗುಪ್ಸೆ ಗೊಂಡಿದ್ದರೋ ಅವರೆಲ್ಲ ಬ್ರಿಟಿಷರಿಗೆ ಹೂವು - ಹಾಲನ್ನಿತ್ತು ಸ್ವಾಗತಿಸಿದರು. ಫಿರಂಗಿಗಳಿಗೆ ಜಯ ಘೋಷ ಮಾಡಿದರು.

ಅಪಘಾನ 'ಡಾನ್ಸಿಂಗ ಗರ್ಲ' ಆದ ಸೋಝುನ್ನಳು ಕೇವಲ ಕಾಲ್ಪನಿಕವಾಗಿದ್ದು ಅವಳಲ್ಲಿ ಅಸಾಮಾನ್ಯ ಬಲ ಆಕರ್ಷಕ ಸೌಂದರ್ಯ ಹಾಗೂ ಮಧುರ ಧ್ವನಿ ಸಮ್ಮಿಳಿತವಾಗಿದ್ದವು. ಸಿರಾಜನ ತಂದೆಯಾದ ಅಲಿವರ್ದಿಖಾನನು ಅವಳನ್ನು ಖರೀದಿಸಿ ತಂದು, ವೈಭವದ ಎಲ್ಲ ಪ್ರಸಂಗಗಳಲ್ಲಿ ಅವಳಿಗೆ ಹಾಡಲು, ನರ್ತಿಸಲು ಹಚ್ಚುತ್ತಿದ್ದ. ಅವಳಿರದಿದ್ದರೆ ದರ್ಬಾರವೇ ಪರಿಪೂರ್ಣಗೊಂಡಂತೆ ಆಗುತ್ತಿರಲಿಲ್ಲ. ತಂದೆಯ ನಿಧನದ ತರುವಾಯ ಅವಳು ಸಿರಾಜನ ನರ್ತಕಿಯಾದಳು.

ಅವಳು ಸಾಕಷ್ಟು ಬಲಿಷ್ಠಳಾಗಿದ್ದು, ಸೈನ್ಯದ ಮುಖಂಡತ್ವವಹಿಸಿ, ಎಲ್ಲರನ್ನು ಹುರಿದುಂಬಿಸಿ ಪ್ರೋತ್ಸಾಹಿಸಿ, ಕಲ್ಕತ್ತಾದಲ್ಲಿಯ ಇಂಗ್ಲಿಷ್ ಫ್ಯಾಕ್ಟರಿಯ ಮೇಲೆ ದಾಳಿ ಮಾಡಿ ಸಿರಾಜನಿಗೆ ವಿಜಯವನ್ನು ತಂದುಕೊಟ್ಟಳು.

ರಾಲ್ಫ ಡಾರ್ನೆಲ್‌ನ ಪರಿಚಯವಾದಾಗಿನಿಂದ ಆತನನ್ನು ಅಣ್ಣನೆಂದು ಬಗೆದು ತಂಗಿಯಂತೆ ವರ್ತಿಸಿದಳು. ಇಬ್ಬರು ತೀರ ಭಿನ್ನ ಅಪರಿಚಿತ ವ್ಯಕ್ತಿಗಳಲ್ಲಿ, ಬಾಂಧವ್ಯ ಉಂಟಾದುದು ಭಾರತೀಯ ಸಂಸ್ಕೃತಿಯಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿತು.

ಸೋಝುನ್ನಳಿಗೆ ಸಿರಾಜ ಉದ್ದೌಲನ ಸ್ವಭಾವ ಚೆನ್ನಾಗಿ ತಿಳಿದಿತ್ತು. ಆತ ಅವಳನ್ನು ಲಗ್ನವಾಗಿ ರಾಣಿಯನ್ನು ಮಾಡಿಕೊಳ್ಳಬಯಸಿದಾಗ ಅವಳು ಒಪ್ಪದೆ ನರ್ತಕಿಯಾಗಿ ಬಾಳಲು ಬಯಸಿದಳು. ಅವನ ಬಗ್ಗೆ ಕರುಣೆ, ಅನುಕಂಪ ಹೊಂದಿದ್ದ ಅವಳು ತನ್ನ ಮಧುರಗಾನದಿಂದ ಮಾನಸಿಕ ಕಷ್ಟ ನಿವಾರಿಸಿ ಸಂತಸ ನೀಡಲು ಬಯಸುತ್ತಿದ್ದಳು.

ಬ್ಲ್ಯಾಕ್ ಹೋಲದಲ್ಲಿ ಸಿಕ್ಕು ಸಾಯುವ ಸ್ಥಿತಿಗೆ ಜ್ಯುಲಿಯಾ ವ್ಹಾರ್ಟನ್ ಬಂದಾಗ ಅವಳನ್ನು ಘೋರ ಸಂಕಟದಿಂದ ಪಾರು ಮಾಡಿಸಿ ಹೊರ ತಂದಳು. ಸಿರಾಜನು ಅವಳ ಮಾನಹರಣ ಮಾಡಬಹುದೆಂದೂ ಅವಳಿಗೆ ಅನಿಸಿತ್ತು. ಅವಳನ್ನು ಬ್ಲ್ಯಾಕ್ ಹೋಲದಿಂದ ಹೊರಗೆ ತರುವಾಗ ಅವರಿಬ್ಬರೂ ಸಿರಾಜು ಉದ್ದೌಲನ ಕೈಯಲ್ಲಿ ಸಿಕ್ಕು ಬಿದ್ದರು. ಅದಕ್ಕಾಗಿ ಆತ ತನ್ನ ಹೆಂಡತಿಯಾದ ನೂರ- ಉಲ್-ನಿಸ್ಸಾಳ ಜೊತೆಗೆ ಅವರಿಬ್ಬರನ್ನೂ ಬಂದಿಖಾನೆಯಲ್ಲಿರಿಸಿದ.

ತನ್ನನ್ನು ಬಂಧನದಲ್ಲಿಟ್ಟರೂ ಸಹ ಸೋಝುನ್ನಳು ಸಿರಾಜನಿಗೆ ಪ್ರಾಮಾಣಿಕತೆ ಹಾಗೂ ಸ್ವಾಮಿನಿಷ್ಠೆಯನ್ನು ತೋರಿದಳು. ತಾನು ಹಾಗೆ ಮಾಡಿದ್ದು ತಪ್ಪಾಯಿತೆಂದು ಸಿರಾಜನಿಗೆ ತಿಳಿದು ಬರಲು ಅವಳನ್ನು ಬಂಧ ಮುಕ್ತಳನ್ನಾಗಿ ಮಾಡಿದ. ಆ ಬಳಿಕ ಅವಳು ಫಕೀರನಿಯಾಗಿ ಬಿಟ್ಟಳು. ಸಿರಾಜನು ಯುದ್ಧದಲ್ಲಿ ಸೋತಾಗ ಅವನಿಗೆ ಓಡಿಹೋಗಿ ಪಾರಾಗಲು ಹೇಳಿದಳಲ್ಲದೆ, ಪ್ಲಾಸಿ ಯುದ್ಧ ಮುಗಿದು ಸಿರಾಜ ಸಾಯುವವರೆಗೂ ಅವನ ಜೊತೆಯಲ್ಲಿ ಇದ್ದಳು. ಆತನ ಏರಿಕೆಯ ಕಾಲದಲ್ಲಿ, ಹಾಗೂ ಅವಸಾನದ ಕಾಲದಲ್ಲಿ ಅವನ ಜೊತೆಗೇ ಇದ್ದು ಅವನ ಸುಖದುಃಖದಲ್ಲಿ ಭಾಗಿಯಾಗಿದ್ದಳು.

ರಾಲ್ಫ ಹಾಗೂ ಬೇಗಂಳ ವಿವಾಹವಾಗುವದರಲ್ಲಿ ಅವಳು ಅತೀ ಮಹತ್ವದ ಕೆಲಸವನ್ನು ಮಾಡಿದಳು. ರಾಲ್ಫನಲ್ಲಿರುವ ಪರಾಕ್ರಮ, ಕರುಣೆ, ಕರ್ತವ್ಯ ಪ್ರಜ್ಞೆಗಳನ್ನು ಮೆಚ್ಚಿಕೊಂಡು ನೂರ-ಉಲ್-ನಿಸ್ಸಾಳಿಗೆ ಅವನೊಡನೆ ಸತ್ಯವಂತಳಾಗಿ ಬಾಳಲು ಉಪದೇಶಿಸದಳು.

'Be true and faithful, O sister, as he will be. Never leave him' ಎಂದೂ ಹೇಳಿದಳು

ಫಕೀರನಿಯಾಗಿ ಅವರಿಬ್ಬರಿಗೂಆಶೀರ್ವಾದ ಮಾಡಿ ಎಲ್ಲಿಗೋ ಹೋದಳು. ಈ ರೀತಿಯಾಗಿ ಅವಳು ಎರಡು ಧರ್ಮ ಹಾಗೂ ಸಂಸ್ಕೃತಿಗಳಲ್ಲಿ ಬೆಸಿಗೆ ಹಾಕುವ ಕಾರ್ಯ ಮಾಡಿದಳು.

ಈ ಕಾದಂಬರಿಯಲ್ಲಿ ನೂರ್ -ಉಲ್ -ನಿಸ್ಸಾಳು ಮೌನವಾಗಿ ಕಷ್ಟ ಸಹಿಸಿ ಬಾಳುವ ವ್ಯಕ್ತಿಯಾಗಿದ್ದು, ಭಾರತದಲ್ಲಿಯ ಮುಸ್ಲಿಂ ಮಹಿಳೆಯ ಪ್ರತೀಕವಾಗಿದ್ದಾಳೆ. ತನ್ನ ಧರ್ಮ -ಸಂಸ್ಕೃತಿ ಬದಿಗೊತ್ತಿ ಅವಳು ಕ್ರಿಶ್ಚಿಯನನ್ನು ಮದುವೆ ಆಗುತ್ತಾಳೆ. ಸುಶಿಕ್ಷತಳಾದ ಅವಳು ತನ್ನ ಸದ್ಗುಣಗಳನ್ನು ಇತರರಿಗೂ ಹಂಚಿಕೊಡುತ್ತಾಳೆ. ತನ್ನ ಗಂಡನೇ ತನಗೆ ಸಾಕಷ್ಟು ತೊಂದರೆ ಕೊಟ್ಟು ಬಂಧನದಲ್ಲಿರಿಸಿದಾಗಲೂ ಅವಳು ಧೃತಿಗೆಡಲಿಲ್ಲ, ಮಾನಸಿಕ ಸಮತೋಲ ಕಳೆದುಕೊಳ್ಳಲಿಲ್ಲ. ಯುದ್ಧದ ನಂತರ ಬಂಧನದಿಂದ ಮುಕ್ತಳಾದ ಅವಳು ರಾಲ್ಫನನ್ನು ಮದುವೆಯಾದಳು. ಯಾಕೆಂದರೆ ಅವನುಅವಳ ಮುಗ್ಧ ಸ್ವಭಾವ, ಶಾಂತಮನೋಭಾವ ಮತ್ತು ಕಷ್ಟ ಸಹಿಷ್ಣುತೆಗಳನ್ನು ಯಾವವು ಕೇವಲ ಸುಸಂಸ್ಕೃತ ಮಹಿಳೆಯಲ್ಲಿ ಇರುವವ್ರೋ ಅವುಗಳನ್ನು ಮೆಚ್ಚಿಕೊಂಡಿದ್ದನು.

ರಾಲ್ಫನ ಹೆಂಡತಿಯಾದ ಬಳಿಕ ಅವಳ ದೃಷ್ಟಿಕೋನ ಮತ್ತಷ್ಟು ವಿಶಾಲವಾಯಿತು. ಅವಳ ಚೈತನ್ಯ ಮತ್ತಷ್ಟು ಬಲಿಷ್ಠವಾಯಿತು. ಆಂಗ್ಲ ಸಂಸ್ಕೃತಿಯಿಂದ ಅವಳು ಹೆಚ್ಚು ಜ್ಞಾನಿ ಹಾಗೂ ಉನ್ನತ ಮಟ್ಟದವಳಾದಳೆಂದು ಬಗೆದಳು. ಕ್ರಿಶ್ಚಿಯನ್ನನನ್ನು ಏಕೆ ಮದುವೆಯಾದಳೋ ಎಂದು ಮೊದಮೊದಲು ಮೂದಲಿಸಿದವರೆಲ್ಲ ನಂತರದಲ್ಲಿ ಅವಳನ್ನು ಹೊಗಳಿದರು. ಪ್ರೇಮ, ವಿನಯ, ಸೌಜನ್ಯತೆಯಿಂದ ಅವಳು ತಾನು ಕಳೆದುಕೊಂಡ ಮಾನ- ಮರ್ಯಾದೆಯನ್ನು ಪುನಃ ಪಡೆದುಕೊಂಡಳು. ರಾಲ್ಫನೊಂದಿಗೆ ಕೆಲವೊಮ್ಮೆ ಯುದ್ಧ ಭೂಮಿಗೂ ಹೋಗುತ್ತಿದ್ದಳು.

ಅವಳ ಎಲ್ಲ ಸದ್ಗುಣಗಳನ್ನು ಮೆಚ್ಚಿಕೊಂಡವರು ಅವಳಿಗೆ 'ತಾಯಿ' (Mother) ಎಂದು ಕರೆಯ ಹತ್ತಿದರು. ಅವಳ ಗುಣಗಾನ ಮಾಡಿ ಹಾಡು ಹಾಡಿದರು. ಶ್ರೇಷ್ಠ ಮಾನವತೆಯನ್ನು ಹೊಂದಿದ ಅವಳು ಮುಸ್ಲಿಂ ಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಯಾಗಿದ್ದಳು.

ಸಿರಾಜ ಉದ್ದೌಲನ ತಾಯಿ ಅಷ್ಟೊಂದು ಪ್ರಮುಖ ಪಾತ್ರವಾಗಿಲ್ಲ, ಅವಳು ಪ್ರೀತಿ, ದಯೆ ಉಳ್ಳವಳಾಗಿದ್ದಳು. ಅವಳು ಮಗನಾದ ಸಿರಾಜನಿಗೆ ಬ್ರಿಟಿಷರನ್ನು 'ದ್ವೇಷಮಾಡಬೇಡ 'ಎಂದು ಉಪದೇಶಿಸುತ್ತಿದ್ದಳು. ಅಷ್ಟೇ ಅಲ್ಲದೆ ಬಂಗಾಲದಲ್ಲಿ ಅವರು ವ್ಯಾಪಾರ ಮಾಡಿಕೊಂಡಿರುತ್ತಿದ್ದರೆ ಇರಲಿ ಬಿಡು ಎಂದೆನ್ನುತ್ತಿದ್ದಳು. ಆದರೆ ಸಿರಾಜ ಅದೆಲ್ಲವನ್ನೂ ನಿರ್ಲಕ್ಷಿಸಿದ. ಅವಳು ಶಾಂತಿ-ಸಂಧಾನ ಕಾರ್ಯ ಮಾಡಲು ಬಯಸಿ ವಿಫಲಳಾದಳು.

ತನ್ನ ಮಗನಿಗೆ ಬೋಧಿಸಿದಂತೆ ಸೊಸೆಯಾದ ನೂರ-ಉಲ್-ನಿಸ್ಸಾಳಿಗೂ ಮನಃಪೂರ್ವಕವಾಗಿ ಬೋಧಿಸುತ್ತಿದ್ದಳು. ಮಗನು ಮಡಿದ ನಂತರ ರಾಲ್ಫನನ್ನು ಮದುವೆಯಾಗೆಂದು ಹೇಳಿದಳು. ರಾಲ್ಫನ ಗುಣಗಾನ ಮಾಡುತ್ತ ಎಲ್ಲ ಬ್ರಿಟಿಷರನ್ನು ಹೊಗಳಿದಳು.

''ಇನ್ನು ನಮ್ಮವರಲ್ಲಿ ಯಾರು ನಿನ್ನನ್ನು ಮದುವೆ ಆಗುವರು ? ನೀನು ಸಾಯುವವರೆಗೂ ಆತ ಅತ್ಯಂತ ವಿಶ್ವಾಸಿಕನಾಗಿ,ಸತ್ಯವಂತನಾಗಿ ಇರುವನು. ಇಂಗ್ಲಿಷರು ನಮ್ಮಂತೆ ಸುಳ್ಳಿನ ಹಾಗೂ ದ್ರೋಹ ಬಗೆಯುವ ಜನರಲ್ಲ.''

ಅವಳಲ್ಲಿದ್ದ ನಿರ್ಣಯ ಮಾಡುವಶಕ್ತಿ, ವ್ಯವಹಾರ ಜ್ಞಾನ ಮನಃಪೂರ್ವಕತೆ, ಶಾಂತಿ – ಪ್ರಿಯತೆ ಮೊದಲಾದ ಗುಣಗಳು ಅವಳನ್ನು ಸುಸಂಸ್ಕೃತ ನಾಗರಿಕ ಸಮಾಜದ ಮಹಿಳೆಯೆಂದು ತೋರಿಸಿ ಕೊಡುತ್ತದೆ. ನೂರ –ಉಲ್ – ನಿಸ್ಸಾಳ ಪುನರ್ವಿವಾಹ ಮಾಡಿ ಪೂರ್ವ –ಪಶ್ಚಿಮ ಸಂಗಮವನ್ನು ಮಾಡುತ್ತಾಳೆ.

ಹೀಗೆ ಟೇಲರನು ಸುಂದರವಾಗಿ ಸ್ತ್ರೀ ಪಾತ್ರಗಳ ಚಿತ್ರಣವನ್ನು ಮಾಡಿದ್ದಾನೆ.

ಇನ್ನು ಮುಸ್ಲಿಂ ಪಾತ್ರಗಳಲ್ಲಿ ದರವೇಶನ ಪಾತ್ರವು ಹೆಚ್ಚು ಮಹತ್ವದ್ದಾಗಿದೆ. ಈತ ಜ್ಯೋತಿಷ್ಯ, ಭವಿಷ್ಯ ಹೇಳುವ ಫಕೀರನಾಗಿದ್ದು ಐತಿಹಾಸಿಕ ವ್ಯಕ್ತಿ ಆಗಿದ್ದಾನೆ. ಅವನ ವಾಣಿಯಲ್ಲಿ ಶಕ್ತಿ ಹಾಗೂ ಸತ್ಯ ಎರಡೂ ಇದ್ದವು. ಬಂಗಾಲದ ನವಾಬನಾದ ಸಿರಾಜ ಉದ್ದೌಲನಿಗೆ ಭವಿಷ್ಯದ ಬಗ್ಗೆ ಎಚ್ಚರ ವಹಿಸಲು ಹೇಳುತ್ತಲಿದ್ದನು. ಕೊನೆಗೆ ಅಳಿಗಾಲ ಬರುವ ದೆಂದೂ ಸ್ಪಷ್ಟಪಡಿಸಿದ್ದನು. ''ನಾನು ನಿನಗೆ ಅಂಜಿ, ಏನನ್ನು ಹೇಳುವವನಲ್ಲ, ... ಬ್ರಿಟಿಷರು ಒಳ್ಳೆಯವರಾಗಿದ್ದಾರೆ..... ಅವರಿಗೆ ತೊಂದರೆ ಕೊಡಬೇಡ. '.... They are just and true ....' ಎಂದು ಅವರನ್ನು ಮೆಚ್ಚಿಕೊಂಡು ಹೊಗಳಿದ.

ಆಗ ಭಾರತೀಯರ ಮನದಲ್ಲಿದ್ದುದನ್ನೇ ಆತ ಮಾತನಾಡಿ, ಮುಂದಾಗುವದನ್ನೆಲ್ಲ ಮೊದಲೇ ತಿಳಿಸುತ್ತಿದ್ದ. ಯಾವ ಭಾರತೀಯರು ಬ್ರಿಟಿಷರು ಹೆಚ್ಚು ಒಳ್ಳೆಯ ಸುಂಸ್ಕೃತಿ ಹಾಗೂ ನಾಗರಿಕತೆ ಹೊಂದಿದ್ದಾರೆ ಎಂದು ಬಗೆದರೋ ಅಂಥವರು ಬ್ರಿಟಿಷರಿಗೆ ಸ್ವಾಗತ ಕೋರಿದರು. ದುಷ್ಟ ದುರ್ಜನನಾದ ಸಿರಾಜನ ಸೋಲು, ಪಲಾಯನ, ಸಾವು ಜನರಿಗೆ ನೆಮ್ಮದಿ ತಂದಿತು. ಸಂತಸದಿಂದ 'ಜೈ ಪಿರಂಗಿ, ದುಹಾಯಿ ಫಿರಂಗಿ' ಎಂದು ಜಯ ಜಯ ಕಾರ ಮಾಡಿದರು. ಬ್ರಿಟಿಷರ ಆಳ್ವಿಕೆಯನ್ನು ಸ್ವಾಗತಿಸಿದರು.

ಕಾದಂಬರಿಯಲ್ಲಿ ಬರುವ ಸಂಭಾಷಣೆಗಳೆಲ್ಲ ಸಹಜ ಹಾಗೂ ಸತ್ವಯುತವಾಗಿವೆ. ಬಹಳಷ್ಟು ಪಾತ್ರಗಳು ಸುಸಂಸ್ಕೃತ ನಾಗರಿಕರಾಗಿದ್ದರಿಂದ ಮಾತಿನಲ್ಲಿ ಸಭ್ಯತೆ, ಸೌಜನ್ಯತೆ ತೋರುತ್ತಾರೆ. ಮಾತಿನಲ್ಲಿ ಪ್ರೀತಿ ವಿಶ್ವಾಸ, ಸದ್ಭಾವನೆಗಳು ಪ್ರಕಟಗೊಂಡಿವೆ. ಬ್ಲ್ಯಾಕ ಹೋಲದಲ್ಲಿ ಸಿಕ್ಕಾಗ ರಾಲ್ಫ ಹಾಗೂ ಜ್ಯುಲಿಯಾ ಮಾತನಾಡಿದ್ದರಲ್ಲಿ ಕರುಣೆ ಉಕ್ಕಿ ಬಂದಿದೆ. 'ಜ್ಯುಲಿಯಾ.... ಧೈರ್ಯದಿಂದಿರು, ನಾವು ಸತ್ತರೆ ನಿನ್ನ ಸತ್ತು ಹೋದ ಗಂಡನನ್ನು...

ಅನುಸರಿಸುತ್ತೇವಷ್ಟೇ....'' ರಾಲ್ಫ ಎಂದ. ಅದಕ್ಕೆ ಅವಳು ''ನೀನು ಹೇಳಿದಂತೆ ನಾನು ಧೃತಿಗೆಡುವುದಿಲ್ಲ. ನೀನಿರುವವರೆಗೂ ನನಗೆ ಯಾವ ಅಂಜಿಕೆಯೂ ಇಲ್ಲ. ... ದೇವರ ಸಹಾಯದಿಂದ ನೀನು ನನಗಾಗಿ ತಂದ ಈ ನೀರು ನನ್ನನ್ನು ಬದುಕಿಸುತ್ತಲಿದೆ. ನನ್ನ ಕರವಸ್ತ್ರವನ್ನು ಅದ್ದಿ ಚೀಪಿ ಬದುಕುವೆ. ನಿನಗೂ ನೀರು ಬೇಕೇ ? '' ''ನನಗೆ ಒಂದು ಹನಿ ಕೊಡಬೇಡ. ಜ್ಯುಲಿಯಾ ಖಿಡಕಿಯಿಂದ ನೀರನ್ನು ಸುರುವಿದಾಗ ನಾನು ಕುಡಿದಿರುವೆ. ಮಿಸ್ಟರ ಹಾವೆಲ್ಲ ಹೇಳುತ್ತಿದ್ದಾನೆ ನಮ್ಮ ಮೈಮೇಲಿನ ಬಟ್ಟೆಗಳು ಸುರುವಿದ ನೀರಿನಿಂದ ಒದ್ದೆಯಾದದ್ದೇ ಒಳ್ಳೆಯದಾಯೀತು ಎಂದು. ಏಕೆಂದರೆ ಅವುಗಳನ್ನು ಚೀಪಿ ನೀರಡಿಕೆ ಕಳೆದುಕೊಳ್ಳಬಹುದು ಎಂದು.'' ಅದರಂತೆ ಇಂಗ್ಲಿಷರನ್ನು ಚೆನ್ನಾಗಿ ಅರಿಯದ ಜನರ ಆಡುಭಾಷೆಯ ಸಹಜ ಸೌಂದರ್ಯವನ್ನು – Me not know but me here with you. Dat's nougb" ಎಂಬಲ್ಲಿ ಕಾಣಬಹುದು.

ಈ ರೀತಿ ಭಾಷೆಯಲ್ಲಿ ಸಹಜತೆ ಇದೆ. ಸಿರಾಜನು ದ್ವೇಷ, ರೋಷದಿಂದ ಮಾತನಾಡಿದರೆ, ರಾಲ್ಫನು ಪ್ರೀತಿ, ವಿಶ್ವಾಸದಿಂದ ಮಾತನಾಡಿದ್ದಾನೆ. ರಾಲ್ಫ ಹಾಗೂ ಕ್ಲೈವ ಇಬ್ಬರೂ ತಮ್ಮ ಮಾತುಗಳಲ್ಲಿ ರಾಜಕೀಯ, ಮುತ್ಸದ್ಧಿತನ, ಅಗಾಧ ದೇಶಪ್ರೇಮ ತೋರುತ್ತಾರೆ. ನೂರ ಉಲ್ ನಿಸ್ಸಾ ಹಾಗೂ ಜ್ಯೂಲಿಯಾ ಸುಶಿಕ್ಷಿತ ಮಹಿಳೆಯರಾಗಿ ಅಂತಃಕರಣಪೂರ್ವಕವಾಗಿ ಮಾತನಾಡಿದ್ದಾರೆ. ಅವರ ಸಂಭಾಷಣೆಯಲ್ಲಿ ಬಳಸಿದ ಶಬ್ದಗಳಲ್ಲಿ ಅವರ ಸ್ವಭಾವ, ಸಂಸ್ಕೃತಿಗಳು ವ್ಯಕ್ತವಾಗುತ್ತವೆ. ಉದಾಹರಣೆಗೆ ಬೇಗಂಳು ಎಂದದ್ದು ".... Nay... sir, Thank Him (God) who hath watched over us both" ಅದರಂತೆ ಬೈಗಳ ಭಾಷೆ ಹಾಗೂ ಶಬ್ದಗಳೂ ಸತ್ವಯುತವಾಗಿವೆ. ಉದಾಹರಣೆಗೆ – "Beat him on the mouth with a shoe"

ಒಟ್ಟಾರೆ ಹೇಳುವದಾದರೆ 'ರಾಲ್ಫ ಡಾರ್ನಲ್' 'ತಾರಾ' ಕಾದಂಬರಿಗಿಂತ ಉಚ್ಚ ಮಟ್ಟದ ಶೈಲಿ, ಕಥಾ ತಂತ್ರ ಹೊಂದಿಲ್ಲ. ಆದರೆ ಸುಸಂಸ್ಕೃತ ಸಮಾಜ ಹಾಗೂ ನಾಗರಿಕತೆಯ ಚಿತ್ರಣ ನೀಡುವಲ್ಲಿ ಅತ್ಯಂತ ಯಶಸ್ವಿಯಾಗಿದೆ.

೩. ಸೀತಾ

ಮೂರು ಕಾದಂಬರಿಗಳ ಮಾಲಿಕೆಯಲ್ಲಿ ಮೂರನೆಯದಾದ 'ಸೀತಾ' ೧೮೭೧ರಲ್ಲಿ ಪ್ರಕಟವಾಯಿತು. ಉಳಿದೆರಡು ಕಾದಂಬರಿಗಳಂತೆ ಇಲ್ಲಿಯೂ ಐತಿಹಾಸಿಕ ವಸ್ತುವು ಹಿನ್ನೆಲೆಯಲ್ಲಿದ್ದು, ಸಿರಿಲ್ ಬ್ರ್ಯಾಂಡನ್ ಹಾಗೂ ಸೀತಾ ಇವರ ಪ್ರಣಯ, ವಿವಾಹ ಪ್ರಾಮುಖ್ಯತೆಯನ್ನು ಪಡೆದಿವೆ. ಈ ಕಾದಂಬರಿಯ ಮುನ್ನುಡಿಯಲ್ಲಿ ಟೇಲರ ಬರೆದಿದ್ದಾನೆ.

".... and the struggle of 1857 was a combination to regain what had been lost. In the struggle the native sepoy army of Bengal, by its revolt and Mutiny, took a prominent part." ಅಲ್ಲದೆ ಈ ಕಾದಂಬರಿಯ ಮುಖ್ಯ ಉದ್ದೇಶವನ್ನು ತಿಳಿಸಿಕೊಡುತ್ತಾನೆ.

"In my present tale it has not been my purpose to write history.... I have purposely avoided the sickening details of pitiless massacre and suffering."

ಸೀತಾ ಕಾದಂಬರಿಯು ಪ್ರೇಮ ಹಾಗೂ ವಿಶ್ವಾಸದ ಕಥೆಯ ಮುಖಾಂತರ ಸುಸಂಸ್ಕೃತ, ನಾಗರಿಕ ಭಾರತದ ಚಿತ್ರಣವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಸಿಪಾಯಿಗಳ ಬಂಡಾಯ, ಸ್ವಾತಂತ್ರ್ಯ ಸಂಗ್ರಾಮ, ಹಿನ್ನೆಲೆಯಲ್ಲಿದ್ದರೂ ಇದನ್ನು 'it is essentially a tale of a women's love showing the devotion of an Indian lady to her husband' ಎಂಬುದಾಗಿ ಓದಬೇಕು. ಈ ಕಾದಂಬರಿಗೆ ನಿಜವಾಗಿ ಸಂಭವಿಸಿದ ಘಟನೆಯು ಆಧಾರವಾಗಿದೆ. ಈ ಘಟನೆಯು ದರೋಡೆ ಬಗ್ಗೆ ಇದ್ದು ಅದರ ವಿಚಾರಣೆಯನ್ನು ಟೇಲರನೇ ನಡೆಸಿದ್ದನು.

"It is the actual case of decoity which was tried before Taylor himself at Hump sagar in 1856"

ಸಿಪಾಯಿಗಳಲ್ಲಿದ್ದ ಅಸಂತೃಪ್ತಿ ಬಂಡಾಯಕ್ಕೆ ಮೂಲಕಾರಣ ಆಗಿತ್ತು. ೧೮೫೭ರಲ್ಲಿ ಜಾನೇವರಿ ತಿಂಗಳ ಮಧ್ಯದಲ್ಲಿಬಂಡಾಯ ಪ್ರಾರಂಭವಾಯಿತು. ಆಕಳ ಮಾಂಸ ಕೊಬ್ಬು ಬಂದೂಕಿಗೆ ಹಚ್ಚಿದ್ದಾರೆಂಬ ವದಂತಿ ಭಯಾನಕ ಅಗ್ನಿಯಂತೆ ಎಲ್ಲೆಡೆಗೆ ಹಬ್ಬಿತು. ಹಿಂದುಗಳು ಇದರಲ್ಲಿ ಅಪವಿತ್ರ ಭಾವನೆ ಹೊಂದಿದಂತೆ ಮುಸಲ್ಮಾನರಿಗೆ ಹಂದಿಯ ಮಾಂಸದ ಕೊಬ್ಬುಸವರಿದ್ದು ಅಪವಿತ್ರವೆನಿಸಿತು. ಈರೀತಿಯ ಬ್ರಿಟಿಷ ವಿರೋಧಿ ಅಲೆಯು ೧೮೫೭ರ ಮೇ ೩೧ರಲ್ಲಿ ಜೋರಾಗಿ ಎದ್ದು ಬಿಟ್ಟಿತು. ಆದರೆ ಇದು ಉತ್ತರ ಹಿಂದುಸ್ತಾನಕ್ಕೆ ಬಂಗಾಲದಿಂದ ದಿಲ್ಲಿಯವರೆಗೆ ಮಾತ್ರ ಪಸರಿಸಿತ್ತು.

ಇಂಥ ಕಾಲದಲ್ಲಿ ಸಿರಿಲ್ ಬ್ರ್ಯಾಂಡನ್‌ಹಾಗೂ ಸೀತಾಳ ಪ್ರಣಯ ಕಥೆ ಸಾಗುತ್ತದೆ. ಹರಿದಾಸ ಎಂಬ ಶ್ರೀಮಂತ ಸರಾಫನ ಮನೆ ದರೋಡೆ ಮಾಡಿ ಅವನನ್ನು ಕೊಂದು ಅವನ ಹೆಂಡತಿಯಾದ ಸೀತಾಳನ್ನು ಕೊಲ್ಲದೆ ಓಡಿಹೋಗಿದ್ದರು. ಅದರ ವಿಚಾರಣೆಗೆ ಎಂದು ಇಂಗ್ಲೆಂಡಿನಿಂದ ಬಂದು ಭಾರತದಲ್ಲಿ ಮ್ಯಾಜಿಸ್ಟ್ರೇಟನಾಗಿ ಕಾರ್ಯ ಮಾಡುತ್ತಿದ್ದ ಸಿರಿಲ್ ಬ್ರ್ಯಾಂಡನ್ ಎಂಬುವವನನ್ನು ವಿಚಾರಣೆಗಾಗಿ ಶಹಗಂಜ ಎಂಬ ಊರಿಗೆ ಕಳುಹಿಸಿದರು. ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಕೋರ್ಟಿನಲ್ಲಿ ಸೀತಾಳು ಬಂದು ಏನಾಯಿತು ಹೇಗಾಯಿತು ಎಂಬುದನ್ನು ಸವಿಸ್ತಾರವಾಗಿ ಹೇಳಿಕೆ ಕೊಟ್ಟು ತಿಳಿಸುವ ಪ್ರಸಂಗ ಬಂತು. ಆಗ ಅವಳು ಯೋಚನೆ ಹಾಕಿ ಮಾಡಿದ ದರೋಡೆ ಹಾಗೂ ಕೊಲೆಯ ಬಗ್ಗೆ ಮಾಹಿತಿ ಹೇಳುತ್ತಿದ್ದಾಗ ಅವಳ ಸೌಂದರ್ಯರಾಶಿ ನೋಡಿ, ಅವಳ ಧೈರ್ಯ ನೋಡಿ ಮ್ಯಾಜಿಸ್ಟ್ರೇಟನಾಗಿ ಬಂದಿದ್ದ ಸಿರಿಲ್ ಚಕಿತನಾಗಿ ಬಿಟ್ಟನು. ಅವಳನ್ನು ನೋಡಿದೊಡನೆಯೇ ಅವಳಲ್ಲಿ ಅನುರಾಗ ಹೊಂದಿದನು. ಅವನು ಮಾಡಿದ ಉಪಕಾರಕ್ಕೆ, ತೋರಿದ ಸಾಹಸಕ್ಕೆ, ಅವನ ತ್ಯಾಗಕ್ಕೆ ಮನಸೋತ ಸೀತಾಳೂ ಅವನಲ್ಲಿ ಪ್ರೇಮ ಭಾವ ಹೊಂದಿದಳು. ಅವರಿಬ್ಬರ ಪ್ರೇಮ ವಿವಾಹವೂ ಆಯಿತು. ಕೊನೆಯವರೆಗೂ ಪ್ರೀತಿ ವಿಶ್ವಾಸದಿಂದ ಬಾಳಿದರು. ಒಮ್ಮೆ ತನ್ನ ಗಂಡನಿಗೆ ಅಪಾಯ ಒದಗಿ ಬಂದಾಗ ಸೀತಾ ಅದನ್ನು ತಪ್ಪಿಸಲು ಹೋಗಿ ದರೋಡೆಕೋರರ ಮುಖಂಡನಾದ ಅರ್ಝುರೆಲ್ ಪಾಂಡೆನ ಖಡ್ಗಕ್ಕೆ ಬಲಿಯಾದಳು. ಆ ಬಳಿಕ ಬಹು ದುಃಖಿತನಾದ ಸಿರಿಲ್ ಬ್ರ್ಯಾಂಡನ್ ಇಂಗ್ಲೆಂಡಿಗೆ ಮರಳಿ ಹೋದ. ಆದರೆ ಹೋಗುವಾಗ ತನ್ನ ಪ್ರೀತಿಯ ಹೆಂಡತಿಯೊಡನೆ ಕಳೆದ ದಿನಗಳನ್ನು ನೆನಪಿಸುತ್ತ, ಎಲ್ಲವನ್ನು ಸ್ಮರಿಸುತ್ತ ಹೊರಟು ಹೋದ.

ಹೀಗೆ ಈ ಕಾದಂಬರಿಯಲ್ಲಿ ಪ್ರೇಮ - ಪ್ರಣಯ-ವಿವಾಹ ಮುಖ್ಯವಾಗಿದ್ದು ಭಾರತಿಯರ ಹಿಂದೂ ಹೆಣ್ಣು ಮಗಳೊಬ್ಬಳು ಇಂಗ್ಲೀಷ್ ವ್ಯಕ್ತಿಯೊಬ್ಬನೊಡನೆ ಹೆಂಡತಿಯಾಗಿ ಬಾಳಿದ್ದು, ಅವರಿಬ್ಬರಲ್ಲಿದ್ದ ಸಂಸ್ಕೃತಿ ಹಾಗೂ ನಾಗರಿಕತೆಗಳ ಸುಂದರ ಚಿತ್ರಣವನ್ನು ನೋಡಬಹುದಾಗಿದೆ. ಯಾವ ಗುರಿಯನ್ನಿಟ್ಟುಕೊಂಡು ಈ ಮೂರು ಕಾದಂಬರಿಗಳನ್ನು ಟೇಲರನು ಬರೆದನೋ ಅದು ಪರಿಪೂರ್ಣಗೊಂಡದ್ದನ್ನು ಇಲ್ಲಿ ನೋಡುತ್ತೇವೆ.

ನಿಜವಾದ ಪ್ರೇಮವು ವರ್ಣಭೇದವನ್ನಾಗಲಿ, ಧರ್ಮವನ್ನಾಗಲಿ ಲೆಕ್ಕಿಸುವುದಿಲ್ಲ. ಮದುವೆಗೆ ಪ್ರೇಮವೇ ಮುಖ್ಯವಾಗಿತ್ತು. ಅದು ಪತಿ-ಪತ್ನಿಯರಲ್ಲಿ ಬೆಸುಗೆಯನ್ನುಂಟು ಮಾಡುತ್ತದೆ ಮತ್ತು ಅದುವೆ ಸುಖ ಜೀವನದ ನಾಂದಿ,ಜೀವಾಳ ಆಗಿರುತ್ತದೆ. ಸೀತಾಳಲ್ಲಿಯ ದೇವತಾ ಸೌಂದರ್ಯ, ನಯ - ವಿನಯ, ಮುಗ್ಧತೆ, ಸೌಜನ್ಯತೆ, ಪವಿತ್ರ ಆತ್ಮ - ಇವೆಲ್ಲವು ಸಿರಿಲ್‌ನನ್ನು ಚುಂಬಕೀಯವಾಗಿ ಆಕರ್ಷಿಸಿ ಬಿಟ್ಟವು. ಅದರಂತೆ ಸಿರಿಲ್‌ನಲ್ಲಿಯ ಧೈರ್ಯ, ಸಾಹಸ, ಪ್ರೀತಿ, ವಿಶ್ವಾಸ, ಮೊದಲಾದವುಗಳು ಸೀತಾಳ ಹೃದಯನ್ನು ಗೆದ್ದವು. ಉಪಕಾರ ಭಾವನೆಯಲ್ಲಿಯೂ ಕೂಡ ಪ್ರೇಮದ ಉಗಮವಾಗುತ್ತದೆ.

ನರೇಂದ್ರ ಹಾಗೂ ಕಕ್ಕಿ ಎಲ್ಲಾಳ ಜೀವವನ್ನು ಹಾಗೂ ಸ್ವತಃ ತನ್ನ ಜೀವವನ್ನು ಉಳಿಸಿದ್ದಕ್ಕೆ ಸೀತಾ ಸಿರಿಲ್‌ನಿಗೆ ಉಪಕೃತಳಾಗಿದ್ದಳು. ಅವಳ ಮನೆಯನ್ನು ಅಝರಲ್ ಪಾಂಡೆ ಎಂಬ ದರೋಡೆಕೋರನು ಲೂಟಿ ಮಾಡಿದಾಗ ಗಾಯಗೊಂಡಿದ್ದ ಸಿರಿಲ್‌ನನ್ನು ಸೀತಾ ಅತ್ಯಂತ ಪ್ರೀತಿಯಿಂದ, ಗೌರವ ಭಾವನೆಯಿಂದ ತನ್ನ ಮನೆಯಲ್ಲಿರಿಸಿಕೊಂಡು ಉಪಚರಿಸಿದ್ದಳು. ಹಿಂದೂ ಗೃಹಿಣಿಯಲ್ಲಿ ಕಾಣಸಿಗುವ ಆಳವಾದ, ಆತ್ಮೀಯತೆಯ ಪ್ರೇಮ ಸೀತಾಳಲ್ಲಿತ್ತು. ಹಿಂದು ಸಂಸ್ಕೃತಿಯಲ್ಲಿ ಗಂಡನ ಸಲುವಾಗಿ ಮಾಡಿದ ಯಾವುದೇ ತ್ಯಾಗವು ದೊಡ್ಡದಲ್ಲ ಎಂದು ಹೆಂಡತಿ ಬಗೆಯುತ್ತಾಳೆ. ಅವಳು ಸಿರಿಲ್‌ನ ಬಗ್ಗೆ ತೋರಿದ ಪ್ರೇಮ ಅಪ್ರತಿಮವಾಗಿತ್ತು, ಅನುಮಪವಾಗಿತ್ತು, ಆದರೆ ಕ್ರಿಶ್ಚಿಯನ್ನನಾದ ಸಿರಿಲ್‌ನು ಹಿಂದುವಾದ ಸೀತಾಳನ್ನು ಪ್ರೇಮಿಸಿ ಮದುವೆಯಾದದ್ದು ಇಂಗ್ಲೆಂಡಿನಲ್ಲಿದ್ದ ಅವನ ತಾಯಿಗೆ, ತಮ್ಮನಿಗೆ ಹಾಗೂ ಬ್ರಿಟಿಷ್ ಮೇಲಾಧಿಕಾರಿಗಳಿಗೆ ಸರಿ ಎನಿಸಿರಲಿಲ್ಲ. ಅದರಂತೆ ಕ್ರಿಶ್ಚಿಯನ್ನನನ್ನು ಮದುವೆ ಆದದ್ದು ತನ್ನ ಜಾತಿಯನ್ನು ಕೆಡಿಸಿದ್ದು ಸೀತಾಳ ಸಂಬಂಧಿಕರಿಗೆ ಸರಿ ಎನಿಸಿರಲಿಲ್ಲ. ಆದರೆ ಸಿರಿಲ್ ಆಗಲಿ, ಸೀತಾ ಆಗಲಿ ಅದರೆಡೆಗೆ ಗಮನ ಕೊಡಲೇ ಇಲ್ಲ. ಏಕೆಂದರೆ ನಿಜವಾದ ಪ್ರೇಮ ಇವೆಲ್ಲವುಗಳನ್ನು ಮೀರಿ ನಿಂತಿರುತ್ತದೆ. ಅವರ ವಿವಾಹವು ಪೂರ್ವ ಹಾಗೂ ಪಶ್ಚಿಮಗಳ ಸಂಗಮದ ಸಂಕೇತವಾಗಿತ್ತು.' ಇಂಥ ವಿವಾಹ 'ರಾಲ್ಫ ಡಾರ್ನೆಲ್' ದಲ್ಲಿ ಬಂದಿದೆ.

ಈ ಮೂರು ಕಾದಂಬರಿಗಳಲ್ಲಿ ಟೇಲರನು ಅಂತಧರ್ಮೀಯ ವಿವಾಹದ ಪ್ರಯೋಗ ಮಾಡಿ ನೋಡಿದ್ದಾನೆ. ಯಾವ ಭಾರತದಲ್ಲಿ ಬಹು ಧರ್ಮಗಳಿವೆಯೋ ಅಂಥಲ್ಲಿ ಅಂತರ್ಜಾತಿ ವಿವಾಹ ತಪ್ಪೇನಲ್ಲ ಎಂಬುದು ಅವನ ಅಭಿಮತ. ನಾಗರಿಕತೆಯಲ್ಲಿ ಹೆಚ್ಚು ಹೆಚ್ಚು ಸುಧಾರಣೆ ಆದಂತೆ ವರ್ಣ, ಕುಲ, ಜಾತಿಗಳು ಬಂಧನಕಾರಿಯಾಗಬಾರದು ಎನ್ನುತ್ತಾನೆ ಆತ. ಈ ಮೂರು ಕಾದಂಬರಿಗಳಲ್ಲಿ ಅಂತರ್ಜಾತಿ ವಿವಾಹಗಳಾಗುದಲ್ಲದೆ ವಿಧವಾ ಪುನರ್ವಿವಾಹಗಳೂ ಆಗಿವೆ. ಮಾನವೀಯ ದೃಷ್ಟಿಕೋನದಿಂದ ನೋಡಿದಾಗ ಇಸ್ಲಾಂ ಧರ್ಮ ಹಾಗೂ ಕ್ರಿಶ್ಚಿಯನ್ ಧರ್ಮಗಳು ಅವುಗಳನ್ನು ಮನ್ನಿಸುತ್ತವೆ.

ಸಿರಿಲ್ ಹಾಗೂ ಸೀತಾ ಇವರ ವಿವಾಹವು ಭಾರತದ ಸುಸಂಸ್ಕೃತ ಜೀವನಕ್ಕೆ ಒಂದು ಹೊಸ ಆಯಾಮವನ್ನು ತರುತ್ತದೆ. ಜಾತಿ, ಧರ್ಮ ಭಾವ ರಹಿತ, ಮಾನವೀಯ ಪ್ರೇಮ, ಸದ್ಭಾವನೆ, ಸಹಿತ ಬಾಳನ್ನು ಸಾಗಿಸಲು ಸೂಚಿಸುತ್ತದೆ. ಪೂರ್ವ ಪಶ್ಚಿಮಗಳ ಭಾವನಾತ್ಮಕ ಐಕ್ಯತೆಯು ಕೇವಲ ಬಾಯಿ ಮಾತಿನಲ್ಲುಳಿಯದೆ ಕೃತಿಯಲ್ಲಿ ಬರಬೇಕು ಎಂಬುದು ಅವನ ಆಶಯವಾಗಿತ್ತು.

ಆಗ ಭಾರತದಲ್ಲಿ ಬ್ರಿಟಿಷ ಆಡಳಿತ ಪದ್ಧತಿಯಿಂದ ಸಾಮಾಜಿಕ ಒಕ್ಕಟ್ಟು, ಸಾಮರಸ್ಯಗಳು ಉಂಟಾಗಿದ್ದವು. ಬ್ರಿಟಿಷರ ಪರಮೋಚ್ಚ ಅಧಿಕಾರವನ್ನು ಭಾರತೀಯರು ಒಪ್ಪಿ ಕೊಂಡಿದ್ದರು. ಇದನ್ನು ನರೇಂದ್ರ ''ಇಂಗ್ಲೀಷರನ್ನು ಸೋಲಿಸಲು ಯಾರೂ

ಉಳಿದಿಲ್ಲ.. ಅವರೇ ಬಲಿಷ್ಠರಾಗಿದ್ದಾರೆ... ಮತ್ತು ಎಲ್ಲದರಲ್ಲೂ ನ್ಯಾಯವಂತರಾಗಿದ್ದಾರೆ" ಎಂದು ಅಂದು ತೋರಿಸುತ್ತಾನೆ.

ಕಾಯಿದೆ ಕಾನೂನಿಗೆ ಬೆಲೆ ಕೊಟ್ಟು ಬಾಳುವದು ನಾಗರಿಕ ಸಮಾಜದಪ್ರಮುಖ ಲಕ್ಷಣಗಳಲ್ಲೊಂದಾಗಿದೆ. ಅದು ಆಗಿನ ಭಾರತೀಯರಲ್ಲಿತ್ತು. ಬ್ರಿಟಿಷ ಈಸ್ಟ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ವಿಚಾರಣೆ ಮಾಡಲು ಸಿವ್ಹಿಲ್ ಹಾಗೂ ಕ್ರಿಮಿನಲ್ ಕೋರ್ಟುಗಳು ಅಸ್ತಿತ್ವದಲ್ಲಿ ಬಂದವು. ಅದರಿಂದ ಅನ್ಯಾಯ ವೆಂಬುದು ಕಡಿಮೆ ಆಗಿ ತಪ್ಪಿತಸ್ಥರಿಗೆ, ಅಪರಾಧಿಗಳಿಗೆ ಶಿಕ್ಷೆ ಆಗ ಹತ್ತಿತು. ಅಪರಾಧಿಗಳು ಶಿಕ್ಷೆಗೆ ಅಂಜಿ ಬ್ರಿಟಿಷ ಪೋಲೀಸ ಖಾತೆಯ ಗೋಜಿಗೆ ಹೋಗದಂತೆ ಬಾಳುತ್ತಲಿದ್ದರು. ಪೋಲೀಸ ಇಲಾಖೆಯ ಭಯ ಅವರಿಗೆ ಎಷ್ಟಿತ್ತು ಎಂಬುದು ಈ ಮಾತಿನಿಂದ ಗೊತ್ತಾಗುತ್ತದೆ.

"were the English police to know of what I have done, what could save me from the black waters ?"

ಕೌಟುಂಬಿಕ ಮಟ್ಟದಲ್ಲಿ ನರೇಂದ್ರನ ಕುಟುಂಬವು ಆದರ್ಶ ಹಿಂದು ಜೀವನವನ್ನು ತೋರಿಸುತ್ತದೆ. ಮನೆಯಲ್ಲಿ ಮಡಿ ಮೈಲಿಗೆ ಬಗ್ಗೆ, ಧಾರ್ಮಿಕ ಕಾರ್ಯಗಳ ಬಗ್ಗೆ ಎಲ್ಲರಿಗೂ ಅರಿವು ಇತ್ತು. ಸನಾತನ ಧಾರ್ಮಿಕ ಮನೆತನವಾದರೂ ಅಲ್ಲಿ, ನವೀನತೆಯ ಗಾಳಿಯೂ ಬೀಸುತ್ತಿತ್ತು. ಆದ್ದರಿಂದಲೇ ವಿಶಾಲ ಮನೋಭಾವದ ನರೇಂದ್ರನು ತನ್ನ ಮಮ್ಮಗಳಾದ ಸೀತಾಳಿಗೆ ಇಂಗ್ಲೀಷ್ ಮ್ಯಾಜಿಸ್ಟ್ರೇಟನಾದ ಸಿರಿಲ್ ಬ್ರ್ಯಾಂಡನನ್ನು ಮದುವೆಯಾಗಲು ಸಮ್ಮತಿಯನ್ನಿತ್ತ.

ಕಾದಂಬರಿಯಲ್ಲಿ ಬರುವ ಮೊಸ್ಟಿನ್ ಕುಟುಂಬವು ಭಾರತದಲ್ಲಿಯ ಬ್ರಿಟಿಷ ನಾಗರಿಕ ಸಾಮಾಜಿಕ ಜೀವನವನ್ನುತೋರಿಸುತ್ತದೆ. ಅವರು ತಮ್ಮದೇ ಕ್ಲಬ್ಬು, ಪಾರ್ಟಿ, ಪಿಯಾನು, ನರ್ತನಗಳಲ್ಲಿದ್ದು ಪ್ರತ್ಯೇಕವಾಗಿರುತ್ತಿದ್ದರು. ಆದರೆ ಈ ಪ್ರತ್ಯೇಕತೆಯ ಭಾವನೆ ಬಹಳ ಕಾಲ ಉಳಿಯಲಿಲ್ಲ. ಭಾರತಿಯ ನಿವಾಸಿಗಳೊಡನೆ ಸಂಪರ್ಕ ಬಂದಂತೆ ಸಂಪರ್ಕ ಬೆಳೆದಂತೆ ವರೂ ಹೊಂದಿಕೊಳ್ಳಹತ್ತಿದರು. ಇದನ್ನು ಮಿಸೆಸ್ ಮೊಸ್ಟಿನ್ ಹಾಗೂ ಮಿಸ್ ಗ್ರೇಸ ಮೊಸ್ಟಿನ್ ತೋರಿಸಿಕೊಡುತ್ತಾರೆ. ಸೀತಾಳೊಡನೆ ಸಂಪರ್ಕ ಬಂದಾಗ ಎರಡೂ ನಾಗರಿಕ ಸಮಾಜಗಳು ಪರಸ್ಪರರನ್ನು ಚೆನ್ನಾಗಿ ಬಲ್ಲವರಾದರು. ಪರಸ್ಪರರಲ್ಲಿ ಗೌರವ, ಆದರ ಭಾವ ಹೊಂದಿದ್ದರು. ಕೊನೆಗೆ ಆ ಎರಡೂ ಸಮಾಜಗಳು ಸೀತಾ ಹಾಗೂ ಸಿರಿಲ್‌ರ ವಿವಾಹದಲ್ಲಿ ಸಮ್ಮಿಳಿತವಾದವು. ಸೀತಾ ಹಾಗೂ ಸಿರಿಲ್ ಇಬ್ಬರು ವಿವಾಹವಾಗಿ ಹೊಸ ಸಂಸಾರದ ಆನಂದ ಪಡೆಯಲು ಆರಂಭಿಸಿದರು. ಅದರಲ್ಲಿ ಪ್ರೀತಿ, ವಿಶ್ವಾಸ ಹಾಗೂ ಹೊಂದಾಣಿಕೆಗಳು ಉಂಟಾದವು. ಅಝುರಲ್ ಪಾಂಡೆ ಎನ್ನುವವನು ಸಿರಿಲ್‌ನನ್ನು ಕೊಲ್ಲ ಬಯಸಿದಾಗ ಸೀತಾ ಅಡ್ಡ ಬಂದು ಅವನನ್ನು ಉಳಿಸಿ ಆತ್ಮ ಪರಿತ್ಯಾಗ ಮಾಡಿ, ಮಡಿದಳು. ಎಲ್ಲರ ಗೌರವಕ್ಕೆ ಪಾತ್ರಳಾದಳು. ಇಂಗ್ಲೆಂಡಿನ ಜನರೂ ಅವಳನ್ನು ಕೊಂಡಾಡಿದರು.

ಟೇಲರನ ಮುಖ್ಯ ಉದ್ದೇಶವು ಈ ಸುಂದರವಾದ ಪ್ರೇಮಕಥೆಯನ್ನು ಹೇಳುವದೇ ಆಗಿದೆ. ಸಿಪಾಯಿಗಳ ಬಂಡಾಯ ಮತ್ತು ಅದರಲ್ಲಿ ಬ್ರಿಟಿಷರು ಗೆಲುವು ಸಾಧಿಸಿದ್ದು ನೆಪಕ್ಕಾಗಿ ಮಾತ್ರ, ಹಿನ್ನೆಲೆಗಾಗಿ ಮಾತ್ರ. ಸಿಪಾಯಿಗಳ ಬಂಡಾಯವನ್ನು ಹತ್ತಿಕ್ಕೂವಾಗ ಗುಂಡಿನ ಕಾಳಗ, ಪ್ರತಿ ಕಾಳಗ, ಕೊಲೆ ಮೊದಲಾದವುಗಳೆಲ್ಲ ಆದವು. ಆದರೆ ಶಸ್ತ್ರದ ಬಳಕೆಯಲ್ಲಿ ಸೈನ್ಯದ ಬಲದಲ್ಲಿ ಬ್ರಿಟಿಷರು ಹೆಚ್ಚು ಬುದ್ಧಿವಂತರೆನಿಸಿದರು.

ಈ ಕಾದಂಬರಿಯು ಘಟಿಸಿದ್ದು ಗೋಕುಲಪುರದಲ್ಲಿ ಶಹಗಂಜ ಹಾಗೂ ನೂರಪುರ (ಆಗ್ರಾ) ಗಳಲ್ಲಿ. ಆದರೆ ಇವೆಲ್ಲ ಕಾಲ್ಪನಿಕ ಊರುಗಳಾದ್ದರಿಂದ ಯಾವುದೇ ನಕಾಶೆಯಲಿ ಹುಡುಕಿದರೆ ಅವು ಸಿಗಲಾರವು. ಈ ಮೊದಲು ಅನುಸರಿಸಿದ ಸಾಮ್ಯ ವೈಷಮ್ಯ ತೋರುವದು, ಒಂದರ ಮಗ್ಗಲಲ್ಲಿ ಇನ್ನೊಂದನ್ನುಇಟ್ಟು ನೋಡುವ ತಂತ್ರವು ಇಲ್ಲಿಯೂ ಇದೆ. ಗೋಕುಲಪುರ ಹಾಗೂ ಶಹಗಂಜಗಳು ಹಿಂದೂ ಸಂಸ್ಕೃತಿಯ ಊರುಗಳಾಗಿದ್ದರೆ ನೂರಪುರವು ಬ್ರಿಟಿಷ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಜಜ್ಜನಾದ ಮಿಸ್ಟರ್ ಮೊಸ್ಟಿನ್, ಅವನ ಹಂಡತಿಯಾದ ಮಿಸೆಸ್ ಮೊಸ್ಟಿನ್ ಹಾಗೂ ತಂಗಿಯಾಗಿ ಗ್ರೇಸ ಮೊಸ್ಟಿನ್ ಇವರು ಆಂಗ್ಲೋ ಇಂಡಿನಯ್ ಜೀವನವನ್ನು ತೋರಿಸಿಕೊಡುತ್ತಾರೆ. ಅಲ್ಲಿಯ ಸೈನಿಕರು, ಅಧಿಕಾರಿಗಳು ಮತ್ತು ಇನ್ನಿತರರು ಬೇಟೆಯಾಡುವದರಲ್ಲಿ, ಗುರಿಯಿಟ್ಟು ಗುಂಡು ಹೊಡೆಯುವದರಲ್ಲಿ ಹಾಗೂ ಕುದುರೆ ಸವಾರಿ ಮಾಡುವದರಲ್ಲಿ ಆನಂದ ಪಡೆಯುತ್ತ ಕಾಲ ಕಳೆಯುವಂಥವರಾಗಿದ್ದಾರೆ. ಇಲ್ಲಿಯ ಸಾಮಾಜಿಕ ಜೀವನ, ಕೌಟುಂಬಿಕ ಜೀವನವು ಗೋಕುಲಪುರದ ಹಿಂದು ಜೀವನ ಹಾಗೂ ಸಂಸ್ಕೃತಿಗೆ ವಿರುದ್ಧವಾಗಿದೆ.

ಪಾತ್ರ ಸೃಷ್ಟಿಯ ದೃಷ್ಟಿಯಿಂದ ನೋಡಿದಾಗ ಸೀತಾ ಮಡದಿ ಚಿತ್ತಾಕರ್ಷಕಳಾಗಿದ್ದಾಳೆ. ಅವಳು ಹರಿದಾಸ ಎಂಬ ಸಿರಿವಂತನ ಮಡದಿ. ನೋಡಲು ಇದ್ರಲೋಕದಿಂದ ಬಂದವಳಂತೆ ಸುಂದರಳಾಗಿದ್ದಳು. ಅವಳು ಸತ್ಯವಂತಳೂ, ಪ್ರೇಮಭರಿತಳೂ, ನಿಃಸ್ವಾರ್ಥಿಯೂ ಗಂಡನ ಬಗ್ಗೆ ಪೂಜ್ಯ ಭಾವವುಳ್ಳ ಭಾರತೀಯ ನಾರಿಯರ ಪ್ರತೀಕವಾಗಿದ್ದಾಳೆ. ಇದಲ್ಲದೆ ಅತ್ಯಂತ ಸುಸಂಸ್ಕೃತ ಯುವತಿ ಆಗಿದ್ದಾಳೆ. ದರೋಡೆ ಖೋರರು ದರೋಡೆ ಮಾಡಲು ಮನೆಯೊಳಗೆ ಬಂದು ನಿಂತಾಗ ಅವಳು ''ಈ ಮನೆಯಲ್ಲಿ ಇರುವದೆಲ್ಲವನ್ನು ಒಯ್ಯಿರಿ. ಆದರೆ ನನ್ನ ಗಂಡನನ್ನು ಉಳಿಸಿರಿ'' ಎಂದು ಅಂಗಲಾಚಿ ಬೇಡಿಕೊಂಡಳು. ಅಷ್ಟು ಪತಿ –ಭಕ್ತಿ ಅವಳಲ್ಲಿ ಇತ್ತು. ಹಿಂದೂ ಸಂಸ್ಕೃತಿ ಸಂಪ್ರದಾಯದಲ್ಲಿ ಸತಿಗೆ ಪತಿಯೇ ದೇವರು. ಆದರೆ ದರೋಡೆಖೋರರು ಅವನನ್ನು ಕೊಂದರು. ಎರಡನೆ ಸಲ ಅದೇ ದರೋಡೆಖೋರನು ಅವಳ ಎರಡನೇ ಗಂಡನನ್ನು ಕೊಲ್ಲುವಾಗ ಆತನ ಜೀವನವನ್ನು ಉಳಿಸಿ ತನ್ನ ಪ್ರಾಣವನ್ನೇ ಕಳೆದುಕೊಂಡಳು. '

ಹಿಂದೂ ಜೀನ ಪದ್ಧತಿಯಲ್ಲಿ ವಿಧವೆಗೆ ಬಹಳಷ್ಟು ದುಃಖ, ಕಷ್ಟ ಕಾರ್ಪಣ್ಯಗಳು ಇರುತ್ತವೆ. ಅವಳ ಜೀವನ ವೇದಾನಾಯಮ ಆಗಿರುತ್ತದೆ. ಅವಳನ್ನು ನೋಡಿದರೆ

ಅಪಶಕುನ ಎನ್ನುತ್ತಾರೆ. ಭ್ರಿತ್ಯಾಯದಿಂದ ಅವಳ ತಲೆಗೂದಲನ್ನು ಬೋಳಿಸಿ ಹಾಕಿ ವಿಕೃತಗೊಳಿಸಿರುತ್ತಾರೆ. ಆದರೆ ಸುಶಿಕ್ಷಿತ, ವಿದ್ಯಾವಂತಳಾದ ಸೀತಾ ತನ್ನ ತಲೆಗೂದಲನ್ನು ತೆಗೆಸಿಕೊಂಡು ಕುರೂಪಿಯಾಗಲು ಇಚ್ಛಿಸಲಿಲ್ಲ. ಸೌಂದರ್ಯದ ರಾಶಿಯಾದ ಅವಳಿಗೆ ಅದನ್ನು ಕಳೆದುಕೊಳ್ಳುವ ಮನಸ್ಸು ಬರಲಿಲ್ಲ. ಹಿಂದೂ ಹಳೆಯ ಕಟ್ಟಳೆಗಳನ್ನು ಪಾಲಿಸಿ ಅವಳು, ಸಾದಾ ಜೀವನ ಮಾಡಿ ಕಾಲಕಳೆಯುವಷ್ಟು ಬಲಹೀನಳಾಗಿರಲಿಲ್ಲ. ಇದನ್ನವಳು ತನ್ನ ಕಕ್ಕಿಯಾದ ಎಲ್ಲಾಳ ಮುಂದೆ ಹೇಳುತ್ತಾಳೆ.

" It is not a shaven head or course garment that makes a virtuous widow.... Am I to shock my boy when he grows up?" ಎಂದೂ ಕೇಳುತ್ತಾಳೆ.

ಮ್ಯಾಜಿಸ್ಟ್ರೇಟನಾದ ಸಿರಿಲ್ ಬ್ರಾಂಡನ್ನ ಮುಂದೆ ದರೋಡೆಯ ವಿಷಯವನ್ನು ಕೂಲಂಕುಷವಾಗಿ ವಿವರಿಸಿ ಹೇಳಿದ್ದನ್ನು ಕೇಳಿದ ಆತ -

"I never heard evidence given so clearly, firmly or so minutely" ಎಂದು ಅವಳನ್ನು ಮೆಚ್ಚಿಕೊಂಡ. ಮುಂದೆ ಅದುವೆ ಪ್ರೇಮವಾಗಿ ಪರಿವರ್ತನೆಯಾಯಿತು.

ಸೀತಾಳಿಗೆ ಮೊದಲನೇ ಗಂಡನಿಂದ ಗಂಡುಮಗುವೊಂದು ಹುಟ್ಟಿತ್ತು. ಆದರೆ ದುರ್ದೈವದಿಂದ, ಸ್ವಲ್ಪಕಾಲದ ನಂತರ ಅದು ಮುಡಿದು ಹೋಯಿತು. ಇಬ್ಬರನ್ನು ಕಳೆದುಕೊಂಡು ಅವಳು ದುಃಖ ಸಾಗರದಲ್ಲಿ ಮುಳುಗಿದ್ದಳು. ನೀರಲ್ಲಿ ಎಲ್ಲಿಯೋ ಸಾಗಿದ ನಾವಿನಂತೆ. ಅವಳ ಜೀವನ ಆಗಿತ್ತು. ಆ ವೇಳೆಗೆ ಸಿರಿಲ್ ಬ್ರಾಂಡನ್ ಅವಳ ಜೀವನದಲ್ಲಿ ಬಂದು, ಮದುವೆಯಾಗಿ ಸುಖ ಸಂತೃಪ್ತಿಕೊಟ್ಟು ಅವಳ ಬಾಳ ನೌಕೆಯನ್ನು ದಂಡೆಗೆ ತಂದು ಹಚ್ಚಿದ.

ಅವನನ್ನು ಮದುವೆಯಾದ ಬಳಿಕ ಅವಳ ಜೀವನದಲ್ಲಿ ಹೊಸತನ ಬಂದಿತು. ಅವಳು ಸಿರಿಲ್‌ನಿಗೆ ಬಹಳಷ್ಟು ಉಪಕೃತಳಾಗಿದ್ದಳು. ಗಂಡನನ್ನು ಪ್ರೀತಿ ಹಾಗೂ ಸಂತೋಷದಿಂದ ನೋಡಿಕೊಂಡಳು. ಗಂಡನ ಸಹವಾಸದಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿತಳು ಸಾಹಿತ್ಯವನ್ನು ಓದಿದಳು. ನಿಧಾನವಾಗಿ ಪಾಶ್ಚಾತ್ಯ ಸಂಗೀತವನ್ನು ಕಲಿತಳು ಸಾಹಿತ್ಯ ಸಂಗೀತ ಎರಡನ್ನೂ ಮೆಚ್ಚಿಕೊಂಡಳು. ಸದ್ಭಾವನೆಯಿಂದ ಬೈಬಲ್ಲನ್ನು ಓದಿ ಅದರ ಅರ್ಥ ಹಾಗೂ ಸಂದೇಶಗಳನ್ನು ಅರಿತುಕೊಂಡಳು. ಪಾಶ್ಚಾತ್ಯ ಸಂಸ್ಕೃತಿ ಹಾಗೂ ನಾಗರಿಕತೆಯಲ್ಲಿ ಬರುವ ಎಲ್ಲ ಒಳ್ಳೆಯ ಅಂಶಗಳನ್ನು ಗ್ರಹಿಸಿಕೊಂಡಳು. ಈ ರೀತಿ ಹಿಂದೂ ಸಂಸ್ಕೃತಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿ ಹಾಗೂ ನಾಗರೀಕತೆಗಳಲ್ಲಿ ಬರುವ ಎಲ್ಲ ಒಳ್ಳೆಯ ಅಂಶ, ಪಾಶ್ಚಾತ್ಯ ಸಂಸ್ಕೃತಿಯನ್ನು ಬೆರೆಸಿ ಬಾಳಹತ್ತಿದಳು.

ಅವಳು ಹೃದಯ, ಮನೋಭಾವ ವಿಶಾಲವಾಯಿತು. ಕ್ರಿಶ್ಚಿಯನ್ನರಲ್ಲಿ ಕೆಲವರು ಆವಳಿಗೆ 'ಕಪ್ಪು ಹೆಣ್ಣು' ಎಂದು ಕರೆದರೂ ಅವಳು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ, ಅವರನ್ನು ದ ದ್ವೇಷಿಸಲೂ ಹೋಗಲಿಲ್ಲ...

"Why should I hate them ? They have done me no harm and I shall do them none, Love thine emenies" ಎಂದೆನ್ನುತ್ತಿದ್ದಳು. ಕೆಲಕಾಲದಲ್ಲಿಯೇ ಕ್ರಿಶ್ಚಿಯನ್ನರು ಅವಳನ್ನು ಸಮಾಜದಲ್ಲಿ ಸೇರಿಸಿಕೊಂಡರು. ಅವಳು ಶೇಕ್ಸ್‌ಪೀಯರ ಹಾಗೂ ವಿಲ್ಸನ್ನರ ಅಭ್ಯಾಸ ಮಾಡಿದಳು... ಜೆರೆಮಿ ಟೇಲರ ಬರೆದ 'Holy living and Dying' ಎಂಬ ಪುಸ್ತಕವನ್ನು ಬನಿಯನ್‌ನು ಬರೆದು 'Pilgrims Progress' ನ್ನೂ ಓದಿ ಕ್ರಿಶ್ಚಿಯನ್ ಧರ್ಮ ಹಾಗು ತತ್ವಜ್ಞಾನದ ಜ್ಞಾನವನ್ನು ಪಡೆದುಕೊಂಡಳು. ನಾವು ಕ್ರಿಶ್ಚಿಯನ್ ಧರ್ಮ, ತತ್ವಜ್ಞಾನ, ಸಾಹಿತ್ಯವನ್ನು ಬಹಳ ತಿಳಿದೇ ಇಲ್ಲವೆಂದಳು. ಬೈಬಲ್ಲದ ಸಂದೇಶ ಅವಳಿಗೆ ತಿಳಿಯಿತು. ಸಿರಿಲ್‌ನು ಅವಳಿಗೆ ಕ್ರಿಶ್ಚಿಯನ್ ದೇವರು ಎಂದು ಒಬ್ಬ ಹಿಂದೂ ದೇವರು ಮತ್ತೊಬ್ಬ ಹೀಗೆ ಇಲ್ಲವೇ ಇಲ್ಲ, ಎಲ್ಲ ದೇವರು ಒಂದೇ ಎಂದಾಗ ಅವಳು ಅದಕ್ಕೆ ಸಹಮತ ವ್ಯಕ್ತ ಪಡಿಸಿ ಬೈಬಲ್ ಹಾಗೂ ಗೀತೆಯಲ್ಲಿಯ ಸಾಮ್ಯ ಹೇಳಿದಳು. ಹಿಂದೂ ಧರ್ಮ ಪ್ರಗತಿ ಹೊಂದದೆ ನಿಂತ ನೀರಿನಂತಾಗಿದೆ ಎಂದು ಹಳ ಹಳಿಸಿದಳು. ಹಿಂದುವಾಗಿದ್ದುಕೊಂಡೇ ಅವಳು ಕ್ರಿಶ್ಚಿಯನ್ ಮೌಲ್ಯಗಳನ್ನು ಅಳವಡಿಸಿ ಕೊಂಡಳು. ಗಂಡನಾದ ಸಿರಿಲ್‌ನೊಡನೆ ಸುಖ ದುಃಖಗಳಲ್ಲಿ ಸಮಸ್ಯೆಗಳನ್ನು ಎದುರಿಸುವಲ್ಲಿ ಸಹಭಾಗಿಯಾದಳು. " I can share all with you or I am not fit to be your wife" ಎಂದೆನ್ನುತ್ತಲಿದ್ದಳು. ಸಿರಿಲ್‌ನ ಬಗ್ಗೆ ಎಷ್ಟೊಂದು ಭಕ್ತಿ, ಪ್ರೀತಿ ಇದೆ ಎಂಬುದನ್ನು ತನ್ನ ಈ ಮಾತಿನ ಮುಖಂತರ ತೋರಿಸಿಕೊಡುತ್ತಾಳೆ.

"Narandra and Aunt Ella might care for my body, if it lived ; but my soul would be with you, Cyril" ಎಂದು ಇಷ್ಟೇ ಏಕೆ, "My body would not live, if you were gone" ಎಂದು ಹೇಳಿ ತನ್ನ ಅಮರ ಪ್ರೇಮವನ್ನು ವ್ಯಕ್ತ ಪಡಿಸಿದಳು. ಈ ರೀತಿ ಗಂಡನೊಡನೆ ಅರ್ಧಾಂಗಿಯಾಗಿರುವದು, ಹಿಂದೂ ಧರ್ಮ, ಸಂಸ್ಕೃತಿಯಲ್ಲಿ ಸಾಮಾನ್ಯವೇ ಆಗಿದೆ. ಅವಳು ಪತಿವ್ರತೆಯಾಗಿ ಬಾಳ ಬಯಸಿದಳು.

ತನ್ನ ಗಂಡನಿಗಾಗಿ ಪ್ರಾಣಾರ್ಪಣೆ ಮಾಡುವುದು ಹಿಂದೂ ಧರ್ಮದಲ್ಲಿದೆ, ನಿಜವಾದ ಪ್ರೀತಿ, ಭಕ್ತಿ, ವಿಶ್ವಾಸ ಕರ್ತವ್ಯಪ್ರಜ್ಞೆ ಮೊದಲಾದ ಶ್ರೇಷ್ಠ ಸದ್ಗುಣಗಳನ್ನು ಸೀತಾಳಲ್ಲಿ ನೋಡಬಹುದಾಗಿದೆ. ರಾಮಾಣದಲ್ಲಿಯ ಸೀತೆ ಎಲ್ಲ ಬಗೆಯ ಸಂಕಷ್ಟಗಳನ್ನು ಎದುಸಿರಿ, ದುಃಖ ಅನುಭವಿಸಿದಳೋ ಹಾಗೆಯೇ ಈ ಸೀತೆಯೂ ಇದ್ದಾಳೆ. ಅಝುರಲ್ ಪಾಂಡೆಯು ಸಿರಿಲ್ ಬ್ರಾಂಡನ್‌ನನ್ನು ಖಡ್ಗದಿಂದ ಹೊಡೆದು ಕೊಲ್ಲಲೆತ್ನಿಸಿದಾಗ ಇವಳು

ಆದರ ಮುಂದೆ ಬಂದು ನಿಂತು ಪತಿಯ ಪ್ರಾಣ ಉಳಿಸಿ ತಾನು ಸತ್ತು ಹೋದಳು. ಹಿಂದು ಹಾಗೂ ಕ್ರಿಶ್ಚಿಯನ್ ಸಂಸ್ಕೃತಿ ಮೌಲ್ಯಗಳನ್ನು ಅಳವಡಿಸಿಕೊಂಡ ಅವಳ ಸಾವು ಯಾರ ಹೃದವನ್ನಾದರೂ ಕಲಕುವುದು. ಸಾಯುವಾಗ ಅವಳು ಹಿಂದೂ ಹಾಗೂ ಕ್ರಿಶ್ಚಿಯನ್ ಪವಿತ್ರ ಹಾಡುಗಳನ್ನು ಅನ್ನುತ್ತ ಕೊನೆಯ ಉಸಿರನ್ನೆಳೆದಳು.

ಸೀತಾಳ ಅಜ್ಜ ನರೇಂದ್ರ ಎನ್ನುವವನು ಶಹಗಂಜದಲ್ಲಿ ಬ್ಯಾಂಕರ್‌ನಾಗಿದ್ದನು. ಆದರ್ಶ ಹಿಂದು ಸದ್ಗೃಹಸ್ಥನಾಗಿದ್ದ. ಅರವತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದರೂ ಧಾರ್ಮಿಕ ಹಾಗೂ ಕ್ರಿಯಾ ಶೀಲನಾಗಿದ್ದ. ಅವನಿಗೆ ಎರಡು ಸಲ ಮದುವೆಯಾಗಿತ್ತು. ಇಬ್ಬರು ಬೆಳೆದ ಮಕ್ಕಳು ಸತ್ತು ಹೋಗಿದ್ದವು. ಅವನ ಮೊದಲನೆಯ ಮಗಳ ಮಗಳೆಂದರೆ ಸೀತಾ. ಆತ ಸೀತಾಳನ್ನು ಅತ್ಯಂತ ಮಮತೆಯಿಂದ ನೋಡಿಕೊಳ್ಳುತ್ತಿದ್ದ. ನರೇಂದ್ರನ ಜೀವವನ್ನು ಆಸ್ತಿ – ಪಾಸ್ತಿಯನ್ನು ಸಿರಿಲ್ ಬ್ರ್ಯಾಂಡನ್‌ನು ಉಳಿಸಿದ್ದರಿಂದ ಆತ ಅವನಿಗೆ ಬಹಳಷ್ಟು ಉಪಕೃತನಾಗಿದ್ದ. ಆದನ್ನು ಆತ –

''ನಿಮ್ಮ ಜೀವದ ಪರಿವೆ ಇಲ್ಲದೆ ನೀನು ನಮ್ಮ ಜೀವವನ್ನು ಉಳಿಸಿರುವಿ. ನಿಮ್ಮ ರಕ್ತವನ್ನು ನಮಗಾಗಿ ಸುರಿಸಿರುವಿರಿ. ನಮ್ಮ ಉಪಕಾರದ ಭಾವನೆಗಳನ್ನು ಸಾಯುವವರೆಗೂ ತೋರಿಸುವೆವು.... ಏನೆಲ್ಲಾ ನಮ್ಮದಿದೆಯೋ ಅದು ನಿಮ್ಮದು...'' ಎಂದು ಹೇಳುತ್ತಿದ್ದ.

ಹಿರಿಯನಾಗಿ ಆತ ಸೀತಾ ಹಾಗೂ ಸಿರಿಲ್ಲರ ಮದುವೆಗೆ ಸಮ್ಮತಿ ಇತ್ತ. ಆದರೆ ಈ ರೀತಿಯ ವಿವಾಹ ಮಾಡಿ ನಮ್ಮ ಸಮಾಜದ ಪಾವಿತ್ರ್ಯ ಹಾಳು ಮಾಡಿದ ಎಂದು ಜನರು ಅನ್ನಹತ್ತಿದರು. ಆದರೆ ಅವರ ಮಾತಿಗೆ ಆತ ಬೆಲೆ ಕೊಡಲಿಲ್ಲ. ಆತನ ಧರ್ಮ ಗುರುಗಳು ಪಾಪ ಪರಿಹಾರಕ್ಕೆಂದು ಬನಾರಸದ ಯಾತ್ರೆ ಮಾಡಿ ಬಾ ಎಂದು ಹೇಳಿದಾಗ ಅದನ್ನು ನಿರಾಕರಿಸಲಿಲ್ಲ.

ಕೊನೆಗೆ ಸಿರಿಲ್ಲನು ಮರಳಿ ಇಂಗ್ಲೆಂಡಿಗೆ ಹೋದ ಮೇಲೂ ಸಹ ಅನೇಕ ಸಾಮಾನುಗಳನ್ನು ಕಾಣಿಕೆ ರೂಪದಲ್ಲಿ ಕಳಿಸಿದ್ದು ಆತನಲ್ಲಿಯ ದಯೆ ಹಾಗೂ ವಿಶಾಲ ಮನೋಭಾವವನ್ನು ತೋರಿಸಿಕೊಡುವುದು.

ನರೇಂದ್ರನ ತಂಗಿಯಾದ ಎಲ್ಲಾ ಎನ್ನುವವಳು ಸನಾತನ ಹಿಂದು ಧರ್ಮದ ಪ್ರತಿನಿಧಿ ಆಗಿದ್ದಾಳೆ. ವಿಧವೆಯಾಗಿ ಅವಳು ಕಠೋರತಮ ಜೀವನ ಸಾಗಿಸುತ್ತಾಳೆ. ಸನಾತನ ಧರ್ಮದಂತೆ ಬಾಳುತ್ತಿದ್ದರು. ಅವಳ ಮನಸ್ಸು ಹೊಸತನ್ನು ಬಯಸುತ್ತಿತ್ತು. ಸಿರಿಲ್‌ನ ಸಾಹಸ ಪರಾಕ್ರಮ ನೋಡಿ ಅವಳೂ ಅವನಿಗೆ ಋಣಿಯಾಗಿದ್ದಳು. ಮತ್ತೂ ಅವನಿಗೆ ಅಂತಃಕರಣ ಪೂರ್ವಕವಾಗಿ ಸೇವೆ, ಉಪಚಾರ ಮಾಡಿದಳು. ಸಿರಿಲ್ಲನು ಭಾರತೀಯ ಆಹಾರವನ್ನು ತಿನ್ನಲು ಮಿಜಿ ಮಿಜಿ ಮಾಡುತ್ತಿದ್ದಾಗ, ಅವಳು ಅವನಿಗೆ ತಿನ್ನಲು ಹಚ್ಚಿದಳು.

''..... ನೀವುಎಂಥ ಆಹಾರ ತಿನ್ನುತೀರಿ, ನಮಗೆ ಗೊತ್ತಿಲ್ಲ ... ಈ ಸಾದಾ ಆಹಾರವು ನಿಮಗೆ ಒಳ್ಳೆಯದನ್ನು ಮಾಡುವದು.... ನೀವು ಚಮಚದಿಂದ ಉಣ್ಣಲು ಇಲ್ಲೊಂದು ಚಮಚ ಇದೆ. ನೀವು ಊಟ ಮಾಡುವಾಗ ಬೆರಳುಗಳನ್ನು ಉಪಯೋಗಿಸುವುದಿಲ್ಲ ಎಂಬುದು ಗೊತ್ತಿದೆ.

ಹಿಂದು ಕಾಯಿದೆ, ಕಟ್ಟಳೆಗಳಿಗೆ ವಿರುದ್ಧ ಎನಿಸಿದರೂ ಸೀತಾ ಹಾಗೂ ಸಿರಿಲ್ಲರ ಲಗ್ನಕ್ಕೆ ಒಪ್ಪಿಗೆ ಇತ್ತಳು. ಇದು ಅವಳಲ್ಲಿಯ ಬದಲಾವಣೆ ತೋರಿಸುತ್ತದೆ. ಸಿರಿಲ್ಲನಿಗೆ ತಲುಪುವಂತೆ ಇಂಗ್ಲೆಂಡಿಗೆ ಅನೇಕ ತಿಂಡಿ ತಿನಿಸುಗಳನ್ನು ಮಾಡಿ ಕಳುಹಿಸುತಿದ್ದಳು. ವಿಶೇಷವಾಗಿ ಹಪ್ಪಳ, ಶ್ಯಾವಿಗೆ,ಉಪ್ಪಿನಕಾಯಿಯಂಥವುಗಳನ್ನು ಕಳುಹಿಸುತ್ತಿದ್ದಳು.

ಇನ್ನು ಕ್ರಿಶ್ಚಿಯನ್ ಪಾತ್ರಗಳಲ್ಲಿ ಸಿರಿಲ್ ಬ್ರ್ಯಾಡ್‌ನ್ನನದು ಅತ್ಯುತ್ತುಮವಾಗಿದೆ. ಅವನನ್ನು ಆದರ್ಶನ್ಯಾಯಾಧೀಶ, ಪಂಡಿತ ಹಾಗೂ ಪ್ರೇಮಿ ಎಂದು ಚಿತ್ರಿಸಲಾಗಿದೆ. ಆತ ತನ್ನಲ್ಲಿರುವ ಶಾರೀರಿಕ ಬಲ, ನೈತಿಕ ಧೈರ್ಯ ಹಾಗೂ ಸಾಹಸಗುಣಗಳನ್ನು ಚೆನ್ನಾಗಿ ತೋರಿಸಿಕೊಡುತ್ತಾನೆ. ಅಝುರಲ್ ಪಾಂಡೆ ಈತನಿಗೆ ಭೀತಿ ಹುಟ್ಟಿಸುವ ಪತ್ರ ಬರೆದಾಗ ಆತ ಅದನ್ನು ಆಹ್ವಾನವನ್ನಾಗಿ ಸ್ವೀಕರಿಸುತ್ತಾನೆ. ಇದೇ ಅಝುರಲ್ ಪಾಂಡೆಗೆ ಆತ ಜೀವಾವದಿ ಶಿಕ್ಷೆ ಕೊಟ್ಟಿದ್ದ. ಆದರೂ ಆತ ಜೇಲಿನಿಂದ ಪರಾರಿಯಾಗಿದ್ದ. ಆ ಪತ್ರದಲ್ಲಿ ಹೀಗಿತ್ತು

''ಬ್ಯಾಂಕರ ನರೇಂದ್ರನನ್ನು ಕೊಂದು ಪರಾರಿಯಾಗುವೆವು , ಅವನ ಸಂಪತನ್ನನ್ನು ಲೂಟಿ ಮಾಡುವೆವು ..... ಇನ್ನು, ನೀನೂ ಎಚ್ಚರದಿಂದಿರು. ..''

ಈ ಭೀತಿ ಗೊಳಿಸುವ ಪತ್ರಕ್ಕೆ ಸಿರಿಲ್ ಅಂಜಲಿಲ್ಲ. ಅದರ ಬದಲಾಗಿ ಅವನಲ್ಲಿ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸಿತು. ಆತ ಸ್ವತಃ ನರೇಂದ್ರನ ಮನೆಗೆ ಹೋಗಿ ಈ ಪತ್ರದ ವಿಷಯ ತಿಳಿಸಿ ಅಝುರಲ್ ಪಾಂಡೆ ದರೋಡೆ ಮಾಡುವಾಗಲೇ ಅವನನ್ನು ಹಿಡಿಯುವ ಸಲುವಾಗಿ ಅವರ ಮನೆಯಲ್ಲಿದ್ದ. ಆದರೆ, ಅದು ಕರಾಳ ರಾತ್ರಿಯಾದುದರಿಂದ ಅಝುರಲ್ ಪಾಂಡೆ ಸಿರಿಲ್ಲನಿಗೆ ಬಲವಾದ ಪೆಟ್ಟು ಕೊಟ್ಟು ತಪ್ಪಿಸೊಂಡು ಓಡಿಹೋದ. ನರೇಂದ್ರನ ಆಂಟಿ ಎಲ್ಲಾಳ, ಸೀತಾಳ ಪ್ರಾಣ ಉಳಿಸಲು ಹೋಗಿ ಗಾಯಗೊಂಡ. ಸಿರಿಲ್‌ನನ್ನು ತಮ್ಮ ಮನೆಯಲ್ಲಿರಿಸಿಕೊಂಡು ಅವರು ಔಷಧೋಪಚಾರ ಮಾಡಿದರು. ಅವನು ಗುಣಮುಖನಾಗುವವರೆಗೆ ಸೀತಾಳೇ ಅವನಿಗೆ ಸೇವೆ, ಶುಶ್ರೂಷೆ ಮಾಡಿದಳು. ಅವಳಲ್ಲಿ ಇದ್ದ ಸೌಂದರ್ಯ, ತಿಳುವಳಿಕೆಯನ್ನು ಆತ ಮೆಚ್ಚಿಕೊಂಡ. ಅವಳ ಕೋಮಲ ಸ್ವಭಾವ, ಮಧುರ ಧ್ವನಿಗೆ ಮತ್ತಷ್ಟು ಮಾರು ಹೋದ. ಸಭ್ಯ ವ್ಯಕ್ತಿಯಾಗಿ ಲಗ್ನದ ಪ್ರಸ್ತಾಪವನ್ನು ಮಾಡಿದ.

ಹಿಂದೂ ಪದ್ಧತಿಯಂತೆ ಅವಳೊಡನೆ ಲಗ್ನವಾದ. ತನಗಾದ ಸಂತೋಷವನ್ನು ವ್ಯಕ್ತಪಡಿಸಿದ.

ಸಿರಿಲ್ - "Now I have all I wished for "

ಸೀತಾ - "All.... Only a poor Hindu girl ?"

ಸಿರಿಲ್ - "And she is enough"

ಸೀತಾಳಲ್ಲಿಯ ಸದ್ಗುಣ, ಕಲೆಯನ್ನು ಕೊಂಡಾಡಿದ. ಈ ವಿವಾಹದ ನಂತರ ಅವನ ಬಂಧು - ಮಿತ್ರರು ಅವನನ್ನು ಟೀಕಿಸ ಹತ್ತಿದರು. ಆದರೆ ಅದಕ್ಕೆ ಆತ ಕಿವಿಗೊಡಲಿಲ್ಲ. ಅವನ ಮೇಲಾಧಿಕಾರಿಗಳು ನೀನು ಭಾರತೀಯಳನ್ನೇಕೆ ಮದುವೆಯಾದೆ ಎಂದು ಲಿಖಿತದಲ್ಲಿ ಕೇಳಿದಾಗ ಅದಕ್ಕೆ ಆತ ಉತ್ತರವಿತ್ತ. ''ನಾನು ಹಿಂದೂ ಪದ್ಧತಿಯಲ್ಲಿ ಅವಳನ್ನು ಮದುವೆಯಾಗಿರುವೆ ನಿಜ. ಆದರೆ ನಾನು ಮಾಡಿದ್ದು ತಪ್ಪಲ್ಲ, ಅದನ್ನು ಗೌರವಿಸುತ್ತೇನೆ.''

ಇದು ಅವನಲ್ಲಿರುವ ದೃಢವಾದ ನಂಬಿಕೆಯನ್ನು, ಸುಸಂಸ್ಕೃತ ಗುಣಗಳನ್ನೂ ತೋರಿಸಿಕೊಡುತ್ತದೆ. ಅವನ ತಾಯಿ ಹಾಗೂ ಅಣ್ಣ ಈ ವಿವಾಹ ಸರಿಯಲ್ಲವೆಂದಾಗ ಮಿಸ್ಟರ ಮೊಸ್ಟಿನ್ನನ ಮುಖಾಂತರ -He did no wrong and he was true' ಎಂದು ತಿಳಿಸಿದ. ತನ್ನಷ್ಟೇ ಉತ್ತಮಳಾದ ಭಾರತೀಯಳನ್ನು ಮದುವೆ ಮಾಡಿಕೊಂಡದ್ದು ಆತನಿಗೆ ಅಭಿಮಾನವನ್ನುಂಟು ಮಾಡಿತ್ತು.

ಸಿರಿಲ್‌ನು ಧರ್ಮಾಂಧನಾದ ಕ್ರಿಶ್ಚಿಯನ್ ಆಗಿರಲ್ಲಿಲ. ನಾನು ನಿನ್ನ ದೇವರಿಗೆ ಬೇಡಿಕೊಳ್ಳಬಹುದೇ ಎಂದು ಸೀತಾ ಮುಗ್ಧತೆಯಿಂದ ಕೇಳಿದಾಗ ಆತ -'My darling, God is your God as well as mine" ಎಂದು ಹೇಳಿದ. ಸಿರಿಲ್ ಕೇವಲ ಗಂಡನಾಗಿರದೆ ಅವಳಿಗೆ ಶಿಕ್ಷಕನಾಗಿಯೂ ಕಾರ್ಯ ಮಾಡಿದ. ತನ್ನ ದೇಶದ ಬಗ್ಗೆ, ಧರ್ಮ, ಸಂಸ್ಕೃತಿ, ನಾಗರಿಕತೆ, ಸಂಗೀತ, ಸಾಹಿತ್ಯಗಳ ಬಗ್ಗೆಲ್ಲ ಕಲಿಸಿದ. ಹೀಗಾಗಿ ಅವಳ ಭಾವನೆಗಳು, ಜ್ಞಾನ, ದೃಷ್ಟಿಕೋನ ವಿಶಾಲವಾದವು.

ಪ್ರೇಮದಲ್ಲಿ ನಿಷ್ಠುರನಾಗಿಯೂ, ಕರ್ತವ್ಯದಲ್ಲಿ ದಕ್ಷನಾಗಿಯೂ ಆತನಿದ್ದ. ಸಿಪಾಯಿಗಳ ಬಂಡಾಯದ ಘೋರ ಕಾಲದಲ್ಲಿ ನರೇಂದ್ರ ಅವನಿಗೆ ತಾಯ್ನಾಡಿಗಾಗಲಿ ಮತ್ತೆಲ್ಲಿಗಾಗಲಿ ಹೋಗಲು ಹೇಳಿದ. ಆಗ ಆತ ಹೇಳಿದ -

'' ನರೇಂದ್ರ, ನೀನು ನನ್ನನ್ನು ಚೆನ್ನಾಗಿ ತಿಳಿದುಕೊಂಡಿಲ್ಲ. ನಾನು ಹೋಗುವದಿಲ್ಲ. ಏನು ಬೇಕಾದರು ಸಂಭವಿಸಲಿ, ನಾವು ಇಂಗ್ಲೀಷರು ನಮ್ಮ ಹುದ್ದೆಯಲ್ಲಿ ಸಾಯುವೆವೆ ಹೊರತು, ಅದನ್ನು ತ್ಯಜಿಸಿ ಹೋಗುವುದಿಲ್ಲ'' ಎಂದು.

ಬಾಬಾ ಸಾಹೇಬ ಎಂಬುವವನು ಸಿರಿಲ್‌ನನ್ನು ಬೀಳ್ಕೊಡುವಾಗ ಹೇಳಿದ - '' ನೀವು ನಮ್ಮನ್ನು ನಿಮ್ಮ ಮಕ್ಕಳೆಂದು ಭಾವಿಸಿ ಕಾಳಜಿ ತೆಗೆದುಕೊಂಡಿರಿ. .... ನೀವು ಯಾರನ್ನು ಎಂದಿಗೂ ಕೀಳಾಗಿ ಕಾಣಲಿಲ್ಲ. ಇದು ಸುಸಂಸ್ಕೃತ ಅಧಿಕಾರಿಯ ಲಕ್ಷಣವಾಗಿದೆ.

ಸಿರಿಲ್‌ನಿಗೆ ಸೀತಾ ಎಷ್ಟು ದೊಡ್ಡ ವ್ಯಕ್ತಿ ಎಂಬುದು ಆತನನ್ನು ಉಳಿಸಿ, ತನ್ನ ಪ್ರಾಣ ತ್ಯಾಗ ಮಾಡಿದಾಗ ಅವನಿಗೆ ಗೊತ್ತಾಯಿತು ಈ ಘಟನೆಯನ್ನು ತನ್ನ ತಾಯಿಗೆ ಅಣ್ಣನಿಗೆ ತಿಳಿಸಿದಾಗ ಅವರು ''ಈಗ ನಮಗೆ ಸೀತಾಳ ಘನತೆ ಬಗ್ಗೆ ಗೊತ್ತಾಗಿದೆ. ಅವಳ ಸ್ಮರಣೆ ನಮ್ಮ ಮನದಲ್ಲಿ ಸದಾ ಕಾಲ ಇರುವದು.''

ಸೀತಾಳ ಬಗ್ಗೆ ತನ್ನಲ್ಲಿರುವ ನಿಜವಾದ ಪ್ರೀತಿಯನ್ನು ವ್ಯಕ್ತಪಡಿಸಲು ಆತ ಸೀತಾಳು ನುಡಿಸುತ್ತಿದ್ದ ವೀಣೆಯನ್ನು ತನ್ನೊಡನೆ ತನ್ನ ದೇಶಕ್ಕೆ ಒಯ್ದ. ನಿಜವಾದ ಪ್ರೇಮಿಯಾಗಿ, ಉತ್ತಮ ಆಡಳಿತಾಗಾರನಾಗಿ ಟೇಲರನು ಸ್ವತಃ ಹೇಗೆ ಈ ದೇಶದಲ್ಲಿ ಬಾಳಿದನೋ ಅಂಥದೇ ಪಾತ್ರವನ್ನು ಸಿರಿಲ್‌ನನ್ನಾಗಿ ಆತ ಚಿತ್ರಿಸಿದ್ದಾನೆ.

ನೂರಪುರ ಜಿಲ್ಲೆಯಲ್ಲಿ ಜಡ್ಜ (ನ್ಯಾಯಾಧೀಶನಾಗಿ ಕಾರ್ಯ ಮಾಡಿದ ಮಿಸ್ಟರ ಮಾಸ್ಟಿನ್ ಸಹ ಭಾರತವನ್ನು ಮೆಚ್ಚಿಕೊಂಡ ಅಧಿಕಾರಿಯಾಗಿದ್ದಾನೆ. ಸೀತಾಳನ್ನು ಆತ ಮೊಟ್ಟಮೊದಲ ಬಾರಿ ನೋಡಿದಾಗ ಅವಳ ಸೌಂದರ್ಯ ಕಂಡು ಬೆರಗಾದ.

"I cannot get that girl out of my head, what a lovely creature she is ! and so modest, yet so firm and dignified !" ಎಂದು ಉದ್ಗರಿಸಿದ. ಸಿರಿಲ್ ಹಾಗೂ ಸೀತಾ ವಿವಾಹವಾಗಿ,ಸುಖವಾಗಿ ಬಾಳುವದನ್ನು ಕಂಡು ಸಂತಸಪಟ್ಟ. ಅಲ್ಲದೆ ಬ್ರಿಟಿಷರು ಭಾರತೀಯ ಮಹಿಳೆಯರ್ನು ಮದುವೆಯಾಗುವುದು ಒಳ್ಳೆಯದು ಎಂದು ತನ್ನ ವೈಯಕ್ತಿಕ ಅಭಿಪ್ರಾಯವಾಗಿ ಹೇಳಿದ.

"....... many of us would be happier with such a wife (Seeta) than with some of our own people " ಆತ ಸೀತಾಳನ್ನು ಇಂಗ್ಲಿಷ್ ಮಹಿಳೆಗಿಂತ ಉತ್ತಮ ಎಂದು ಬಗೆದದ್ದು ಗೊತ್ತಾಗುತ್ತದೆ. ಭಾರತೀಯ ನಾರಿ ಸೀರೆ ಉಟ್ಟಾಗ ಚಲುವೆಯಾಗಿ ಕಾಣುತ್ತಾಳೆ ಎಂದು ಅಂದ. ಅವನ ಸಂತೋಷಕ್ಕಾಗಿ ಅವಳು ಮಹಾಭಾರತದಲ್ಲಿರುವ 'ಸಾವಿತ್ರಿ' ಕತೆಯನ್ನುಓದಿ ತೋರಿಸಿದಳು. ಅದನ್ನು ಮಾಸ್ಟಿನ್ ಬಹುವಾಗಿ ಹೊಗಳಿದರು. ತನ್ನ ದೇಶಕ್ಕೆ ಹೋದ ಬಳಿಕ ಸೀತಾಳು ಮಾಡಿದ ಆತ್ಮ ಪರಿತ್ಯಾಗವನ್ನು ವಿವರಿಸಿ ಹೇಳಿದ. ಅದನ್ನು ಕೇಳಿದವರೆಲ್ಲ ಸೀತಾಳ ಗುಣಗಾನ ಮಾಡಿದರು. ಭಾರತೀಯ ಮಹಿಳೆಯನ್ನು, ಸಂಸ್ಕೃತಿಯನ್ನು ಅರ್ಥಮಾಡಿಕೊಂಡರು.

ಮಿಸೆಸ್ ಮಾಸ್ಟಿನ್, ಅವನ ಹೆಂಡತಿ ಕೂಡ ಸುಸಂಸ್ಕೃತ ಮಹಿಳೆಯಾಗಿದ್ದಳು. ಅವಳೂ ಸಹ ಸೀತಾಳ ಬಗ್ಗೆ ಪ್ರೀತಿ, ಗೌರವ ಹೊಂದಿದ್ದಳು. ಗ್ರೇಸ ಮಾಸ್ಟಿನ್ ಕೂಡ ಸೀತಾಳನ್ನು ಪ್ರೀತಿಸಿದಳು. ''ಯಾವುದೇ ಹೆಣ್ಣು ಮಗಳು ಸೀತಾಳಂತೆ ಇರಬಹುದ ಎಂಬುದನ್ನು ನಾವು ನಂಬುತ್ತಿರಲಿಲ್ಲ''ಎಂದು ಹೊಗಳಿದಳು. ಮಿಸೆಸ್ ಮಾಸ್ಟಿನ್‌ಳು ಸೀತಾಳನ್ನು ಮೊದಲ ಬಾರಿಗೆ ಕಂಡಾಗ ಅವಳಲ್ಲಿ ತಾಯಿಯ ಭಾವನೆಗಳು ಬಂದು ಅವಳನ್ನು ಚುಂಬಿಸಿದಳು. ಈ ರೀತಿ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ಸದ್ಭಾವನೆಗಳು ಬೆಳೆದು ಬಂದು ಎರಡು ಸಂಸ್ಕೃತಿಗಳು ಕೂಡಿಕೊಂಡವು.

ಬಹಳಷ್ಟು ಪಾತ್ರಗಳು ಸುಶಿಕ್ಷಿತ ಹಾಗೂ ಸುಸಂಸ್ಕೃತ ಆಗಿರುವುದರಿಂದ ಅವರು ತಮ್ಮ ಸಂಭಾಷಣೆಯಲ್ಲಿ ವಿನಯ, ವಿನಮ್ರತೆ, ಗೌರವ ತೋರುತ್ತಾರೆ. ಮನದ ಭಾವನೆಗಳನ್ನು ಇಂಗಿತವನ್ನು ಸ್ಪಷ್ಟಪಡಿಸುತ್ತಾರೆ. ಉದಾಹರಣೆಗೆ ನರೇಂದ್ರನ ಮನೆಯಲ್ಲಿ ಗಾಯಗೊಂಡ ಸಿರಿಲ್ ಬ್ರ್ಯಾಂಡನ್ನನಿಗೆ ಉಪಚರಿಸುವಾಗ ಆತ ಮತು ಸೀತಾ ಆಡಿದ ಮಾತುಗಳು ತನ್ನ ಮಗನನ್ನು ಸಿರಿಲ್ ಹತ್ತಿರ ಹೋಗ ಬಯಸುವದನ್ನು ನೋಡಿ ಆಕೆ – ''ನಾನ ಅವನನ್ನು ನಿನ್ನ ಹತ್ತಿರ ತಂದಿದ್ದೇನೆ. ನೋಡು ಅವನನ್ನು.... ನಿನಗೆಆತ ಅಂಜಲ್ಲ...... ಸರ್ ನೋಡಿ,..... ನಾನಾದರೂ ಅಂಜಲ್ಲ.... ಇದೆಷ್ಟು ಆಶ್ಚರ್ಯವಾಗಿದೆ.... ''

ಸಿರಿಲ್ ಕೇಳಿದ – ''ಯಾಕೆ? ಇದರಲ್ಲೇನಾಶ್ಚರ್ಯ ... ಎಲ್ಲ ಮಕ್ಕಳು ನನ್ನ ಹತ್ತಿರ ಯಾವುದೇ ಅಂಜಿಕೆಯಿಲ್ಲದೆ ಬರುತ್ತವೆ.''

''ಹೌದು.... ಅದು ನನಗೆ ಈಗ ಗೊತ್ತಾಯಿತು'' .... ಮುಂದುವರಿಸಿ

''ಯಾಕೆ ಬರುತ್ತವೆ ಎಂದರೆ ನೀವು ಬಹಳ ಒಳ್ಳೆಯವರಾಗಿದ್ದೀರಿ. ಚಿಕ್ಕಮಕ್ಕಳಿಗೆ ಯಾರು ಒಳ್ಳೆಯವರು ಎಂಬುದು ತಿಳಿಯುತ್ತದೆ... ನಾನೂ ಚಿಕ್ಕ ಮಗು ಇದ್ದಂತೆಯೇ .... ಏಕೆಂದರೆ ನನಗೂ ನಿಮ್ಮ ಬಗ್ಗೆ ಭಯ ಇಲ್ಲ.... ನನಗೆ ಎಂದಿಗೂ ಭಯ ಎನಿಸಲಿಲ್ಲ. ಇದು ವಿಚಿತ್ರ... ನೀವು ಇಂಗ್ಲಿಷರು.... ನಿಮ್ಮನ್ನು ನೋಡಿ ಜನರು ಅಂಜಿ ಬಿಡುತ್ತಾರೆ. ಆದರೆ ನಾನು ಮಾತ್ರ ಅಂಜುವುದಿಲ್ಲ.''

ಸಿರಿಲ್... '' ನನಗೆ ಅವರು ಅಂಜುವದಕ್ಕಿಂತ ಪ್ರೀತಿಸಿದರೆ ಹೆಚ್ಚು ಒಳ್ಳೆಯದೆನಿಸುವದು'' ಸೌಮ್ಯವಾಗಿ ನುಡಿದ.

''ಹಾ, ಹೌದು... ಅನೇಕರು ನಿಮ್ಮನ್ನು ಪ್ರೀತಿಸುತ್ತಾರೆ'' ಎಂದು ತನ್ನ ಮನದ ಇಂಗಿತ ತೋರಿಸಿದಳು.

ಅದರಂತೆ ಇಂಗ್ಲಿಷ್ ಸಮಾಜದಲ್ಲಿದ್ದರೂ, ಅವರು ಭೋಜನ, ನರ್ತನ, ಪಾರ್ಟಿ ಮಾಡಿದಾಗ ತಮ್ಮದೇ ಆದ ರೀತಿಯಲ್ಲಿ ಮಾತನಾಡಿ, ಮೋಜು ಮಾಡಿ, ನಕ್ಕು ನಲಿಯುತ್ತಿದ್ದುದು, ಸಂಭಾಷಣೆಗಳ ಮುಖಾಂತರ ತೋರಿಸಿದ್ದಾನೆ.

ಟೇಲರನ ವರ್ಣನಾ ವೈಖರಿ ಇಲ್ಲಿ ಉತ್ತುಂಗ ಮಟ್ಟಕ್ಕೇರಿದ್ದು ಕಂಡು ಬರುತ್ತದೆ. ನಿಸರ್ಗದ ರಮಣೀಯತೆಯನ್ನು ಬಣ್ಣಿಸಿದ್ದಾನೆ. ಉದಾಹರಣೆಗೆ ಮಳೆ ನೀರು, ಕಾಮನಬಿಲ್ಲಿನ ವರ್ಣನೆ ಇಂತಿದೆ.....

''ನೀರನ್ನು ಸುರಿಸುತ್ತಿದ್ದ ಮೋಡಗಳು ಆಗಸದಲ್ಲಿ ಸಂಚರಿಸುತ್ತಿದ್ದವು. ಅವು ಸುರಿಸುತ್ತಿದ್ದ ನೀರ ಹನಿಗಳು ವಜ್ರಗಳ ಸರಮಾಲೆಯಂತೆ ಬೀಳುತ್ತಿದ್ದವು. ಸೂರ್ಯನ ಬೆಳಕಿನಲ್ಲಿ, ಬೆಳ್ಳಗೆ ಹೊಳೆಯುತ್ತಿದ್ದವು. ಅಂಥವರಲ್ಲಿ ಕೆಲವೊಮ್ಮೆ ಕಾಮನ ಬಿಲ್ಲು ಕಾಣಿಸುತ್ತಿತ್ತು, ಮತ್ತೆ ಮತ್ತೆ ಮರೆಯಾಗುತ್ತಿತ್ತು. ''

ಕಥನ ಶೈಲಿಯಂತೂ ಮನ ಮೋಹಕವಾಗಿದೆ. ಭಾರತೀಯ ಭಾಷೆಯಲ್ಲಿಯ ಸುಂದರ ಶಬ್ದಗಳು, ಗಾದೆ ಮಾತುಗಲು ಅಲ್ಲಲ್ಲಿ ಬಂದದ್ದು ರಂಜಕತೆಯ ಮೆರಗನ್ನು ತಂದಿವೆ. ನಾಟಕೀಯವಾಗಿ ನಡೆವ ಸಂಭಾಷಣೆಗಳಲ್ಲಿ ಸಹಜತೆ, ಭಾವುಕತೆ ಎದ್ದು ಕಾಣುತ್ತವೆ. ಪರಸ್ಪರರಲ್ಲಿ ಎಷ್ಟೊಂದು ಗೌರವ ತೋರಿಸುತ್ತಿದ್ದರು ಎಂಬುದನ್ನು ಸಿರಿಲ್ ಹಾಗೂ ಸೀತಾ ಇವರ ಮೊದಲ ಭೇಟಿಯ ಪ್ರಸಂಗದಲ್ಲಿ ನೋಡಬಹುದು. ಸೀತಾಳ ಹೇಳಿಕೆಗಳನ್ನು ಪಡೆದುಕೊಂಡ ಸಿರಿಲ್ "I honour her, Sir," ಎಂಬ ಮಾತು, ಅದಕ್ಕೆ ಸೀತಾ – 'We worship you as our Gods" ಎಂಬ ಮಾತು ಧ್ವನಿ ಪೂರ್ಣವಾಗಿದೆ.

ಸಿಪಾಯಿಗಳ ಬಂಡಾಯದ ಬಗ್ಗೆಯೇ ಐವತ್ತಕ್ಕಿಂತ ಹೆಚ್ಚು ಕಾದಂಬರಿಗಳು ಬಂದಿವೆ. ಆದರೆ ಸೀತಾಳಂಥ ಕಾದಂಬರಿ ಮತ್ತೊಂದಿಲ್ಲ. ಇಲ್ಲಿಟೇಲರನು ಕಾದಂಬರಿ ರಚಿಸುವ ಕಲೆಯಲ್ಲಿ ಪರಿಪೂರ್ಣತೆಯನ್ನೂ, ಪರಿಪಕ್ವತೆಯನ್ನು ಪಡೆದಿದ್ದನ್ನು ಕಾಣುತ್ತೇವೆ. ಆ ಬಳಿಕ ಬಂದ ರುಡ್ಯಾರ್ಡ ಕಿಪ್ಲಿಂಗನ ಮಾತನ್ನು –

"East is East, and West is west,
And never the twain shall meet"

ಟೇಲರನು ಒಪ್ಪುವುದಿಲ್ಲ. ಟೇಲರನು ತನ್ನ ಕಾದಂಬರಿಯ ಪ್ರಾರಂಭದ ಪುಟದಲ್ಲಿ ಶೇಕ್ಸಪಿಯರನ ಸುಪ್ರಸಿದ್ಧವಾದ 'ಟ್ರು ಲವ್ಹ' ಎಂಬ ಅಷ್ಟ ಷಟ್ಪದಿಯ ಮಾತುಗಳನ್ನು ಆಯ್ದು ಕೊಂಡಿದ್ದಾನೆ.

"Let me not to the marriage of true minds,
Admit impediments, Love isnot love
Which alters......."

ಎಂಬುದನ್ನು ತನ್ನ ಮೂರೂ ಕಾದಂಬರಿಗಳ ಮುಖಾಂತರ ತೋರಿಸಿದ್ದಾನೆ.''

ಅಧ್ಯಾಯ ೬

'ಎ ನೊಬೆಲ್ ಕ್ವೀನ'

(ಭಾರತದ ಒಟ್ಟುಗೂಡಿಸಿದ ಚಿತ್ರಣ)

ಭಾರತದ ಸಂಯುಕ್ತ ಚಿತ್ರಣ

ಈ ಕಾಂದಬರಿಯು 'ದ ಓವ್ಹರಲ್ಯಾಂಡ ಮೇಲ' ದಲ್ಲಿ ಭಾಗ ಭಾಗವಾಗಿ ಪ್ರಕಟವಾಗಿ ಕೊನೆಗೆ ಪುಸ್ತಕ ರೂಪದಲ್ಲಿ, ೧೮೭೮ರಲ್ಲಿ ಆತ ಸಾಯುವದಕ್ಕೆ ಕೆಲವು ತಿಂಗಳು ಮಂಚಿತವಾಗಿ ಪ್ರಕಟವಾಯಿತು. ಈ ಮೊದಲು ಭಾರತವನ್ನು ಅನಾಗರಿಕ, ಅರೆನಾಗರಿಕ ಹಾಗೂ ನಾಗರಿಕ ದೇಶವೆಂದು ಮೂರು ಭಾಗಗಳಿಲ್ಲ ತೋರಿದ್ದನ್ನೆಲ್ಲ ವನ್ನು ಒಟ್ಟುಗೂಡಿಸಿದ ಚಿತ್ರಣವನ್ನು ಇಲ್ಲಿ ಕೊಟ್ಟಿದ್ದಾನೆ. ಇದು ಅವನ ಕೊನೆಯ ಸಾಹಿತ್ಯ ಕೃತಿಯಾಗಿದೆ. ಹದಿನಾರು, ಹದಿನೇಳು ಹಾಗೂ ಹದಿನೆಂಟನೆಯ ಶತಮಾನಗಳ ಚಿತ್ರಣವನ್ನು ಕೊಟ್ಟ ಆತ ಈ ಕಾದಂಬರಿಯಲ್ಲಿ ಹದಿನೈದನೆಯ ಶತಮಾನದ ಚಿತ್ರಣವನ್ನಿತ್ತಿದ್ದಾನೆ. ಅದಕ್ಕೆ ಕಾರಣವನ್ನು ಆತನೇ ಹೇಳಿದ್ದಾನೆ –

''ನಾನು ಬರೆದ ಈ ಮೊದಲಿನ ಐತಿಹಾಸಿಕ ಕಾದಂಬರಿಗಳಿಗೆ ದೊರೆತ ಮನ್ನಣೆ ನೋಡಿ ನನಗೆ ಮತ್ತೊಂದು ಐತಿಹಾಸಿಕ ಕಾದಂಬರಿ ಬರೆಯಬೇಕೆಂದು ಪ್ರೋತ್ಸಾಹನೆ ದೊರೆಯಿತು. ಅದಕ್ಕಾಗಿ ದಕ್ಷಿಣ ಭಾರತದ ಅತೀ ಮಹತ್ವದ ಕಾಲವನ್ನು ಆಯ್ದುಕೊಂಡೆ.''

ಇದಕ್ಕೆ ಇನ್ನೊಂದು ಕಾರಣವೂ ಇದೆ. ಅದೇನೆಂದರೆ ಈ ಕಾದಂಬರಿಯ ನಾಯಕಿಯಾದ ಚಾಂದಬೀಬಿಯನ್ನು ಅವಳ ಸಮಕಾಲೀನಳಾದ ಇಂಗ್ಲೆಂಡಿನ ರಾಣಿ ಮೊದಲನೇ ಎಲಜಬೆಥ್‌ಳೊಂದಿಗೆ ಹೋಲಿಸಿ ನೋಡುವದು. ಇಸ್ಲಾಮಿಕ್ ಸಂಸ್ಕೃತಿ, ನಾಗರಿಕತೆ, ನೃತ್ಯ , ಸಂಗೀತ, ಶಿಲ್ಪಕಲೆಗಳ ಆಗರವಾದ ವಿಜಾಪುರವು ಅವನಿಗೆ ಐತಿಹಾಸಿಕ ಸಾಮಗ್ರಿಯನ್ನು, ಸಾಮಾಜಿಕ, ಜೀವನವನ್ನು ಒದಗಿಸಿತು. ಎರಡನೆಯ ಇಬ್ರಾಹಿಮನ ಕಾಲವು ಸುವರ್ಣ ಯುಗವಾಗಿದ್ದು ಆತ ಎಲ್ಲ ಕಲೆಗಳಿಗೆ, ಧರ್ಮ ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದ. ಅವನ ಆಳ್ವಿಕೆಯ ಕಾಲವು "made his reign memorable in the annals of Bijapur" ಎಂದು ಪ್ರಸಿದ್ಧವಾಗಿದೆ.

ಐತಿಹಾಸಿಕ ಹಿನ್ನೆಲೆ ಹೊಂದಿದ ಈ ಕಾದಂಬರಿಯೂ ಈ ಮೊದಲಿನ ಕಾದಂಬರಿಗಳಂತೆ ಪ್ರೇಮ ಕಥೆಯೊಂದನ್ನು ಹೇಳುತ್ತವೆ. ಅತ್ಯಂತ ಘನವಂತಳಾದ ರಾಣಿ ಚಾಂದ ಬೀಬಿಯು ಹಿಂದುಗಳನ್ನು , ಮುಸಲ್ಮಾನರ್ನು, ಹಾಗೂ ಕ್ರಿಶ್ಚಿಯನ್ನರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದಳು. ಅವಳು ವಿಜಾಪುರವನ್ನು ಹಲವು ವರ್ಷ ಆಳಿ ಯುವರಾಜನು ದೊಡ್ಡವನಾದ ಬಳಿಕ ಮರಳಿ ತನ್ನ ತವರೂರಾದ ಅಹಮ್ಮದನಗರಕ್ಕೆ ತೆರಳಿದಳು. ಏಕೆಂದರೆ ಮೊಗಲರು ಅದರ ಮೇಲೆ ಮುತ್ತಿಗೆ ಹಾಕಿದ್ದರು. ಮೊಗಲರ ವಿರುದ್ಧ ಹೋರಾಡಿ ತನ್ನ ತವರೂರನ್ನು ರಕ್ಷಿಸುತ್ತಿದ್ದಾಗಲೆ ರಾಜಕೀಯ ಪಿತೂರಿಗೆ ಬಲಿಯಾಗಿ ಮಡಿದು ಹೋದಳು. ಇದರ ಬಗ್ಗೆ ಟೇಲರ ಬರೆದಿದ್ದಾನೆ.

''ನಾನು ರಾಣಿಯ ಬಗ್ಗೆ ಬರೆದದ್ದೆಲ್ಲವೂ ಮಹಮ್ಮದ ಕಾಸಿಂ ಫರಿಶ್ತಾನು ಬರೆದ ಇತಿಹಾಸವನ್ನು ಅವಲಂಬಿಸಿದೆ. ಆ ಇತಿಹಾಸ ಪುಸ್ತಕವನ್ನು ಮೇಜರ ಜನರಲ್ ಬ್ರಿಗ್ಸನು ಭಾಷಾಂತರ ಮಾಡಿದ್ದು ಅದರ ಸಹಾಯದಿಂದ ಸತ್ಯಾಸತ್ಯತೆಯನ್ನು , ವಿವರವನ್ನು ಅರಿತುಕೊಳ್ಳಬಹುದಾಗಿದೆ.''

ಈ ಐತಿಹಾಸಿಕ ವಿಷಯಕ್ಕೆ ಅಬ್ಬಾಸ ಅಲಿ ಖಾನ ಎಂಬ ಶೂರ, ಯುವಕ, ಸರದಾರನ ಸಾಹಸದ ಹಾಗೂ ಪ್ರೇಮದ ಕಥೆಯನ್ನು ಜೋಡಿಸಲಾಗಿದೆ. ಆತ ಅತ್ಯಂತ ರಾಜನಿಷ್ಠನಾಗಿದ್ದು ಚಾಂದ ಬೀಬಿಯನ್ನು ತನ್ನ ತಾಯಿಯಂತೆ ಭಾವಿಸಿದ್ದನು. ಯುದ್ದದಲ್ಲಿ ಆತ ಗಾಯಾಳುವಾಗಿದ್ದಾಗ ಅವನನ್ನು ಮುದ್ಗಲಕ್ಕೆ ಕರೆದುಕೊಂಡು ಹೋದರು. ಅಲ್ಲಿ ವಿಜಾಪುರದ ರಾಜನಿಂದ ಹೊರಗಡೆ ಹಾಕಿಸಿಕೊಂಡ, ಕಣ್ಣುಗಳನ್ನು ಕಿತ್ತಿಸಿಕೊಂಡ, ರಾಜ ವೈದ್ಯನಾಗಿದ್ದ ಸೈಯ್ಯದ ಅಹಮ್ಮದ ಅಲಿ ಹಾಗೂ ಅವನ ಮಮ್ಮಗಳಾದ ಝೋರಾ ಎಂಬುವವರಲ್ಲಿದ್ದು ಗಾಯಕ್ಕೆ ಔಷಧ, ಉಪಚಾರ ಪಡೆದು ಕೊಳ್ಳುತ್ತಾನೆ. ಗಾಯ ಗುಣವಾಗುತ್ತಿರುವಾಗ ಆತ ಸುಂದರ ಯುವತಿ ಆದ , ತನ್ನ ಆರೈಕೆ ಮಾಡ್ಡಿದ ಝೋರಾಳೊಡನೆ ಪ್ರೇಮ ಮಾಡುತ್ತಾನೆ ವಿಜಾಪುರಕ್ಕೆ ಮರಳಿ ಬಂದನಂತರ ಮುದುಕನಾದ ಸೈಯ್ಯದನಿಗೆ ಘೋರ ಅನ್ಯಾಯ ಮಾಡಲಾಗಿದೆ ಎಂದು ರಾಣಿಗೆ ತಿಳಿಸಿದಾಗ ಅವಳು ಅವನನ್ನು ಪುನಃ ವಿಜಾಪುರಕ್ಕೆ ಸಕಲ ರಾಜ ಮರ್ಯಾದೆಯೊಂದಿಗೆ

ಕರೆಯಿಸಿಕೊಳ್ಳುತ್ತಾಳೆ. ಈ ರೀತಿ ಸೈಯ್ಯದ ಹಾಗೂ ಝೋರಾ ವಿಜಾಪುರಕ್ಕೆ ಬಂದಾದ ಮೇಲೆ ಅಬ್ಬಾಸಖಾನನು ರಾಣಿಯ ಸಮ್ಮತಿಯೊಂದಿಗೆ ಝೋರಾಳನ್ನು ಮದುವೆ ಆಗುತ್ತಾನೆ. ಚಾಂದಬೀಬಿಯು ಅಹಮ್ಮದ ನಗರದ ರಕ್ಷಣೆಗೆಂದು ಧಾವಿಸಿ ಅಲ್ಲಿಗೆ ಹೋಗುವಾಗ ಅಬ್ಬಾಸ ಖಾನ ಹಾಗೂ ಝೋರಾ ಇಬ್ಬರೂ ಅವಳೊಡನೆ ಹೋಗಿ ನಿಷ್ಠೆಯಿಂದ ಸೇವೆ, ಸಹಾಯ ಸಲ್ಲಿಸುತ್ತಾರೆ.

ಉಳಿದ ಕಾದಂಬರಿಗಳಲ್ಲಿ ಐತಿಹಾಸಿಕ ವಿಷಯವು ಹಿನ್ನೆಲೆಯಲ್ಲಿದ್ದರೆ ಈ ಕಾದಂಬರಿಯಲ್ಲಿ ಅದು ಮುಖ್ಯವಾಗಿದೆ. ಇತಿಹಾಸ ಹಾಗೂ ಪ್ರೇಮ ಕಥೆಗಳು ಎರಡೂ ಸಮ ಪ್ರಮಾಣದಲ್ಲಿ ಸಮ್ಮಿಳಿತವಾಗಿವೆ. ಸಾಹಸ – ಪರಾಕ್ರಮ ಹಾಗೂ ಆಧ್ಯಾತ್ಮ ಚಿಂತನೆ ಇವೆರಡೂ ಚಾಂದಬೀಬಿಯ ಕಾಲದಲ್ಲಿ ಪ್ರಚಲಿತದಲ್ಲಿದ್ದವು. ಈ ವಿಷಯವು ಸಾಂಸ್ಕೃತಿಕ ಹಾಗೂ ನಾಗರಿಕ ಜೀವನದ ತಳಹದಿಯಾಗಿದೆ. ಆ ಕಾಲದ ಉತ್ತರ ಕರ್ನಾಟಕದ ಜೀವನವನ್ನು ಪ್ರತಿಬಿಂಬಿಸುತ್ತದೆ.

ತನ್ನ ಪತಿಯ ನಿಧನದ ನಂತರ ರಾಣಿ ಚಾಂದಬೀಬಿಯು ಮಕ್ಕಳಿಲ್ಲದ್ದರಿಂದ ಬಿಜಾಪುರದ ರಾಜ್ಯ ಭಾರವನ್ನು ಅವಳು ಕ್ವೀನ ಡೊವೇಜರ ಆಗಿ ೧೫೮೦ರಲ್ಲಿ ಮಾಡಬೇಕಾಯಿತು. ಮುಖಕ್ಕೆ ಕವಚ ಹಾಕಿಕೊಂಡು, ಕೈಯಲ್ಲಿ ಕಠಾರಿ ಹಿಡಿದು ರಾಜರ ಆಟವಾದ ಪಕ್ಷಿಗಳನ್ನು ಹಾರಿಬಿಡುವುದರಲ್ಲೂ ಬಲ್ಲವಳಾಗಿದ್ದಳು. ಕುದುರೆಯ ಸವಾರಿ, ಓಟದಲ್ಲೂ ಪರಿಣತಳಾಗಿದ್ದಳು. ಸಂತಸಪಡುತ್ತಿದ್ದಳು. ಅವಳ ಧೈರ್ಯ , ಸಾಹಸ, ನಿಪುಣತೆಗೆ ಪಾರವೇಇರಲಿಲ್ಲ. ಅವಳಿಗೆ ಸಾಹಸವೆಂದರೆ ಬಲು ಇಷ್ಟವಾಗಿತ್ತು. ಯುದ್ಧಕಲೆಯಲ್ಲಿ ಚತುರಳಾಗಿದ್ದಳು. ಕೊನೆಗೆ ಅವಳು ತನ್ನ ತವರೂರನ್ನು ರಕ್ಷಿಸುತ್ತಿದ್ದಾಗಲೇ ಮಡಿದು ಹೋದಳು.

ಅದರಂತೆ ಅವಳ ಬಲಗೈ ಬಂಟನಾದ ಅಬ್ಬಾಸ ಖಾನನು ಶೂರನೂ, ಸರದಾರನೂ ಪರಾಕ್ರಮಿಯೂ ಆಗಿದ್ದನು. ಸಿಂಹದಂತೆ ಹೋರಾಡಿ, ವೈರಿಗಳನ್ನು ಸದೆಬಡಿಯುವಲ್ಲಿ ಯಶಸ್ವಿ ಆಗಿದ್ದನು. ಅಬ್ಬಾಸ ಖಾನನಿಗೆ ಉನ್ನತ ಹುದ್ದೆ ಕೊಟ್ಟು ತನ್ನೊಡನೆ ಅಹಮ್ಮದ ನಗರವನ್ನು ರಕ್ಷಿಸಲು ಕರೆದುಕೊಂಡು ಹೋಗಿದ್ದಳು.

ಬೇಡರ ಮುಖಂಡನಾದ ರಂಗನಾಯಕನು ಅತಿ ಬಲಿಷ್ಠನಾಗಿದ್ದನು. ಅವನಿಗೆ ಶಾರೀರಿಕವಾಗಿ ಮಾಡುವ ಯಾವ ಕಾರ್ಯವೂ ಅಸಾಧ್ಯವೆನಿಸುತ್ತಿರಲಿಲ್ಲ. ಯುದ್ಧದಲ್ಲಿ ನಿರ್ಭೀತಿ ಹಾಗೂ ನಿಪುಣ ಎಂದೆನಿಸಿಕೊಂಡಿದ್ದನು. ಕೃಷ್ಣಾ ನದಿ ತುಂಬಿ ಹರಿವಾಗಲೂ ಅನ್ನು ದಾಟುತ್ತಿದ್ದನು. ಉಸ್ಮಾನ ಬೇಗ ಎಂಬ ದುರುಳನು ಯುವತಿಯಾದ ಝೋರಾಳನ್ನು ಜಲದುರ್ಗದಲ್ಲಿ ಬಂಧನದಲ್ಲಿಟ್ಟಾಗ ಆತ ಅಲ್ಲಿಗೆ ಹೋಗಿ ಅವಳನ್ನು ಪಾರುಮಾಡಿಕೊಂಡು ತಂದಿದ್ದನು. ಪರಾಕ್ರಮ ಹಾಗೂ ಆತ್ಮಜ್ಞಾನಗಳು ಹೆಚ್ಚಾಗಿ ಜೊತೆಯಾಗಿ ಇರುವದಿಲ್ಲ. ಆದರೆ ಅವು ಎರಡೂ ಸುಸಂಸ್ಕೃತ

ಸಮಾಜದಲ್ಲಿರುವದನ್ನು ನಾವು ನೋಡಬಹುದು. ಶಾರೀರಿಕ ಸಾಹಸ ಪರಾಕ್ರಮದ ಜೊತೆಗೆ ಆಧ್ಯಾತ್ಮದ ಪ್ರಗತಿಯನ್ನು ನಾವು ಸಯ್ಯದ ಅಲಿ ಹಾಗೂ ಡಿ. ಅಲ್ಮೆಡಾ ಎಂಬೆರಡು ಪಾತ್ರಗಳಲ್ಲಿ ಕಾಣುವೆವು. ಫಕೀರನಾಗಿದ್ದ ಸೈಯ್ಯದನು ಆಧ್ಯಾತ್ಮದಲ್ಲಿ ಪ್ರಗತಿ ಸಾಧಿಸಿ 'ವಲಿ' ಎಂಬ ಕೀರ್ತಿಗೆ ಪಾತ್ರನಾದನು. ಇಸ್ಲಾಂದಲ್ಲಿ ಬೋಧಿಸುವಂತೆ ಆತ ಸ್ವರ್ಗದ ದಾರಿಯಲ್ಲಿ ಮುಂದುವರೆದವನಾಗಿದ್ದನು. ಆತ ಪವಿತ್ರ ಸೈಯ್ಯದನೆಂದು ಖ್ಯಾತಿ ಗಳಿಸಿ ಆತ್ಮಜ್ಞಾನದ ಮುಖಂಡನೆಂದೆನಿಸಿದನು. ತನ್ನ ಧರ್ಮ ತೋರುವ ಜ್ಞಾನ ದೀವಿಗೆಯನ್ನು ಎತ್ತಿ ಹಿಡಿದಿದ್ದನು. ಇಸ್ಲಾಂದಲ್ಲಿ ತಿಳಿಸಿಕೊಟ್ಟ ಎಲ್ಲಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಜನರಿಗೆ, ಧರ್ಮವಂತರಾಗಿ, ನೀತಿವಂತರಾಗಿ, ಪರೋಪಕಾರಿಯಾಗಿ, ಪವಿತ್ರರಾಗಿ ಬಾಳಲು ಉಪದೇಶಿಸುತ್ತಿದ್ದನು. ಸತ್ಯ, ಸಮರ್ಪಣೆ, ವೈರಾಗ್ಯ, ಮೊದಲಾದವುಗಳ ಮಹತ್ವವನ್ನು ತನ್ನ ಉಪದೇಶಾತ್ಮಕ ಬೋಧನೆಗಳ ಮುಖಾಂತರ ಕಲಿಸಿಕೊಡುತ್ತಿದ್ದನು.

ಸೈಯ್ಯದನ ಪ್ರತಿರೂಪದಂತೆ ಕ್ರಿಶ್ಚಿಯನ್ನನಾದ ಫ್ರಾನ್ಸಿಸ್ ಡಿ, ಅಲ್ಮೆಡಾ ಎಂಬುವವನಿದ್ದನು. ಆತ ಧರ್ಮ ಪ್ರಸಾರಕನಾಗಿದ್ದು ಮಾನವರ ಸೇವೆಯನ್ನೆ ತನ್ನ ಗುರಿಯನ್ನಾಗಿರಿಸಿಕೊಂಡಿದ್ದನು. ಅವನು ಹಾಗೂ ತಂಗಿಯಾದ ಮೇರಿಯಾ ಇಬ್ಬರೂ ಕೂಡಿ ದಕ್ಷಿಣ ಭಾರತದಲ್ಲಿ ಬೈಬಲ್ಲಿನ ವಿಷಯಗಳನ್ನು ತಿಳಿಸಿಕೊಡುತ್ತಿದ್ದರು. ಅದಕ್ಕಾಗಿ ಅವರು ಬೈಬಲ್ಲನ್ನು ಕನ್ನಡಕ್ಕೆ ಭಾಷಾಂತರಿಸಿದ್ದರು. ಆ ಧರ್ಮದ ತಿರುಳನ್ನರಿತು ಅದನ್ನು ಸ್ವೀಕರಿಸಿದವರಿಗೆ ಕ್ರಿಶ್ಚಿಯನ್ ಪದ್ಧತಿಯಂತೆ ನಾಮಕರಣ ಮಾಡುತ್ತಿದ್ದರು.

ಆದಿಲ ಶಾಹಿ ರಾಜರಲ್ಲಿ ಬಹಳಷ್ಟು ಜನರು ಕಲಾಪ್ರೇಮಿಗಳಾಗಿದ್ದರು. ಸಂಸ್ಕೃತಿ ಪ್ರೇಮಿಗಳಾಗಿದ್ದರು. ಅವರ ಆಳ್ವಿಕೆಯಲ್ಲಿಯೆ ಬಿಜಾಪುರದಲ್ಲಿ ಕಲಾರಾಧನೆ ಹೆಚ್ಚಾಗಿ ಶಿಲ್ಪಕಲೆಯಲ್ಲಿ ಉತ್ತುಂಗ ಶಿಖರವನ್ನು ಮುಟ್ಟಿತು. ಇಡೀ ನಾಡಿನಲ್ಲೆಲ್ಲ ಶಾಂತಿ ಹಾಗೂ ಸಮೃದ್ಧಿ ನೆಲೆಸಿತ್ತು. ವೈಭವದ ಉನ್ನತ ಹಂತ ತಲುಪಿತ್ತು. ಎಲ್ಲ ಧರ್ಮದವರು ಒಂದಾಗಿ ಬಾಳುತ್ತಿದ್ದರು. ಆದಿಲ್‌ಶಾಹಿಗಳಲ್ಲಿ ರಾಣಿ ಚಾಂದಬೀಬಿಯು ಅತೀ ಹೆಚ್ಚು ಸುಸಂಸ್ಕೃತಳಾಗಿದ್ದಳು. ರಾಣಿಯಂತೆ ಇತರರೂ ಸುಸಂಸ್ಕೃತ ನಾಗರಿಕ ಜೀವನ ನಡೆಸಿದ್ದರು. ಅವಳಲ್ಲಿಯ ಪಾಂಡಿತ್ಯ , ಪ್ರತಿಭೆ, ಘನತೆ, ಪ್ರೀತಿ, ನ್ಯಾಯ, ನಿಷ್ಠುರತೆ, ಕರುಣೆ, ಧರ್ಮ, ಜಾಣ್ಮೆ, ಸಹಿಷ್ಣುತೆ, ಕಲಾರಾಧನೆ ಮೊದಲಾದವುಗಳು ಯಾವಾಗಲೂ ಎದ್ದು ಕಾಣುತ್ತಿದ್ದವು. ಹೀಗಾಗಿ ಅವುಗಳನ್ನು ಲಲಿತಕಲೆಗಳ ಆಶ್ರಯದಾತಳೆಂದು ಕರೆಯುತ್ತಿದ್ದರು.

ಲಲಿತಕಲೆಗಳ ಏಳ್ಗೆಯಾಗುವದು ನಾಗರಿಕ ಸಮಾಜದಲ್ಲಿ ಮಾತ್ರ. ವಿಜಾಪುರದಲ್ಲಿಯ ಅಮೋಘ ಐತಿಹಾಸಿಕ ಕಟ್ಟಡಗಳು ರಾಜ - ರಾಣಿಯರಲ್ಲಿ ಇದ್ದ ಆಸಕ್ತಿ - ಪ್ರೀತಿ, ಕಲೆಗಾರರಿಗೆ ಕೊಡುತ್ತಿದ್ದ ಮಾನ - ಮನ್ನಣೆಗಳನ್ನು ತೋರಿಸಿ

ಕೊಡುತ್ತವೆ. ಎರಡನೆಯ ಇಬ್ರಾಹಿಂ ಆದಿಲಶಹನು ಕಟ್ಟಿಸಿದ ಇಬ್ರಾಹಿಂ ರೋಜಾ ಎಂಬುದು - 'One of the most superb buildings in India" ಎಂದು ಪ್ರಖ್ಯಾತವಾಗಿದೆ. ಏಕ ಕಾಲಕ್ಕೆ ಆರು ಸಾವಿರದಷ್ಟು ಜನ ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸುವಷ್ಟು ವಿಶಾಲವಾಗಿದೆ. ಅಲ್ಲದೆ ಜನರಲ್ಲಿದ್ದ ಧಾರ್ಮಿಕ ಪ್ರಜ್ಞೆ, ಹಾಗೂ ಕಲಾ ಪ್ರಜ್ಞೆಗಳ ದ್ಯೋತಕವಾಗಿದೆ. ಸುಲ್ತಾನ ಮಹಮ್ಮದನ ಗೋರಿ ಸ್ಥಳವಾದ ಗೋಲ ಗೊಮ್ಮಟವು ಏಳು ಸಲ ಪ್ರತಿಧ್ವನಿ ಮಾಡುವ ಮೂಲಕ, ವಿಸ್ಮಯವಾಗಿದ್ದು ವಿಜಾಪುರದ ಕಟ್ಟಡಗಳಲ್ಲೇ ಸರ್ವಶ್ರೇಷ್ಠ ಎನಿಸಿದೆ.ಅದು ರೋಮದ ಸೇಂಟ ಪೀಟರ್ಸ್ ಡೋಮದಂತಿದೆ. ನಿಜವಾಗಿಯೂ ಅದು ಡೆಕ್ಕನದ ಶಿಲ್ಪಕಲೆಯ ಅಪೂರ್ವ ಸಾಧನೆ ಎಂದೆನಿಸಿಕೊಂಡಿದೆ.

ಅದರಂತೆಯೇ ಚಿತ್ರಕಲೆ, ಸಂಗೀತ, ನೃತ್ಯ ಕಲೆಗಳೂ ಪ್ರೋತ್ಸಾಹಿಸಲ್ಪಟ್ಟಿದ್ದವು. ಸ್ವತಃ ರಾಣಿಯೇ ಅವುಗಳಲ್ಲಿ ಪರಿಣಿತಳಾಗಿದ್ದಳು. ''ಅವಳು ಅನೇಕ ಕಲೆಗಳನ್ನು ಚೆನ್ನಾಗಿ ಬಲ್ಲವಳಾಗಿದ್ದಳು. ಸುಂದರವಾದ ಹೂವುಗಳನ್ನು ಕೋಮಲವಾಗಿ ಚಿತ್ರಿಸಿ ಬಣ್ಣ ಕೊಡುತ್ತಿದ್ದಳು. ವೀಣೆಯನ್ನೂ ಪ್ರಾವಿಣ್ಯತೆಯಿಂದ ನುಡಿಸುತ್ತಿದ್ದಳು. ಮಧುರ ಕಂಠದಿಂದ ಗಝಲ್ ಗಳನ್ನು ಹಾಡುತ್ತಿದ್ದಳು. ಆದರಂತೆ ಹಿಂದುಳ ಲಾವಣಿ ಪದಗಳನ್ನೂ ಚೆನ್ನಾಗಿ ಅನ್ನುತ್ತಿದ್ದಳು .''

ಚಾಂದಬೀಬಿಯು ಹೆಣ್ಣು ಮಕ್ಕಳನ್ನು ಪರ್ದಾಪದ್ಧತಿಯಿಂದ ಮುಕ್ತಗೊಳಿಸಿದಳು. 'ಪರ್ದಾಪದ್ಧತಿ ಅವಳಿಗೆ ಅನಾಗರಿಕವೆನಿಸಿತ್ತು. ಸ್ತ್ರೀಯರಿಗೆ ಮುಕ್ತ ಅವಕಾಶವೊದಗಿಸಿಕೊಡುವುದು ಬರ್ಬರತೆಯಿಂದ ನಾಗರಿಕತೆಗೆ ಬಂದು ತಲುಪಿದ್ದರ ಸಂಕೇತವಾಗಿದೆ. ರಾಣಿಯು ಈ ವಿಷಯದಲ್ಲಿ ಪ್ರಯತ್ನಿಸಿದ್ದು ಸ್ತುತ್ಯಾರ್ಹವಾಗಿದೆ.

ರಾಜರಲ್ಲಿ ಹಾಗೂ ಪ್ರಜೆಗಳ ಜೀವನದಲ್ಲಿ ಶಾಂತಿಯುತ ಸಹಬಾಳ್ವೆಯು ಸುಸಂಸ್ಕೃತದ ಸಮಾಜದ ಪ್ರಮುಖ ಲಕ್ಷಣ ಆಗಿದೆ. ಚಾಂದಬೀಬಿಯ ಕಾಲದಲ್ಲಿ ಹಿಂದು , ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಎಲ್ಲರೂ ಪರಸ್ಪರರಿಗೆ ಗೌರವಿಸಿ ಬಾಳುತ್ತಿದ್ದರು. ಸ್ವತಃ ರಾಣಿಗೆ ಒಬ್ಬ ಬ್ರಾಹ್ಮಣನು ಮಂತ್ರಿಯಾಗಿದ್ದ. ಅವಳ ಕೈಕೆಳಗಿನ ಕಾರಕೂನ ಜೀವನರಾವ ಎಂಬುವವನೂ ಬ್ರಾಹ್ಮಣನಾಗಿದ್ದ. ತನ್ನ ಧರ್ಮದ ಹಿರಿಯ ಅರ್ಚಕನಿಗೆ ಮತಾಂಧತೆಯನ್ನು ತೋರದಿರಲು ಆಗಾಗ್ಗೆ ಎಚ್ಚರಿಕೆಯನ್ನು ಕೊಡುತ್ತಿದ್ದಳು. ಕ್ರಿಶ್ಚಿಯನ್ ಪಾದ್ರಿಯಾದ ಡಿ ಅಲ್ಮೆಡಾ ಹಾಗೂ ಮೇರಿಯಾ ಇವರಿಗೆ ಕ್ರಿಶ್ಚಿಯನ್ ಧರ್ಮ ಪ್ರಸಾರ ಮಾಡಲು ಅನುವು ಮಾಡಿಕೊಟ್ಟದ್ದು ಚಾಂದಬೀಬಿಯ ವಿಶಾಲ ಹೃದಯವನ್ನು ತೋರಿಸಿಕೊಡುತ್ತದೆ.

ಈ ಕಾದಂಬರಿಯಲ್ಲಿ ಅಂತರ್ಜಾತಿಯ ವಿವಾಹದ ಕಥೆ ಬರದೆ ಸ್ವಧರ್ಮೀಯರೇ ಮದುವೆ ಆದದ್ದು ಬರುತ್ತದೆ. ಪ್ರೇಮ - ಪ್ರಣಯವೇ ಕಾದಂಬರಿಯ ಕಲ್ಪನಾ ಭಾಗದಲ್ಲಿ ವಿಜೃಂಭಿಸಿದೆ. ಅಬ್ಬಾಸ ಖಾನ ಹಾಗೂ ಝೋರಾ

ಇವರ ಪ್ರೇಮವು ಪವಿತ್ರವೂ, ಆದರ್ಶವೂ ಆಗಿದ್ದು ಓದುಗರಿಗೆ ಅಪಾರ ಆನಂದವನ್ನು, ಬೆಳಕನ್ನು ಕೊಡುತ್ತವೆ. ಅಲ್ಲಲ್ಲಿ ಸಾಹಸ, ಪರಾಕ್ರಮದ ಘಟನೆಗಳು ಬಂದರೂ ಅವುಗಳಲ್ಲಿ ಬರ್ಬರತೆ ಎಂಬುದು ಅತಿರೇಕವಾಗಿ ಇಲ್ಲ. ಆದರೆ ರಾಜನಿಷ್ಠೆ, ದೇಶಪ್ರೇಮ, ಧರ್ಮಪ್ರೇಮಗಳು ಎದ್ದುಕಾಣುತ್ತವೆ. ಸ್ವತಃ ಚಾಂದಬೀಬಿಯು ತನ್ನ ತವರೂರಾದ ಅಹಮ್ಮದನಗರದ ಕೋಟೆಯನ್ನು ರಕ್ಷಿಸುವಾಗ ಇದು ಗೋಚರಿಸುತ್ತದೆ.

''ಅವಳು ಸ್ವತಃ ನೀರಡಿಸಿದ ಸೈನಿಕರಿಗೆ ಯುದ್ಧಭೂಮಿಯಲ್ಲಿ ನೀರನ್ನು ಒಯ್ದು ಕೊಡುತ್ತಿದ್ದಳು....ಎಲ್ಲರಿಗೂ ಹುರಿದುಂಬಿಸುತ್ತಿದ್ದಳು..... ಅವಳನ್ನು ವೈರಿಗಳನೇಕರು ನೋಡುತ್ತಿದ್ದರು. ವೈರಿ ರಾಜಕುಮಾರನೇ ಅವಳ ಪರಾಕ್ರಮವನ್ನು ಕೊಂಡಾಡುತ್ತಿದ್ದನು.'' ಕಾದಂಬರಿಯ ಶೀರ್ಷಿಕೆಯೇ ಹೇಳುವಂತೆ ಅವಳು ಘನವಂತಳಾಗಿದ್ದಳು. ಆದರೆ ಅದೇ ಸಮಯದಲ್ಲಿ ಇಂಗ್ಲೆಂಡದ ರಾಣಿಯಾದ ಮೊದಲನೇ ಎಲಿಜಬೆತ್‌ಗಳಿಗಿಂತ ಚಾಂದಬೀಬಿ ಹೆಚ್ಚು ಶ್ರೇಷ್ಠ ಎನಿಸಿಕೊಂಡಳು.

ಮೊದಲನೇ ಇಬ್ರಾಹಿಮ ಆದಿಲಶಹ ಕುಡುಕನೂ, ವೃದ್ಧಾಪ್ಯದಲ್ಲಿ ಮಾನಸಿಕ ಸಮತೋಲ ಕಳೆದುಕೊಂಡವನೂ ಆಗಿದ್ದನು. ತನಗಾದ ಜಡ್ಡನ್ನು ಕಡಿಮೆ ಮಾಡಬೇಕೆಂದು ಹಕೀಮರಿಗೆ ಆಜ್ಞಾಪಿಸುತ್ತಿದ್ದನು. ಕುಡಿದು ಅಮಲಿನಲ್ಲಿದ್ದಾಗ ರಾಜ – ಹಕೀಮನಾದ ಸಯ್ಯದ ಅಹ್ಮದ ಅಲಿಯ ಮೇಲೆರಗಿದನು. ಅವನ ಔಷಧದಿಂದ ಗುಣವಾಗದ್ದಕ್ಕೆ ಅವನ ಎರಡೂ ಕಣ್ಣುಗಳನ್ನು ಕಿತ್ತಿಸಿ , ಗಡಿಪಾರು ಮಾಡಿ ಕಳುಹಿಸಿದನು. ಈ ಘಟನೆಯಲ್ಲಿ ಬರ್ಬರತೆ ಸ್ವಲ್ಪ ಮಟ್ಟಿಗೆ ಇದೆ.

ರಾಜಕೀಯ ಪಿತೂರಿಯಲ್ಲಿ ಭಾಗಿಯಾದ ಉಸ್ಮಾನ ಬೇಗ ಎಂಬುವವನು ರಾಜನ ವೈರಿಯಾಗಿದ್ದ ಎಲಿಯಾಸ ಖಾನನೆಂಬುವವನೊಡನೆ ಜತೆಗೂಡಿ ಕಾರಸ್ಥಾನದಲ್ಲಿ ಭಾಗಿಯಾಗಿದ್ದನು. ಇದು ರಾಜರ ಸಮ್ಮುಖದಲ್ಲಿ ಸಭೆಯಲ್ಲಿ ಚರ್ಚಿತವಾಗಿ ಅತನು ಪ್ರತ್ಯಕ್ಷದಲ್ಲಿ ಬರೆದ ಪತ್ರಗಳು ಸಿಕ್ಕಿದ್ದರಿಂದ ರಾಜದ್ರೋಹಿ ಎಂದು ಅವನಿಗೆ ಶಿಕ್ಷೆ ಕೊಟ್ಟಿದ್ದರು. ಅವನೇ ಈ ಕಾದಂಬರಿಯ ಪ್ರೇಮ ಭಾಗದಲ್ಲಿ ಖಳನಾಗಿದ್ದಾನೆ.

ಅದರಂತೆ ಡಾಮ್ ಡಿಯಾಗೋ ಎಂಬ ಕ್ರಿಶ್ಚಿಯನ್ ಪಾದ್ರಿಯು ರಾಣಿಯ ವಿರುದ್ಧ ಸಂಚಿನಲ್ಲಿ ಭಾಗಿಯಾಗಿದ್ದನಲ್ಲದೆ ಕಾಮುಕನಾಗಿ ಮೇರಿಯಾಳ ಮೇಲೆ ಬಲಾತ್ಕಾರ ಮಾಡಲು ಹೊಂಚು ಹಾಕಿದ್ದನು. ಗೋವಾದಲ್ಲಿದ್ದ ಮೂರು ಸಾವಿರ ಯುರೋಪಿಯನ್ ಸೈನಿಕರ ಸಹಾಯದಿಂದ ರಾಣಿಯ ವಿರುದ್ಧವಾಗಿದ್ದ ರಾಜಕುಮಾರ ಇಸ್ಮಾಯಿಲ್‌ನಿಗೆ ಗೆಲವು ಆಗುವಂತೆ ಮಾಡಲೆತ್ನಿಸಿದನು.

ಈ ರೀತಿ ಬಿಜಾಪುರದ ಪಟ್ಟಕ್ಕೆ ಬರಲು, ಪಟ್ಟದಿಂದ ಉರುಳಿಸಲು ನಡೆದ ರಾಜಕೀಯ ಸಂಚುಗಳಾದುದನ್ನು ಕಾಣುತ್ತೇವೆ. ಹಿಂದಿನ ಪ್ರಧಾನ ಮಂತ್ರಿಯಾಗಿದ್ದ ಐನ್ ಉಲ್ ಮುಲ್ಕನೂ ಬಂಡೆದ್ದಿದ್ದನು. ಆಗಿನ ಕಾಲದ ಮಂತ್ರಿಗಳಲ್ಲಿ ವಿಶ್ವಾಸವಿಡಲು

ಸಾಧ್ಯವಿರದಂತಾಗಿತ್ತು. ಅವರು ರಾಜಕೀಯ ಅಲ್ಲೋಲ ಕಲ್ಲೋಲಕ್ಕೆ ಕುಮ್ಮಕ್ಕು ನೀಡುತ್ತಿದ್ದರು. ಅದರ ಪರಿಣಾಮವಾಗಿ ಅವಳು ಆಡಳಿತದ ಅಧಿಕಾರಿಯಾಗುವ ಮೊದಲು "Queen Chand was forced out of the harem and publicly carried off to the hill fort of Sattara, one hundered and fifty miles away from Bijapur" ಎಂದು ಉಲ್ಲೇಖಿಸಲಾಗಿದೆ.

ಪರಸ್ಪರರಲ್ಲಿ ಆಗಾಗ ವೈಯಕ್ತಿಕ ಕಾರಣಗಳಿಂದಾಗಿ, ದ್ವೇಷ ಸಾಧಿಸುವುದಕ್ಕಾಗಿ ಹೊಡೆದಾಟಗಳು ಆಗುತ್ತಿದ್ದವು. ಉಸ್ಮಾನ ಬೇಗ ಎಂಬುವವನು ಝೋರಾ ತನ್ನ ಹೆಂಡತಿ ಎಂದು ಹೇಳಿ ಅದನ್ನು ಅಲ್ಲಗಳೆಯಲು ಯಾರಾದರೂ ಸಿದ್ಧರಿದ್ದರೆ ನನ್ನೊಡನೆ ಹೋರಾಟಕ್ಕೆ ಬನ್ನಿರಿ ಎಂದೂ ಆಹ್ವಾನಿಸುತ್ತಾನೆ. ಆಗ ಅಬ್ಬಾಸ ಖಾನನು ಇದು ಸುಳ್ಳು ಎಂದೂ ಹೇಳಿ ನೇರ ಹೊಡೆದಾಟಕ್ಕೆ ಸಿದ್ಧನಾಗುತ್ತಾನೆ.

ಶಕುನ, ಅಪಶಕುನಗಳಲ್ಲಿ ನಂಬಿಕೆ ಇಟ್ಟು ಮೈಯಲ್ಲಿಯ ದೆವ್ವ, ಭೂತಗಳನ್ನು ಓಡಿಸಲು ಹೊಡೆಯುವುದೂ ಅನಾಗರಿಕ ಪದ್ಧತಿ ಆಗಿದೆ. ದೃಷ್ಟಿ ಹತ್ತಿದೆ ಎಂದು ಬಗೆಯುವುದೂ ಅದಕ್ಕೆನಾದರೂ ಇಳಿಸಿ ಒಗೆಯುವ ಪದ್ಧತಿ – ಮೂಢನಂಬಿಕೆ ಆ ಕಾಲದಲ್ಲಿತ್ತು.

ಮೇಲೆ ಹೇಳಿದ ವಿಷಯಗಳೆಲ್ಲ ಸಮಾಜವು ಸಂಪೂರ್ಣವಾಗಿ ನಾಗರಿಕವಾಗಿದ್ದಿಲ್ಲ ಎಂದು ತೋರಿಸಿಕೊಡುತ್ತವೆ.

ಇನ್ನು ಅರೆ ನಾಗರಿಕ ಚಿತ್ರಣವನ್ನು ಬೇಡರ ಜೀವನದಲ್ಲಿ ಕಾಣುತ್ತೇವೆ. ಬೇಡರು ಗುಡ್ಡ ಗಾಡಿನಲ್ಲಿ ವಾಸಿಸುವವರಾಗಿದ್ದು ಮೈಮೇಲೆ ಪ್ರಾಣಿಗಳ ಚರ್ಮವನ್ನು ಹೊದ್ದುಕೊಳ್ಳುತ್ತಿದ್ದರು. ಮತ್ತು ಮಾಂಸಾಹಾರಿಗಳಾಗಿದ್ದರು. ಬೇಟೆಯಾಡುವುದೇ ಅವರ ಮುಖ್ಯಕಾರ್ಯವಾಗಿತ್ತು. ಯಾವುದೇ ಶಿಕ್ಷಣ ಪಡೆಯದ ಅವರು ದೈಹಿಕ ಪರಾಕ್ರಮದಲ್ಲಿ ಮುಂದಾಗಿದ್ದರು. ನಿಸರ್ಗದ ವಸ್ತುಗಳನ್ನು ಪೂಜಿಸುತ್ತಿದ್ದರು. ರಂಗನಾಯಕ ಹಾಗೂ ಭರಮ ನಾಯಕ ಎಂಬುವವರಿಬ್ಬರು ಬೇಡರ ಜನಾಂಗವನ್ನು ಈ ಕಾದಂಬರಿಯಲ್ಲಿ ಪ್ರತಿನಿಧಿಸಿದ್ದಾರೆ.

ಅದರಂತೆ ಉಸ್ಮಾ ಬೇಗನೆಂಬುವ ದುಷ್ಟನು ಝೋರಾನಳನ್ನು ಓಡಿಸಿಕೊಂಡು ತನ್ನ ಕೋಟೆಗೆ ಒಯ್ದು ಬಂಧನದಲ್ಲಿರಿಸುವದೂ, ಡಾಮ್ ಡಿಯಾಗೋ ಮೇರಿಯಾಳ ಮೇಲೆ ಬಲಾತ್ಕಾರ ಮಾಡಲು ಯತ್ನಿಸುವುದೂ ಅರೆ ನಾಗರಿಕ ಘಟನೆಗಳಾಗಿ ಚಿತ್ರಿತವಾಗಿವೆ.

ಹೀಗೆ ಮೂರು ವಿಧದ ಜೀವನವು ಹಾಸು ಹೊಕ್ಕಾಗಿ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಕಾದಂಬರಿಯ ಕಥಾ ವಸ್ತುವು ಮಹಾಕಾವ್ಯದಂತೆ, ವಿಸ್ತೃತವಾಗಿದೆ. ಇದರಲ್ಲಿ ಒಟ್ಟು ಮೂರು ಕಥೆಗಳ ಕಲಾತ್ಮಕ ಸಂಗಮವಿದೆ. ಅದರಲ್ಲಿ ಒಂದು ಮುಖ್ಯ ಕಥೆ ಇದ್ದ ಎರಡು ಉಪಕಥೆಗಳಿವೆ. ಕಥೆಯ ಮುಖ್ಯ ಭಾಗವು ಐತಿಹಾಸಿಕವಾಗಿದ್ದು ಹೀಗಿದೆ

ಅಹಮ್ಮದ ನಗರದಲ್ಲಿ ಜನಿಸಿದ ಚಾಂದಬೀಬಿಯು ಕ್ರಿ.ಶ. ೧೫೬೪ರಲ್ಲಿ ವಿಜಾಪುರದ ಅಲಿ ಆದಿಲಶಹನನ್ನು ಚಿಕ್ಕವಯಸ್ಸಿನವಳಾಗಿದ್ದಾಗಲೇ ಮದುವೆ ಆದಳು. ಹದಿನಾರು ವರ್ಷಗಳ ಕಾಲ ರಾಜರಾಣಿಯರಾಗಿ ಸುಖದಿಂದ ಬಾಳಿದ ಮೇಲೆ ಕ್ರಿ.ಶ. ೧೫೮೦ರಲ್ಲಿ ಅವಳ ಪ್ರೀತಿಯ ಗಂಡನಾದ ಅಲಿ ಆದಿಲಶಹನು ತೀರಿಕೊಂಡನು. ಅವನಿಗೆ ಮಕ್ಕಳಾಗಿರಲಿಲ್ಲ. ಹೀಗಾಗಿ ತನ್ನ ಕಕ್ಕನ ಮಗನಾದ ಇಬ್ರಾಹಿಮನು ಪಟ್ಟಕ್ಕೆ ಬರಬೇಕೆಂದು ಲೇಖಿಯಲ್ಲಿಟ್ಟಿದ್ದನು. ಹೀಗಾಗಿ ಮೊದಲನೆ ಇಬ್ರಾಹಿಮನು ವಾರಸುದಾರನಾಗಿ ಪಟ್ಟವನ್ನೇರಿದನು. ಅವನ ಪಾಲಕ –ಪೋಷಕರುಗಳಾಗಿ ರಾಣಿ ಚಾಂದಬೀಬಿಯು ಅಧಿಕಾರ ನಡೆಸಹತ್ತಿದಳು. ವಿಜಾಪುರದ ರಾಜ್ಯಭಾರ ಮಾಡುತ್ತಿದ್ದಳು. ಈ ರೀತಿಯಾಗಿ ಅವಳ ರಾಜಕೀಯ ಜೀವನವು ಸಾಗಿತು. ಆ ಕಾಲದಲ್ಲಿ ಮೊಗಲ ಸಾಮ್ರಾಜ್ಯವನ್ನು ಬಿಟ್ಟರೆ, ವಿಜಾಪುರವೇ ಅತಿ ದೊಡ್ಡ ಮುಸಲ್ಮಾನ ರಾಜರ ಸಾಮ್ರಾಜ್ಯವಾಗಿತ್ತು.

ಕೇವಲ ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಚಾಂದಬೀಬಿ ರಾಜ್ಯಭಾರದ ಹೊಣೆ ಹೊರಬೇಕಾಯಿತು. ಅನೇಕ ರಾಜಕೀಯ ಸಂಚುಗಳು, ಪಿತೂರಿ ದ್ರೋಹದ ಕೃತ್ಯಗಳು ನಡೆದಾಗಲೂ ಅವಳು ಪರಾಕ್ರಮಿಯಾಗಿ, ಪಂಡಿತಳಾಗಿ, ಒಳ್ಳೆಯ ರಾಜ್ಯ ಭಾರ ಮಾಡುವವಳಾಗಿ ಪ್ರಖ್ಯಾತಳಾದಳು. ರಾಜ್ಯದಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸುವಂತೆ ಮಾಡಿದ್ದರಿಂದ ಅವಳು ಬಹಳಷ್ಟು ಜನಪ್ರಿಯಳೂ ಆದಳು. ಲಲಿತ ಕಲಾಕಾರರಿಗೂ ರಾಜಾಶ್ರಯ ಕೊಟ್ಟು ಕಲಾ ಪ್ರೇಮಿ ಎಂದೆನಿಸಿಕೊಂಡಳು. ಹದಿನೈದು ವರ್ಷಗಳವರೆಗೆ ವಿಜಾಪುರವನ್ನು ದಕ್ಷತೆಯಿಂದ ಆಳಿದಳು. ಆ ಬಳಿಕ ಮೊಗಲರು ಅಹಮ್ಮದ ನಗರದ ಮೇಲೆ ಮುತ್ತಿಗೆ ಹಾಕಿದ್ದಾರೆಂದು ಗೊತ್ತಾದಾಗ ಅದನ್ನು ರಕ್ಷಿಸಲು ಧಾವಿಸಿ ಹೋದಳು. ತನ್ನ ಸಾಹಸ, ಪರಾಕ್ರಮ ತೋರುತ್ತ, ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸಿ , ಮಹಾನಾಯಕಿಯಾಗಿ ಹೋರಾಡಿ, ಕ್ರಿ.ಶ. ೧೫೯೯ರಲ್ಲಿ ದುರ್ಮರಣ ಹೊಂದಿದಳು.

ಈ ಮುಖ್ಯವಿಷಯಕ್ಕೆ ಅಬ್ಬಾಸ ಖಾನ ಹಾಗೂ ಝೋರಾಳ ಪ್ರೇಮ – ಪ್ರಣಯ ವಿವಾಹದ ಕಥೆ ಜೋಡಿಸಲ್ಪಟ್ಟಿದ್ದು ಮೆರಗು ಪಡೆದಿದೆ.

ಮತ್ತೊಂದು ಉಪಕಥೆಯಲ್ಲಿ ಫ್ರಾನ್ಸಿಸ ಡಿ. ಅಲ್ಮೇದಾ ಎಂಬುವವನು ತನ್ನ ವಿಧವಾ ತಂಗಿಯಾದ ಡೋನಾ ಮೇರಿಯಾಳೊಂದಿಗೆ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ತೊಡಗಿದ್ದು ಬರುತ್ತದೆ. ಈ ಕಥೆಯಲ್ಲಿ ಡಾಮ್ ಡಿಯಾಗೋ ಎಂಬುವವನು ಖಳನಾಗಿ ವರ್ತಿಸಿದ್ದಾನೆ. ಫ್ರಾನ್ಸಿಸ್‌ನ ಮೇಲೆ ಇಲ್ಲದ, ಸಲ್ಲದ ಆರೋಪ ಹೊರಿಸುವದಲ್ಲದೆ,

ಮೇರಿಯಾಳ ಮೇಲೆ ಅತ್ಯಾಚಾರ ಮಾಡುವ ಪ್ರಯತ್ನವನ್ನು ಮಾಡುತ್ತಾನೆ. ಆದರೆ ಸತ್ಯ ಗೊತ್ತಾದಾಗ ಗೋವಾದೊಳಗಿನ ಮೇಲಾಧಿಕಾರಿಗಳು ವಿಚಾರಣೆ ನಡೆಸಿ ಫ್ರಾನ್ಸಿಸ್ ನಿರಪರಾಧಿ ಎಂದೂ, ಡಾಮ ಡಿಯಾಗೋನೆ ಅಪರಾಧಿ ಎಂದೂ ಸಾರಿ, ಫ್ರಾನ್ಸಿಸ್‌ನನ್ನು ಬಿಷಪ್‌ನನ್ನಾಗಿ ಮಾಡಿ ಹೆಚ್ಚಿನ ಧರ್ಮ ಪ್ರಸಾರ ಮಾಡಲು ಪ್ರೇರೇಪಿಸಿದರು.

ಈ ಕಥೆಯಲ್ಲಿ ಮೇರಿಯಾಳು ಚಾಂದ ಬೀಬಿಗೆ ಔಷದೋಪಚಾರದ ಡಾಕ್ಟರ ಆಗಿ, ನರ್ಸ್ ಆಗಿ ಕಾರ್ಯ ಮಾಡುತ್ತಿರುವದರಿಂದ ಆ ಎರಡೂ ಕಥೆಗಳು ಜೋಡಿಸಲ್ಪಟ್ಟಿವೆ. ಇಷ್ಟೇ ಅಲ್ಲದೆ ಅಲ್ಮಿಡಾ ಹಾಗೂ ಮೇರಿ ಇಬ್ಬರೂ ರಾಣಿಯ ಜೊತೆಗೆ ಅಹಮ್ಮದನಗರಕ್ಕೆ ಹೋಗಿ ಅವಳಿಗೆ ಸೇವೆ, ಸಹಾಯ ಮಾಡುತ್ತಾರೆ

ಈ ಕಾದಂಬರಿಯಲ್ಲಿ ವಿಜಾಪುರದ ಅರಮನೆಯ ದೃಶ್ಯಗಳ ವರ್ಣನೆ . ಅಹಮದ ನಗರದ ಯುದ್ಧದ ವರ್ಣನೆಗಳು ಚೆನ್ನಾಗಿ ಮೂಡಿ ಬಂದಿವೆ. ಸಯ್ಯದ ಅಹ್ಮದ ಅಲಿ ಇಸ್ಲಾಮನ್ನು ಬೋಧಿಸಿದರೆ, ಫ್ರಾನ್ಸಿಸ್ಸನು ಕ್ರಿಶ್ಚಿಯಾನಿಟಿಯನ್ನು ಬೋಧಿಸುತ್ತಾನೆ. ಹೀಗೆ ಅವರಿಬ್ಬರೂ ಅಣ್ಣ-ತಮ್ಮಂದಿರಂತಿದ್ದು ಧರ್ಮದ ಮರ್ಮವನ್ನು ತಿಳಿಸಿಕೊಡುತ್ತಾರೆ.

ಈ ಕಾದಂಬರಿಯಲ್ಲಿ ಪಾತ್ರಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದಾಗಿದೆ - ಚಾಂದಬೀಬಿ, ಝೋರಾ, ಮೇರಿಯಾ ಮತ್ತು ತಾಜಾ-ಉಲ್ ನಿಸ್ಸಾ ಇವರು ಸುಸಂಸ್ಕೃತ ಮಹಿಳೆಯರಾಗಿ ಸಯ್ಯದ ಅಬ್ಬಾಸ ಖಾನ, ಫ್ರಾನ್ಸಿಸ್ ಡಿ ಅಲ್ಮೆಡಾ ಮತ್ತು ರಂಗನಾಯಕ ಇವರು ಸುಧಾರಿತ ನಾಗರಿಕ ಪುರುಷಪಾತ್ರಗಳಾಗಿ ಚಿತ್ರಿಸಲ್ಪಟ್ಟಿದ್ದಾರೆ.

ಚಾಂದಬೀಬಿಯು ಸಮರ್ಥರೀತಿಯಲ್ಲಿ ರಾಜ್ಯಭಾರ ಮಾಡಿದಳು. ಅದಕ್ಕಾಗಿ ಅವಳು ಪರ್ದಾ ಬಿಡಬೇಕಾಯಿತು. ಶಿಷ್ಟರಿಗೆ ರಕ್ಷಣೆಕೊಟ್ಟು, ದುಷ್ಟರಿಗೆ ಶಿಕ್ಷೆ ಕೊಟ್ಟು ಆಡಳಿತದಲ್ಲಿ ನ್ಯಾಯವಂತಿಕೆ ತೋರಿದಳು. ಸರ್ವ ಧರ್ಮೀಯರನ್ನು ಸಮಾನವಾಗಿ ಕಂಡಳು. ಫ್ರಾನ್ಸಿಸ್ ಡಿ ಆಲ್ಮಡಾನು ಆಶೀರ್ವಾದ ಮಾಡಿದಾಗ ಆಕೆ

"The blessings of a holy man is ever acceptable to me" ಎಂದು ಅಂದಳು. ತನ್ನ ಧರ್ಮದ ಅರ್ಚಕನು ಡಿ.ಅಲ್ಮೆಡಾ ಹಾಗೂ ಮೇರಿಯಾಳನ್ನು ನಿಂದಿಸಿ , ಅವರ ಪವಿತ್ರ ಗ್ರಂಥಕ್ಕೆ ಬೈದಾಗ ಆಕೆ ಅವನಿಗೆ ಎಚ್ಚರಿಕೆ ಕೊಟ್ಟಳು -

"but beware , for they tongue is apt to transgress the bounds of respect."

ಅವಳು ಬೇರೆಯಲ್ಲಿರುವ ಉತ್ತಮ ಗುಣಗಳನ್ನು ಕೊಂಡಾಡುತ್ತಿದ್ದಳು. ಮೇರಿಯಾಳನ್ನು ಪ್ರಥಮಬಾರಿಗೆ ಕಂಡಾಗ ಅವಳ ಸೌಂದರ್ಯವನ್ನು ಕೊಂಡಾಡಿ ಪ್ರೀತಿಯಿಂದ ತನ್ನ ಮಗಳಂತೆ ಭಾವಿಸಿದಳು.

"If I can be a queeen to all, I can be a friend and mother to thee" ಎಂದು ಹೇಳಿ ತನ್ನ ವಿಶಾಲ ಮನೋಭಾವವನ್ನು ವ್ಯಕ್ತಪಡಿಸಿದಳು. ಡಿ ಅಲ್ಮೆಡಾ ಹಾಗೂ ಮೇರಿಯಾ ತಾಜ-ಉಲ್-ನಿಸ್ಸಾಳಿಗೆ ಜಡ್ಡಾದಾಗ ಔಷಧ ಕೊಟ್ಟು ಗುಣಪಡಿಸಿದಳು. ಅದಕ್ಕಾಗಿ ಚಾಂದ ಬೀಬಿಯು ಅವರಿಗೆ ಋಣಿಯಾಗಿದ್ದಳು. ಯುದ್ಧದ ಸಮಯದಲ್ಲಿ ಅವರಿಬ್ಬರು ಸಲ್ಲಿಸಿದ ಸೇವೆ, ತೋರಿದ ಸಾಹಸವನ್ನು ಮೆಚ್ಚಿಕೊಂಡು ಮೇರಿಯಾಳ ಗುಣಗಾನ ಮಾಡಿದಳು.

'Thou art more tender of heart than we, though Muslims, Thy faith is tender....." ಎಂದಳು. ಕ್ರಿಶ್ಚಿಯನ್ ಧರ್ಮ ಪ್ರಸಾರಕ್ಕೆ ಅವರಿಗೆ ಅನುವು ಮಾಡಿಕೊಟ್ಟಳು. ಅವಳಿಂದ ಒಳ್ಳೆಯ ಪಾಠಗಳನ್ನು ಕಲಿತ ರಾಣಿಯು

"...... Thou hast put sweet and loving thoughts into my heart and told me truths which well up, teach me mercy." ಎಂದೂ ಹೇಳಿದಳು.

ಇಂಥ ರಾಣಿ ಅಹಮ್ಮದನಗರದ ಕೋಟೆಯನ್ನು ರಕ್ಷಿಸಲುಪರಾಕ್ರಮ ತೋರಿದಳು. ಹಗಲಿರುಳು ಕಾರ್ಯ ಮಾಡಿದಳು. ಕೊನೆಯವರೆಗೂ ಅವಳ ಹೃದಯದಲ್ಲಿ! ಮಮತೆ ಇತ್ತು. ದುರ್ದೈವದಿಂದ ಕಣ್ಣು ಕಿತ್ತಿಸಿಕೊಂಡು ಗಡಿಪಾರಾಗಿ ಹೋಗಿದ್ದ ಸೈಯ್ಯದನನ್ನು ಮತ್ತೆ ಸಕಲ ರಾಜಮರ್ಯಾದೆಯೊಂದಿಗೆ ಕರೆತಂದಳು. ಇದು ಅವಳ ನ್ಯಾಯವಂತಿಕೆಯನ್ನು ತೋರಿಸುವದು. ಇಂಥ ಆದರ್ಶ ರಾಣಿ ಕೊಲೆಗೆ ಆಹುತಿಯಾಗಬೇಕಾಯಿತು. ಅವಳ ಜನರೇ ಅವಳನ್ನು ಕೊಂದಾಗ

"O never was there queen so mightily betrayed !" ಎಂದು ಉದ್ಗರಿಸುವಂತಾಯಿತು. ಅವಳು ಮಡಿದಾಗ ಹೇಗೆ ಕಾಣಿಸಿಕೊಂಡಳು ಎಂಬುದನ್ನು ಟೇಲರ ವಿವರಿಸಿದ್ದಾನೆ. - In her death all the majesty, all the heroism, all the benevelence all the political ability .... lay there in the last sleep of death !

ಇಷ್ಟಕ್ಕೆ ಅವಳ ಗುಣಗಾನ ಮುಗಿಯಲಿಲ್ಲ. ಅವಳನ್ನು ತನ್ನ ದೇಶದ ರಾಣಿಯಾದ, ಅವಳ ಸಮಕಾಲೀನಳಾದ, ಮೊದಲನೆಯ ಎಲಿಜಬೆಥ್ ರಾಣಿಯೊಂದಿಗೆ ಹೋಲಿಸಿ ಹೇಳುತ್ತಾನೆ -

"Few in England know that the contemporary of our Queen Elizabeth, in the Deccan Kingdom \, was a woman of equal ability, of equal political talent of equal, though in a different sense, education and accomplishments who ruled over

a realm as large, a population as large, and as intelligent, and as rich as England, a woman who, surrounded by jealous enemies, preserved by her own personal valour. and endurance her kingdom from destruction and partition ; who through all temptations and exercise of absoulte power, was at once, simple, generous, frank and merciful as she was chaste, virtuous, religious and charitable - one who, among all the women of India, stands out as a jewel without flaw and beyond price"

ಇದಕ್ಕಿಂತಲೂ ಹೆಚ್ಚಿಗೆ ಚಾಂದಬೀಬಿಯ ಗುಣಗಾನ ಮಾಡಿ ಪಾತ್ರ ಚಿತ್ರಿಸಲು ಹೇಗೆ ಸಾಧ್ಯ ?

ಸಂದರ ಯುವತಿಯಾದ ಝೋರಾ ನಿಜವಾದ ಇಸ್ಲಾಮಿಕ್ ಸಂಸ್ಕೃತಿಯನ್ನು ನಾಗರಿಕತೆಯನ್ನು ಹಾಗೂ ಆಧ್ಯಾತ್ಮಿಕತೆಯನ್ನು ಪ್ರತಿನಿಧಿಸುತ್ತಾಳೆ. ಅಬ್ಬಾಸಖಾನನು ಸಹಜವಾಗಿಯೇ ಅವಳ ಸೌಂದರ್ಯಕ್ಕೆ ಮಾರುಹೋದ. ಅದರಂತೆ ಅವಳೂ ಸಹ ಅವನ ತಾರುಣ್ಯ, ಸಾಹಸ, ಪರಾಕ್ರಮಕ್ಕೆ ಮನಸೋತಳು. ಆದರೆ ಆತ ಗಾಯಾಳುವಾಗಿ ಅವರ ಮನೆಯಲ್ಲಿ ಔಷಧೋಪಚಾರ ಪಡೆಯುತ್ತಿದ್ದಾಗ ಅವಳು ತನ್ನ ಸಹಜ ಪ್ರೇಮವನ್ನು ವ್ಯಕ್ತ ಪಡಿಸಲಿಲ್ಲ. ಏಕೆಂದರೆ ಆಗಅವಳು ಒಬ್ಬ ಮುದುಕನಾಗಿ ಕಣ್ಣು ಕಳೆದುಕೊಂಡ ಬಡ ಫಕೀರ ರಾಜವೈದ್ಯನ ಮಮ್ಮಗಳಾಗಿದ್ದಳು.

ಮುದ್ಗಲದಲ್ಲಿ ಝೋರಾ ಕ್ರಿಶ್ಚಿಯನ್ ಮೇರಿಯಾಳನ್ನು ನೋಡಿದಾಗ, ಅವಳ ಸೌಂದರ್ಯ ಸೇವಾ ಪ್ರವೃತ್ತಿ ಒಳ್ಳೆಯತನ ಮೊದಲಾದವುಗಳನ್ನು ಮೆಚ್ಚಿಕೊಂಡಳು. ಅವರಿಬ್ಬರಲ್ಲಿ ಅಕ್ಕ-ತಂಗಿಯರ ಭಾವನೆಗಳು ಬೆಳೆದವಲ್ಲದೆ ಎರಡು ವಿಭಿನ್ನ ಸಂಸ್ಕೃತಿಗಳು ಕೂಡಿಕೊಂಡವು. ಯಾಕೆ ತಮ್ಮ ಜನರು ಕ್ರಿಶ್ಚಿಯನ್ನರನ್ನು ದೇವ ರಹಿತರೆಂದು ಕರೆಯುತ್ತಾರೆ ಎಂಬುದು ಗೊತ್ತಾಗಲಿಲ್ಲ. ಅವರಿಬ್ಬರ ಜೀವನದ ಗುರಿ ಒಂದೇ ಆಗಿ ಮಾನವತೆಯ ಸೇವೆಯಲ್ಲಿ ಮಗ್ನರಾದರು.

ಮೇರಿಯಾಳ ಸಂಪರ್ಕದಿಂದ ಝೋರಾ ಕಸೂತಿ ಕಲೆಯನ್ನು ಕಲಿತಳು. ಅವಳ ಮುಖಾಂತರ ಝೋರಾಳಿಗೆ ಹೊಸ ಜೀವನ ಆರಂಭವಾಯಿತೆಂದು ಅನಿಸಿತು. ಇಸ್ಲಾಂಕ್ಕೆ ಕ್ರಿಶ್ಚಿಯಾನಿಟಿಯ ಲೇಪನವಾಯಿತು. ಮೇರಿಯಾ ಝೋರಾಳನ್ನು ಅಗಲಿ ಹೋಗುವಾಗ ಅವಳು "Remember, I have no one in the world , except Maria.... Do not forget me" ಎಂದಳು.

ಕಾಮುಕತೆಯ ಪ್ರತೀಕವಾದ ಉಸ್ಮಾನ ಬೇಗನು ಅವಳನ್ನು ಅಪಹರಿಸಿ ತಂದು ಮದುವೆಯಾಗು ಎಂದು ಎಷ್ಟು ಒತ್ತಾಯಿಸಿದರೂ ಆಕೆ ಒಪ್ಪಲಿಲ್ಲ. ಅವಳು ಸ್ಪಷ್ಟವಾಗಿ

- No wealth can tempt me, no threat can terrify me" - ಎಂದು ಹೇಳಿದಳು. ಮುಗ್ಧತೆಯಿಂದ ಆಕೆ ಅಜ್ಜನಿಗೆ 'ಅಜ್ಜಾ, ನಮಗೇಕೆ ವೈರಿಗಳು ಇರುತ್ತಾರೆ?'' ಎಂದು ಕೇಳುತ್ತಿದ್ದಳು. ಅಜ್ಜ ಅವಳ ಮದುವೆಯ ಪ್ರಸ್ತಾಪ ಮಾಡಿದಾಗಲೆಲ್ಲ'' ನನ್ನಂಥ ಬಡ ಪಕೀರನಿಯನ್ನು ಯಾರು ಮದುವೆ ಆಗುತ್ತಾರೆ. ? ಎಂದು ಕೇಳುತ್ತಿದ್ದಳು. ಅವಳಲ್ಲಿರುವ ದೇವ ಭಕ್ತಿ , ಶ್ರದ್ಧೆ ಶ್ರೇಷ್ಠವಾಗಿತ್ತು. ಆತ್ಮ ವಿಶ್ವಾಸದಿಂದಅವಳು 'ಯಾವ ದೇವರು ಪಕ್ಷಿಗಳನ್ನು ರಕ್ಷಿಸುತ್ತಾನೋ ಆ ದೇವರು ನಮ್ಮಂಥ ಫಕೀರರಿಗೂ ಅನ್ನ ಒದಗಿಸುತ್ತಾನೆ' ಎಂದೆನ್ನುತ್ತಿದ್ದಳು. ಅವಳನ್ನು ಅಪಹರಿಸಿ ಅಪಮಾನಗೊಳಿಸಿದ ದುರುಳ ಉಸ್ಮಾನ ಬೇಗನನ್ನೂ ಸಹ ಅವಳು ಕ್ಷಮಿಸಿದಳು.

ಸೈಯ್ಯದನನ್ನು ಪುನಃ ಚಾಂದಬೀಬಿಯು ರಾಜ್ಯಕ್ಕೆ ಕರೆಯಿಸಿಕೊಂಡಾಗ, ಝೋರಾಳನ್ನು ತನ್ನ ದತ್ತಕ ಮಗಳೆಂದು ಸಾರಿದಾಗ ಝೋರಾಳಿಗೆ ಮಾನ - ಮರ್ಯಾದೆ ವೈಭವ ಮತ್ತೆ ದೊರೆಯಿತು. ಆಗ ಅಲ್ಲಿಯೇ ಇದ್ದ ಮೇರಿಯಾಳನ್ನು ಕಂಡು ಆವೇಶ ಭರಿತಳಾದಳು. ಆತ್ಮೀಯ ವ್ಯಕ್ತಿಗಳ ಪುನರ್ಮಿಲನವಾಯಿತು.

ಝೋರಾಳ ಮನದಲ್ಲಿ ಅಬ್ಬಾಸ ಖಾನನನ್ನು ಮದುವೆಯಾಗುವದು ಇದೆ ಎಂದು ತಿಳಿದ ರಾಣಿಯು ಅವರಿಬ್ಬರ ವಿವಾಹವನ್ನು ವಿಜೃಂಭಣೆಯಿಂದ, ತಾನೇ ಮುಂದಾಗಿ ನೆರವೇರಿಸಿದಳು. ಈ ಎಲ್ಲ ಕಾರಣಗಳಿಂದ ಝೋರಾ ಚಾಂದ ಬೀಬಿಗೆ ನಿಷ್ಠಳಾದಳು. ಅವಳ ಜೊತೆಗೆ ಅಹಮ್ಮದ ನಗರಕ್ಕೂ ಹೋದಳು. ಅಲ್ಲಿಯೂ ಚಾಂದಬೀಬಿಗೆ ಅವಿರತವಾಗಿ ಸಹಾಯ ಮಾಡಿದಳು. ರಾಣಿ ಮಡಿದ ನಂತರ ತನ್ನ ಗಂಡನೊಡನೆ ಬಿಜಾಪುರಕ್ಕೆ ಬಂದು ನೆಲೆಸಿದಳು.

ಈ ರೀತಿ ಅವಳು ಕಾದಂಬರಿಯ ಪ್ರೇಮ ಕಥಾಭಾಗದ ಅಪ್ರತಿಮ ನಾಯಕಿಯಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಅವಳು ಪ್ರೇಮ, ದಯೆ, ಮಾನವೀಯತೆ , ಕ್ಷಮಾಗುಣಗಳ ಪ್ರತೀಕವಾಗಿಯೂ, ಪೂರ್ವ ಪಶ್ಚಿಮಗಳ ಸಂಗಮವಾಗಿಯೂ ಕಂಗೊಳಿಸುತ್ತಾಳೆ.

ಡೋನಾ ಮೇರಿಯಾ, ಫ್ರಾನ್ಸಿ ಡಿ ಅಲ್ಮೆಡಾ ಎಂಬ ಪಾದ್ರಿಯ ವಿಧವಾ ತಂಗಿಯಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಅವಳು ತನ್ನ ಜೀವನವನ್ನು ಮಾನವೀಯ ಸೇವೆಗಾಗಿ ಮುಡುಪಾಗಿಟ್ಟಿದ್ದಳು. ಕ್ರಿಶ್ಚಿಯನ್ ಧರ್ಮ ಹಾಗೂ ಸಂಸ್ಕೃತಿಯ ಪ್ರತೀಕವಾದ ಅವಳು ಅದರ ಪ್ರಸಾರ ಕಾರ್ಯ ಕೈಗೊಂಡಿದ್ದಳು.ತನ್ನ ದಯಾಗುಣದಿಂದಲೂ , ಸೇವಾಭಾವ ದಿಂದಲೂ ಜನರ ಪ್ರೀತಿಗೆ ಪಾತ್ರಳಾಗಿದ್ದಳು. ಅವಳು ಸೌಂದರ್ಯದಿಂದಲೂ, ಮೃದು ಮಾತುಗಳಿಂದಲೂ ಅನೇಕ ರೋಗಿಗಳಿಗೆ ಗುಣಪಡಿಸಿ ಬಿಡುತ್ತಿದ್ದಳು. ತನ್ನ ಮಧುರ ಕಂಠದಿಂದ ಸುಂದರ ಹಾಡುಗಳನ್ನು ಹಾಡಿ, ತಂತು ವಾದ್ಯ ನುಡಿಸಿ ಮಕ್ಕಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದಳು. ಬೈಬಲ್ಲದ ಭಾಷಾಂತರವನ್ನು ಕನ್ನಡದಲ್ಲಿ ಮಾಡಿ ಅದರ

ಉಪದೇಶವನ್ನು ಪ್ರಚಾರಕ್ಕೆ ತರುತ್ತಿದ್ದಳು. ಅವಳನ್ನು ಒತ್ತಾಯಿಸಿ ಮದುವೆ ಆಗಬೇಕೆಂದಿದ್ದ ಡಾಮ ಡಿಯಾಗೊನನ್ನು ತಿರಸ್ಕರಿಸಿದ್ದಳು. ಅವಳ ಮೇಲೆ ಬಲಾತ್ಕಾರ ಮಾಡಲು ಬಂದಾಗ ಚೀರಿ ಬೈಯ್ದಳು. "Traitor, perjured priest, and a liar ' ಎಂದು ಮುಂತಾಗಿ ನಿಂದಿಸಿದಳು. ಅವಳೆಂದಿಗೂ ಐಹಿಕ ಸುಖ ಭೋಗಕ್ಕೆ ಮಾರು ಹೋಗಲಿಲ್ಲ. ಯಾವಾಗ ತಾಜ ಸುಲ್ತಾನಳೇ ತನ್ನ ಗಂಡನೊಡನೆ ವಿವಾಹವಾಗಿಬಿಡು ಎಂದಾಗಲೂ ಸಹ ಅವಳು ಆಸೆ ಆಮಿಷಕ್ಕೆ ಬಲಿಯಾಗಲಿಲ್ಲ|ಯ ಅವಳಲ್ಲಿಯ ಮಾನಸಿಕ ಧೈರ್ಯ ಮೆಚ್ಚುವಂಥದ್ದು. I am vowed to God's service' ಎಂದು ತನ್ನ ಧ್ಯೇಯವನ್ನು ಸಾರಿ ಹೇಳಿದಳು.

ಯುದ್ಧ ಭೂಮಿಯಲ್ಲಿ ಚಾಂದಬೀಬಿಯ ಸೈನಿಕರು ಗಾಯ ಗೊಂಡು ನರಳುತ್ತಿದ್ದಾಗ ಪವಿತ್ರ ಹೃದಯದಿಂದ ಅವರ ಸೇವೆ, ಶುಶ್ರೂಷೆ ಮಾಡಿದಳು. ಅದಕ್ಕಾಗಿ ಎಲ್ಲ ಸೈನಿಕರು ಬಹಳಷ್ಟು ಗೌರವ ಕೊಡುತ್ತಿದ್ದರು. ಅವಳು ದಯೆ ಹಾಗೂ ಪ್ರೇಮದ ದೇವತೆಯಂತೆ ಕಾರ್ಯ ಮಾಡಿದಳು.

ಅವಳಿಗೆ ಸಾಕಷ್ಟು ಮಾನಸಿಕವಾಗಿ, ದೈಹಿಕವಾಗಿ ತೊಂದರೆ ಕೊಟ್ಟ ದುಷ್ಟ ಡಾಮ ಡಿಯಾಗೊನನ್ನು ಯುದ್ಧ ಭೂಮಿಯಲ್ಲಿ ಕಂಡಳು. ಆಗ ಆತ ಅವಳಿಗೆ ತಾನು ಮಾಡಿದ ಅಪರಾಧಗಳನ್ನೆಲ್ಲ ಕ್ಷಮಿಸಲು ಬೇಡಿಕೊಂಡನು. ಆತ ಸಾಯುವ ಮುನ್ನ ಅವನ ಕೈ ಹಿಡಿದು "I forgive, fear not...." ಎಂದು ಕ್ಷಮಿಸಿದಳು.

ಮೇರಿಯಾಳು ಝೋರಾಳಿಗೂ ಯುವರಾಣಿಯಾದ ತಾಜಳಿಗೂ ಒಳ್ಳೆಯ ಮಿತ್ರಳಾಗಿದ್ದಳು. ಪ್ರೇಮದ ಹಾಗೂ ದಯೆಯ ಅನೇಕ ಪಾಠಗಳನ್ನು ಅವರಿಗೆ ತಿಳಿಸಿ ಕೊಟ್ಟಳು. 'ನಾವು ಯಾವಾಗಲೂ ಪ್ರೀತಿಸುತ್ತಿರಬೇಕು.'ಎಂಬುದನ್ನು ಮನವರಿಕೆ ಮಾಡಿಕೊಟ್ಟಳು. ಅವಳಿಗೆ ಕಸೂತಿ ಕಲೆಯನ್ನು ತಿಳಿಸಿಕೊಟ್ಟಳು. ಈ ರೀತಿ ಅವಳನ್ನು ಒಳ್ಳೆಯ , ದಯಾಮಯಿ, ಸುಶಿಕ್ಷಿತ , ಸುಸಂಸ್ಕೃತ, ಸೇವಾಭಾವದ ಮಹಿಳೆಯನ್ನಾಗಿ ಚಿತ್ರಿಸಿದ್ದಾನೆ.

ಐತಿಹಾಸಿಕ ವ್ಯಕ್ತಿಯಾದ ತಾಜ – ಉಲ್– ನಿಸಾಳ ಪಾತ್ರವು ಪ್ರಮುಖವಾಗಿಲ್ಲ. ಅವಳನ್ನು ಶಾರೀರಿಕವಾಗಿ ದುರ್ಬಲ, ರೋಗ ಪೀಡಿತಳನ್ನಾಗಿ ಚಿತ್ರಿಸಿದ್ದಾನೆ. ಪ್ರಾನ್ಸಿಸ್ ಡಿ. ಅಲ್ಮೈಡಾ ಹಾಗೂ ಮೇರಿಯಾ ಕೊಟ್ಟ ಔಷದಿಗಳಿಂದ ಸ್ವಲ್ಪ ಗುಣ ಮುಖಳಾಗುತ್ತಾಳೆ. ತನ್ನ ಗಂಡನಾದ ಎರಡನೇ ಇಬ್ರಾಹಿಂ ನಿಗಾಗಿ ಯಾವುದೇ ತ್ಯಾಗಕ್ಕೂ ಅವಳು ಸಿದ್ಧಳಾಗಿದ್ದಳು. ಮೇರಿಯಾಳಿಗೆ ಅವನನ್ನು ಮದುವೆಯಾಗೆಂದೂ ಕೇಳಿಕೊಂಡಳು. ಆದರೆ ಅದು ಉಪಯೋಗವಾಗಲಿಲ್ಲ. ಈ ರೀತಿಯಾಗಿ ಅವಳು ನಿಃಸ್ವಾರ್ಥಜೀವಿಯಾಗಿ ಕಾಣಿಸಿಬರುತ್ತಾಳೆ. ಪಾಶ್ಚಾತ್ಯ ಸಂಸ್ಕೃತಿಯನ್ನು ಮೆಚ್ಚುತ್ತಾಳೆ.

ಒಂದು ಕಾಲದಲ್ಲಿ ರಾಜ ಹಕೀಮನಾಗಿ ವೈಭವದಲ್ಲಿದ್ದ ಆತ ದುರ್ದೈವದಿಂದ ಕಳೆದುಕೊಂಡ. ಚಾಂದಬೀಬಿಯ ನ್ಯಾಯಪರತೆಯಿಂದ ಕಳೆದುಕೊಂಡಿದ್ದೆಲ್ಲವನ್ನು ಮರಳಿ ಪಡೆದ. ಆಧ್ಯಾತ್ಮದಲ್ಲಿ, ಅಪಾರ ಸಾಧನೆ ಮಾಡಿದ. ವಿಶಾಲ ಹೃದಯದ ಟೇಲರನು ಕ್ರಿಶ್ಚಿಯನ್ನರಿಗೆ ಇಸ್ಲಾಂನ್ನು ದ್ವೇಷಿಸಬಾರದು ಎಂದು ತಿಳಿ ಹೇಳಿದ್ದು ಹೀಗಿದೆ

–Be not offended with me, O Christian reader, for such things can be taught out of the book you have been told to hold in scorn. (i.e. Karan)

ಫ್ರಾನ್ಸಿಸ್ ಡಿ. ಅಲ್ಮೆಡಾ ಹಾಗೂ ಮೇರಿಯಾ ಕ್ರಿಶ್ಚಿಯನ್ ಧರ್ಮ ಸಂಸ್ಕೃತ, ನಾಗರಿಕತೆಗಳ ಪ್ರತಿನಿಧಿಯಾಗಿ, ಭಾರತದಲ್ಲಿ ಕ್ರಿಶ್ಚಿಯನ್ ಧರ್ಮ ಪ್ರಸಾರಕರಾಗಿ ಕಾರ್ಯ ಮಾಡಿದ್ದು ವರ್ಣಿತವಾಗಿದೆ. ಕನ್ನಡದಲ್ಲಿ ತಮ್ಮ ಧರ್ಮ ಬೋಧನೆ ಮಾಡಿ ಜನಪ್ರಿಯರಾಗಿದ್ದರು. ಧಾರ್ಮಿಕ ಬೋಧನೆಯ ಜೊತೆಗೆ ವೈದ್ಯಕೀಯ ಸೌಲಭ್ಯ ಸೇವೆ ಒದಗಿಸಿಯೂ ಅವರು ಮಾನವರ ಸೇವೆಯನ್ನು ಮಾನವೀಯತೆಯಿಂದ ಮಾಡುತ್ತಿದ್ದರು. ನಿತ್ಯವೂ ದೇವರಿಗೆ ಪ್ರಾರ್ಥನೆ ಸಲ್ಲಿಸಿಯೇ ತಮ್ಮ ಕಾರ್ಯ ಆರಂಭಿಸುತ್ತಿದ್ದರು.

ರಾಣಿ ಚಾಂದಬೀಬಿಯನ್ನು ಪ್ರಥಮ ಸಲ ಭೇಟಿಯಾಗಿ, ಪರಿಚಯವಾದಾಗ ಆತ ಅವಳಿಗೆ ದೇವರು ಅನುಗ್ರಹಿಸಲಿ ಎಂದನು.

"The blessings of God and Mary, the mother of Jesus, be on the most noble and virtuous lady of the time" ಎಂಬ ಮಾತಿನಲ್ಲಿ ಎರಡೂ ಪಾತ್ರಗಳು ಹೇಗಿವೆ ಎಂಬುದು ಗೊತ್ತಾಗುತ್ತದೆ. ಅವನ ಒಳ್ಳೆಯತನಕ್ಕೆ ಸೇವಾ ಭಾವಕ್ಕೆ, ವೈದ್ಯಕೀಯ ಜ್ಞಾನಕ್ಕೆ ರಾಣಿಯು ತನ್ನ ಮೆಚ್ಚುಗೆ ವ್ಯಕ್ತಪಡಿಸಿದಳು. ನಿಜವಾದ ಪಾದ್ರಿಯಾಗಿದ್ದ ಆತ ಅತ್ಯಂತ ನಿಸ್ಪೃಹ, ಪ್ರಾಮಾಣಿಕ ವ್ಯಕ್ತಿಯಾಗಿದ್ದ. ರಾಣಿಗೆ ಇದನ್ನು ಹೇಳುತ್ತಾನೆ – ''ನಾವು ಬಡ ಪಾದ್ರಿಗಳು..... ದೇವರು ಒದಗಿಸಿಕೊಟ್ಟುದರಲ್ಲಿ ಸಂತಸ ಪಡುವೆವು. ಸಾದಾ ಊಟವಿದ್ದರೂ ಸೈ ಸಾದಾ ಬಟ್ಟೆಯಾದರೂ ಸೈ. ಯಾಕೆಂದರೆ ಅವನ ಕೃಪೆಯಿಂದಲೇ ನಮ್ಮ ಆತ್ಮಕ್ಕೆ ಸಂತಸ, ಆನಂದ ಸಿಗುತ್ತಿರುತ್ತದೆ. .... ನಮಗೆ ಯಾವುದೇ ಚಿಂತೆ ಎಂಬುದೇ ಇರುವುದಿಲ್ಲ.'' ಇದು ಅವನ ಪರಿಶುದ್ಧ ಜೀವನವನ್ನು ತೋರಿಸಿಕೊಡುತ್ತದೆ.

ಡೊಮ್ ಡಿಯಾಗೋನ ಕಪಟ ಕಾರಸ್ಥಾನದಿಂದ ಆತ ಧಾರ್ಮಿಕ ಮುಖಂಡರ ವಿಚಾರಣೆಗೆ ಒಳಗಾಗಬೇಕಾಯಿತು. ಆದಕ್ಕಾಗಿ ಆತ ಗೋವಾಕ್ಕೆಹೋಗಿ ಅವರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಯಿತು. ಅವನ ಮೇಲಿನ ಆರೋಪಗಳು ಸುಳ್ಳು ಎಂದು ಸಿದ್ಧವಾಗಲು ಅವನನ್ನು ಬಿಷಪ್‌ನನ್ನಾಗಿ ಮಾಡಿ ಹೆಚ್ಚಿನ ಧರ್ಮ ಪ್ರಸಾರ ಕೈಗೊಳ್ಳಲು ಅನುಕೂಲ ಮಾಡಿಕೊಟ್ಟರು. ಸುಳ್ಳು ಆರೋಪ ಹೊರಿಸಿದ್ದ ಡಾಮ್

ಡಿಯೊಗೊನಿಗೆ ಶಿಕ್ಷೆ ವಿಧಿಸಿದರು. ಫ್ರಾನ್ಸಿಸ್ ಹಾಗೂ ಮೇರಿಯಾ ಧಾರ್ಮಿಕ ಮುಖಂಡರ ವಿಚಾರಣೆಯಲ್ಲಿ ಯಶಸ್ವಿಯಾಗಿ ಬಂದರೆಂಬ ಸುದ್ಧಿ ತಿಳಿದು ಸೈಯ್ಯದನು ಅವರನ್ನು ಆತ್ಮೀಯತೆಯಿಂದ ಪುನಃ ಸ್ವಾಗತಿಸಿದನು. ಆಗ ಬಿಷಪ್ ಹೇಳಿದನು.

"The same power that defended us at Goa will defend us, should we meet hereafter" ಎಂದು ಹೇಳಿ ಪರಸ್ಪರರುಸಂತಸಪಟ್ಟರು. ದೇವರಲ್ಲಿ ನ್ಯಾಯವಿದೆ, ಅನ್ಯಾಯವೆಂಬುದು ಇಲ್ಲ ಎಂಬುದು ಸಾಬೀತಾಯಿತು.

ಬಿಷಪ್ ನಾದ ಅಲ್ಮೆಡಾ ರಾಣಿಗೆ ಯಾವಾಗಲೂ ನಿಷ್ಠನಾಗಿದ್ದ. ಅವಳ ರಾಜ ಪ್ರತಿನಿಧಿಯಂತೆ ಅಹಮ್ಮದ ನಗರದ ಮೇಲೆ ಮೊಗಲರು ಮುತ್ತಿಗೆ ಹಾಕಿದಾಗಲೂ ಕಾರ್ಯ ಮಾಡಿದ. ಯುದ್ಧದಲ್ಲಿಯ ಸಾವು ನೋವನ್ನು ಕಂಡು ಮರುಗಿದ, ಗಾಯಾಳುಗಳನ್ನು ಸಂತೈಸಿ –

"I will do my best to stay further carnage" ಎಂದು ನುಡಿದ.

ಈ ರೀತಿಯಾಗಿ ಆತನನ್ನು ಅತ್ಯಂತ ಆದರ್ಶ ಧರ್ಮ ಪ್ರಸಾರಕನಾಗಿ ಚಿತ್ರಿಸಲಾಗಿದೆ. ಕಾದಂಬರಿಯಲ್ಲಿಯ ಆಧ್ಯಾತ್ಮಿಕ ವಿಭಾಗಕ್ಕೆ ಅವನ ಕೊಡುಗೆ ಬಹಳಷ್ಟಿದೆ.

ಬೇಡರ ಮುಖಂಡನಾದ ರಂಗನಾಯಕನನ್ನು ಅರೆ ನಾಗರಿಕ ಜೀವನದ ಪ್ರತಿನಿಧಿ ಯನ್ನಾಗಿ ಚಿತ್ರಿಸಲಾಗಿದೆ. ಅವರು ಬೇಡರು, ಅನಾಗರಿಕತೆಯಿಂದ ನಾಗರಿಕತೆಯ ಹಂತ ತಲುಪುವದರಲ್ಲಿದ್ದರು, ಅಸಂಸ್ಕೃತಿಯಿಂದ ಸಂಸ್ಕೃತಿಯ ಕಡೆಗೆ ಬರಹತ್ತಿದ್ದರು. ಹಿಂದೂ ಸಮಾಜದ ಕೆಳವರ್ಗದವ ತಾನು ಎಂಬ ಅರಿವು ಅವನಿಗಿತ್ತು. ಅದಕ್ಕಾಗಿ ಆತ ತನ್ನನ್ನು ಅಸ್ಪೃಶ್ಯನೆಂದು ಭಾವಿಸಿದ್ದನು. ಆದ್ದರಿಂದ ಆತ ಸಯ್ಯದನ ಮನೆಯನ್ನು ಪ್ರವೇಶಿಸುವ ಮುನ್ನ – ''ನಾನು ಅಸ್ಪೃಶ್ಯ, ನಿಮ್ಮಂಥ ಪವಿತ್ರ ಜನರ ಮನೆಯೊಳಗೆ ಹೇಗೆ ಬರಲಿ ?'' ಎಂದು ಕೇಳಿದ. ಆದರೆ ಆತ ಅಬ್ಬಾಸ ಖಾನನ ಪ್ರೀತಿಯ ಸೇವಕ ,ಸೈನಿಕ ಎಂಬುದು ಗೊತ್ತಾದಾಗ ಅವನು ಮುಸಲ್ಮಾನರನ್ನು ಎಷ್ಟೊಂದು ಪ್ರೀತಿಸಿ ಗೌರವಿಸುತ್ತಿದ್ದ ಎಂಬುದು ಅವರಿಗೆ ತಿಳಿದು ಬಂತು. ಹಿಂದೂ ಮುಸಲ್ಮಾನರಲ್ಲಿಯ ಪರಸ್ಪರ ಪ್ರೀತಿ, ವಿಶ್ವಾಸ, ಗೌರವದ ಸಂಕೇತವಾಗಿದ್ದ ಆತ.

ರಂಗನಾಯಕ ಧೈರ್ಯಸ್ಥನಾಗಿದ್ದಂತೆ ದಯಾಳುವೂ ಆಗಿದ್ದ. ಸೈಯ್ಯದನಿಗೆ ಮಮ್ಮಗಳಾದ ಝೋರಾಳನ್ನು ಉಸ್ಮಾದ ಬೇಗನು ಅಪಹರಿಸಿಕೊಂಡುಹೋಗಿ, ಬಂಧನದಲ್ಲಿ ಇಟ್ಟಿದ್ದಾನೆಂದು ಗೊತ್ತಾದ ಕೂಡಲೇ ದುಃಖಿತನಾದ ಸೈಯ್ಯದನಿಗೆ ಹೇಳಿದ.

''ನೀನು ನಿನ್ನ ಕೈಗಳನ್ನು ನನ್ನ ತಲೆಯ ಮೇಲಿಟ್ಟು ಆಶೀರ್ವಾದ ಮಾಡು.... ನಾನು ಅವಳನ್ನು ಎಲ್ಲಿ ಬೇಕಾದಲ್ಲಿದ್ದರೂ ತಂದು ಕೊಡುತ್ತೇನೆ. ನಾನು ಝೋರಾಳನ್ನು ತಂದು ಒಪ್ಪಿಸದಿದ್ದರೆ ಮಡಿದು ಹೋಗಿದ್ದೇನೆಂದು ತಿಳಿ'' ಎಂದೆನ್ನುತ್ತಾನೆ.

ಜೀವಕ್ಕೆ ಸಾಕಷ್ಟು ಅಪಾಯವಿದ್ದರೂ, ಕೋಟೆ. ಭದ್ರವಾಗಿದ್ದರೂ ರಂಗನಾಯಕನು ಅದರ ಒಳಗೆ ಹೊಕ್ಕು ಝೋರಾಳನ್ನು ಪಾರು ಮಾಡಿಕೊಂಡು ತಂದದ್ದು ಅವನಲ್ಲಿಯ ಸಾಹಸ ತೋರುತ್ತದೆ.

ಈ ರೀತಿ ಆತ ಅಶಿಕ್ಷಿತನಾಗಿದ್ದರೂ ವಿಶ್ವಾಸಕ್ಕೆ, ಸ್ವಾಮಿನಿಷ್ಠ ಪರಾಕ್ರಮಿ ಎಂದು ಚಿತ್ರಿಸಲಾಗಿದೆ.

ಈ ಕಾದಂಬರಿಯಲ್ಲಿ ಬರ್ಬರತೆಯ ಅನೇಕ ಘಟನೆಗಳು ಆಗುತ್ತವೆ. ಅದರಲ್ಲಿ ಉಸ್ಮಾದ ಬೇಗ ಹಾಗೂ ಡಾಮ್ ಡಿಯಾಗೊ ಖಳನಾಯಕರಾಗಿದ್ದಾರೆ. ಅವರಿಬ್ಬರೂ ನಿರ್ದಯಿ, ಕಾಮುಕರಾಗಿ ಚಿತ್ರಿಸಲ್ಪಟ್ಟಿದ್ದಾರೆ.

ಝೋರಾಳನ್ನು ಓಡಿಸಿ ತಂದು ಅವಳನ್ನು ಮದುವೆಯಾಗಲು ಹವಣಿಸಿ ಉಸ್ಮಾನ ಬೇಗ ಅವಳಿಗೆಪೀಡೆ ಕೊಡುತ್ತಿದ್ದ. ಅವಳು ಒಪ್ಪದ್ದಕ್ಕೆ ಬಂಧನದಲ್ಲಿಟ್ಟ. ಅವಳು ಒಲ್ಲೆಂದು ಗೊಗರೆದರೂ ಯಾವನೋಒಬ್ಬ ಮುಲ್ಲಾನನ್ನು ಕರೆತಂದು ಮದುವೆಯ ನಾಟಕವಾಡಿದ. ನೀನು ನನ್ನನ್ನು ಒಪ್ಪಿಕೊಳ್ಳದಿದ್ದರೆ ಸಾವು ನಿಶ್ಚಿತ ಎಂದೂ ಅಂಜಿಕೆ ಹಾಕಿದ. ರಾಜ ದರ್ಬಾರದಲ್ಲಿ ಝೋರಾ ತನ್ನ ಹೆಂಡತಿಯೆಂದು ಸಾರಿದ. ಅದಕ್ಕೆ ಸಾಕ್ಷಿ ಯಾರೆಂದು ಕೇಳಿದಾಗ ಮುಲ್ಲಾನನ್ನೇ ತಂದು ನಿಲ್ಲಿಸಿದ. ಆ ತುಂಬಿದ ಸಭೆಯಲ್ಲಿ ಆಗ ತಾನು ನಿಜವಾದ ಮುಲ್ಲಾ ಅಲ್ಲ, ನಕಲಿ ಎಂದು ಹೇಳಿ ತನ್ನ ಕೃತ್ರಿಮ ಗಡ್ಡ ತೆಗೆದು 'ತೋರಿಸಿಬಿಟ್ಟ. ಹೀಗಾಗಿ ಉಸ್ಮಾನ ಬೇಗ ವಿಫಲನಾದ. ಸಭೆಯಲ್ಲಿ ಹಾಸ್ಯ ಉಕ್ಕಿತ್ತು.

ಡಾಮ್ ಡಿಯಾಗೊ ಸಹ ಅಂತಹ ವ್ಯಕ್ತಿಯೇ ಆಗಿದ್ದಾನೆ. ಮೇರಿಯಾಳನ್ನು ಮದುವೆಯಾಗಲು ಒತ್ತಾಯಿಸಿದ. ಅವಳು ಒಪ್ಪದಿದ್ದಾಗ ಬಲಾತ್ಕಾರ ಮಾಡಲೂ ಹಿಂಜರಿಯಲಿಲ್ಲ. ಈ ರೀತಿಯ ಅರೆ ನಾಗರಿಕತೆ ಘಟನೆಗಳು ಚಿತ್ರಿತವಾಗಿವೆ.

ಮೊದಲನೆ ಇಬ್ರಾಹಿಮನಲ್ಲಿ ಬರ್ಬರತೆಯನ್ನು ಕಾಣುತ್ತೇವೆ. ಸುಸಂಸ್ಕೃತ ಆದಿಲ್ ಶಾಹಿಗಳಲ್ಲಿ ಈತ ಕ್ರೌರ್ಯ, ದೌರ್ಜನ್ಯ ತೋರಿದ ರಾಜನಾಗಿದ್ದಾನೆ. ಆತನಿಗೆ ರೋಗವಾಗಿತ್ತು. ಅದನ್ನು ಗುಣಪಡಿಸದ ಹಕೀಮರಿಗೆ ಘೋರ ಶಿಕ್ಷೆ ವಿಧಿಸುತ್ತಿದ್ದ. ರೋಗದ ವೇದನೆ ತಾಳಲಾರದ್ದಕ್ಕೆ ಕುಡಿಯುತ್ತಿದ್ದ. ಸೆರೆಕುಡಿದು ಅಮಲಿನಲ್ಲಿ ಎಂಥದೋ ಶಿಕ್ಷೆ ಕೊಡುತ್ತಿದ್ದ. ರಾಜ ಹಕೀಮನಾದ ಸೈಯ್ಯದನು ಅಂಥ ಶಿಕ್ಷೆಗೆ ಗುರಿಯಾಗಬೇಕಾಯಿತು. ಸೈಯ್ಯದನನ್ನು ಕೊಂದು ಬಿಡಲು ಕುತ್ತಿಗೆ ಹಿಸುಕಲು ಹೋದ. ಆಗ ಸೈಯ್ಯದ ಕೂಗಿಕೊಂಡಾಗ ರಾಜನು – ''ಇವನನ್ನು ಎಳೆದೊಯ್ಯಿರಿ. ಇವನ ಎರಡೂ ಕಣ್ಣುಗಳನ್ನು ಕಿತ್ತಿ ಜಲದುರ್ಗಕ್ಕೆ ಅಟ್ಟಿರಿ'' ಎಂದು ಆಜ್ಞಾಪಿಸಿದ. ಕೇಳುವದೇನು ಅವನ ಎರಡೂ ಕಣ್ಣುಗಳನ್ನು ಖಡ್ಗದ ತುದಿಯಿಂದ ಚುಚ್ಚಿ ಹೊರ ತೆಗೆದರು. ಈ ಘಟನೆಯು ಆ ರಾಜ ಎಷ್ಟೊಂದು ಬರ್ಬರನಾಗಿದ್ದನೆಂಬುದನ್ನು ತೋರಿಸುತ್ತವೆ.

ಈ ರೀತಿ ಈ ಕಾಂದಬರಿಯಲ್ಲಿ ಬರ್ಬರತೆ, ಅರೆನಾಗರಿಕತೆ ನಾಗರಿಕತೆ – ಮೂರು ಸಂಯುಕ್ತವಾಗಿವೆ.

ಈ ಕಾದಂಬರಿಯಲ್ಲಿಯ ಸಂಭಾಷಣೆಗಳು ಆಯಾ ಪಾತ್ರಗಳಿಗೆ ಅನುಗುಣವಾಗಿವೆ. ಸುಸಂಸ್ಕೃತ ವ್ಯಕ್ತಿಗಳು ಧಾರ್ಮಿಕ ವ್ಯಕ್ತಿಗಳು ಅತ್ಯಂತ ಸುಂದರವಾಗಿ ಮಾತನಾಡಿದ್ದಾರೆ. ದುಷ್ಟರು ದುಷ್ಟತನದ ಮಾತುಗಳನ್ನಾಡಿದ್ದಾರೆ.

ಅಬ್ಬಾಸ ಖಾನ ಬದುಕುತ್ತಾನೊ ಇಲ್ಲವೋ ಎಂದು ಸೈಯ್ಯದನಿಗೆ ರಂಗನಾಯಕನು ಕೇಳಿದಾಗ ಆತ

"As God pleases, ... I have done what I could and he is in His hands." ಎಂದೆನ್ನುತ್ತಾನೆ. ಉಸ್ಮಾನ ಬೇಗನು ತನಗೆ ಹೆಣ್ಣೊಂದನ್ನು ತಂದು ಕೊಡಬೇಕೆಂದು ತನ್ನ ಆಳಾದ ಹೆಣ್ಣು ಮಗಳಿಗೆ ಆಜ್ಞಾಪಿಸುತ್ತ ಒಂದು ವೇಳೆ ತಂರದಿದ್ದರೆ...

"If you do not get me one, soon I will have you. flung down the rocks in to the river." ಎಂದು ಘೋರ ಮಾತನ್ನಾಡಿ "you are a cheat.... a cheat like all your people... and may the shytan burn you." ಎಂದೆನ್ನುತ್ತಾನೆ. ಮಾತಿನಲ್ಲೂ ಕೃತಿಯಲ್ಲೂ ಆತ ದರ್ಪ ದೌರ್ಜನ್ಯ ತೋರುತ್ತಾನೆ.

ಭಾರತೀಯ ಅನೇಕ ಶಬ್ದಗಳನ್ನು ಸಂಭಾಷಣೆಗಳಲ್ಲಿ ಬಳಸಿದ್ದಾನೆ. ಉದಾಹರಣೆಗೆ – 'ಶುಕರ, ಬಿಸ್ಮಿಲ್ಲಾ, ಹಜರತ್, ಜೈಮಾತಾ, ಪಾಲಕಿ, ಪೂಜಾ, ಸ್ವಾಮಿ' ಮೊದಲಾದವುಗಳನ್ನು ಬಳಸಿ ವಾಸ್ತವಿಕತೆಯನ್ನು ತೋರುತ್ತಾನೆ.

ವರ್ಣನೆ ಮಾಡುವುದರಲ್ಲಿಯೂ ಟೇಲರ ಪ್ರವೀಣನಾಗಿದ್ದಾನೆ. ಜಲದುರ್ಗದ ಹತ್ತಿರ ಇರುವ ಛಾಯಾ ಭಗವತಿ ಎಂಬ ಜಲಪಾತದ ವರ್ಣನೆಯಲ್ಲಿ ನಿಸರ್ಗದ ರಮಣೀಯತೆಯನ್ನು ತೋರಿಸಿದ್ದಾನೆ. ಆ ಜಲಪಾತದಲ್ಲಿ ನೀರು ನಾಲ್ಕು ನೂರು ಫೂಟು ಎತ್ತರದಿಂದ ನೇರವಾಗಿ, ಊರ್ಧ್ವದಿಂದ ಲಂಬಕೋನದಲ್ಲಿ ಬೀಳುವುದನ್ನು "horses in the world tossing their manes and fighting' ಎಂದು ವರ್ಣಿಸುತ್ತಾನೆ. ಜಲದುರ್ಗದ ಮೇಲಿನ ಸೂರ್ಯಾಸ್ತವು ರಮಣೀಯವಾಗಿರುತ್ತಿತ್ತು. ಸೂರ್ಯನ ಬೆಳಕಿನಲ್ಲಿ ಆ ಭೆಟ್ಟವು 'flamed in the brilliant light" ಎಂದು ಬಣ್ಣಿಸಿದ್ದಾನೆ. ಅದರಂತೆ ಅಹಮ್ಮದ ನಗರದಲ್ಲಿ ನಡೆದ ಯುದ್ಧದ ದೃಶ್ಯವನ್ನುಂತು ಕಣ್ಮುಂದೆ ತರುತ್ತಾನೆ. "The roar of the great guns and rockets, the musketry and the fire balls..... the shouts, screams and cries of the wounded and the dying rent the air"

ಈ ರೀತಿ ಅವನ ವರ್ಣನೆಗಳಲ್ಲಿ ನೈಜತೆ, ವಾಸ್ತವತೆ ಕಾಣುತ್ತವೆ. ಅದರಂತೆ ಒಮ್ಮೊಮ್ಮೆ ವಿನೋದವನ್ನು ತರುತ್ತಾರೆ. ಚಾಂದಬೀಬಿಯು ಮೆರಿಯಾಳನ್ನು ಪ್ರಥಮ ಸಲ, ಅವಳ ಸೌಂದರ್ಯ, ಗುಲಾಬಿ ಬಣ್ಣ ನೋಡಿ

How is it, Padre Sabib, that she is so lovely ?

It this rosy colour real or is it the custom of your country to paint their faces as we hear the Chines beauties do?" ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾಳೆ.

ಈ ಕಾದಂಬರಿಯಲ್ಲಿ ಬರುವ ನಕಲಿ ಮುಲ್ಲಾನ ಪಾತ್ರ ಹಾಸ್ಯದ ಹೊನಲನ್ನು ಹಸಿರಿ ಮನಕ್ಕೆ ಮುದ ನೀಡುತ್ತದೆ.

ಒಟ್ಟಾರೆ, ಯಾವುದೇ ದೃಷ್ಟಿಕೋನದಿಂದ ನೋಡಿದರೂ ಯಾವುದೇ ಅಳತೆಗೋಲಿನಿಂದ ಅಳೆದರೂ ಈ ಕಾದಂಬರಿಯು ಒಂದು ಉತ್ಕೃಷ್ಟ ಐತಿಹಾಸಿಕ ಕಾದಂಬರಿ ಎಂದೆನ್ನಿಸಿಕೊಳ್ಳುತ್ತದೆ. ಈ ಕಾದಂಬರಿಯಲ್ಲಿ ಟೇಲರನ ಸಾಹಿತ್ಯದ ಕಲೆಯು ತುತ್ತತುದಿಯನ್ನು ತಲುಪಿರುವದನ್ನು ನೋಡುತ್ತೇವೆ. ಆತನಲ್ಲಿಯ ಜ್ಞಾನ, ವಿಶಾಲ ಮನೋಭಾವ, ಪ್ರತಿಭೆ ಹಾಗೂ ಪರಿಕಲ್ಪನೆಯ ದರ್ಶನವಾಗುತ್ತದೆ.

ಟೇಲರನ ಅತ್ಯಂತ ಸಾಹಸಾನುಭೂತಿ ಪರ ವಿಮರ್ಶಕರಾದ ಮನ್ಸುಖಾನಿ ಎಂಬುವವರು "ಟೇಲರನು ತನ್ನ ಕಲಾತ್ಮಕ ಶಕ್ತಿ ಹಾಗೂ ಪ್ರತಿಭಾ ಸಂಪನ್ನತೆಯನ್ನು ಕಳೆದುಕೊಂಡಿರುವದನ್ನು ಇಲ್ಲಿ ಕಾಣುತ್ತೇವೆ. ಶ್ರೇಷ್ಠ ಕೃತಿ ರಚಿಸುವ ಅವನ ಕಾಲ ಮುಗಿದಿತ್ತು" ಎಂದಿದ್ದಾರೆ. ಇದು ಸರ್ವಥಾ ಸರಿಯಲ್ಲ.

*****

ಅಧ್ಯಾಯ ೭

ಇನ್ನಿತರರ ಕೃತಿಗಳಲ್ಲಿಯ ಭಾರತದ ಚಿತ್ರಣ

'ದ ಸ್ಟೋರಿ ಆಫ್ ಮಾಯ್ ಲೈಫ್' ಎಂಬ ಆತ್ಮಚರಿತ್ರೆಯಲ್ಲಿ ಟೇಲರನು ನಮ್ಮ ನಾಡಿನಲ್ಲಿ ಕಂಡದ್ದನ್ನು, ಅನುಭವಿಸಿದ್ದನ್ನು, ತಾನು ಮಾಡಿದ ಕಾರ್ಯವನ್ನು ಕುರಿತು ಪ್ರಾಮಾಣಿಕವಾಗಿ, ನೈಜಯುತವಾಗಿ ಬರೆದಿದ್ದಾನೆ. ಎಲ್ಲಿ ನೋಡಿದರಲ್ಲಿ ಅವನಿಗೆ ನಿಸರ್ಗದ ವೈಭವ, ಕಲೆ ಹಾಗೂ ಸಾಹಿತ್ಯದ , ನಾಗರಿಕ ಜೀವನದ ವೈಭವ ಗೋಚರಿಸಿದೆ. ನಿಸರ್ಗದ ರಮಣೀಯತೆಯ ವರ್ಣನೆಯನ್ನು ತನ್ನೆಲ್ಲ ಕಾದಂಬರಿಗಳಲ್ಲಿ ತೋರಿಸಿದ್ದಾನೆ. ಕಲ್ಲು ಬಂಡೆಗಳ ಪ್ರದೇಶವೇ ಇರಲಿ, ಹೊಲ-ತೋಟಗಳ ಬೆಳೆಯೇ ಇರಲಿ, ಎಲ್ಲವೂ ಅವನ ವರ್ಣನೆಯ ಭಾಗವಾಗಿ ಬಂದಿವೆ. ಬೆಳ್ಳಿಯ ರಸದಂತೆ ಬಿದ್ದ ಬೆಳದಿಂಗಳು, ಚಿಕ್ಕಮಕ್ಕಳ ಕಣ್ಣುಗಳು, ಮೊದಲ್ಗೊಂಡ ರಾಜ - ರಾಣಿಯರ ಅರಮನೆಯವರೆಗೆ ಆತ ಪ್ರತ್ಯಕ್ಷ ನೋಡಿಯೂ, ಕಲ್ಪಿಸಿಕೊಂಡೂ ಬಣ್ಣಿಸಿದ್ದಾನೆ. ಉದಾಹರಣೆಗೆ ಹೊಲದಲ್ಲಿಯ ಜೋಳದ ತೆನೆಯ ವರ್ಣನೆ ಹೀಗಿದೆ.

Such fields of jowari ! such glorious crops I never saw before.... one ear of jowari I pulled which contained a countless number of grains all nearly ripe and like so many pearls"

ಪೂರ್ವ ದೇಶದ ವೈಭವವನ್ನು ಕಣ್ಣಾರೆ ಕಂಡು –

"all formed a scene of Eastern splendour such as I could never have imagined" ಎಂದು ಹೊಗಳಿದ್ದಾನೆ.

ಸುರಪುರಕ್ಕೆ ರಾಜಕೀಯ ಪ್ರಾತಿನಿಧಿಯಾಗಿ ಬಂದ ಮೇಲೆ ನೋಡಿದ್ದನ್ನು ತಾನು ಅಲ್ಲಿ ಮಾಡಿದ್ದನ್ನು ಅತ್ಯಂತ ವಿವರವಾಗಿ ಹೇಳಿದ್ದಾನೆ. ಸುರಪುರದ ಜನ ಅವನಿಗೆ ನಿಷ್ಠುರರಾಗುವ ಮೊದಲುಆತನನ್ನು ಹೇಗೆ ಸುತ್ತುವರಿದಿದ್ದರು ಎಂಬುದನ್ನು

"Drawn swords were also brandished close to my face" ಎಂದು ಉಲ್ಲೇಖಿಸಿದ್ದಾನೆ. ರಾಜಕೀಯ ಸಮಸ್ಯೆಯನ್ನು ಮೃದು ಮಾತಿನಿಂದ, ಮುತ್ಸದ್ದಿತನದಿಂದ ಬಗೆಹರಿಸಿದ. ಆಗ ಅದೇ ಜನರು -Enough ! and now put your hands on our heads and we will be your obdient children hence forth." ಎಂದು ಅಂದರು. ಅದೆಂಥ ಪರಿವರ್ತನೆಯನ್ನು ಆತ ಮಾಡಿದ ! ಹೀಗೆ ಅವರ ಪಾಲಕ, ತಂದೆತಾಯಾದ. ಎಲ್ಲ ಬಗೆಯಿಂದ ಋಣಿಯಾದ ಅವರು ಅವನನ್ನು 'ಮಹದೇವ ಬಾಬಾ' ಎಂದು ಕರೆದು ಜನಜಯಕಾರ ಮಾಡಿದರು. ಬೇಡರ ನಾಡಿನಲ್ಲಿ ಆತ ಶಾಂತಿ, ಸುವ್ಯವಸ್ಥೆ, ಸಂಸ್ಕೃತಿ, ನವನಾಗರಿಕತೆಗಳನ್ನು ತಂದ. ಶಿಕ್ಷಣಕ್ಕಾಗಿ ಶಾಲೆ ತೆರೆದ. ಉಪಚಾರಕ್ಕೆ ಆಸ್ಪತ್ರೆ ತೆಗೆದ. ಸುರಪುರದ ಜನತೆಗೆ ಇಂಗ್ಲೀಷ ಅಭಿರುಚಿ ಆಟ-ಪಾಟ, ಸೌಂದರ್ಯ ಪ್ರಜ್ಞೆ ತಂದು ಕೊಟ್ಟ. ತನ್ನ ಬಂಗಲೆಯ ಮುಂದೆ ಹೂದೋಟ ಮಾಡಿದ. ಅದನ್ನು ನೋಡಲು ಜನ ಬರಹತ್ತಿದರು. ಈ ರೀತಿ ಟೇಲರನು ತನ್ನ ಪ್ರದೇಶದಲ್ಲಿ ಅದ್ಭುತ ಸಾಧನೆ ಮಾಡಿ ತೋರಿದ.

ಅನಾಗರಿಕ ಬೇಡರಿಗೆ ಒಕ್ಕಲುತನ ಮಾಡಲು ಹಚ್ಚಿ ನಾಗರಿಕರನ್ನಾಗಿ ಪರಿವರ್ತಿಸಿದ. ಇವನ ಆಡಳಿತ ಕಾಲದಲ್ಲಿ ಎಲ್ಲಿಯೂ ಹಿಂಸಾಚಾರ, ರಕ್ತಪಾತ ಆಗಲಿಲ್ಲ

" I was very thankful that during my stay no blood had been shed, not a single shot fired in anger among them." ಇದೇನು ಸಣ್ಣ ಸಾಧನೆಯೇ ? ಬೇಡರು ಶಾಂತಿಪ್ರಿಯರಾದರು. ಸಿರಿವಂತರಾದರು, ಗೌರವಾನ್ವಿತರಾದರು. ಟೇಲರನಿಗೆ ಜಡ್ಡಾದಾಗ ತಾಲೂಕುದಾರ, ನವಾಬ ಪತೆ ಜಹ ಖಾನ ಎಂಬುವವನು ತನ್ನ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿದ. ಅತ್ಯಂತ ಆತ್ಮೀಯತೆಯಿಂದ ಅತಿಥಿ ಸತ್ಕಾರ ಮಾಡಿದ.

" My wife will look after you and the children shall play with you" ಎಂದು ಹೇಳಿ ಮಾನವೀಯತೆ ತೋರಿದ. ಹಿಂದೂಗಳ ಮನೆಯಲ್ಲಿ ಅದೇ ತರಹದ ಅತಿಥಿ ಸತ್ಕಾರ ಅವನಿಗೆ ದೊರೆಯುತ್ತಿತ್ತು...

"The good old mother of the patel had prepared a delicious warm bath for me and a most abundant and well cooked supper, consisting of various capital dishes of vegetables and light jowari cakes"

ಭಾರತದಲ್ಲಿ ಆತ ಬಹಳಕಾಲ ಇದ್ದುದರಿಂದ ದೇಶದ ನಾನಾ ಕಡೆಗಳಲ್ಲಿ ಸಂಚರಿಸಿದ. ಭಾರತದಲ್ಲಿಯ ಮಂದಿರ, ಮಸೀದಿಗಳನ್ನು ವೀಕ್ಷಿಸಿದ. ಶಿಲ್ಪಕಲೆಯನ್ನು

ನೋಡಿ ಬೆರಗಾದ. ಅಜಂತಾ, ಎಲ್ಲೋರಾಗಳಿಗೆ ಹೋಗಿ ಗುಹೆಗೆಗಳನ್ನು ವೀಕ್ಷಿಸಿದ. ಕಲೆಯನ್ನು ಹೊಗಳಿದ. ಅವನಿಗೆ ಕನಕಗಿರಿಯ ಹಿಂದೂ ದೇವಾಲಯವು ಅದ್ಭುತಾಗಿ 'ಕಂಡಿತು. ಆ ಬಳಿಕ ಹಂಪಿಯ ದೇವಾಲಯ ನೋಡಿದ. ಆಗ –

"but that of Kanakagiri, which I had considered mervellous, sinks into insingificance before this" ಎಂದು ಅಂದ. ಅರಮನೆಯ ಭಾಗಗಳನ್ನು ನೋಡಿ "Every portion of the interior is covered with rich, minute carving, and some part were polished like glass" ಎಂದು ಹೇಳಿ ಕಲ್ಲಿನ ರಥವನ್ನು ವೀಕ್ಷಿಸಿ ಅದರ ಕಲಾಚಾತುರ್ಯವನ್ನು ಬಹಳಷ್ಟು ಕೊಂಡಾಡಿದ. ಈ ರೀತಿ ಕರ್ನಾಟಕವನ್ನು ವೀಕ್ಷಿಸಿ, ಅಂದನು –

"I was gaining more and more real knowledge of native life and character, under circumstances that fall to the lot of very few Englishmen."

ಭಾರತಕ್ಕ ಬೇರೆ ಬೇರೆ ಕಾರ್ಯಗಳಿಗೆ ಬರುವ ತನ್ನ ದೇಶ ಬಾಂಧವರಿಗೆ ಉಪದೇಶಪರ ಕಿವಿಮಾತು ಹೇಳಿದ.

"It is to adivise all who go there in whatever capacity, or whatever position they may hold use true courtesy to natives of all degrees"

ಈ ತನ್ನ ಆತ್ಮ ಚರಿತ್ರೆಯ ಮುಖಾಂತರ ಬ್ರಿಟಿಷರಿಗೆ ಭಾರತವನ್ನು ತೋರಿಸಿ ಕೊಟ್ಟಿದ್ದಾನೆ. ಹಾಗೆಯೇ ತನ್ನ ನಿಜವಾದ ವ್ಯಕ್ತಿತ್ವವನ್ನೂ ತೋರಿಸಿಕೊಟ್ಟಿದ್ದಾನೆ. ಇಡೀ ಆತ್ಮ ಚರಿತ್ರೆಯಲ್ಲಿ ಅನೇಕ ಸುಂದರ ಘಟನೆಗಳ, ವ್ಯಕ್ತಿಗಳ, ನಾಡಿನ ನಾನಾ ಭಾಗಗಳ, ಒಟ್ಟಾರೆ ಜೀವನದ ಸಮಗ್ರ ಚಿತ್ರಣವಿದೆ. ಟೇಲರನು ತನ್ನೆಲ್ಲ ಭಾವನೆಗಳನ್ನು ಅನುಭವಗಳನ್ನು ಮುಕ್ತ ಮನಸ್ಸಿನಿಂದ ತೋರಿಸಿದ್ದಾನೆ. ಎಲ್ಲಿಯೂ ತನ್ನನ್ನು ಹೊಗಳಿಕೊಂಡಿಲ್ಲ, ಇತರರನ್ನು ತೆಗಳಿಲ್ಲ. ಆದರೆ ಭಾರತದ ಬಗ್ಗೆ , ಭಾರತೀಯರ ಬಗ್ಗೆ ಆತ ಹೊಂದಿದ ಗೌರವ , ಸದ್ಭಾವನೆಗಳು ಅತಿರಂಜಿತಗೊಳ್ಳದೆ ಅಭಿವ್ಯಕ್ತವಾಗಿವೆ.

'A students Manual of the History of India' ಎಂಬುದು ಆತ ಬರೆದ ಇತಿಹಾಸದ ಪುಸ್ತಕವಾಗಿದೆ. ಭಾರತವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲಿ ಕ್ಕೆಂದು ತನ್ನ ಜನರಿಗೆ ಬರೆದ ಪುಸ್ತಕವು ೧೮೭೦ರಲ್ಲಿ ಪ್ರಕಟವಾಯಿತು. ಈ ಪುಸ್ತಕಕ್ಕೆ ಬಹಳಷ್ಟು ಬೇಡಿಕೆಯೂ ಇತ್ತು.

ಇನ್ನುಳಿದ ಇತಿಹಾಸ ಪುಸ್ತಕಗಳಿಗಿಂತ ಈ ಪುಸ್ತಕವು ಭಿನ್ನ ವಾಗಿದೆ. ಈ ಪುಸ್ತಕದ ಮೊದಲಿನ ಮೂವತ್ತು ಪುಟಗಳಲ್ಲಿ ಎಲ್ಲ ಹಿಂದುಗಳ, ಮುಸಲ್ಮಾನರ ಸಾಮಾಜಿಕ,

ಕೌಟುಂಬಿಕ, ಧಾರ್ಮಿಕ ಜೀವನದ ಬಗ್ಗೆ ಬರೆದಿದ್ದಾನೆ. ಹಿಂದುಗಳ ಬಗ್ಗೆ ಹೇಳಿದ್ದಾನೆ –

"Hindus are kind to their children, perhaps, over indulgent ' they honour their parents and elders, are extremely charitable for it is their religion to be so"

ಅದರಂತೆ ಮುಸಲ್ಮಾನರ ಬಗ್ಗೆ ಹೀಗೆ ಹೇಳಿದ್ದಾನೆ –

"...... They are, on the other hand, courteous , brave faithful, more truthful, habitually than the Hindoos, more self-reliant and independent in bearing and conducts" ಈ ರೀತಿಯಾಗಿ ಆತ ಸಮಾಜಶಾಸ್ತ್ರಜ್ಞನಾಗಿಯೂ ಭಾರತವನ್ನು ನಿರೀಕ್ಷಿಸಿದ್ದಾನೆ. ಇವೆರಡೂ ಧರ್ಮದ, ಸಂಸ್ಕೃತಿಯ ಅಧ್ಯಯನ ಮಾಡಿದ ಆತ ತನ್ನ ದೇಶ ಬಾಂಧವರಿಗೆ ಹೇಳಿದ್ದಾನೆ.

"I wish it to be understood that the people of India are not, as many have thought , rude or uncivilized" ಅಷ್ಟೇ ಅಲ್ಲದೆ ಯುರೋಪದಲ್ಲಿ ನಾಗರಿಕತೆ ಉಂಟಾಗುವ ಮೊದಲೇ ಹನ್ನೆರಡನೆ ಶತಮಾನದಷ್ಟೊತ್ತಿಗೆ ಭಾರತದಲ್ಲಿ ಶ್ರೇಷ್ಠವಾದ ಧರ್ಮ, ಸಂಸ್ಕೃತಿ, ನಾಗರಿಕತೆ ಇದ್ದವೆಂದು ಸಾರಿ ಹೇಳಿದ್ದಾನೆ.

"When Europe, now so highly civilized, was wrapt in the darkest gloom of barbarism and ignorance, and its people wee painted savages, India was the seat of the highest intellectual sciences" ಇದಕ್ಕಿಂತ ಹೆಚ್ಚಿನ ಪ್ರಶಸ್ತಿ, ಪತ್ರಿಕೆ ಯಾವುದಿದೆ ?

ಈ ತನ್ನ ಇತಿಹಾಸ ಪುಸ್ತಕವನ್ನು ಬರೆಯುವುದಕ್ಕಿಂತ ಮೊದಲು ಭಾರತದ ಇತಿಹಾಸ ಕುರಿತು ಪ್ರಕಟಗೊಂಡ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಓದಿ ತಿಳಿದುಕೊಂಡಿದ್ದ. ಪರದೇಶದ ಬಗ್ಗೆ ತಿಳಿದುಕೊಳ್ಳುವದು ಸುಲಭ ಮಾತಲ್ಲ ಎಂದೂ ಹೇಳುತ್ತಿದ್ದ. ಆತ ಅಸಾಮಾನ್ಯ ಪಂಡಿತನಾದುದರಿಂದಲೇ ಈ ರೀತಿಯ ಇತಿಹಾಸವೊಂದನ್ನು ಬರೆಯಲು ಸಾಧ್ಯವಾಯಿತು. ಇತಿಹಾಸಕಾರರ ದೃಷ್ಟಿಯಲ್ಲಿ ಅದರಲ್ಲಿ ದೋಷಗಳು ಇರಬಹುದು ಆದರೆ ಅದರಲ್ಲಿ ಅಸತ್ಯವೆಂಬುದು ಇಲ್ಲ.

ಇನ್ನು ಮೂರನೆಯದಾಗಿ ಟೇಲರನು ಹೇನ್ರಿ ರೀವ್ಹನಿಗೆ ಬರೆದ ಪತ್ರಗಳನ್ನು ಅವಲೋಕಿಸಬಹುದು. ಆತ ಅವುಗಳನ್ನು ಸಾಹಿತ್ಯ ಕೃತಿಯಾಗಬೇಕೆಂದು ಬಯಸಿ ಬರೆದಿಲ್ಲ. ಆದರೆ ಭಾರತದ ಬಗ್ಗೆ ನೈಜ ಚಿತ್ರಣ ಕೊಡುವದು ಅವನಿಗೆ ಅವಶ್ಯ ಎನಿಸಿತ್ತು. ಭಾರತದ ಏಳ್ಗೆ, ಸರ್ವತೋಮುಖ ಸುಧಾರಣೆ ಆತ ಬಯಸಿದ್ದ. ಎಂತಲೇ ಆತ ಉದ್ಗಾರ ತೆಗೆದು ಹೇಳಿದ –

ಹಾಗೂ ಸೀತಾ ಕಾದಂಬರಿಗಳು. ಯಾವುದೇ ಪ್ರಕಾರದ ಕಾದಂಬರಿ ಆದಾಗಿದ್ದರೂ ಅದರಲ್ಲಿ ಇತಿಹಾಸ ಮತ್ತು ಕಲ್ಪನೆಗಳು ಸಮ್ಮಿಳಿತವಾಗಿದ್ದು, ಆಯಾ ಕಾಲದ ಜೀವನವನ್ನು ಸುಂದರವಾಗಿ, ರಸವತ್ತಾಗಿ ತೋರಿಸಿ ಕೊಡುತ್ತವೆ.

ಆತನು ಕಾದಂಬರಿಗಳಿಗೆ ನಿರ್ಜೀವವಾದ, ಬರಡಾದ ವ್ಯಕ್ತಿಗಳನ್ನು ಸಜೀವರನ್ನಾಗಿಸಿ ನಮಗೆ ಕೊಡುತ್ತಾನೆ. ಅದಕ್ಕಾಗಿ ಆತ ಬಹಳಷ್ಟು ಇತಿಹಾಸವನ್ನು ಓದಿ ತಿಳಿದುಕೊಳ್ಳಬೇಕಾಯಿತು. ಏಕೆಂದರೆ ಐತಿಹಾಸಿಕ ಕಾದಂಬರಿಗಳಲ್ಲಿ ಸತ್ಯಾ ಸತ್ಯತೆಯ ಪ್ರಶ್ನೆ ಬರುತ್ತದೆ. ಐತಿಹಾಸಿಕ ಬಲ್ಲವನಾದಂತೆ ಸಾಮಾಜಿಕ ಜೀವನವನ್ನೂ ಬಲ್ಲವನಾಗಿರಬೇಕು. ಏಕೆಂದರೆ ಮೂರು ನಾಲ್ಕು ಶತಮಾನಗಳ ಜನಜೀವನವನ್ನು ಆತ ತೋರಿಸಲು ಯತ್ನಿಸಿದ್ದಾನೆ. ಉದಾಹರಣೆಗೆ ತಾರಾ ಕಾದಂಬರಿಯಲ್ಲಿ ಬರುವ ಫರುಖಿಲ್ ಖಾನನ ಹೆಸರು ಮಾತ್ರ ಇತಿಹಾಸದಲ್ಲಿ ಅಲ್ಲೋ ಇಲ್ಲೋ ಒಮ್ಮೆ ಬರುತ್ತದೆ. ಆದರೆ ಟೇಲರ ಅವನಿಗೆ ವ್ಯಕ್ತಿತ್ವ ಕಲ್ಪಿಸಿಕೊಟ್ಟು ಪ್ರೇಮ ಕಥೆಯ ನಾಯಕನನ್ನಾಗಿಸಿ ಅಮರಗೊಳಿಸಿದ್ದಾನೆ. ನಿಜವಾಗಿಯೂ ತಾರಾ ಎಂಬುವವಳನ್ನು ಆತ ಮದುವೆಯಾಗಿದ್ದನೆ ? ಎಂಬ ಪ್ರಶ್ನೆಗೆ ಯಾವ ಇತಿಹಾಸದಲ್ಲೂ ಉತ್ತರ ಸಿಗವುದಿಲ್ಲ. ಅದಕ್ಕೆಂತಲೇ ಆತ ತನ್ನ ಕಾದಂಬರಿಗಳಿಗೆ Historical romance ಎಂದು ಕರೆದಿದ್ದಾನೆ. ಅದರಂತೆ ಕಾಸಿಂ ಅಲಿ ಪಟೇಲ ಆಗಲಿ ಅಮೀನಾ ಆಗಲಿ, ರಾಲ್ಫ ಡಾರ್ನೆಲ್ ಆಗಲಿ ಸೀತಾ, ಸಿರಿಲ್ ಬ್ರ್ಯಾಂಡನ್ ಮೊದಲಾದವರು ಯಾವದೇ ಇತಿಹಾಸದ ವ್ಯಕ್ತಿಗಳಾಗಿಲ್ಲ. ಅವೆಲ್ಲ ಟೇಲರ ಸೃಷ್ಟಿಸಿದ ಅಮರ ಪಾತ್ರಗಳಾಗಿವೆ. ರಮ್ಯ ಕಥೆಗಳನ್ನು ಕಟ್ಟಿ ಹೇಳುವಾಗ ಆತ ಎಲ್ಲ ನಾಯಕರನ್ನು ತರುಣರನ್ನಾಗಿ, ಸುಂದರರನ್ನಾಗಿಸಿ,ಸಾಹಸಿ, ಪರಾಕ್ರಮಿಗಳಾನ್ನಾಗಿ ಚಿತ್ರಿಸಿದ್ದಾನೆ. ಅದರಂತೆ ಎಲ್ಲ ನಾಯಕಿಯರನ್ನು ಸುಂದರವಾದ ಯುವತಿಯರನ್ನಾಗಿ ಆದರ್ಶಪ್ರಾಯರನ್ನಾಗಿ ಚಿತ್ರಿಸಿದ್ದಾನೆ. ತಾನು ಹೇಳುವ ಕತೆ ಸುಂದರವೆನಿಸಿ ಓದುಗರು ಮೆಚ್ಚುವಂತೆ ಕಾಳಜಿ ವಹಿಸಿದ್ದಾನೆ. ಅದಕ್ಕೆ ಪೂರಕವಾಗುವಂತೆ ಘಟನೆಗಳನ್ನು ಸಾಮಾಜಿಕ ಸ್ಥಿತಿ ಗತಿಗಳನ್ನು ನೈಜ, ವಾಸ್ತವಿಕ ಎನಿಸುವಂತೆ ನಿರ್ಮಾಣ ಮಾಡಿದ್ದಾನೆ.

ಐತಿಹಾಸಿಕ ಕಾದಂಬರಿಕಾರನಿಗೆ ಇತಿಹಾಸವನ್ನು ಹೇಳುವುದು ಮುಖ್ಯವಾಗಿರುವುದಿಲ್ಲ. ಕಾವ್ಯ ಶಕ್ತಿಯ ಮುಖಾಂತರ ಸೃಜನ ಮಾಡಿ ಜೀವಕಳೆ ತುಂಬಿ ಬಿಡುವದು ಅವನ ಮುಖ್ಯ ಗುರಿಯಾಗಿರುತ್ತದೆ. ತಾಜ-ಉಲ್-ನಿಸ್ಸಾಳಂಥ ನಿಜವಾದ ಐತಿಹಾಸಕ ವ್ಯಕ್ತಿಗಳ ಚಿತ್ರಣ ಅವನಿಗೆ ಬೇಕಾಗಿಲ್ಲ. ಅದಕ್ಕೆಂತಲೇ ಅಂಥ ಪಾತ್ರಗಳನ್ನು ಅಮುಖ್ಯವಾಗಿಸಿರುತ್ತಾನೆ. ಯಾವುದೇ ಐತಿಹಾಸಿಕ ಘಟನೆ, ಪಾತ್ರವನ್ನು ಆಯ್ದುಕೊಂಡರೂ ಆತ ಅದಕ್ಕೆ ತಕ್ಕ ಘನತೆಯನ್ನು ತಂದು ಕೊಡುತ್ತಾನೆ. ಉದಾಹರಣೆಗೆ ಚಾಂದಬೀಬಿ ಕಾದಂಬರಿಯಲ್ಲಿ ಅದಕ್ಕೆ ಮಹಾಕಾವ್ಯದ ಸೊಬಗು

Epic grandeur ತಂದುದನ್ನು ನೋಡಬಹುದು. ನವರಸಗಳನ್ನುಂಟು ಮಾಡುವದು ಕಲಾಕಾರನ ಜಾಣ್ಮೆಯಾಗಿರುತ್ತದೆ. ಅಂಥ ಜಾಣ್ಮೆಯನ್ನು, ನಿಪುಣತೆಯನ್ನು ತನ್ನ ಎಲ್ಲ ಕಾದಂಬರಿಗಳಲ್ಲಿ ತಂದಿದ್ದಾನೆ. ಆತ ಇತಿಹಾಸವನ್ನು ಎಲ್ಲಿಯೂ ತಿರುಚಿಲ್ಲ. ಅದಕ್ಕೆ ಅಪಾಚಾರ ವೆಸಗಿಲ್ಲ. ವಿವಾದಾತ್ಮಕವಾದುದನ್ನು ಎಲ್ಲಿಯೂ ತಂದಿಲ್ಲ. ಯಾವ ಯಾವ ಪ್ರಕಾರದ ಜನರನ್ನು ಆತ ನಿಜ ಜೀವನದಲ್ಲಿ ನೋಡಿದ್ದನೋ, ಅಂಥವರ ಮೇಲೆಯೇ ತನ್ನ ಕಾಲ್ಪನಿಕ ಪಾತ್ರಗಳ ಸೃಷ್ಟಿ ಮಾಡಿದ್ದಾನೆ. ಸತ್ಯಕ್ಕೆ ಕಲ್ಪನೆಯ ಮೆರಗನ್ನು ಕೊಟ್ಟಿದ್ದಾನೆ.

ಅದರಂತೆ ಅವನ ಆತ್ಮ ಚರಿತ್ರೆಯಾದರೂ ಸತ್ಯದಿಂದ, ಪ್ರಾಮಾಣಿಕತೆಯಿಂದ, ಅನುಭವಗಳ ಆಧಾರದ ಮೇಲಿಂದಬರೆಯಲ್ಪಟ್ಟಿದೆ. ತಾನು ಮಾಡಿದ್ದನ್ನು, ನೋಡಿದ್ದನ್ನು ಎಲ್ಲಿಯೂ ಅತಿ ರಂಜಿತಗೊಳಿಸದೆ ವಾಸ್ತವಿಕ ರೀತಿಯಲ್ಲಿ ವಿವರಿಸಿದ್ದಾನೆ. ತನ್ನ ವೈಭವೀಕರಣವನ್ನು ಎಲ್ಲಿಯೂ ಮಾಡಿಕೊಂಡಿಲ್ಲ. ತನ್ನ ಧರ್ಮವೇ ಶ್ರೇಷ್ಠ , ತನ್ನ ಸಂಸ್ಕೃತಿಯೇ ಶ್ರೇಷ್ಠವೆಂದು ಕೊಂಡಾಡದೆ ಸಮನ್ವಯ ದೃಷ್ಟಿಕೋನ ತಾಳಿ, ರಾಗದ್ವೇಷ ತಾಳದೆ ಹೇಳಿದ್ದಾನೆ. ಸತ್ಯವನ್ನು ಬಲಿಕೊಡದೆ ಅಸತ್ಯವನ್ನು ನುಡಿಯದೆ ಇದ್ದುದನ್ನು ಇದ್ದಂತೆ ಬರೆದು ಆ ಕಾಲದ ಪ್ರತಿಬಿಂಬವನ್ನು ತೋರಿಸಿದ್ದಾನೆ. ಇದು ಅವನ ವೈಶಿಷ್ಟ್ಯವಾಗಿದೆ.

ಇವುಗಳ ಸಹಾಯದಿಂದ ನಾವು ಟೇಲರನ ಸಾಧನೆಯನ್ನು ನೋಡಬೇಕು. ಸಾಮಾನ್ಯವಾಗಿ ಟೇಲರನ ಪಾತ್ರಗಳೆಲ್ಲವೂ ಅತ್ಯಂತ ಆದರ್ಶವಾಗಿ ಚಿತ್ರಿಸಲ್ಪಟ್ಟಿವೆ ಎಂಬುದು ಕೆಲವು ವಿಮರ್ಶಕರ ಅಭಿಪ್ರಾಯವಾಗಿದೆ. ಇ ಎಫ್ ಓಟನ್ ಎಂಬುವರು

".... it may be justly doubted whether two such Hindu women as Tara and Seeta could have existed at the times to which they are allocated. To create and sustain interest, he gave his chief character such attributes as are met within the most noble of civilized races ಎಂಬ ಆಪಾದನೆ ಮಾಡಿದ್ದಾರೆ. ಇದಕ್ಕೆಉತ್ತರವಾಗಿ ತಾರಾ ಹಾಗೂ ಸೀತಾಳಂಥ ಸುಂದರ, ಸುಸಂಸ್ಕೃತ ಯುವತಿಯರು ಭಾರತದಲ್ಲಿ ಎಲ್ಲ ಕಾಲದಲ್ಲೂ ಇದ್ದರು ಎಂದು ಹೇಳಬೇಕಾಗುತ್ತದೆ. ಭಾರತದ ಮಹಾಕಾವ್ಯಗಳಲ್ಲಿ ಎಷ್ಟೊಂದು ಸುಂದರ ಆದರ್ಶ ಜೀವನ ತೋರಿಸಲ್ಪಟ್ಟಿದೆ. ಇತಿಹಾಸದಲ್ಲಿಯ ಚಿತೋರದ ರಾಣಿ ಪದ್ಮಿನಿಯ ಸೌಂದರ್ಯ ಪ್ರಸಿದ್ಧವಾಗಿದೆ. ಒಂದು ವೇಳೆ ಅವರನ್ನು ಆದರ್ಶರನ್ನಾಗಿಸಲಾಗಿದೆ ಎಂದು ಬಗೆದರೂ ಅದು ಸತ್ಯದ ಆದರ್ಶೀಕರಣವೇ ಆಗಿದೆ ಎದು ಹೇಳಬಹುದು.

ಅವನ ಮೇಲಿನ ಮತ್ತೊಂದು ಆಪಾದನೆ ಎಂದರೆ ಅವನ ಕಾದಂಬರಿ ಕಲೆಯು ಆಯ್ದು ಕೊಂಡ ವಿಷಯ ಹಾಗೂ ದೃಷ್ಟಿಕೋನಕ್ಕೆ ಅನುಗುಣವಾಗಿಲ್ಲ ಎಂಬುದಾಗಿದೆ.

ಇದರರ್ಥ ಅವನು ಭಾರತದ ಬಗ್ಗೆ ಬರೆಯುವ ನಿಜವಾದ ಸಾಮರ್ಥ್ಯ ಹೊಂದಿರಲಿಲ್ಲ ಎಂಬುದಾಗಿದೆ. ಇದೂ ಕೂಡ ತಪ್ಪು. ಟೇಲರನ ಮನೋಧರ್ಮ, ವಿಚಾರಗಳನ್ನು ಅವನ ಕಾದಂಬರಿಗಳೇ ಸೂಚಿಸುತ್ತವೆ. ಅವನು ಬರೆದ ಕಾಲದಲ್ಲಿಅಂತರ್ಜಾತಿ ವಿವಾಹದ ಬಗ್ಗೆಯಾಗಲೀ, ವಿಧವಾ ಪುನರ್‌ವಿವಾಹದ ಬಗ್ಗೆಯಾಗಲೀ ಯಾರೂ ವಿಚಾರಿಸುತ್ತಲೇ ಇರಲಿಲ್ಲ, ಬರೆಯುವದಂತೂ ದೂರೇ ಉಳಿಯಿತು. ಭಾರತೀಯ ಜನ ಜೀವನದ ಸಂಪೂರ್ಣ ಅರಿವು ಅವನಿಗೆ ಇತ್ತು, ಎಂತಲೇ ಆತ ತಾನು ಪ್ರತ್ಯಕ್ಷದಲ್ಲಿ ಕಂಡ,ಅನುಭವಿಸಿದ ವಿಷಯಗಳನ್ನು ಕಾದಂಬರಿ ಯಲ್ಲಿ ತಂದಿದ್ದಾನೆ. ಒಂದು ವೇಳೆ ಟೇಲರನು ಇಂಥ ಕಾದಂಬರಿಗಳನ್ನು ಬರೆಯ ದಿದ್ದರೆ ಮತ್ತೊಬ್ಬರಾರಿಗೂ ಬರೆಯಲು ಸಾಧ್ಯವೇ ಆಗುತ್ತಿರಲಿಲ್ಲ. ಆತ ಬರೆದಿದ್ದರಲ್ಲಿಯೇ ಹಿರಿಮೆ ಗರಿಮೆ ಇದೆ.

ಅವನ ಮೇಲೆ ಮಾಡಿದ ಇನ್ನೊಂದು ಗುರುತರ ಆಪಾದನೆ ಎಂದರೆ ಅವನ ಕಲೆಯಲ್ಲಿ ಯಾವುದೇ ಬೆಳವಣಿಗೆ ಇಲ್ಲ ಎಂಬದಾಗಿದೆ. ಇದರಲ್ಲಿ ಯೂ ಕೂಡ ಹುರುಳಿಲ್ಲ. ಟೇಲರನ ಪ್ರಥಮ ಕೃತಿಯಾದ 'Confessions of a Thug' ನಲ್ಲಿ ಬರ್ಬರ ಹತ್ಯೆಯ ಘಟನೆಗಳೇ ತುಂಬಿವೆ. ಅವನ ಕೊನೆಯ ಕಾದಂಬರಿಯಾದ 'ಎ ನೋಬಲ್ ಕ್ವೀನ್'ದಲ್ಲಿ ಬರ್ಬರತೆ ಎಂಬುದು ಅತೀ ಕಡಿಮೆಯಾಗಿದ್ದು ಆತ್ಮ ಜ್ಞಾನದ ಭಾಗ ಹೆಚ್ಚಾಗಿದೆ. ಎಂದಮೇಲೆ ಅವನ ವೈಚಾರಿಕತೆಯಲ್ಲಿ, ಅದನ್ನು ಅಭಿವ್ಯಕ್ತಗೊಳಿಸುವ ಕಲೆಯಲ್ಲಿ ಸರ್ವಧರ್ಮ ಸಮನ್ವಯತೆ ಸಾಧಿಸುವಲ್ಲಿ ಸಾಕಷ್ಟು ಬೆಳವಣಿಗೆ ಕಾಣುತ್ತೇವೆ. ಕಥನ ಕಲೆಯಲ್ಲಿ ಘಟನಾವಳಗಳನ್ನು ತರುವಲ್ಲಿ ಪಾತ್ರ ಸೃಷ್ಟಿಯಲ್ಲಿ, ಕುತೂಹಲ ಕೆರಳಿಸಿಕೊಂಡು ಹೋಗುವಲ್ಲಿ ಒಟ್ಟಾರೆ ಎಲ್ಲದರಲ್ಲಿಯೂ ಆತ ಪರಿಣತಿಯನ್ನು ಪರಿಪಕ್ವತೆಯನ್ನು ತೋರುತ್ತ ಹೋಗಿದ್ದಾನೆ. ಸಮಗ್ರ ಭಾರತವನ್ನು ಚಿತ್ರಿಸುವಲ್ಲಿ ಸಫಲನಾಗಿದ್ದಾನೆ.

ಅವನ ಮೇಲಿನ ಇನ್ನೊಂದು ಆಪಾದನೆ ಎಂದರೆ ಆತ ಮುಸ್ಲಿಂರನ್ನು ಚೆನ್ನಾಗಿ ತೋರಿದಷ್ಟು ಹಿಂದುಗಳನ್ನು ಚಿತ್ರಿಸಿಲ್ಲ ಎಂಬುದಾಗಿದೆ. ಇದೂ ಕೂಡ ಸಮಂಜಸ ವಿಮರ್ಶೆಯಾಗಿಲ್ಲ. ಆತ ಮುಸ್ಲಿಂ ಪಾತ್ರಗಳನ್ನು ಹೆಚ್ಚು ಪ್ರಮಾಣದಲ್ಲಿ ಸೃಷ್ಟಿಸಿದ್ದು, ಹೆಚ್ಚು ಪ್ರಮಾಣದಲ್ಲಿ ವರ್ಣಿಸಿದ್ದು ನಿಜ. ಆತ ಹಿಂದುಗಳನ್ನು ಕಡೆಗಣಿಸಿಲ್ಲ. ಉದಾಹರಣೆಗೆ ತಾರಾದಲ್ಲಿ ಬರುವ ವ್ಯಾಸ ಶಾಸ್ತ್ರಿಯನ್ನು ಅವನ ಕುಟುಂಬವನ್ನು ನೋಡಿದಾಗ ಆತ , ಎಲ್ಲ ಧರ್ಮೀಯರನ್ನು ಅಷ್ಟೇ ಮಹತ್ವ ಕೊಟ್ಟು ಸೃಜಿಸಿದ್ದು ತಿಳಿದು ಬರುತ್ತದೆ. ಆತನ ವಿಶಾಲ ದೃಷ್ಟಿಯಲ್ಲಿ ಹಿಂದುಗಳು ಹಾಗೂ ಮುಸಲ್ಮಾನರು ಒಂದೇ ನಾಣ್ಯದ ಎರಡು ಬದಿಗಳಾಗಿದ್ದಾರೆ, ಇಬ್ಬರೂ ಅಷ್ಟೇ ಮಹತ್ವದವರಾಗಿದ್ದಾರೆ. ಕ್ರಿಶ್ಚಿಯನ್‌ನಾದ ಅವನ ಆಹಾರವು, ಮುಸ್ಲಿಮರ ಆಹಾರವು ಒಂದೇ ಥರದ್ದಾಗಿದ್ದುದರಿಂದ, ಮುಸ್ಲಿಂ ಸಂಪರ್ಕ ಅವನಿಗೆ ಹೆಚ್ಚ ಬಂದುದರಿಂದ ಅವರ ಪಾತ್ರಗಳ ಸಂಖ್ಯೆ ಹೆಚ್ಚಾಗಿವೆ.

ಹೀಗಾಗಿ ಅವನು ಪ್ರೊ - ಹಿಂದುವೆಂದಾಗಲಿ, ಪ್ರೊ-ಮುಸ್ಲಿಂ ಎಂದಾಗಲಿ ಭಾವಿಸಲಾಗದು. ಆತ ಯಾವದೇ ಧರ್ಮದ ಜನರ ಬಗ್ಗೆ ವಿಶೇಷ ಆಸಕ್ತಿ ತೋರಿದ್ದರೆ ಅದು ಸಮನ್ವಯತೆಯ ಪ್ರತೀಕವಾಗುತ್ತಿರಲ್ಲಿ. ಅವನ ದೃಷ್ಟಿಕೋನದಲ್ಲಿ ದೋಷ ಇಲ್ಲ. ಕ್ರಿಶ್ಚಿಯನ್ ಧರ್ಮವೇ ಶ್ರೇಷ್ಠ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಎಲ್ಲ ಭಾರತೀಯರನ್ನು ಚಿತ್ರಿಸುವುದೇ ಅವನ ಗುರಿಯಾಗಿತ್ತು.

ಇನ್ನು ಅವನಲ್ಲಿ ದೋಷಗಳು ಇಲ್ಲವೆಂದಲ್ಲ, ಇವೆ.ಆದರೆ ಅವು ವೈಯಿಕ್ತಕ ದೋಷಗಳಾಗಿಲ್ಲ. ಆ ಕಾಲಮಾನದ ದೋಷಗಳಾಗಿವೆ. ವಿಜಾಪುರದ ವಾಸ್ತುಶಿಲ್ಪ ಬಣ್ಣಿಸುವಾಗ , ಬ್ರಿಟಿಷರು ವ್ಯಾಪಾರಿಗಳಾಗಿ ಖ್ಯಾತರಾಗುವಾಗ, ಗುಲ್ಬರ್ಗ, ಅಹಮ್ಮದನಗರ, ಹೈದರಾಬಾದಗಳನ್ನು ವರ್ಣಿಸುವಾಗ ಆತ ಕಾದಂಬರಿಕಾರನಾಗದೆ ನಿಬಂಧಕಾರನಾಗಿ ಬಿಡುತ್ತಾನೆ. ಅನೇಕ ಸಲ ಹೇಳಿದ್ದನ್ನೇ ಪದೇ ಪದೇ ಹೇಳುತ್ತಾನೆ. ಅನೇಕ ಕಡೆಗಳಲ್ಲಿ ವಿಷಯಾಂತರವನ್ನೂ ಮಾಡುತ್ತಾನೆ. ತನ್ನ ದೋಷ ಆತನಿಗೆ ಗೊತ್ತು ಇದೆ. ಅದಕ್ಕಾಗಿ ಆತ ಓದುಗರಿಗೆ 'Bear with me, my patient reader' ಎಂತಲೂ ಅನ್ನುತ್ತಾನೆ.

ಟೇಲರನು ಕೊಟ್ಟ ಭಾರತದ ಚಿತ್ರಣವನ್ನು ಇನ್ನಿತರ ಆಂಗ್ಲೋ ಇಂಡಿಯನ್ ಸಾಹಿತಿಗಳು ಕೊಟ್ಟ ಭಾರತದ ಚಿತ್ರಣದೊಂದಿಗೆ ಹೋಲಿಸಿನೋಡಬೇಕು. ಟೇಲರನಿಗಿಂತಲೂ ಪೂರ್ವದಲ್ಲಿ W.B. Hockely ಎಂಬ ಸಾಹಿತಿಯು ಭಾರತದ ಬಗ್ಗೆ ಬರೆದದ್ದು ಅವುಗಳಲ್ಲಿ. ಪಾಂಡುರಂಗ ಹರಿ ಅಥಾ ಟೇಲ್ಸ ಆಫ್ ಝುನಾನಾ ಎಬುದು ಪ್ರಮುಖವಾಗಿದೆ. ಇದರಲ್ಲಿ ಪೂರ್ವದೇಶಗಳ ಬಗ್ಗೆ ಬರೆದ ಕಥೆಗಳಿದ್ದು ಅವು ಜೋಡಿಸ್ಪಟ್ಟವೆ. ಮತ್ತು ಅವುಗಳಲ್ಲಿ ಹಾಸ್ಯ, ಮೋಹಕ ದೃಶ್ಯಗಳೂ ಇವೆ. ಭಾರತೀಯರ ಜೀವನದ ಸರಿಯಾದ ಚಿತ್ರಣವೂ ಇದೆ. ಆದರೆ ಟೇಲರನು ಅವನಿಗಿಂತ ಹತ್ತಾರು ಪಟ್ಟು ಹೆಚ್ಚಿಗೆ ಭಾರತದ ವಾಸ್ತವಿಕ ಚಿತ್ರಣವನ್ನಿತ್ತಿದ್ದಾನೆ.

ಭಾರತದ ಇತಿಹಾಸವನ್ನು ಮೂಲ ಸಾಮಗ್ರಿಯನ್ನಾಗಿ ಮಾಡಿಕೊಂಡು ಆತ ಸರ್. ವಾಲ್ಟರ ಸ್ಕಾಟನಂತೆಯೇ ಅದಕ್ಕೆ ಕಾಲ್ಪನಿಕತೆಯ ಸೊಬಗನ್ನು ನೀಡಿ ಸುಂದರ ಕಥೆಗಳನ್ನು ಹೇಳುತ್ತಾನೆ. ಸ್ಕಾಟನ ಅನೇಕ ಕಾದಂಬರಿಗಳಲ್ಲಿಯ ನಾಯಕರು ಹಾಗೂ ನಾಯಕಿಯರು ಐತಿಹಾಸಿಕ ವ್ಯಕ್ತಿಗಳಾಗಿಲ್ಲ. ಅದರಂತೆಯೇ ಟೇಲರನ ಐತಿಹಾಸಿಕ ಕಾದಂಬರಿಗಳಲ್ಲಿಯ ನಾಯಕ - ನಾಯಕಿಯರು ಐತಿಹಾಸಿಕ ವ್ಯಕ್ತಿಗಳಾಗಿಲ್ಲ. ಟೇಲರನು ತನ್ನ ಸಾಹಿತ್ಯಿಕ ಕಲೆಯನ್ನು ಬೆಳೆಸಿಕೊಂಡದ್ದು ಸ್ಕಾಟನ ಮುಖಾಂತರವೇ ಆದರೂ ಅವರಿಬ್ಬರಲ್ಲಿ ಸಾಕಷ್ಟು ಸಾಮ್ಯದಂತೆ ವೈಷಮ್ಯಗಳನ್ನೂ ಕಾಣುತ್ತೇವೆ. ಸ್ಕಾಟನು ಬರೆದ 'ದ ಸರ್ಜನ್ಸ್ ಡಾಟರ' ಎಂಬುದಕ್ಕೆ 'ಟೀಪೂ ಸುಲ್ತಾನ' ಕಾದಂಬರಿಯು ಅದರ ಮುದುವರಿಕೆ ಆಗಿದೆ. ಆದರೆ ಸ್ಕಾಟನು ಭಾರತಕ್ಕೆ ಬರದೆ ಭಾರತೀಯರನ್ನು ಪ್ರತ್ಯಕ್ಷದಲ್ಲಿ ನೋಡದೆ, ಪುಸ್ತಗಳನ್ನೋದಿ ಬರೆದುದಾಗಿದೆ. ಆದರೆ ಟೇಲರನು ಹಾಗಲ್ಲ, ಇಲ್ಲಿ

ಪ್ರತ್ಯಕ್ಷದಲ್ಲಿ ಎಲ್ಲವನ್ನು ನೋಡಿ, ಇತಿಹಾಸ ಪುಸ್ತಕಗಳನ್ನೋದಿ, ಅನುಭವಿಸಿ, ಬರೆದಿದ್ದಾನೆ. ಇತಿಹಾಸದ ಪುನಃ ಸೃಜನ ಮಾಡಿದ್ದಾನೆ. ಆದರೆ ಟೇಲರನಲ್ಲಿ ಸ್ಕಾಟನ ಪ್ರತಿಭೆ ಇರಲಿಲ್ಲ. ಟೇಲರನು ಸ್ಕಾಟನನ್ನು ಅನುಕರಿಸಿದ್ದು ಅನೇಕ ಕಡೆಗಳಲ್ಲಿ ಕಂಡು ಬರುತ್ತದೆ. ಆದರೆ ಭಾರತೀಯ ಶಬ್ದಗಳನ್ನು ಉಪಯೋಗಿಸಿ, ಭಾರತೀಯ ಶೈಲಿಯಲ್ಲಿ ಸಂಭಾಷಣೆ ಮಾಡುವಲ್ಲಿ ಟೇಲರ ಎತ್ತಿದ ಕೈ ಆಗಿದ್ದಾನೆ. ವರ್ಣನೆಗಳ ಮುಖಾಂತರ ಎಲ್ಲವೂ ಕಣ್ಮುಂದೆ ಬರುವಂತೆ ಮಾಡುತ್ತಾನೆ.

ಮಿಸೆಸ್ ಫ್ಲೋರಾ ಆ್ಯನ್ ಸ್ಟೀಲ ಎನ್ನುವವಳು(೧೮೪೭-೧೯೨೭) ಭಾರತದ ಬಗ್ಗೆ, ವಿಶೇಷವಾಗಿ ತಾನು ಬಾಳಿದ ಪ್ರದೇಶವಾದ ಪಂಜಾಬದ ಬಗ್ಗೆ, ಅಲ್ಲಿಯ ಹಳ್ಳಿಗರ ಜೀವನದ ಬಗ್ಗೆ ಅನೇಕ ಕಥೆಗಳನ್ನು ಬರೆದಿದ್ದಾಳೆ. ಅವಳೂ ಕೂಡ ನಾಲ್ಕು ಐತಿಹಾಸಿಕ ಕಾದಂಬರಿಗಳನ್ನು - ಕಿಂಗ ಎರಾಂಟ, ಎ ಪ್ರಿನ್ಸ ಆಫ ಡ್ರೀಮರ್ಸ, ಮಿಸ್ಟ್ರಸ್ ಆಫ್ ಮೆನ್, ದ ಬಿಲ್ಡರ - ಎಂಬವುಗಳನ್ನು ಬರೆದಿದ್ದಾಳೆ. ಈ ಕಾದಂಬರಿಗಳು ಮೊಗಲ ಅರಸರ ಬಗ್ಗೆ ಇವೆ. ಆದರೆ ಟೇಲರ ಡೆಕ್ಕನ್ ಅರಸರ ಬಗ್ಗೆ ಬರೆದಿದ್ದಾನೆ. ಅವಳುತನ್ನಕಾದಂಬರಿಯಲ್ಲಿ ಐತಿಹಾಸಿಕ ಹುಟ್ಟಿನಿಂದ ಸಾಯುವವರೆಗೆ ಜೀವನ ಚರಿತ್ರೆ ಬರೆದಂತೆ ಬರೆಯುತ್ತಾಳೆ. ಆದರೆ ಟೇಲರನು ಹಾಗೆ ಮಾಡದೆ ಇತಿಹಾಸದ ಚೌಕಟ್ಟಿನಲ್ಲಿ ಕಲ್ಪನಾ ಸಾಮ್ರಾಜ್ಯ ಕಟ್ಟಿ ಬರೆಯುತ್ತಾನೆ. ಅವನಿಗೆ ಇತಿಹಾಸವೇ ಪ್ರಮುಖವಾಗಿರುವುದಿಲ್ಲ. ಮಿಸೆಸ್ ಸ್ಟೀಲಳು ಭಾರತೀಯರ ಕೌಟುಂಬಿಕ ಜೀವನವನ್ನು ಚಿತ್ರಿಸಿದ್ದಾಳೆ. ಆದರೆ ಟೇಲರನು ಕೌಟುಂಬಿಕ ಜೀವನವನ್ನು ತೋರಿಸುವಲ್ಲಿ ಅವಳನ್ನು ಹಿಂದೆ ಹಾಕಿ ಬಿಡುತ್ತಾನೆ. ಅಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಅದು ಬಂದಿದೆ.

ಜೆ. .ಎ, ಹೆಂಟಿ (೧೮೩೨-೧೯೦೨) ಎಂಬ ಮತ್ತೊಬ್ಬ ಸಾಹಿತಿಯು ಮಕ್ಕಳಿಗಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಅವನೂ ಸಹ ಟೀಪುವಿನ ಬಗ್ಗೆ 'ದಿ ಟೈಗರ ಆಫ್ ಮೈಸೂರ' ಎಂದು, 'ಆ್ಯಟ ದಿ ಪೊಯಿಂಟ ಆಫ್ ಬೆಯೊನಟ್' ಎಂದು 'ಥ್ರು ದ ಸಿಖ್‌ವಾರ' ಎಂದು 'with Clive in India' ಎಂದೂ ಕಾದಂಬರಿಗಳನ್ನು ಬರೆದಿದ್ದಾನೆ.

ಈತ ದೊರೆ ಎಡ್ವರ್ಡ, ಪ್ರಿನ್ಸ ಆಫ್ ವೇಲ್ಸ ಜೊತೆಗೆ ಭಾರತಕ್ಕೆ ೧೮೭೫ರಲ್ಲಿ ಬಂದು ಅವರೊಡನೆ ಭಾರದ ತುಂಬ ಸಂಚರಿಸಿದ್ದಾನೆ. ಆದರೆ ಇವನಿಗೆ 'ಭಾರತೀಯ ಧರ್ಮದ ಬಗ್ಗೆ, ಭಾರತೀಯ ಜೀವನದ ಬಗ್ಗೆ ಆಳವಾಗಿ ಗೊತ್ತಿರಲಿಲ್ಲ. ಆತ ಟೇಲರನಂತೆ ಶ್ರೇಷ್ಠ ಪಾತ್ರಗಳನ್ನು ಸೃಜಿಸಲಿಲ್ಲ. ಆತ ಬರೆದದ್ದು ಮಕ್ಕಳ ಸಾಹಿತ್ಯವಾಗಿತ್ತು. ಆತ ಬರೆದ 'ದ ಟೈಗರ ಆಫ್ ಮೈಸೂರ' ಎಂಬುದು ಮ್ಕಕಳು ಮೆಚ್ಚಿಕೊಳ್ಳುವಂತಿದ್ದು ಟೇಲರನ 'ಟೀಪೂ ಸುಲ್ತಾನ' ವನ್ನು ಸರಿಗಟ್ಟಲು ಸಾಧ್ಯವಿಲ್ಲ.

ರುಡ್ಯಾರ್ಡ ಕಿಪ್ಲಿಂಗ್ (೧೮೬೫-೧೯೩೬) ಈತನ ಸಾಹಿತ್ಯ ಕೃತಿಗಳಲ್ಲಿ ಭಾರತದ ವಿಷಯವೇ ಪ್ರಧಾನವಾಗಿದೆ. ಇವನೂ ಸಹ ಟೇಲರನಂತೆ ಭಾರತವನ್ನು

ಹೆಚ್ಚು ಪ್ರಚಾರದಲ್ಲಿ ತಂದ. ಇಬ್ಬರೂ ಭಾರತವನ್ನು ಸುಂದರವಾಗಿ, ಸಮರ್ಪಕವಾಗಿ ಚಿತ್ರಿಸಿದವರಾಗಿದ್ದಾರೆ. ಆತನು ತನ್ನ 'ಜಂಗಲ್ ಬುಕ್ಸ್' ಗಳಲ್ಲಿ ಸಾಹಸ, ನೈತಿಕತೆಗಳನ್ನು 'ಜೋಡಿಸಿ ಮಕ್ಕಳ ಕಥೆಗಳನ್ನು ಬರೆದನು. ಆದರೆ ಕಿಂಪ್ಲಿಂಗನಲ್ಲಿ ಹಾಗೂ ಟೇಲರನಲ್ಲಿ ಕೆಲವು ಮೂಲಭೂತ ವ್ಯತ್ಯಾಸಗಳಿವೆ. ಕಿಪ್ಲಿಂಗ ಕವಿಯಾಗಿ ಕಥೆಗಾರನಾಗಿ, ಪತ್ರಿಕಾಕರ್ತನಾಗಿ, ಕಾದಂಬರಿಕಾರನಾಗಿ ಬರೆದಿದ್ದಾನೆ. ಅವರಿಬ್ಬರ ದೃಷ್ಟಿಕೋನವಲ್ಲೇ ವ್ಯತ್ಯಾಸ ಇದೆ. ಕಿಪ್ಲಿಂಗನು

"Oh, East is East, West is West
and never the twain shall meet"

ಎಂಬ ಅಭಿಪ್ರಾಯದವನಾಗಿದ್ದಾನೆ. ಆದರೆ' ಟೇಲನರನು ಪೂರ್ವ ಹಾಗೂ ಪಶ್ಚಿಮಗಳು ಕೂಡಿಕೊಳ್ಳಲು ಸಾಧ್ಯ ಎಂದು ಸಾರುತ್ತಾನೆ. ಕಿಪ್ಲಿಂಗನು ತನ್ನನ್ನು ಭಾರತೀಯನೆಂದು ಪರಿಗಣಿಸಲಿಲ್ಲ. ಆದರೆ ಟೇಲರ ಮಾತ್ರ ತನ್ನನ್ನು ಭಾರತೀಯನೆಂದೇ ಬಗೆದಿದ್ದ. ಆದರೆ ಕಿಪ್ಲಿಂಗನು ಬರೆದಂತೆ

But there is neither East nor West
Border, nor Breed, nor Birth.
When two strong men stand face to face
Though they come from the ends of the earth"

ಎಂದಿದ್ದರ ಜೊತೆಗೆ ಸಹಮತ ವ್ಯಕ್ತಪಡಿಸುತ್ತಾನೆ. ಯಾವ ಮಾತನ್ನು ಟೇಲರನು ಹೇಳ ಬಯಸಿದ್ದನೋ ಅವೇ ಮಾತುಗಳು ಕಿಪ್ಲಿಂಗನಲ್ಲಿ ಕವನ ರೂಪದಲ್ಲಿ ಬಂದಿವೆ. ಟೇಲರನ ಪ್ರಮುಖ ಪಾತ್ರಗಳೆಲ್ಲ ಪ್ರಬಲ ಹಾಗೂ ಬಲಿಷ್ಠವಾಗಿದ್ದು ಜಾತಿ, ಮತ , ಪಂಥ, ಧರ್ಮ, ಭಾಷೆ, ದೇಶಗಳೆಂಬ ಎಲ್ಲ ಕಟ್ಟಳೆ, ಅಡೆತಡೆಗಳನ್ನು ಮೀರಿ ಬಾಳಿದ್ದಾರೆ. ಒಂದಾಗಿದ್ದಾರೆ.

ಇ.ಎಂ. ಫೋರ್ಸ್ಟರ (೧೮೭೯-೧೯೭೯) ರವರಿಗೆ ಬದುಕಿದ್ದು ಭಾರತದಲ್ಲಿ ಆತ ದೇವಾಸದ ರಾಜನಿಗೆ ವೈಯಕ್ತಿಕ ಕಾರ್ಯದರ್ಶಿಯಾಗಿ ಕಾರ್ಯ ಮಾಡಿದ್ದಾನೆ. ಭಾರತದ ಬಗ್ಗೆ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾನೆ. 'A passage to India: ಹಾಗೂ 'The Hill of Devi' ಎಂಬೆರಡು ಪುಸ್ತಕಗಳಲ್ಲಿ ಆತ ಭಾರತೀಯರ ಜನ ಜೀವನವನ್ನು ಚಿತ್ರಿಸಿದ್ದಾನೆ.

'ದ ಹಿಲ್ ಆಫ್ ದೇವಿ'ಯಲ್ಲಿ ಆತ ಭಾರತೀಯರು ಆಚರಿಸುವ ಹಬ್ಬ-ಹರಿದಿನಗಳನ್ನು, ಉತ್ಸವಗಳನ್ನು ಚೆನ್ನಾಗಿ ವಿವರಿಸಿದ್ಧಾನೆ. ಆದರೆ ಭಾರತೀಯರ ಬಗ್ಗೆ ಅವನಲ್ಲಿ ಸಹಾನುಭೂತಿ ಅಷ್ಟೊಂದಿಲ್ಲ, ತನ್ನನ್ನು ಭಾರತೀಯ ಎಂದೂ

ಬಗೆಯಲಿಲ್ಲ. ಭಾರತೀಯರಂತೆ ಉಡುಪು ಧರಿಸಿದ್ದಾನೇ ಹೊರತು ಅಂತರಗಂದಲ್ಲಿ ಭಾರತೀಯನಾಗಲಿಲ್ಲ. ಆತನೇ ಹೇಳಿದ್ದಾನೆ

".... though I am dressed as a Hindu I shall never become one " ಆದರೆ ಟೇಲರನು ಮಾತ್ರ

"... He was an Indian among Indians, and an Indian among Englishmen" ಆಗಿದ್ದನು.

'ಎ ಪ್ಯಾಸೇಜ ಟು ಇಂಡಿಯಾ' ಎಂಬ ಕಾದಂಬರಿಯಲ್ಲಿ ಆಂಗ್ಲೋ ಇಂಡಿಯನ್ ಸಮಾಜದ ಚಿತ್ರಣವಿದ್ದು ಆದರಲ್ಲಿ ತಪ್ಪು ಕಲ್ಪನೆ, ವೈರ, ಬೇರೆ ಬೇರೆಯಾಗಿ ಬಿಡುವದೆಲ್ಲ ಬರುತ್ತದೆ. ಆದರೆ ಟೇಲರನು ಅಂತರ್ಜಾತಿಯ ವಿವಾಹದ ಮುಖಾಂತರ ಪರಸ್ಪರರಲ್ಲಿ ತಿಳುವಳಿಕೆ, ಹೊಂದಾಣಿಕೆ, ಪ್ರೇಮ -ಜೀವನ, ಸಹಿಷ್ಣುತೆ ಮೊದಲಾದವುಗಳನ್ನು ತರುತ್ತಾನೆ. ಅವನ ಕಾದಂಬರಿಯಲ್ಲಿ ವಿಭಿನ್ನ ಧರ್ಮ, ಹಾಗೂ ಸಂಸ್ಕೃತಿಗಳಲ್ಲಿ ಇರುವ ಹೋರಾಟದ ಚಿತ್ರಣವಿದ್ದರೆ ಟೇಲರನಲ್ಲಿ ವಿಭಿನ್ನ ಧರ್ಮ ಹಾಗೂ ಸಂಸ್ಕೃತಿಯಲ್ಲಿಯ ಸಮಾನತೆ ಹಾಗೂ ಸಮನ್ವಯತೆ ತೋರುತ್ತಾನೆ. "Mosque, caves and Temples" ಗಳ ಮುಖಾಂತರ ಹಿಂದು, ಮುಸ್ಲಿಂ ಹಾಗೂ ಆಂಗ್ಲೋ ಇಂಡಿಯನ್ನರ ಜೀವನಚಿತ್ರಣವಿದ್ದರೂ ಅವು ಭಿನ್ನವಾಗಿಯೇ ಉಳಿಯುವವು, ಐಕ್ಯತೆ ಬರುವುದಿಲ್ಲ. ಆದರೆ ಟೇಲರನಲ್ಲಿ ಸಂಗಮವಾಗಿದೆ. ಫೋರ್ಸ್ಟ ನಲ್ಲಿ ಗೊಂದಲ ಇದ್ದರೆ ಟೇಲರನಲ್ಲಿ ಸ್ಪಷ್ಟತೆ ಇದೆ. ಜೀವನದ ಪರಿಕಲ್ಪನೆ ಹೆಚ್ಚು ಇದೆ. ಟೇಲರನಲ್ಲಿರುವ ಘನ ವಿಚಾರಗಳು ಇನ್ನುಳಿದ ಸಾಹಿತಿಗಳಲ್ಲಿ ಕಾಣಬರುವುದಿಲ್ಲ.

ಎಲ್.ಎಚ್. ಮಾಯರ್ಸ (೧೮೮೧-೧೯೪೪) ಎನ್ನುವವರು ಅಕ್ಬರನ ಬಗ್ಗೆ ನಾಲ್ಕು ಐತಿಹಾಸಿಕ ಕಾದಂಬರಿಗಳ ಗುಂಪನ್ನು ಬರೆದಿದ್ದಾರೆ. ಅವರ ಕಾದಂಬರಿಗಳಲ್ಲಿ ಸಾಂಕೇತಿಕತೆ, ಪೌರಾಣಿಕತೆಗಳು ಎದ್ದು ಕಾಣುತ್ತವೆ. 'The Near and the Far ', 'Prince Jali' , 'The Root and the Flower ' ಮತ್ತು 'The pool of Vishnu' ಎಂಬುವೇ ಈ ನಾಲ್ಕು ಕಾದಂಬರಿಗಳಾಗಿವೆ. ಈತನ ಕಾದಂಬರಿಗಳಲ್ಲಿ ಐತಿಹಾಸಿಕ ಹಿನ್ನೆಲೆ ಕಂಡು ಬಂದರೂ ಪ್ರಾಮುಖ್ಯವಾಗಿ ಅವುಗಳಲ್ಲಿ ಸಮಕಾಲೀನ ರಾಜಕೀಯ, ಸಾಮಾಜಿಕ ಹಾಗೂ ನೈತಿಕ ಸಮಸ್ಯೆಗಳನ್ನು ಕುರಿತು ಬರೆದವುಗಳಾಗಿವೆ.

ಟೇಲರನಂತೆ ಈತನೂ ಭಾರತದ ರಾಜ-ರಾಣಿಯರನ್ನು, ಸೇನಾಧಿಪತಿಗಳನ್ನು ವರ್ಣಿಸಿದ್ದಾನೆ. ಆದರೆ ಅವರು ತಮ್ಮ ಸಹಜ ಭಾರತೀಯ ಭಾಷೆಯನ್ನಾಡುವುದಿಲ್ಲ. ಅವನ ಪಾತ್ರಗಳು ಸಮಕಾಲೀನ ಯುರೋಪಿಯನ್ ಪರಿಸರದ ವ್ಯಕ್ತಿಯಾಗಿ ಗಂಭೀರವಾಗಿ ಮಾತನಾಡುತ್ತಾರೆ. ಆದರೆ ಟೇಲರನ ಪಾತ್ರಗಳು ಭಾರತೀಯ ಸಹಜವಾದ ಪರಿಸರದಲ್ಲಿ, ಸಹಜವಾದ ರೀತಿಯಲ್ಲಿ ಮಾತನಾಡುತ್ತವೆ. ಮಾಯರ್ಸನಿಗೆ

ಪೂರ್ವಾತ್ಯ ದೇಶಗಳ ಜೀವನದ ವಿಧಾನ, ವಿಚಾರ ಸರಣಿ ಚಿತ್ರಿಸುವುದು ಬೇಕಾಗಿರಲಿಲ್ಲ.

ಪಾಲಸ್ಕಾಟ್ (೧೯೩೦-೧೯೭೮) ಮಾಯರ್ಸನು ಆಧ್ಯಾತ್ಮಿಕ , ನೈತಿಕ ಸಮಸ್ಯೆಗಳನ್ನು ಕುರಿತು ಬರೆದರೆ ಪಾಲಸ್ಕಾಟ್ ಎಂಬುವವನು ಸಾಮಾಜಿಕ ಹಾಗೂ ರಾಜಕೀಯ ಚಿತ್ರಣನ್ನು ಕೊಡುತ್ತಾನೆ. ಅವನು ಬರೆದ 'Raj Quartets' ದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಚಿತ್ರಣ ಇದೆ. ಹೋರಾಟ ಮಾಡಿ, ಸ್ವಾತಂತ್ರ್ಯ ಪಡೆದದ್ದು, ಭಾರತವು ಇಬ್ಭಾಗವಾದದ್ದು ಬರುತ್ತದೆ. ಇವನ ಕಾದಂಬರಿಗಳಲ್ಲಿ ಹರಿ ಕುಮಾರ ಹಾಗೂ ಮಿಸ್ ಡ್ಯಾಫ್ನೆ ಮ್ಯಾನರ್ಸ ಎಂಬುವವರ ಕಥೆಯಿದ್ದು ಪೋಲೀಸ ಇಲಾಖೆಯಲ್ಲಿರುವವರ ಕೈಯಲ್ಲಿ ಸಿಕ್ಕು ಸಂಕಷ್ಟಕ್ಕೊಳಗಾದ ಹರಿಕುಮಾರನ ದುಃಖದ ಜೀವನ ಚಿತ್ರಿತವಾಗಿದ್ದು ಕೊನೆಗೆ ಆತ ಬಿಡುಗಡೆ ಹೊಂದುತ್ತಾನೆ. ಇವನಲ್ಲಿಯೂ ಹಿಂದು ಮುಸ್ಲಿಂ , ಕ್ರಿಶ್ಚಿಯನ್ನರ ಸೌಹಾರ್ದಯುತ ಮಿಲನ ಇದೆ. ಇದನ್ನು ಜಿಲ್ಹಾಧಿಕಾರಿ ಹೇಳುತ್ತಾನೆ -

".....in that car there could be found travelling in perfect amity - a representative of each of the main powers in India. - Hindu, Muslim and Christian" ಆದರೆ ಇಂಥ ಮಿಲನ ಸ್ಕಾಟನಲಿ ಆಗಾಗ ಮಾತ್ರ ಆಗಿದೆ. ಆದರೆ ಟೇಲರನಲ್ಲಿ ಆಯುಷ್ಯ ಪರ್ಯಂತ ಉಳಿದುಕೊಂಡಿದೆ.

ಜಿಮ್ ಕಾರ್ಬೆಟ್ (೧೮೭೫-೧೯೫೫) The man eaters of kumaan' ಎಂಬುದು ಇವನ ಸುಪ್ರಸಿದ್ಧ ಕೃತಿ. ಅದರಂತೆ -The man - eating leopard of Rudraprayag' ಕೂಡ ಖ್ಯಾತಿ ಗಳಿಸಿತು. ಆದರೆ ಆತ ನಿಜವಾಗಿ ಭಾರತವನ್ನು ಬಣ್ಣಿಸಿದ್ದು - 'My India' ಎಂಬ ಪುಸ್ತಕದಲ್ಲಿ. ಈತನೂ ಕೂಡ ಟೇಲರನಂತೆ ಭಾರತದವರನ್ನು ಪ್ರೀತಿಸಿದ. ಈತ ಭಾರತದಲ್ಲಿ ಎಪ್ಪತ್ತು ವರ್ಷ ಬಡ ಜನರು, ಕಾರ್ಮಿಕರು, ಮೊದಲಾದವರ ಬಗ್ಗೆ ಬರೆದದ್ದು ಅವರಲ್ಲಿ ಅವನನ್ನು 'ಕಾರ್ಪೆಟ ಸಾಬ' ಎಂದು ಆತ್ಮೀಯತೆಯಿಂದ ಕರೆಯುತ್ತಿದ್ದರು. ಟೇಲರನು ಸುರಪುರದ ಬೇಡರನ್ನು ಆತ್ಮೀಯತೆಯಿಂದ ಕಂಡಂತೆ ಈತನೂ ಭಾರತೀಯರನ್ನು ಆತ್ಮೀಯತೆಯಿಂದ ಕಂಡನು.ಆದರೆ ಕಾರ್ಬೆಟ್ಟನು ಐತಿಹಾಸಿಕ ವಿಷಯವನ್ನು ಆಯ್ದುಕೊಳ್ಳಲಿಲ್ಲ, ಅವನ ಪಾತ್ರಗಳು ಸಾಮಾನ್ಯ ವ್ಯಕ್ತಿಗಳಾಗಿದ್ದಾರೆ.

F.W. Bain (೧೮೬೩-೧೯೪೦)ನು ಭಾರತದ ರಮ್ಯ ಚಿತ್ರಣವನ್ನು ತನ್ನ ಸಾಹಿತ್ಯ ಕೃತಿಗಳಲ್ಲಿ ಕೊಟ್ಟಿದ್ದಾನೆ. ಭಾರತೀಯ ನಾರಿಯರು ತಮ್ಮ ಗಂಡನ ಬಗ್ಗೆ ಇಟ್ಟುಕೊಂಡ ಪ್ರೀತಿ , ವಿಶ್ವಾಸ, ಗೌರವಗಳ ಚಿತ್ರಣ ಇದೆ. ಭಾರತೀಯ ಪುರಾಣಗಳ ಜ್ಞಾನದಲ್ಲಿ ಈತ ಟೇಲರನಿಗಿಂತ ಹೆಚ್ಚು ಬಲ್ಲವನಾಗಿದ್ದ. ಇವನು ತನ್ನ 'Indian Tales'

ಎಂಬ ಪುಸ್ತಕದಲ್ಲಿ ಪೂರ್ವ ಹಾಗೂ ಪಶ್ಚಿಮ ದೇಶಗಳಲ್ಲಿಯ ಅಂತರ, ವ್ಯತ್ಯಾಸ, ತೋರುತ್ತಾನೆ. ಟೇಲರನಂತೆ ಭಾರತ, ಧರ್ಮ ಬಲ್ಲವನಾಗಿದ್ದನು.

ಎಡ್ವರ್ಡ್ ಥಾಮ್ಸನ್ (೧೮೮೮-೧೯೪೬) ಮತ್ತೊಬ್ಬ ಸಾಹಿತಿಯು ಭಾರತದಲ್ಲಿ ಪತ್ರಿಕಾ ಪ್ರತಿನಿಧಿಯಾಗಿ ಕಾರ್ಯ ಮಾಡಿದ. ಮತ್ತು ಲಂಡನ್ ಟೈಮ್ಸ್‌ದ ಪ್ರತಿನಿಧಿಯೂ ಆಗಿದ್ದ. 'An Indian Day', 'A Letter from India', 'Night Falls on Shiva's Hill' 'So poor a Ghost', 'A Farewell to India' ಮೊದಲಾದವುಗಳು ಇವನ ಪ್ರಮುಖ ಕೃತಿಗಳಾಗಿವೆ. 'An Indian Day, ಹಾಗೂ 'A farewell to India' ಗಳಲ್ಲಿ ೧೯೨೦-೩೦ ರವರೆಗೆಗಿನ ಬರಗಾಲದ ಜೀವನ, ವಾತಾವರಣ, ಕುರಿತಾಗಿದೆ. ಈತ ಹೆಚ್ಚಾಗಿ ಇಂಗ್ಲಿಷ್ ಪಾತ್ರಗಳ ಮುಖಾಂತರ ಇಂಗ್ಲೀಷ್ ಜೀವನವನ್ನು ತೋರಿಸಿದ್ದಾನೆ. ಥಾಮ್ಸನ್ ಹಾಗೂ ಟೇಲರಲ್ಲಿಯ ಮಹತ್ವದ ವ್ಯತ್ಯಾಸವೆಂದರೆ ಥಾಮ್ಸ್‌ನ್ನನು ಯಾವುದೇ ಸಂಸ್ಥಾನಿಕರಲ್ಲಿ ಕಾರ್ಯ ಮಾಡಿರಲಿಲ್ಲ, ಹೀಗಾಗಿ ರಾಜ ವೈಭವ, ರಾಜ - ಜೀವನ, ಪೂರ್ವದೇಶಗಳ ಭವ್ಯತೆ ಆತನಿಗೆ ಗೊತ್ತಾಗಿರಲಿಲ್ಲ. ಆದರೆ ಅವು ಟೇಲರನಲ್ಲಿ ಬಹಳಷ್ಟಿವೆ. ಟೇಲರನು ಬಹಳಷ್ಟು ದೂರದ, ಗತಕಾಲದ ಚಿತ್ರಣ ಕೊಟ್ಟರೆ ಥಾಮ್ಸನ್ನನು ಇತ್ತೀಚಿನ ಭಾರತದ ಚಿತ್ರಣವನ್ನಿತ್ತಿದ್ದಾನೆ.

ಮುಂದೆ ಬಂದ ಹಲವಾರು ಕಾದಂಬರಿಕಾರರು, ಸಾಹಿತಿಗಳು ಎಷ್ಟೇ ಬರೆದರೂ ಅವರೆಲ್ಲ ಭಾರತೀಯರನ್ನು ಬೇರೆಯವರೆಂದೇ ಬಗೆದು ಬರೆದಿದ್ದಾರೆ. ಎರಡನೆಯದಾಗಿ ಬಹಳಷ್ಟು ಜನರು ಭಾರತವನ್ನು ಕಪ್ಪು ಬಣ್ಣದಲ್ಲಿಯೇ ಚಿತ್ರಿಸಿದ್ದಾರೆ. ಮೂರನೆಯದಾಗಿ ಭಾರತದೊಳಗಿನ ಬ್ರಿಟಿಷರು ಮೇಲಂತಸ್ತಿನಲ್ಲಿದ್ದು ಕೆಳಗಿನಂತಸ್ತಿನ ಮನೆಗಳಲ್ಲಿ ಏನು ನೆಡದಿದೆ ಎಂಬುದು ಗೊತ್ತಾಗದೇ ಹೋಗಿದ್ದಾರೆ. ಜಾನ್ ಮಾಸ್ಟರ್ಸ್ ಎಂಬ ಸಾಹಿತಿಯು - To feel India..... You must become an Indian, gain one set of qualities and lose another. As a race we don't do it - we can't " ಎಂದು ಸ್ಪಷ್ಟವಾಗಿ ಹೇಳಿದ್ದಾನೆ ಆದರೆ ಟೇಲರನಂಥ ವ್ಯಕ್ತಿಗೆ ಮಾತ್ರ ಇಂಗ್ಲಿಷ್ ಗುಣಗಳನ್ನು ಕಳೆದುಕೊಳ್ಳದೆಯೇ ಭಾರತೀಯನಾಗಿರಲು ಸಾಧ್ಯವಾಯಿತು. ನಿಜವಾದ ಭಾರತವನ್ನು ಅರಿತುಕೊಳ್ಳುವದು ಬೇರೆ, ಅದನ್ನು ಸಾಹಿತ್ಯಕೃತಿಗಳಿಲ್ಲ ತರುವದು ಬೇರೆಯೇ ಆಗಿದೆ. ಈ ವಿಷಯದಲ್ಲಿ ಕೆ.ಆರ್.ಎಸ್. ಅಯ್ಯಂಗಾರರು ಸಮರ್ಪಕವಾಗಿ ಹೇಳಿದ್ದಾರೆ. "The creative artist always functions subject to certain limiting factors" ಎಂದು. ಹೀಗಾಗಿ ಟೇಲರನೂ ಕೂಡ ಅನೇಕ ಕೊರತೆಗಳನ್ನು ಎದುರಿಸಿದನು. ಆದರೆ ಭಾರತವು ಅವನಿಗೆ ಸ್ಫೂರ್ತಿ ನೀಡಿದ್ದರಿಂದ ಕುಂದು ಕೊರತೆಗಳು ಕರಗಿ ಹೋದವು. ಕಡಿಮೆ ಆದವು.

ಟೇಲರನ ಪ್ರಭಾವವು ಇನ್ನಿತರರ ಸಮಕಾಲೀನ ಸಾಹಿತಿಗಳ ಮೇಲೆ ಬಹಳಷ್ಟು ಆಯಿತು. ಅಲ್ಲರ್ಡೈಸ ಎನ್ನುವವನು ಟೇಲರನ ಶಿಷ್ಯಯನಾಗಿ ಗುರುವಿನ ಧಾಟಿಯಲ್ಲೇ ಸಾಗಿದನು . 'The city of sunshine' (1877) ರಲ್ಲಿ ಬರೆದ ಕೃತಿಯಲ್ಲಿ ಅದು ಟೇಲರನ 'ತಾರಾ' ಕಾದಂಬರಿಯನ್ನು ಹೋಲುತ್ತದೆ. ಟೇಲರನು ಬಯಸಿದ ಅಂತರ್ಜಾತಿ ವಿವಾಹ ಇದರಲ್ಲೂ ಬಂದಿದೆ. ಅವನಲ್ಲಿ ಬಂಗಾಲದ ವರ್ಣನೆ ಇದೆ.

ಹೆನ್ರಿ ಬ್ರೂಸ ಅನ್ನುವ ಮತ್ತೊಬ್ಬ ಲೇಖಕನು ಟೇಲರನ ಪ್ರಭಾವಕ್ಕೆ ಒಳಗಾದವನಾಗಿದ್ದಾನೆ. ಆತ ತನ್ನ 'Temple Girl' ಕಾದಂಬರಿಯಲ್ಲಿ ದೇವ ದಾಸಿಯ ಚಿತ್ರಣವನ್ನಿತ್ತಿದ್ದಾನೆ. ಬೆಟ್ಟಿಸ್ಟುವರ್ಟ್ ಎನ್ನುವವಳು ತಾರಾಳಂತೆ ದೇವ ಸೇವಕಿ ಯಾಗಿದ್ದಾಳೆ. 'Bride of Shiva' ಎಂಬಲ್ಲಿ ಹಿಂದು ಕ್ರಿಶ್ಚಿಯನ್ನರಲ್ಲಾದ ಹೋರಾಟದ ವರ್ಣನೆ ಇದೆ. ಸೀತಾ ಕಾದಂಬರಿಯು ಇಲ್ಲಿ ಪ್ರತಿಧ್ವನಿಸಿದೆ. 'The Residency' 'The Song of surrender ಹಾಗೂ 'Wonder Mist' ಎಂಬ ಮೂರು ಕಾದಂಬರಿಗಳ ಗುಂಪು ಇದ್ದು ತಾರಾ ಎಂಬುವಳು ಹಿಂದು ಪ್ರಿಯಕರನಾದ ಸರ್ ಅಮರ ರಾವ ಎಂಬುವವನ್ನು ಮದುವೆಯಾಗಿ ಬಾಳಿದ್ದು ಬರುತ್ತದೆ. ಇದು ಟೇಲರನು ಸೀತಾದಲ್ಲಿ ಚಿತ್ರಿಸಿದ್ದರ ವಿರುದ್ಧ ಚಿತ್ರಣ ಆಗಿದೆ. ಬ್ರೂಸನಿಗೆ ಈ ಧರ್ಮಗಳ ಸಮ್ಮಿಲನ ಸರಿ ಎನಿಸಿರಲಿಲ್ಲ, ಆತನ 'The Eurasians' ಕಾದಂಬರಿಯಲ್ಲಿ ಬರುವ ತುಳಸಿಪುರವು ಟೇಲರನು ಚಿತ್ರಿಸಿದ ತುಳಜಾಪುರವನ್ನು ನೆನಪಿಗೆ ತಂದು ಕೊಡುತ್ತದೆ. ಬ್ರುಸನು ಭಾರತವನ್ನು ತಿಳಿದವನಾಗಿದ್ದರೂ, ಆತ ಟೇಲರನು ಭಾರತವನ್ನು ಗಾಢವಾಗಿ ಅಗಾಧ ರೀತಿಯಲ್ಲಿ ಪ್ರೀತಿಸಿದಂತೆ ಪ್ರೀತಿಸಲಿಲ್ಲ.

ಟೇಲರನ ಪ್ರಭಾವವು ಮಿಸೆಸ್. ಪಿ.ಇ. ಪೆನ್ನಿ ಎನ್ನುವವಳ ಮೇಲೆ ಬಹಳಷ್ಟಾಗಿತ್ತು. 'Desire and Delight' ಎಂಬ ಪುಸ್ತಕದಲ್ಲಿ ಅವಳು ದಕ್ಷಿಣ ಭಾರತದ ಹಿಂದೂ ಹಾಗೂ ಮುಸ್ಲಿಮರ ಝನಾನದ ಚಿತ್ರಣಗಳನ್ನು ಕೊಟ್ಟಿದ್ದಾಳೆ. ಅವಳ 'A Question of love' ಎಂಬುದು 'ಟಿಪ್ಪು ಸುಲ್ತಾನ' ಹಾಗೂ 'ತಾರಾ' ಕಾದಂಬರಿಗಳ ಅಂಶಗಳನ್ನು ಹೊಂದಿದೆ. ಗುಡ್ಡನದಿ, ಅರಣ್ಯ ಮೊದಲಾದವುಗಳ ವರ್ಣನೆಗಳಲ್ಲೂ ಅವಳು ಟೇಲರನನ್ನು ಹೋಲುತ್ತಾಳೆ. ಅವಳಿಗೆ ಭಾರತದ, ವಿಶೇಷವಾಗಿ ಮದ್ರಾಸ ಪ್ರಸಿಡೆನ್ಸಿಯ ನಿಕಟ ಸಂಪರ್ಕವಿತ್ತು.

ಜಾನ್ ಮಾಸ್ಟರ್ಸ್ ಮೇಲೂ ಟೇಲರನ ಪ್ರಭಾವ ಬಿದ್ದುದನ್ನು ನೋಡಬಹುದು. ಅವನ The Deceivers' ಎಂಬ ಕಾದಂಬರಿಯು ಟೇಲರನ ಥಗ್ಗರನ್ನು ನೆನಪಿಗೆ ತರುತ್ತದೆ. ಟೇಲರನಂತೆ ಈತನೂ ವರ್ಣನೆಗಳನ್ನು ಸಂಭಾಷಣೆಗಳನ್ನು ಕಾರ್ಯಗಳನ್ನು ನೈಜ ಯುತವಾಗಿ ತೋರಿದ್ದಾನೆ. "The Night runners of Bengal ದಲ್ಲಿ ಸಿಪಾಯಿಗಳ ಬಂಡಾಯದ ಆಳಕ್ಕೆ ಹೋಗುತ್ತಾನೆ. ಅದರ ಪ್ರಾರಂಭ, ಯಶಾಪ

ಯಶಗಳ ಬಗ್ಗೆ ವಿವರಿಸುತ್ತಾನೆ. ತನ್ನ Bhawani Junction ದಲ್ಲಿ ಭಾರತದ ಇಬ್ಭಾಗವಾದುದನ್ನು ಬಣ್ಣಿಸಿದ್ದಾನೆ. ಒಟ್ಟಾರೆ ಆತ ಮೆಡೋಸ್ ಟೇಲರನ ಸಂಪ್ರದಾಯದವನಾಗಿದ್ದಾನೆ.

ಮೈಕೆಲ್ ಮ್ಯಾಕಮಿಲನ್ ಎನ್ನುವವ Wild Maratha Battle ' ಎಂಬುದನ್ನು ಬರೆದಿದ್ದು ಅದರಲ್ಲಿ ಶಿವಾಜಿ ಏಳ್ಗೆ ಕುರಿತು ಇದೆ. ಈ ಕಾದಂಬರಿಯು 'ತಾರಾ' ಕಾದಂಬರಿಯ ಪ್ರಭಾವದಿಂದ ಬರೆಯಲ್ಪಟ್ಟಿರಬೇಕು. ಈ ಎರಡೂ ಕಾದಂಬರಿಗಳಲ್ಲಿ ಮರಾಠರ ಇತಿಹಾಸದ ಬಗ್ಗೆಯೇ ಇದೆ.

ಇದೇ ತರಹ ಟೇಲರನ ಪ್ರಭಾವವು ಅನೇಕ ಭಾರತೀಯ ಭಾಷೆಯ ಲೇಖಕರ ಮೇಲೂ ಬಿದ್ದಿದ್ದನ್ನು ನೋಡಬಹುದು. ವಿಶೇಷವಾಗಿ ಬಂಕಿಮ ಚಂದ್ರರ ಕಾದಂಬರಿಗಳಲ್ಲಿ ಕಾಣ ಸಿಗುತ್ತದೆ. ಅವರ ದುರ್ಗೇಶ ನಂದಿನಿಯಲ್ಲಿ ಬರುವ ಜಗರ ಸಿಂಹನು ಎ ನೋಬಲ್ ಕ್ವೀನ್‌ದಲ್ಲಿ ಬರುವ ಬೇಡರ ರಂಗ ನಾಯಕನನ್ನು ಹೋಲುತ್ತಾನೆ. ಅದರಂತೆ ಗಜಪತಿ ಪ್ರಾತವು ಕನ್ಫೆಶನ್ಸದಲ್ಲಿಯ ದಿಲ್‌ದಾರ ಖಾನನಂತಿದೆ. ಈ ರೀತಿ ಅವನ ಪ್ರಭಾವ ಉಂಟಾಗಿದೆ.

ಆಂಗ್ಲೋ ಇಂಡಿಯನ್ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಶ್ರೇಯಸ್ಸು ಟೇಲರನಿಗೆ ಸಲ್ಲುತ್ತದೆ. ಅವನಿಗಿಂತಲೂ ಪೂರ್ವದಲ್ಲಿ ಆಂಗ್ಲೋ ಇಂಡಿಯನ್ ಸಾಹಿತ್ಯದ ಬೇರುಗಳು ಗಟ್ಟಿಯಾಗಿರಲಿಲ್ಲ. ಅವನ ಸಾಹಿತ್ಯ ಕೃತಿಗಳ ಮೂಲಕ ಆತ 'Earned for it a distinct place in the world of letters' ಎಂದೇ ಹೇಳಬೇಕು. ತನ್ನ ವಿಶಿಷ್ಟ ಸಾಹಿತ್ಯ ರಚನೆಯ ಮುಖಾಂತರ ತನ್ನ ಓದುಗರ ಗಮನ ಸೆಳೆದ. ಆತ 'discovered India ಎಂದು ಒಪ್ಪಲೇ ಬೇಕು.

ಯಾವಾಗ ಭಾರತವನ್ನು ಬ್ರಿಟಿಷರು 'a land of heat and dust' , ' a land of regrets' , ' a land of trial, sorrow, and woe,' ಎಂದು ಮುಂತಾಗಿ ಹೀಗಳೆದಿದ್ದರೋ, ಆಗ ಟೇಲರನು ಮುಖವಾಡದ ಹಿಂದಿರುವ 'jewelled mystery' ಯನ್ನು ತೋರಿಸಿಕೊಟ್ಟ, ಆತ the barbarous' 'the semi-barbarous' and 'the civilized form' ನ್ನು ತೋರಿಸಿದನು. ಆಗ ಜನ ಬೆಚ್ಚಿ ಬೆರಗಾದರು. ಸತ್ಯವನ್ನೊಪ್ಪಿಕೊಂಡರು. ಈ ದೇಶದ ಸರ್ವತೋಮುಖ ಮಹತ್ವವನ್ನು ಕೊಂಡಾಡತೊಡಗಿದರು.

ಇದೆಲ್ಲವೂ ಏಕೆ, ಹೇಗೆ ಸಾಧ್ಯವಾಯಿತೆಂದರೆ ಟೇಲರನು ಭಾರತವನ್ನು ಒಬ್ಬ 'insider' ಆಗಿ ನೋಡಿದ್ದು ಆಗಿದೆ. ಅಂತರಾತ್ಮದಲ್ಲಿ ಭಾರತೀಯನಾಗಿ ನೋಡಿದ್ದರಿಂದ, ಬಾಳಿದ್ದರಿಂದ ಆತ 'an Indian among Indians and an Indian among English men' ಎಂದೆನಿಸಿಕೊಂಡ.

ಇಂಗ್ಲೆಂಡದಿಂದ ಭಾರತಕ್ಕೆ ಅನೇಕ ಮಹಾನ್ ಆಡಳಿತಾಗರರು ಬಂದು ಹೋದರು.ಆದರೆ ಅವರು ಬಂದು 'birds of passage' ಆಗಿ ಹೋದರು. ಅವರೆಂದಿಗೂ ಭಾರತವನ್ನು , ನಿಜವಾದ ಭಾರತವನ್ನು ತಿಳಿದುಕೊಳ್ಳಲು ಪ್ರಯತ್ನಿಸಲೇ ಇಲ್ಲ. ಯಾವ ಭಾರತವು ಬಹು ಮುಖ್ಯವಾಗಿ ಧಾರ್ಮಿಕ,ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ನಾಡೆಂದು ಹೆಸರುವಾಸಿಯಾಗಿದೆಯೋ ಅದನ್ನು ಅವರು ಕಾಣಲೇ ಇಲ್ಲ. ನಿಜವಾದ ಭವ್ಯ ಭಾರತವನ್ನು ಅರ್ಥ ಮಾಡಿಕೊಳ್ಳುವಲ್ಲಿ ಅವರು ವಿಫಲರಾದರು. ಸೋತು ಹೋದರು. ಆದರೆ ಮೆಡೋಸ್‌ನ ಟೇಲರ ಒಬ್ಬನೇ ಮಾತ್ರ ಭಾರತದ ಹೃದಯ ,ಆತ್ಮವನ್ನು ಅರಿತುಕೊಳ್ಳುವಲ್ಲಿ ಸಫಲನಾದ. ಆ ಪ್ರಯತ್ನದಲ್ಲಿ ಬಹಳಷ್ಟು ಮಟ್ಟಿಗೆ ಯಶಸ್ವಿಯಾದ. ಉಳಿದವರ ಬಗ್ಗೆ ನಾವು

"What do they know of India

Who only England know?"

ಅಂದಂತೆ ಟೇಲರನ ಬಗ್ಗೆ ಅನ್ನಲು ಸಾಧ್ಯವಿಲ್ಲ. ಯಾಕೆಂದರೆ ಆತನಿಗೆ ನಿಜವಾದ ಸತ್ಯಯುತವಾದ, ಸತ್ವಯುತವಾದ ಭಾರತವು, ಉಳಿದವರಿಗೆ ತಿಳಿಯಲಾರದ್ದು , ತಿಳಿದಿತ್ತು. ಅದನ್ನು ಚಿತ್ರಿಸಲು ಸಾಧ್ಯವಾಯಿತು.

ಆತನು ಮೂರು ಕಾದಂಬರಿಗಳಲ್ಲಿ 'ಟೀಪು ಸುಲ್ತಾನ' 'ತಾರಾ' ಹಾಗೂ 'ಎ ನೋಬೆಲ್ ಕ್ವೀನ್'ಗಳಲ್ಲಿ ಹಾಗೂ ತನ್ನ ಆತ್ಮ ಚರಿತ್ರೆಯಲ್ಲಿ ಸಮಗ್ರ ಕರ್ನಾಟಕದ ನಿಜವಾದ, ಸುಂದರವಾದ ಚಿತ್ರಣವನ್ನು ಕೊಟ್ಟಿದ್ದಾನೆ. ಆ ಚಿತ್ರಣವನ್ನು ಕೊಟ್ಟ ಮೊದಲ ಹಾಗೂ ಏಕೈಕ ವ್ಯಕ್ತಿ ಆಗಿದ್ದಾನೆ. ಆತನನ್ನು ಸಾಹಿತಿಯಾಗಿ ಸರಿಗಟ್ಟುವವರೇ ಇಲ್ಲವೆನ್ನುವಾಗ ಅವನನ್ನು ಯಾರು ತಾನೆ ಮೀರಬಲ್ಲರು ?

******

.... **A Students Manual of the History of India,** London , longman,Green and Co., 1915

,,,,,, The Fatal Armlet, A legend of Ellichpur, Bombay : Industrial Press 1872.

.... **Letters of Meadows Taylor .** Ed. patrick Cadell, Oxford, 1947

B. Secondary Sources

Barr, Patt. The Memsahibs.Bombay : Allied Publishers Pvt. Ltd., 1978.

Basham, A.L. The Wonder that was India. London : Sidwick and Jackson, 1954

Beer, J.b. The Achievement of E.M. Forster. London : CHATTO and WINDUS, 1962.

Butterfield, H.,The Historical Novel, Cambridge University Prees, 1924.

Cadell, Patrick, ed., Letters of Meadows Taylor, Oxford, 1974.

Chakravorty, Dilip, India in English Fiction. Calcutta : Prayer Books 1978.

Chaucer, Geoffrey, Knights Tale complete works, London : Oxford University Press 1974

Corbett, Jim, My India, Madras Oxford University Press, 1980.

Cornell, lois L., Kipling in India. New York : Macmillan 1966.

Cross, W.L. Development of the English novel, Ludhiana Lyall Book Depot, 1968.

Dass, G.K. and Bear, J.B. ed., E.M. Forster, Human Exploration, London : Macmillan, 1979.

Dey, Nundalal, Civilization in Ancient India, Varanasi : Indological Book House, 1972.

Duff. Grant, History of the Marathas, Bombay, 1873.

Durant, Will, Our Oriental Heritage. New York : Simon and Schuster 1954.

Forster, E.M. Aspects of the Novel, England Middle Sex : Penguin looks, 1963.

...... The Hill of Devi New Delhi : Arnold Heinemann, 1977.

..... A Passage to India. London : Penguin Books, Hazell Waston and Viney Ltd., 1950

Gay, The Beggar's Opera

Godden Rumer, The river, London : Michael Joseph, 1946,

Gokhale B.G. The Image of India. Bombay : popular Prakashan, 1971.

Greenberger, Allen J., The British Image of India. London Oxford University Press, 1969.

Oriffiths, Sir Pereival, The British Impact on India, London : Macdonald, 1952.

Gupta, B.S., Glassy Essence, Kurukshetra Univeristy Press, 1976.

Haig, Woseley, ed., The Cambridge History of India, Delhi : S. Chand and Co, 6 Volumes, 1958.

Hasan, Mohibbul, History of Tippu Sultan, Calcutta the World Press Pvt. Ltd. 1971.

Hawkins, R.E. Jim Corbett's India. Oxford University Press, 1978.

Hemenway Stephen, The Novel of India, Culcutta : Writers Workshop, 1975.

Henn, T.R. Kipling, Edinburgh : Oliver Boyd, 1967.

Henty, G.A., The Tiger of Mysore, London : 1896.

Kaye and Malleson, History of the Indian Mutiny, London : longmans, Green and co., 6 volumes, 1898.

Krishnaswamy, P.R. Tom Munro Sahib Madras : 1947

Liddell, Robert, Some principles of Fiction, London : Janathan Cape, 1953.

Lubbook, Percy, The Craft of Fiction, London: Janathan cupe 1965.

Lukacs, George, The Historical Novel, London : Merlin Press 1962.

Mansukhani , G.S. Phillip Meadows Taylor, Bombay New Book Co.m 1951.

Marlowe, T., Marlowe's plays and poems, London : Everyman's Library

Masefield, John, ed., Travels of Marco Polo, London: Everyman's library, 1958.

Masters Joh, The Deceivers, London : Michael Joseph 1952.

...... The Nightrunners of Bengal, London : Michael Joseph, 1956.

Mc Crindle, J.W.M. Ancient India as Described by Megasthenes and Arrian, Calcutta : Chuckerveerthy and Chatterjee, 1960.

Mill, James, History of British India, New Delhi Associated Publishing House, 1972.

Milton , John, Paradise Lost, London : Collier-Macmllan Ltd., 1962.

Muir, Edwin, The structure of the Novel, Bombay : Allied publishers Pvt. Ltd., 1966.

Mujumdar, R.C., ed., British Paramouncey and Indian Renaissance, Bombay : Bharatiya Vidya Bhavan, 1975.

Muller, Max, India : What can it teach us? London: Longman Green and Co., 1919.

Myers, L.H. The pool of Vishnu, London : Jonathan Cape, 1940

.... The Root and the Flower, London : Jonathan Cape, 1935.

Naik M.K., S.K. Desai, S.T. kallapur, ed., The Image of India in Western Creative Writing, Bombay : Naomillan Co. Ltd. 1971.

Oaten, E.F., A Sketch of Anglo - Indian literature, Landon : Kegan :Paul Trench Trubner Ltd. 1908.

Panikkar, K.M, Essential features of Indian Culture, Bobmay : Bharatiya Vidhya Bhavan, 1974.

Pope, Alexander, Elegy : in Memory of a Lady

Radhakrishnan. S., The Hindu View of life, India : George and Unwin , 1971.

Ravilson, H.g. India : A short Cultural History, London : The Creesent Press 1937.

Sachay, Edward Co, Alberuni' s India, London : Kegan Paul Trench Trubner, Co., Ltd., 1910.

Sampson George, The Concise Cambridge History of English Literature, London Cabridge University Press, 1970.

Sarma, D.N. Essence of Hinduism, Bombay : Bharatiya Vidhya Bhavan 1971.

Scott, J., Ferishata's History of the Deccan. London : 1974.

Scott, Paul, The Raj Quartet, London : Heinamann, 1976.

Scott, Sir Walter, The Surgeon's Daughters : London : Henry Frowde, Oxford University Press, 1912.

Sencourt, Robert, India in English literature, London: Simkin Marshall, Hamilton Kent Co, 1923.

Shahane, V.A. E.M. Forster : A Reassesment(1962)

.... Perapectives on / E.M. Forster's a Passage to India , New York, 1968.

.... E.M. Forster : The Double vision, New Delhi Arnold Heinemann, 1975.

.... ed., Focus on Foster's A Passage to India, Bombay : Orient Longmans Ltd. 1975.

Shakespeare, William, As you like it.

..... Henry IV

..... Troilus and Cressida

.... Twelfth Night

Singh, Bhupal, a Survey of Anglo- Indian Fiction, London : Oxford University Press, 1934.

Sleeman, Col, Rambles and Recollections by an Indina Official. London, 1844.

Spear Percival, The Oxford History of Modern India, Delhi Oxford University Press, 1976.

Speir, C. Phases of Indian Civilisation. Delhi Cosmo Publication 1973.

Spencer, Edmund, The Faerie Queene, London and New York : longman.

Steel Flora Annie, A Prince of Dreamers, London : Heinnann. 1908,.

..... Mistress of Men. Iondon : Heimnann 1917.

Stone, Wilfred, The Cave and the Mountain, London : Oxford University Press 1966.

Swift, J. Gulliver's Travels, London : Everymen's Library.

Taylor, Meadows, The History of India, London : Longmans Green and Co. 1915.

Thompson and Garratt, Rise and Fulfilment of Britsh Rule in India. London : Macmillan, 1930.

Thompson Edward : A farewell to India London, Edrnest Beun, 1930.

Thornton, The illustratings and history and practice of the Thugs, Longdon, 1837.

Thurston, E., Castes and Tribes of Southern India. Madras, Government Press, 1909.

Tompkins J.M.S., The art of Rudyard Kipling, Lincoln Nebraska University press, 1965.

Vishwanathan, K., India in English Fiction, Waltair : Andhra University Press, 1971.

Vivekananda, Swami, the East and the West, Advaita Ashram, Himalayas, 1949.

Vyas, N.N. Mann, R.S. ed., Indian Tribes in Transition Jaipur : Rawat Publihers 1980.

Walter, Inna, L.H. Myers, India : Arnold Heinemann, 1984.

Willks, M. Historical Sketches of South India in an attempt to trace the History of Mysore. Mysore : Government Press, 1932.

Ward, Sir, A.W., and Waller, A.R., ed., The Cambridge History of English literature Vol. XV, Combridge : Cambridge University Press, 1953.

Woodroffe, John, Is India Civilised ? Madras : Ganesh and Co., 1910

* Glimpses of world Religions Bombay : Jaico Publishers.

C .Journals and Periodicals

Kallapur S.T. "Tara" A maratha Tale - A Reconsideration (Part I) Dharwad : Journel of the karnatak University, Humanities Vol. 17, 1973.

Kallapur, S.T. Tara : A Maratha Tale - A reconsideration* (Part II) Dharwad : Journal of the Karnatak University, Humanities, Vol. 18, 1974.

Kallapur, S.T. 'A Meadows Taylor Novel' Dharwad Journal of the Karnatak University, Humanities Vol. 19, 1975.

Kallapur, S.T. 'Hinduism andChristianity in Meadows Taylor's Seeta' Dharwad : Journal of the Karnatak University, Humanities Vol. 20, 1976.

Kallapur, S.T. Meadows Taylor and Religion ' Dharwad Journal of the Karnatak University, Humanities Vol. 19, 1977.

Rehana Shah, "Meadows Taylor on Aspects of Indian culture' Bombay, The Indian P.B.N. June- July 1984.

* Anonymous

ಡಾ. ಆರ್.ಎಸ್. ಚುಳಕಿ



ಪೂರ್ಣ ಹೆಸರು: ರಾಘವೇಂದ್ರ ಶಾಮರಾವ ಚುಳಕಿ

ಹುಟ್ಟಿದ ತಾರೀಖು: ೨೦-೯-೨೯೪೨

ವಿಜಾಪುರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣ ವಿಜಾಪುರದಲ್ಲಿ. ೧೯೬೩ರಲ್ಲಿ ಬಿ.ಎ. ಇಂಗ್ಲಿಷ್ ವಿಷಯದೊಂದಿಗೆ. ನಂತರ ಸ್ಥಳೀಯ ವ್ಹಿ.ಬಿ. ದರ್ಬಾರ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಸೇವೆ. ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಇಂಗ್ಲಿಷ್ ಪ್ರಧಾನ ವಿಷಯದೊಂದಿಗೆ.

೧೯೬೭ರಿಂದ ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆಗಳಲ್ಲಿ ಆಂಗ್ಲ ಉಪನ್ಯಾಸಕನಾಗಿ ಸೇವೆ ಆರಂಭ.

೧೯೮೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್‌ನಲ್ಲಿ ಪಿಎಚ್.ಡಿ ಪದವಿ 'The Image of India in the works of Philip Meadows Taylor' ಎಂಬ ಮಹಾಪ್ರಬಂಧಕ್ಕೆ, ಮೂವತ್ಮೂರು ವರ್ಷಗಳವರೆಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ೨೦೦೦ನೇ ಇಸ್ವಿಯಲ್ಲಿ ನಿವೃತ್ತಿ.

'ಎರಡು ದುರಂತ ನಾಟಕಗಳು', 'ಆತ್ಮಾರ್ಪಣೆ' (ಕಾದಂಬರಿ) 'ಮೆಡೋಸ ಟೇಲರ' (ಜೀವನ ಚರಿತ್ರೆ), 'ಋಣಾನುಬಂಧ' (ಏಕಾಂತ ನಾಟಕ) ಸುಹರಾಬರುಸ್ತುಂ (ಆರ್ನಾಲ್ಡರ ಕವಿತೆಯ ಅನುವಾದ), 'ಶ್ರೀ ಸಿದ್ಧಾರೂಢ ಸ್ವಾಮಿಗಳ ಚರಿತ್ರೆ' (ಮರಾಠಿಗೆ ಅನುವಾದ) 'ಶ್ರೀ ಚಂದ್ರಲಾ ಪರಮೇಶ್ವರಿ ಮಹಾತ್ಮೆ' (ಕಿರು ಪುಸ್ತಕ) ಇವು ಪ್ರಕಟಿತ ಕೃತಿಗಳು.

ನಾನಾ ಕ್ರೀಡೆಗಳಲ್ಲಿ, ಭಾಷಣ ಮಾಡುವುದರಲ್ಲಿ ಆಸಕ್ತರಾದ ಇವರು ಸದ್ಯ ಬಿ.ಎಲ್.ಡಿ.ಇ. ಸಂಸ್ಥೆಯ ಪೋಸ್ಟ್ ಗ್ರ್ಯಾಜ್ಯುವೇಟ್ ಡಿಪಾರ್ಟ್‌ಮೆಂಟ್ ಆಫ್ ಇಂಗ್ಲಿಷ್‌ನಲ್ಲಿ ಉಪನ್ಯಾಸಕರಾಗಿ ಕಾರ್ಯ ಮಾಡುತ್ತಲಿದ್ದಾರೆ.

ಡಾ. ಆರ್. ಎಸ್. ಚುಳಕಿ
ನಂ.೨೭, ಕೆ.ಎಚ್.ಬಿ. ಕಾಲನಿ
ಸೋಲಾಪುರ ರಸ್ತೆ,
ಬಿಜಾಪುರ – ೫೮೬ ೧೦೩
ದೂ : ೨೬೨೬೧೨

ಜ್ಞಾನವೆಂಬುದು ಕೇವಲ ಕೆಲವು ಕೇಂದ್ರಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದೊಂದು ಜೀವಂತ ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು.

ಕನ್ನಡದ ಹೆಮ್ಮೆಯ ಪ್ರಾತಿನಿಧಿಕ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ವಿಶೇಷ ಯೋಜನೆಯ ಫಲವಾಗಿ, ನಮ್ಮ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು-ನುಡಿ-ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಮಹಾಪ್ರಬಂಧಗಳು ಈಗ ಸ್ವಲ್ಪ ಸರಳಗೊಂಡು, ಸಂಕ್ಷಿಪ್ತಗೊಂಡು, ಕನ್ನಡ ಓದುಗರ ಕೈ ಸೇರುತ್ತಿವೆ.

ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು.